ಬುಧವಾರ, ಜನವರಿ 4, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜನ್ಮದಿನ
ಜಮ್ಮುವಿನಲ್ಲಿ ಮಂಗಳವಾರ ಗುರು ಗೋವಿಂದ ಸಿಂಗ್ ಅವರ ಜನ್ಮದಿನದ ನಿಮಿತ್ತ ನಡೆದ ಧಾರ್ಮಿಕ ಮೆರವಣಿಗೆಯಲ್ಲಿ ಬಾಲಕನೊಬ್ಬ ಪಾಲ್ಗೊಂಡಿದ್ದ

सत्यमेव जयते
Government of Rajasthan

INAUGURATION

18th National Scout Guide Jamboree

(4-10 January, 2023)

by

Smt. Droupadi Murmu
Hon'ble President of India

Shri Kalraj Mishra
Hon'ble Governor, Rajasthan

Chief Guest
Shri Kalraj Mishra
Hon'ble Governor, Rajasthan

Presided over by
Shri Ashok Gehlot
Hon'ble Chief Minister, Rajasthan

Shri Ashok Gehlot
Hon'ble Chief Minister, Rajasthan

Venue: Rohat (Jodhpur-Pali route) Time: 3:15 PM onwards

"Scouts-Guides Organisation reinforces the spirit of Vasudhaiva Kutumbakam (the world is one family). Through this, values are inculcated in students which prove useful throughout their life. Organising a jamboree after 67 years in Rajasthan is a matter of pride for all of us. I welcome all visitors to this event."

Ashok Gehlot, Chief Minister, Rajasthan

- Participation of more than 35,000 from India and abroad
- Cultural Programmes
- Air Show by Surya Kiran Team of IAF
- Various Sports and Adventure Activities
- Development Exhibition
- Folk Dance, Band Display, Pageant Show
- Global Village Activities



DEPARTMENT OF INFORMATION AND PUBLIC RELATIONS

Rajasthan Samwad

ಬೆಂಗಳೂರಿನಲ್ಲಿ ಕುಂಚಿಟಿಗರ ಸಭೆ ನಾಳೆ

ಪ್ರಜಾವಾಣಿ ವಾರ್ತೆ

ತುಮಕೂರು: ವಿಶ್ವ ಕುಂಚಿಟಿಗರ ಪರಿಷತ್ತು, ಅಖಿಲ ಕುಂಚಿಟಿಗರ ಮಹಾಮಂಡಲ, ಶಿರಾ ಕುಂಚಿಟಿಗರ ಸಂಘ, ಒಬಿಸಿ ಹೋರಾಟ ಸಮಿತಿ ಆಶ್ರಯದಲ್ಲಿ ಕುಂಚಿಟಿಗ ಮೀಸಲಾತಿ ಪರಾಮರ್ಶಿಸುವ ಉನ್ನತ ಮಟ್ಟದ ಸಮಾಲೋಚನಾ ಸಭೆ ಜನವರಿ 5ರಂದು ಬೆಳಿಗ್ಗೆ 10.30 ಗಂಟೆಗೆ ಬೆಂಗಳೂರಿನ ಕುಮಾರಪಾರ್ಕ್‌ನ ಶಿವಾನಂದ ಸರ್ಕಲ್ ಬಳಿಯಲ್ಲಿರುವ ಗಾಂಧಿ ಭವನದಲ್ಲಿ ನಡೆಯಲಿದೆ.

ಕುಂಚಿಟಿಗ ಮಹಾಸಭಾ ಅಧ್ಯಕ್ಷ ಮುರಳೀಧರ ಹಾಲಪ್ಪ ಸಭೆಯ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಅಖಿಲ ಕುಂಚಿಟಿಗರ ಮಹಾಮಂಡಲದ ಅಧ್ಯಕ್ಷ ಬಸವಾನಂದ, ವಿಶ್ವಕುಂಚಿಟಿಗರ ಸಂಘದ ಅಧ್ಯಕ್ಷ ವಿ. ಅಂಜನಪ್ಪ, ಒಬಿಸಿ ಮೀಸಲಾತಿ ಹೋರಾಟ ಸಮಿತಿ ಪ್ರಧಾನ ಸಂಚಾಲಕರಾದ ಕಸವನಹಳ್ಳಿ ರಮೇಶ್, ಆರ್.ವಿ. ಪುಟ್ಟಕಾಮಣ್ಣ, ಕುಂಚ ಪರಿವಾರದ ಅಧ್ಯಕ್ಷ ಶಿವಭದ್ರಯ್ಯ ಇತರೆ ಮುಖಂಡರು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಸರ್ವಿಸ್ ರಸ್ತೆಯ ರೈಲ್ವೆ ಕೆಳಸೇತುವೆಯಲ್ಲಿ ವಾಹನಗಳ ಸಂಚಾರ • ಜನರ ಹರ್ಷ

ಮುತ್ಯಾಲಮ್ಮ ಜಂಕ್ಷನ್ ದಟ್ಟಣೆ ಮುಕ್ತ

ಪ್ರಜಾವಾಣಿ ವಾರ್ತೆ

ಮುತ್ಯಾಲಮ್ಮ ಜಂಕ್ಷನ್‌ನಲ್ಲಿ ಬಲ ತಿರುವು ಪ್ರವೇಶ ನಿರ್ಬಂಧಿಸಿರುವ ಪೊಲೀಸರು, ರಸ್ತೆ ಮಧ್ಯದಲ್ಲಿ ಸಿಮೆಂಟ್ ತಡೆಗೋಡೆ ಹಾಕಿರುವುದು – ಪ್ರಜಾವಾಣಿ ಚಿತ್ರ

ವರದಿ ಪರಿಣಾಮ

ಬೆಂಗಳೂರು: ಗೊರಗುಂಟೆಪಾಳ್ಯದಿಂದ ಹೆಬ್ಬಾಳಕ್ಕೆ ಸಂಪರ್ಕ ಕಲ್ಪಿಸುವ ಎಂಇಎಸ್ ಹೊರವರ್ತುಲ ರಸ್ತೆಯಲ್ಲಿರುವ ಮುತ್ಯಾಲಮ್ಮ ಜಂಕ್ಷನ್, ಸಂಚಾರ ಪೊಲೀಸರ ಕ್ರಮಗಳಿಂದಾಗಿ ಕೊನೆಗೂ ದಟ್ಟಣೆ ಮುಕ್ತವಾಗಿದೆ. ರಸ್ತೆಯಲ್ಲಿ ಸಂಚರಿಸುತ್ತಿದ್ದ ಜನರು ಹಾಗೂ ಸ್ಥಳೀಯರು ಅನುಭವಿಸುತ್ತಿದ್ದ ನಿತ್ಯದ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ಸಿಕ್ಕಂತಾಗಿದೆ.

ಮುತ್ಯಾಲಮ್ಮ ಜಂಕ್ಷನ್‌ನಲ್ಲಿ ಹಲವು ವರ್ಷಗಳಿಂದ ವಿಪರೀತ ದಟ್ಟಣೆ ಇತ್ತು. ಈ ಸಮಸ್ಯೆ ಬಗ್ಗೆ 'ಪ್ರಜಾವಾಣಿ' ಯಲ್ಲಿ ಡಿ. 10ರಂದು 'ಮುತ್ಯಾಲಮ್ಮ ಜಂಕ್ಷನ್: ವಿಪರೀತ ದಟ್ಟಣೆಗೆ ಜನರು ಸುಸ್ತು' ಶೀರ್ಷಿಕೆಯಡಿ ವರದಿ ಪ್ರಕಟಿಸಲಾಗಿತ್ತು.

ವರದಿಯಿಂದ ಎಚ್ಚೆತ್ತ ಸಂಚಾರ ವಿಭಾಗದ ವಿಶೇಷ ಕಮಿಷನರ್ ಎಂ.ಎ. ಸಲೀಂ ಹಾಗೂ ಅಧಿಕಾರಿಗಳು, ಸ್ಥಳ ಪರಿಶೀಲನೆ ನಡೆಸಿ ತಾತ್ಕಾಲಿಕ ಕ್ರಮಗಳನ್ನು ಜಾರಿಗೊಳಿಸಿದ್ದಾರೆ. ಇದರಿಂದಾಗಿ ಜಂಕ್ಷನ್‌ನಲ್ಲಿ ದಟ್ಟಣೆ ಕಡಿಮೆಯಾಗಿದ್ದು, ಜನರೂ ಹರ್ಷಗೊಂಡಿದ್ದಾರೆ.

ಬಲತಿರುವು ನಿರ್ಬಂಧ: ಬಿಇಎಲ್ ವೃತ್ತದಿಂದ ಬರುವ ಕೆಲ ವಾಹನಗಳು, ಮುತ್ಯಾಲಮ್ಮ ಜಂಕ್ಷನ್‌ನ ಮುಖ್ಯರಸ್ತೆಯಲ್ಲೇ ಬಲ ತಿರುವು ಪಡೆದು ಜಾಲಹಳ್ಳಿ, ಎಚ್‌ಎಂಟಿ ಲೇಔಟ್ ಹಾಗೂ ಪೀಣ್ಯದತ್ತ ಹೋಗುತ್ತಿದ್ದವು.

ಗೊರಗುಂಟೆಪಾಳ್ಯದಿಂದ ಹೆಬ್ಬಾಳದತ್ತ ಹೋಗುವ ವಾಹನಗಳು, ಜಂಕ್ಷನ್‌ನಲ್ಲಿ ಎದುರಿಗೆ ಬರುವ ವಾಹನಗಳು ಮುಂದಕ್ಕೆ ಹೋಗುವವರೆಗೂ ರಸ್ತೆಯಲ್ಲಿ ನಿಂತಲ್ಲೇ ನಿಲ್ಲುತ್ತಿದ್ದವು. ಇದುವೇ ದಟ್ಟಣೆಗೆ ಕಾರಣವಾಗಿತ್ತು.

ಇದೀಗ ಬಲ ತಿರುವಿನಲ್ಲಿ ಸಂಚರಿಸುವುದನ್ನು ನಿರ್ಬಂಧಿಸಾಗಿದ್ದು, ರಸ್ತೆ ಮಧ್ಯದಲ್ಲಿ ಸಿಮೆಂಟ್ ತಡೆಗೋಡೆ ಹಾಗೂ ಬ್ಯಾರಿಕೇಡ್ ನಿಲ್ಲಿಸಲಾಗಿದೆ. ಬಿಇಎಲ್ ವೃತ್ತದಿಂದ ಬರುವ ಕೆಲ ವಾಹನಗಳು, ಜಂಕ್ಷನ್‌ನ ರೈಲು ಕೆಳಸೇತುವೆ ಮೂಲಕ ಸಂಚರಿಸಿ ಜಾಲಹಳ್ಳಿ, ಎಚ್‌ಎಂಟಿ ಬಡಾವಣೆ ಹಾಗೂ ಪೀಣ್ಯದತ್ತ ಹೋಗುತ್ತಿವೆ.

ಉಳಿದಂತೆ ಎಲ್ಲ ವಾಹನಗಳು, ಮುಖ್ಯರಸ್ತೆಯಲ್ಲಿರುವ ರೈಲ್ವೆ ಮೇಲ್ಸೇತುವೆ ಮೂಲಕ ಗೊರಗುಂಟೆಪಾಳ್ಯದತ್ತ ಸಾಗುತ್ತಿವೆ. ಗೊರಗುಂಟೆಪಾಳ್ಯದಿಂದ ಹೆಬ್ಬಾಳದತ್ತ ಹೋಗುವ ವಾಹನಗಳು ಸರಾಗವಾಗಿ ಜಂಕ್ಷನ್ ದಾಟುತ್ತಿವೆ.

ಸರ್ವಿಸ್ ರಸ್ತೆ ವಿಸ್ತರಣೆಗೆ ಆಗ್ರಹ: ಕರ್ನಾಟಕ ಫ್ಯಾಬ್ರಿಕೇಷನ್ ಕಾರ್ಖಾನೆ ಎದುರು 4 ಅಡಿಯಷ್ಟು ಮಾತ್ರ ಸರ್ವಿಸ್ ರಸ್ತೆ ಇದ್ದು, ಅದರ ವಿಸ್ತರಣೆ ಕೆಲಸ ಅರ್ಧದಲ್ಲಿ ನಿಂತಿದೆ. ಸದ್ಯದ ರಸ್ತೆಯಲ್ಲೇ ವಾಹನಗಳು ಸಂಚರಿಸಲು ಪೊಲೀಸರು ಅನುಕೂಲ ಮಾಡಿಕೊಟ್ಟಿದ್ದಾರೆ.

'ಜಂಕ್ಷನ್‌ಗೆ ಹೊಂದಿಕೊಂಡು ರೆನೆಸಾನ್ಸ್ ರಿಸರ್ವ್ ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಿಸಲಾಗುತ್ತಿದ್ದು, ಸರ್ವಿಸ್ ರಸ್ತೆ ಅಗತ್ಯವಿದೆ. ಕರ್ನಾಟಕ ಫ್ಯಾಬ್ರಿಕೇಷನ್ ಕಾರ್ಖಾನೆ ಸ್ಥಗಿತಗೊಂಡಿದ್ದು, ಈ ಜಾಗವನ್ನು ಸ್ವಾಧೀನಪಡಿಸಿಕೊಂಡು ರಸ್ತೆ ವಿಸ್ತರಣೆ ಮಾಡಲು ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು' ಎಂದು ಸ್ಥಳೀಯರು ಆಗ್ರಹಿಸುತ್ತಿದ್ದಾರೆ.

ಗೊರಗುಂಟೆಪಾಳ್ಯ– ಹೆಬ್ಬಾಳ ಮಾರ್ಗ: ಹೆಸರಿಗಷ್ಟೇ ಹೊರವರ್ತುಲ ರಸ್ತೆ • ಸರ್ವಿಸ್ ರಸ್ತೆ ಮರೀಚಿಕೆ • ಬಳಕೆಯಾಗದ ಕೆಳಸೇತುವೆ

ಮುತ್ಯಾಲಮ್ಮ ಜಂಕ್ಷನ್: ವಿಪರೀತ ದಟ್ಟಣೆಗೆ ಜನರು ಸುಸ್ತು

'ವ್ಯಾಪಾರ ಲೆಕ್ಕಾಚಾರ: ಮೇಲ್ಸೇತುವೆಯಲ್ಲಿ ವಾಹನ ಬಂದ್'

'ರಸ್ತೆ ದಾಟಲು ಭಯ'

ಸಂಚಾರ ಕಿರಿಕಿರಿ: ಸೂಚಿಸಿ ಪರಿಹಾರ

9606038256

'ಸರ್ವಿಸ್ ರಸ್ತೆಯಲ್ಲಿ ಲಘು ವಾಹನ: ಸೂಚನಾ ಫಲಕ'

'ಮುತ್ಯಾಲಮ್ಮ ಜಂಕ್ಷನ್‌ನ ಸರ್ವಿಸ್ ರಸ್ತೆಯಲ್ಲಿ ಕಾರು, ದ್ವಿಚಕ್ರ ವಾಹನ ಹಾಗೂ ಇತರೆ ಲಘು ವಾಹನಗಳು ಸಂಚರಿಸಬಹುದಾಗಿದೆ. ಮುಖ್ಯರಸ್ತೆಯಲ್ಲಿ ಬಲತಿರುವು ಪಡೆದು ಹೋಗುತ್ತಿದ್ದ ವಾಹನಗಳು, ಇನ್ನು ಮುಂದೆ ಸರ್ವಿಸ್ ರಸ್ತೆಯನ್ನೇ ಬಳಸಬೇಕು' ಎಂದು ಸಂಚಾರ ವಿಭಾಗದ (ಪಶ್ಚಿಮ) ಡಿಸಿಪಿ ಕುಲದೀಪ್ ಕುಮಾರ್ ಆರ್. ಜೈನ್ ತಿಳಿಸಿದರು.

'ಪ್ರಜಾವಾಣಿ' ಜೊತೆ ಮಾತನಾಡಿದ ಅವರು, 'ಹಲವು ವರ್ಷಗಳಿಂದ ದಟ್ಟಣೆ ಸಮಸ್ಯೆ ಇತ್ತು. 'ಪ್ರಜಾವಾಣಿ'ಯಲ್ಲಿ ವರದಿ ಪ್ರಕಟಗೊಳ್ಳುತ್ತಿದ್ದಂತೆ, ಸ್ಥಳೀಯರ ಜೊತೆ ಸಭೆ ನಡೆಸಿ ತಾತ್ಕಾಲಿಕ ಕ್ರಮ ಜಾರಿಗೆ ತರಲಾಗಿದೆ' ಎಂದರು.

'ಭಾರಿ ಹಾಗೂ ಇತರೆ ವಾಹನಗಳು ರೈಲ್ವೆ ಮೇಲ್ಸೇತುವೆ ಮೂಲಕ ಮುಂದಕ್ಕೆ ಹೋಗಬಹುದಾಗಿದೆ. ತಾತ್ಕಾಲಿಕ ಕ್ರಮಗಳ ಬಗ್ಗೆ ಜಂಕ್ಷನ್‌ನಲ್ಲಿ ಸೂಚನಾ ಫಲಕ ಅಳವಡಿಸಲಾಗಿದೆ' ಎಂದೂ ಹೇಳಿದರು.

ಸುದ್ದಿ 2 ನಿಮಿಷ

ಲಿಂಗ ತಾರತಮ್ಯ ಸಲ್ಲ: ಹೈಕೋರ್ಟ್

ಬೆಂಗಳೂರು: 'ಮಾಜಿ ಯೋಧರ ಅವಲಂಬಿತರಿಗೆ ನೀಡಲಾಗುವ ಗುರುತಿನ ಚೀಟಿಯಲ್ಲಿ ಹೆಣ್ಣು–ಗಂಡು ಎಂಬ ತಾರತಮ್ಯ ತೋರುವುದು ಸಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, 'ಈ ಕುರಿತ ನಿಯಮ ಸಂವಿಧಾನಬಾಹಿರ' ಎಂದು ಸಾರಿದೆ.

'ಪುರುಷ ಪ್ರಧಾನ ವ್ಯವಸ್ಥೆಯಲ್ಲಿದ್ದ ಲಿಂಗ ತಾರತಮ್ಯ ನೀತಿ ತೊಲಗಬೇಕು. ಈ ಕುರಿತಂತೆ ಇರುವ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಬೇಕು' ಎಂದು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿದೆ.

'ಸೈನಿಕ ಕಲ್ಯಾಣ ಇಲಾಖೆಯು ನನಗೆ ಗುರುತಿನ ಚೀಟಿ ನೀಡಲು ನಿರಾಕರಿಸಿದೆ' ಎಂದು ಆಕ್ಷೇಪಿಸಿ ಮೈಸೂರಿನ ಮಾಜಿ ಯೋಧರೊಬ್ಬರ ಪುತ್ರಿ ಪ್ರಿಯಾಂಕ ಆರ್.ಪಾಟೀಲ್ ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾಯಪೀಠ, 'ಅರ್ಜಿದಾರರಿಗೆ ಗುರುತಿನ ಚೀಟಿ ವಿತರಿಸಬೇಕು. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಸಹಾಯಕ ಪ್ರಾಧ್ಯಾಪರ ಹುದ್ದೆಗೆ 2021ರ ಆಗಸ್ಟ್ 26ರಂದು ಹೊರಡಿಸಿರುವ ಅಧಿಸೂಚನೆಯಲ್ಲಿನ ಅರ್ಜಿದಾರರನ್ನು ನಿವೃತ್ತ ಯೋಧರ ಕೋಟಾದಲ್ಲಿ ಪರಿಗಣಿಸಬೇಕು' ಎಂದು ಆದೇಶಿಸಿದೆ.

ಪ್ರಕರಣವೇನು?: ಕೆಇಎ ನಡೆಸುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಪ್ರಿಯಾಂಕ ಮಾಜಿ ಯೋಧರ ಕೋಟಾದಡಿ ಅವಕಾಶ ಬಯಸಿದ್ದರು. ತಮ್ಮ ತಂದೆ ಸೇನೆಯಲ್ಲಿ ಸೇವೆ ಸಲ್ಲಿಸಿದ್ದ ಕಾರಣ ಅವಲಂಬಿತರ ಗುರುತಿನ ಚೀಟಿಗಾಗಿ ಸೈನಿಕ ಇಲಾಖೆಗೆ ಮನವಿ ಸಲ್ಲಿಸಿದ್ದರು. ಆದರೆ ಇಲಾಖೆಯು, 'ಅರ್ಜಿದಾರರು ವಿವಾಹ ಆಗಿರುವುದರಿಂದ ನಿಯಮದಂತೆ ಅವರಿಗೆ ಗುರುತಿನ ಚೀಟಿ ನೀಡಲಾಗದು' ಎಂದು ಅರ್ಜಿ ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಜ.15ಕ್ಕೆ ಸೇನಾ ದಿನ ಪರೇಡ್

ಬೆಂಗಳೂರು: ರಾಷ್ಟ್ರೀಯ ಮಹತ್ವದ ದಿನಗಳನ್ನು ದೆಹಲಿಯಿಂದ ಹೊರಗೆ ಆಚರಿಸಬೇಕು ಎನ್ನುವ ಉದ್ದೇಶದಿಂದ ಈ ಬಾರಿ ಬೆಂಗಳೂರಿನಲ್ಲಿ ಮೊದಲ ಬಾರಿಗೆ ಆಯೋಜಿಸಲಾಗುತ್ತಿದೆ. ಹೀಗಾಗಿ ಸೇನಾ ದಿನದ ಪರೇಡ್ ಜ.15ರಂದು ನಗರದಲ್ಲಿ ನಡೆಯಲಿದೆ.

ಭಾರತೀಯ ಸೇನೆಯ 'ಕಮಾಂಡರ್ ಇನ್ ಚೀಫ್' ಆಗಿ 1949ರ ಜನವರಿ 15ರಂದು ಲೆಫ್ಟಿನೆಂಟ್ ಜನರಲ್ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅಧಿಕಾರ ಸ್ವೀಕರಿಸಿದ್ದರು.

ಭಾರತದಲ್ಲಿ ಕೊನೆಯದಾಗಿ ಕಾರ್ಯನಿರ್ವಹಿಸಿದ್ದ ಬ್ರಿಟಿಷ್ ಕಮಾಂಡರ್ ಇನ್ ಚೀಫ್ ಜನರಲ್ ಫ್ರಾನ್ಸಿಸ್ ಬಚರ್ ಅವರಿಂದ ಕಾರ್ಯಪ್ಪ ಅಧಿಕಾರ ಸ್ವೀಕರಿಸಿದ್ದರು. ಬ್ರಿಟಿಷರು ಸೇನೆಯ ಅಧಿಕಾರವನ್ನು ಹಸ್ತಾಂತರಿಸಿದ ಈ ಐತಿಹಾಸಿಕ ದಿನವನ್ನು ಸೇನಾ ದಿನ ಎಂದು ಆಚರಿಸಲಾಗುತ್ತಿದೆ.

ದಕ್ಷಿಣ ಭಾರತದ ರಾಜ್ಯಗಳ ಯೋಧರ ಶೌರ್ಯ, ತ್ಯಾಗ ಮತ್ತು ಸೇವೆಯನ್ನು ಗುರುತಿಸಿ ಈ ಐತಿಹಾಸಿಕ ದಿನವನ್ನು ಈ ಬಾರಿ ಬೆಂಗಳೂರಿನಲ್ಲಿ ಆಚರಿಸಲಾಗುತ್ತಿದೆ. ಸೇನೆಯ ಸಾಮರ್ಥ್ಯವನ್ನು ಸಹ ಈ ಸಂದರ್ಭದಲ್ಲಿ ಪ್ರದರ್ಶಿಸಲಾಗುವುದು. ಪಥಸಂಚಲನ ಮತ್ತು ಸೇನೆಯ ಬ್ಯಾಂಡ್‌ಗಳು ಹಾಗೂ ಸಾಹಸ ಚಟುವಟಿಕೆಗಳ ಪ್ರದರ್ಶನಗಳು ನಡೆಯಲಿವೆ.

ಪೌಷ್ಟಿಕ ಆಹಾರ ಸೇವಿಸಿ

ಇ–ವಿಧಾನಮಂಡಲ ಯೋಜನೆ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ವಿಧಾನ ಮಂಡಲದ ಉಭಯ ಸದನಗಳ ವ್ಯವಹಾರವನ್ನು ಕಾಗದ ರಹಿತಗೊಳಿಸುವ ಉದ್ದೇಶದಿಂದ ಜಾರಿಗೆ ತರಲು ಯೋಜಿಸಿದ್ದ ಇ-ವಿಧಾನ (ನ್ಯಾಷನಲ್ ಇ-ವಿಧಾನ ಅಪ್ಲಿಕೇಷನ್–ನೇವಾ) ಮಂಡಲ ಯೋಜನೆಯನ್ನು 'ನೇವಾ' ಮೂಲಕವೇ ಜಾರಿಗೊಳಿಸಲು ಆದೇಶಿಸಬೇಕು' ಎಂದು ಕೋರಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಕಾಂಗ್ರೆಸ್ ಮುಖಂಡರೂ ಆದ ವಿಧಾನ ಪರಿಷತ್ ಮಾಜಿ ಸದಸ್ಯ ರಮೇಶ್ ಬಾಬು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸಭೆ ಮತ್ತು ವಿಧಾನಪರಿಷತ್ ಕಾರ್ಯದರ್ಶಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿರುವ ನ್ಯಾಯಪೀಠ, ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆ ಮುಂದೂಡಿದೆ.

ಪ್ರಕರಣವೇನು?: 'ಇ-ವಿಧಾನ ಮಂಡಲ ಯೋಜನೆ ಜಾರಿಗೆ 2016-17ರಲ್ಲಿ ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ) ₹ 60.84 ಕೋಟಿ ಅಂದಾಜಿಸಿತ್ತು. ಆದರೆ, ಕರ್ನಾಟಕ ವಿಧಾನ ಮಂಡಲವು ಈ ಯೋಜನೆ ಜಾರಿಗೆ ಕಿಯೋನಿಕ್ಸ್ ಸಂಸ್ಥೆಗೆ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಸೂಚಿಸಿತ್ತು. ಇದರನ್ವಯ ಕಿಯೋನಿಕ್ಸ್, ಯೋಜನೆಗೆ ಸುಮಾರು ₹ 254 ಕೋಟಿ ಮೊತ್ತ ತಗಲುವುದಾಗಿ ವರದಿ ನೀಡಿತ್ತು.

'ಕಿಯೋನಿಕ್ಸ್ ಮೂಲಕ ಯೋಜನೆ ಜಾರಿ ಮಾಡಿದರೆ ರಾಜ್ಯದ ಬೊಕ್ಕಸಕ್ಕೆ ₹ 254 ಕೋಟಿ ನಷ್ಟವಾಗಲಿದೆ. ಈ ಕುರಿತಂತೆ ಮಧ್ಯಪ್ರವೇಶಿಸಿ ಎಂದು ವಿಧಾನಸಭಾಧ್ಯಕ್ಷರಿಗೆ ಮನವಿ ಮಾಡಲಾಗಿತ್ತು. ಆದರೆ, ವಿಧಾನಸಭಾಧ್ಯಕ್ಷರು ಈ ಕುರಿತು ಗಮನ ಹರಿಸಿಲ್ಲ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

'ಕಿಯೋನಿಕ್ಸ್ ಮೂಲಕ ₹ 254 ಕೋಟಿ ವೆಚ್ಚದಲ್ಲಿ ಇ-ವಿಧಾನ ಮಂಡಲ ಯೋಜನೆ ಜಾರಿ ಮಾಡುವುದಕ್ಕೆ ಬದಲಾಗಿ 'ನೇವಾ' ಮೂಲಕ ಜಾರಿಗೊಳಿಸಲು ಆದೇಶಿಸಬೇಕು' ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ಆರ್‌ಎಸ್‌ಎಸ್‌ನಂತೆ ನಿರಂತರ ದುಡಿದರೆ ಬಿಜೆಪಿ ಸೋಲಿಸಲು ಸಾಧ್ಯ: ಕಾರಟ್

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಬಿಜೆಪಿಯನ್ನು ಸೋಲಿಸಲು ಎಡಪಕ್ಷಗಳು ಆರ್‌ಎಸ್‌ಎಸ್‌ನಂತೆ ದಿನದ 24 ಗಂಟೆಗಳ ಕಾಲ ಕಾರ್ಯ ನಿರ್ವಹಿಸುವುದು ಅಗತ್ಯ ಎಂದು ಸಿಪಿಎಂ ಪಾಲಿಟ್‌ಬ್ಯುರೊ ಸದಸ್ಯ ಪ್ರಕಾಶ್ ಕಾರಟ್ ಮಂಗಳವಾರ ಹೇಳಿದರು.

ಪಕ್ಷದ ಮುಖವಾಣಿ 'ಗಣಶಕ್ತಿ'ಯ 57ನೇ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡರೆ ಸಾಕು ಬಿಜೆಪಿಯನ್ನು ಮಣಿಸಬಹುದು ಎಂದು ಅನೇಕ ಪಕ್ಷಗಳ ಚಿಂತನೆಯಾಗಿದೆ. ಇಂತಹ ಮೈತ್ರಿಗಳು ಚುನಾವಣೆ ದೃಷ್ಟಿಯಿಂದ ಅಗತ್ಯ. ಆದರೆ, ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ಸೈದ್ಧಾಂತಿಕ ಹಾಗೂ ರಾಜಕೀಯ ಹೋರಾಟ ಇಲ್ಲದಿದ್ದರೆ ಇಂತಹ ಯಾವ ಪ್ರಯತ್ನಗಳೂ ಫಲ ನೀಡುವುದಿಲ್ಲ' ಎಂದು ಹೇಳಿದರು.

ಪ್ರಕಾಶ್ ಕಾರಟ್

'ಸಾಂಸ್ಕೃತಿಕ, ಶೈಕ್ಷಣಿಕ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ದುಡಿಯುವ ಸಂಘಟನೆಗಳನ್ನು ಆರ್‌ಎಸ್‌ಎಸ್ ಹೊಂದಿದೆ. ಆ ಮೂಲಕ ಅದು ಸಮಾಜದೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಈ ವಿಷಯದಲ್ಲಿ ಎಡಪಕ್ಷಗಳು ಈಗಲೂ ಹಿಂದಿವೆ' ಎಂದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

HARWARD Pre-University College
www.harwardinstitutions.com
Dasanapura, Tumkur Road, Bangalore North - 562123
WANTED
Administrator (10 yrs Exp in Education institutions)
PRO, Office Manager
Marketing Executives
HARWARD INTERNATIONAL SCHOOL
CBSE Affiliation No.830335
Montessori, Primary & High School Teachers for ALL SUBJECTS
Walk in interview
Regularly @ 10:30 am to 3:00 pm
Please send CV to infoharwardints@gmail.com
9741337257, 9945230286

LAWRENCE HIGH SCHOOL, Koramangala requires Nursery, Primary, Middle and High School TEACHERS for all subjects. Contact 8123397089/ 9840119181 or apply to lawrenceschool99@gmail.com (Only candidates residing in and around Koramangala and HSR to apply).

SRI AHAM AATHMA VIDYALAYA- (ICSE/ State) Gruhalakshmi layout Nagasandra post, Peenya Dasarahalli, Bangalore-73 Requires TEACHERS for the academic year 2023-2024 (1) Computer Science- BCA/MCA/B.Sc, M.Sc B.Ed (2)Teachers to teach all the subjects for Nursery/Primary/ Middle/ High-School (3) Nursery Staff, NTT& Montessori (4) Office Staff/ Receptionist Clerk/ Data/DTP Operator with Tally, IT System Admin (5) LAB-ASSISTANT Librarian. Academic Co-Ordinator. Offers Attractive Salary. Transportation provided. Call 9880200172, 9663778869 Email: sriaavapplic@gmail.com

JOB
To Place your Classified Ads Contact:
9886213331

Deccan International School
#11, 18th Main Rd, Brindavan Layout, Padmanabhanagar, Bengaluru, Karnataka 560061
JOB OPPORTUNITY
Positions open
- **Early years**
  - Homeroom Teachers
- **Primary School**
  - Hindi, Sanskrit, French & English Teachers
- **Middle School**
  - Math, Hindi & French Teachers
- **Subject Head**
  - Hindi, History & Geography
- **Senior school ICSE, ISC and Cambridge**
  - English, French, Hindi, Math, Physics, Biology, Art, Yoga, History & Geography, Sociology, Commerce, Economics, Accounts & Physical Education Teachers
- **Sports**
  - Coaches for Athletics, Football, Cricket & Basketball

Minimum 3 to 5 years of relevant experience is mandatory.
✓ Attractive compensation package commensurate with qualification & experience.
✓ We are equal opportunity employer.
Candidates are required to forward the CV with their photograph
work@deccan.edu.in

ARVIND Residential School & PU College, Kunigal
Ph: 08132-210000/ 01. Mob: 9483683002/ 005.
Website: www.arvindinternationalschool.com
www.arvindpucollege.com
REQUIRES DEDICATED & PASSIONATE PROFESSIONALS WITH GOOD COMMUNICATION SKILLS
- PUC LECTURERS (Science & Commerce Stream)
  Well Experienced NEET & JEE faculties
- CO-ORDINATOR (ICSE/ CBSE & STATE)
- Nursery/ Primary/ Middle School/ High school Teachers (ICSE/ CBSE & STATE)
- Warden (M/F), Nurse (F), Cooks, PE Teachers

Experienced in all streams with desired qualification
Send your resume with recent passport size photo to airsjobs@gmail.com within 7 days

BG-NATIONAL PUBLIC School,Jakkur Layout, Opp GKVK Campus. Requires TEACHERS for Primary Maths,Science, High School English. Contact: 9740619796 Mail: bgnps2015@gmail.com

HIRING SCHOOL STAFF 12th pass, Graduates, Post Graduates required for Administrative/ Principal/ Teaching roles for CBSE School near Noida. Accommodation, competitive salary. 9555614013

WANTED ENGLISH & Science Teachers for Primary School Sagar Convent Kanakapura Main Bangalore 82 Near APS Engineering College Good Salary: 9342552428

Walk-in

KHIVRAJ REQUIRES **SALES EXECUTIVE**
A leading Automobile Dealer in Bangalore. Require dynamic young Graduates / Diploma Holders for the Sales Team. Should have Excellent communication skills in English and Kannada / Hindi.
ATTRACTIVE SALARY WITH OTHER BENEFITS OFFERED.
SEND RESUME or WALK-IN INTERVIEW BETWEEN 10 A.M. to 5 P.M. (Monday to Saturday)
KHIVRAJ MOTORS
No. 10/2, 4th Floor, Kasturba Road, Bangalore - 560 001
Call:+9199806 73755
Ph: 080 22485052
email: hr@khivrajbajaj.com

Drivers

WANTED DRIVER
Salary: 25,000/- per month.
Walk-in Interviews will be conducted at Safina Towers Pvt Ltd
No.3, Ali Asker Road, Bangalore-560 052
Telephone: 080-22264088/89
Timings: Monday to Friday: 11:00 am to 1:00pm & 5:00 pm to 6:00 pm
Saturday: 11:00 am to 1:00 pm

Hospital & Medical Jobs

WANTED DOCTOR For Children Hospital in Bidar, Karnataka Near Hyderabad Main Road, Accommodation available. Immediate Contact: 9035926950

General

REQUIRED FEMALE Office Assistant with Good Communications Skills & Computer Knowledge for an Office at Basaveshwaranagar. Call/WhatsApp 9164843555.

WANTED CLEANING Staff and Security Guards Contact: MGP Institutions, Kanmanikai, Mysore Road, Bangalore. Call: 9886236341.

Manager

REPUTED ENGINEERING INDUSTRY SITUATED IN PEENYA, BANGALORE-
REQUIRE
ASSISTANT MANAGER OR MANAGER COMMERCIAL,
Male or Female.
Will be Responsible For Management of Debtors Outstanding.
Experience 3 to 5 Years In Commercial Activities.
Must Have Good Communication and Knowledge of Computer.
Salary Depend on Experience.
Send Their Resumes to: shashideepa080@gmail.com
Contact: 7996998820

REAL ESTATE SELLING

Farm House/ Land/ Resorts

Out-Station

5 ACRES developed Coffee Estate for sale in Madikeri Coorg 1.40 cr negotiable 9844991199

RENTAL PROPERTIES

Accommodation Available

Commercial

SPACE AVAILABLE for Shop/Office 1000sft & 1500sft, 400 sft in Koramangala. Contact 9845118961

FOR RENT 20,000 to 2,00,000sqft Main Road facing 256-feet at Sommanahalli 19kms from Banashankari temple, suitable for Automobile, Cold Storage, Warehouse. Call VERNA DEVELOPERS, Barton Centre, M.G.Road. 9916310226/ 9620253180/ www.vernadevelopers.com

REAL ESTATE BUYING

Sites

Arkavathy Layout

ARKAVATHI LAYOUT Wanted 40X60 BDA SITE. FOR PURCHASE, Immediate Settlement. Genuine Sellers Contact: 9900615960

AUTOMOTIVE

Four Wheelers Selling

Tractors / Heavy Vehicles

EICHER 2010 & Leyland 2011,Cylinder Truck, Good Condition available for Sale. Contact 9591997014 /12

Hyundai

FLOOD DAMAGED KA-03 NL-7316 hyundai i10 grand for sale without documents for inspection contact 9943274111 for details contact 9845074511

BUSINESS

Business to Business

Finance

WE ARRANGE Loans for Mortgage, Purchase, Construction, Project, Takeover of Loans from Reputed Bank. T&C Apply. Contact: 9353705002.

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7204995189

PERSONAL

Change of Name

I, HANUMAN Y.L, resident at: No.970, Kugilu Road Near R.V Kalyan Mantap, Maruthinagar, Yelahnaka 107, 1st Main Road Bengaluru-560064 have changed my name to SRIJITH Y.L, vide affidavit dated:03-01-2023 before Notary S.R.Ravikumar, Bengaluru.

I, SAMRAT Bhagwan Ghodke residing at No.81, St.Michael's School Road, Shantinagar, Bangalore-27, have changed my Minor daughter's name from NIRVI SAMRAT GHODKE to NIRVE SAMRAT GHODKE vide affidavit dated 10-12-2022 before notary S.Nagaraja Bangalore.

I, CHANDRAKALA Tubagere Seenappa, Residing at No.160, Ward No.9, Gangothri Nilaya, T.G.Tank Road, Chickballapur-562101, have changed my name to CHANDRAKALA SEENAPPA vide affidavit dated 27.12.2022 sworn to before Advocate and Notary K.H. Venkatappa, Chickballapur.

I, PRABHATH Sajeepa, son of Mr. Sundararama Rao, aged about 44 years, residing at Kallare House Puttur Kasaba Puttur D.K, Karnataka- 574201, by an Affidavit dated 03-01-2023 sworn to before the Notary Shri. B.M. Chandrashekar, Bangalore, have affirmed and confirmed that the names Prabhath Sajeepa and Prabhat S. Rao are referring to one and the same person.

I, VALENTINE CINTHIA PINTO, R/at No. 10/11, D Block Platinum City near CMTI Yeshwanthapura Bengaluru- 560022, have changed my name to VALENTINE CYNTHIA PINTO vide affidavit dated: 1/1/2023 Before Notary C.Srinivas Bangalore.

I, HUBERT STANELY PINTO, R/at No. 10/11, D Block Platinum City near CMTI Yeshwanthapura Bengaluru-560022, have changed my name to HUBERT STANLEY PINTO vide affidavit dated: 1/1/2023 Before Notary C. Srinivas Bangalore.

I, PADMA R/@ 222, Chandapura post, Anekal taluk, Banahalli, Bengaluru-99 have changed my name to PADMA KRISHNAREDDY vide affidavit dated 03/01/2023 before notary K.V. Mani

I,GANESH PRABHU VASUDEVA, changed-my name-to GANESH PRABHU BANNERUGHATTA VASUDEVA Dtd:22.12.2022 Sworn before_notary H.S.Sakalesh Aradhya, Bengaluru

I, JAYASHA KALLKADA MUTHAPPA have changed my name to JAYESH KALLKADA MUTHAPPA vide affidavit dated: 26/12/2022 Before Notary Manohar Jeerige Bangalore.

I, PUSHAPA KALLKADA JAYASHA have changed my name to PUSHPA KALLKADA JAYESH vide affidavit dated: 02/01/2023 Before Notary Manohar Jeerige Bangalore.

PUBLIC NOTICE

ಫಾರಂ ಸಂಖ್ಯೆ ಯುಆರ್‌ಸಿ–2
21ನೇ ಅಧ್ಯಾಯದ ಭಾಗ 1 ರಡಿಯಲ್ಲಿ ನೋಂದಣಿಯ ಸೂಚನೆಯ ಬಗೆಗೆ ಜಾಹಿರಾತು /ಪ್ರಕಟಣೆ (ಕಂಪೆನಿ ಕಾಯಿದೆಯ–2013 ಇದರ ಕಲಂ 374(ಬಿ) ಅನುಸಾರವಾಗಿ ಮತ್ತು ಕಂಪೆನಿಗಳ (ನೋಂದಣಿಗೆ ಅಧಿಕೃತ ಗೊಳಿಸುವ) ನಿಯಮಗಳು–2014. ಇದರಂತೆ)

1. ಟಿ.ಕೆ. ನಾರಾಯಣಪ್ಪ ಫೌಂಡೇಷನ್ ಎಂಬ ಒಂದು ಟ್ರಸ್ಟ್‌ನ್ನು ಖಾತರಿಯಿಂದ ನಿಯಮಿತವಾದ ಕಂಪೆನಿ/ಗ್ಯಾರಂಟಿ ಮೂಲಕ ಲಿಮಿಟೆಡ್/ ನಿಯಮಿತಿಗೊಳಪಟ್ಟ ಕಂಪೆನಿಯಾಗಿ, ಕಂಪೆನಿ ಕಾಯಿದೆಯ–2013 ಇದರ 21ನೇ ಅಧ್ಯಾಯದ ಭಾಗ 1 ರಡಿಯಲ್ಲಿ, ರಿಜಿಸ್ಟ್ರಾರ್ ಆಫ್ ಕಂಪೆನಿಗಳು, ಬೆಂಗಳೂರು ಇವರಿಗೆ ಅರ್ಜಿಯನ್ನು ಹದಿನೈದು ದಿನಗಳ ನಂತರ ಮತ್ತು ಅಂದಿನಿಂದ 30 ದಿವಸಗಳೊಳಗೆ , ಕಂಪೆನಿ ಅಧಿನಿಯಮ 2013, ಕಲಂ 366 ಉಪಕಲಂ (2) ರಡಿಯಲ್ಲಿ ಸಲ್ಲಿಸುವ ಬಗೆಗೆ ಸೂಚನೆ/ನೋಟಿಸ್ ಅನ್ನು ನೀಡಲಾಗುತ್ತಿದೆ.

ಕಂಪೆನಿಯ ಪ್ರಮುಖ ಧ್ಯೇಯೋದ್ದೇಶಗಳು ಅಂದರೆ:

2. ಶಿಕ್ಷಣ ಕ್ಷೇತ್ರದಲ್ಲಿ ಧರ್ಮಾರ್ಥ ಚಟುವಟಿಕೆಗಳು ಅದರಲ್ಲಿ ತಾಂತ್ರಿಕ ಮತ್ತು ತಾಂತ್ರಿಕೇತರ ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಮತ್ತಿತರ ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಅಂದರೆ ಶಾಲೆಗಳು, ಕಾಲೇಜ್‌ಗಳು ಇತ್ಯಾದಿ ಸಮಾಜ ಕಲ್ಯಾಣ ಅದರಲ್ಲಿ ವಯಸ್ಸಾದವರಿಗೆ ಸಹಾಯ, ಬಡವರಿಗೆ ಸಹಾಯ, ಮಕ್ಕಳು ಮತ್ತು ಮಹಿಳೆಯರಿಗೆ ಮತ್ತು ಸ್ವಾಭಾವಿಕ ಪ್ರಕೃತಿ ವಿಕೋಪದ ಸಮಯಗಳಲ್ಲಿ ಪರಿಹಾರ ಕಾರ್ಯಗಳಿಗೆ ಸಹಾಯ ಮತ್ತು ವೈದ್ಯಕೀಯ ತುರ್ತು ಪರಿಸ್ಥಿತಿಗಳಲ್ಲಿ ಅಂದರೆ ಸಾಂಕ್ರಾಮಿಕ, ಅಂಟುರೋಗಗಳು, ಪ್ಯಾಂಡಮಿಕ್ ಕಾಯಿಲೆಗಳು, ವಗೈರೆ ಇವುಗಳಲ್ಲಿ ಕೈಜೋಡಿಸುವುದು, ಆರೋಗ್ಯ ಸೇವೆಗಳು (ಅದರಲ್ಲಿ ಎಲ್ಲಾ ರೀತಿಯ ಆಸ್ಪತ್ರೆಗಳ ,ಡಿಸ್ಪೆನ್ಸರಿಗಳು, ಪ್ರಸೂತಿ ಗೃಹಗಳು, ವೈದ್ಯಕೀಯ ಸಂಶೋಧನ ಕೇಂದ್ರಗಳು, ಇತ್ಯಾದಿ.) ರೈತರ ಕಲ್ಯಾಣ; ಮತ್ತು ಜನ ಸಾಮಾನ್ಯರ ಕಲ್ಯಾಣ (ಅದರಲ್ಲಿ ಕ್ರೀಡಾಂಗಣ/ಸ್ಟೇಡಿಯಂಗಳ ಸ್ಥಾಪನೆ, ನಿರ್ವಹಣೆ, ಆಟದ ಮೈದಾನಗಳು, ಉದ್ಯಾನವನಗಳು, ಪಾರ್ಕ್‌ಗಳು, ಆಟ ಪಾಟಗಳ ಸೌಲಭ್ಯ, ಮತ್ತು ನೀರಿನ ಸೌಲಭ್ಯಗಳನ್ನು ಕರ್ನಾಟಕ ಮತ್ತು ಭಾರತದ ಇತರ ಜಾಗಗಳಲ್ಲಿ ಒದಗಿಸುವುದು.

3.ಪ್ರಸ್ತಾಪಿತ ಕಂಪೆನಿಯ–ಸಂಘಗಳ ವಿವರಣ ಪತ್ರ ಮತ್ತು ನಿಯಮಾವಳಿಗಳು, ಇದರ ಪ್ರತಿಯನ್ನು ಕಂಪೆನಿಯ ಕಛೇರಿ, ಸರ್ವೆ ನಂಬರ್ 146, ಪದ್ಮಶ್ರೀ ಕ್ಯಾಂಪಸ್, ಕೊಮ್ಮಘಟ್ಟ, ಸೂಳಿಕೆರೆ, ಕೆಂಗೇರಿ, ಬೆಂಗಳೂರು–560060 ಇಲ್ಲಿ ಪರಿಶೀಲಿಸಬಹುದಾಗಿದೆ.

4. ಈ ಅರ್ಜಿಯ ಬಗೆಗೆ ಆಕ್ಷೇಪಣೆ ಮಾಡುವ ಯಾವುದೇ ವ್ಯಕ್ತಿಯು ತನ್ನ ಆಕ್ಷೇಪಣೆಯನ್ನು, ಲಿಖಿತರೂಪದಲ್ಲಿ, ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಷನ್ ಸೆಂಟರ್, (ಸಿ.ಆರ್.ಸಿ) ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಾರ್ಪೊರೆಟ್ ಅಫೇರ್ಸ್, ಪ್ಲಾಟ್ ನಂ. 6,7,8 ಸೆಕ್ಟರ್ 5, ಐ.ಎಂ.ಟಿ. ಮಾನೇಸಾರ್, ಜಿಲ್ಲಾ ಗುರ್‌ಗಾಂವ್, (ಹರ್ಯಾನ) 122050, ಈ ಸೂಚನೆಯು ಪ್ರಕಟಣೆಯ 21 (ಇಪ್ಪತ್ತೊಂದು) ದಿವಸಗಳೊಳಗೆ ಸಲ್ಲಿಸತಕ್ಕದ್ದು, ಅದರ ಪ್ರತಿಯನ್ನು ಕಂಪೆನಿಯ ನೋಂದಾಯಿತ ಕಾರ್ಯಾಲಯಕ್ಕೆ ಕಳುಹಿಸುವುದು. **ತಾರೀಖು: 4ನೇ ಜನವರಿ 2023.**

ಅರ್ಜಿದಾರರ ಹೆಸರುಗಳು. **ಟಿ. ಕೆ. ನಾರಾಯಣಪ್ಪ ಫೌಂಡೇಷನ್** ಪರವಾಗಿ
1) **ಶ್ರೀ ಟಿ.ಕೆ. ನಾರಾಯಣಪ್ಪ**, ವ್ಯವಸ್ಥಾಪಕ ಟ್ರಸ್ಟಿ
2) **ಶ್ರೀ ಸತೀಶ್**, ಅಧ್ಯಕ್ಷರು.

PUBLIC NOTICE
The General Public is hereby informed that my client/customer as mentioned below is intending to collect the original title deeds of the below mentioned property from Aadhaar Housing Limited office No.16/12, Nagarathna Nilaya, 1st Floor, 1St A Cross 2nd Main, 150ft Ring Road, Nandini Layout 2nd Block, Bangalore-96, for which the home loan application no. 230960/ File no.6492 was re-paid and settled by Bhagyanathan.B.
1. Mrs. Kalyani Mother of & Mother In Law of Late Bharath Palani Nathan and Late Tara Bharath.
2. Mr. Bhagyanathan .B Brother of & Brother In Law of Late Bharath Palani Nathan and Late Tara Bharath.
If anybody is having any objection, claim, interest, dispute for the above intended transaction, he/she/they may contact the undersigned with the documentary proof substantiating his/her/ their objections/ claims/details of dispute/s within Seven (7) days from the date of this publication, failing which, my client will proceed to complete the transaction with the above concern as if there are no third party claims/objections/ disputes in respect of the Schedule Property and thereafter no claims/objections/disputes will be entertained.
Schedule of the Property.
All that piece and parcel of immovable property bearing eastern portion of old khatha no. 88/4, later house list khatha no. 143/153-1, new no. 340/153/1, BBMP Sl.No. 492/1, situated at Chelekere Village Krishnarajapura Hobli, Bengaluru East Taluk, now comes under the jurisdiction of Bruhat Bengaluru Mahanagara Palike, Bengaluru measuring East to West: 30 ft. and North to South 23 Ft. in all measuring 690 Sq. Ft., together with all rights, appurtenances whatsoever hereunder or underneath or above the surface, and bounded on the: East by: Sri. Venkatappa Reddys Property, West by: Remaining western portion of same property belongs to Sri.Late Bharath Palani Nathan and Bhagyanathan.B, North by: Property Somagunda Reddy, South by: 5 ft Passage Road.
Sd/-
Advocate Shashikala .G. B.A., LL.B,
Old Madras Road, Ulsoor, Bengaluru-08
Phone No. 9740389099

PUBLIC NOTICE
Public are hereby informed that, our client SMT. G. RANI, W/o L. GURUMURTHI. Aged about 66 years, R/at No. 1114, SUMUKHA, 1st Floor, 8th Main, KEB Colony, BTM 1st Stage, New Gurappanpalya Bengaluru-560029, is the absolute owner and in possession for over 25 years since the purchase of this Property, bearing Sy no. 25, House list no 70 and 71, assessment no. 25 Katha no.920, situated at Andrahalli, Yashavanthpura Hobli Bengaluru North Taluk, Measuring East to West: 60 feet, North to South: 40 feet, totally measuring 2400 sq feet, along with 40 sq feet Ac sheet roofed shed, ordinary construction, now under the BBMP Limits. If any persons or any institutions are dealing with the said Property is at their own risk and consequences and any transactions done without the knowledge and consent of our client SMT. G. RANI is not binding on our client. If any persons or any institutions deal with the said Property, our client reserves the right to initiate legal action against them as well as the bank authorities.
Place: - Bengaluru,
Date: - 3/01/2023
Sd/- **Shaji.T.Verghese,**
Legal-I Advocates,
No.45, Millers Road, Vasanthnagar, Bengaluru- 560052.
Mob: 9845154053.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PUBLIC NOTICE
This is to inform the General Public that the Joint Development Agreement dated 28-08-2013 as Document No. 5581/2013-14, and GPA dated 28-08-2013 Registered as Document No. 208/2013-14 in CD No. 228 on the file of Sub Registrar Jayanagar (JP Nagar) Bangaluru executed by **N Manjunath, S/o late L Nagappa, Residing at No 65, 34th Cross, 16th Main, Jayanagar 4th 'T' Block, Bangalore - 560 041 in favour of M/s. Vasundhara Builders represented by Mr. Anil Manakame, Managing Partner, Residing at No. 286/A, 9th Main, 7th Cross, Hanumanthnagar, Bangalore - 560 019 was cancelled by means of Registered Legal Notice dated 23-12-2022.**
My client hereby warned the General Public not to deal with M/s. Vasundhara Builders in respect of schedule property.
Anybody does any act or contract with M/s. Vasundhara Builders shall do so at their risk and cost and my client is not answerable of the same.
AMALGAMATED SCHEDULE OF A & B PROPERTIES
All that part and parcel of undeveloped property bearing Sy. No. 210, measuring 01 acre, 29 guntas duly converted for non agricultural residential purposes, as per Official Memorandum bearing Nos. (1) ALN:(S) S.R. (KEN) 33/10-11 dated 27-08-2010 and (2) No. B. DIS. ALN. S.R.(S) 212/94-95 dated 07-08-1995 respectively issued by Special Deputy Commissioner, Bengaluru District, Bengaluru situated at Kengeri Village, Kengeri Hobli, Bengaluru South Taluk and bounded on : **East by : Road, West by : Remaining portion of the same Sy. No. 210, North by : Private Property, South by : Property bearing Sy. No. 209.**
K.T.Dakappa, Advocate,
No. 64/1, S M Plaza, 1st Floor, D V G Road, Basavangudi, Bengaluru - 560 004. Phone : 4090 1371 **Date : 02-01-2023**

ಬುಧವಾರ, ಜನವರಿ 4, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 4 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
2024ರ ಲೋಕಸಭೆ ಚುನಾವಣೆಗೆ 2023ರಲ್ಲೇ ತಾಲೀಮು

ರಾಹುಲ್ ಯೋಧ, ಹೆದರಲ್ಲ: ಪ್ರಿಯಾಂಕಾ ಗಾಂಧಿ 7

ಕನ್ನಡ ಸಂಸ್ಕೃತಿ ಇಲಾಖೆ: ಧನಸಹಾಯ ₹ 5 ಲಕ್ಷಕ್ಕೆ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,294 ▲	18,232 ▲	₹ 57,280 (ಬೆಂಗಳೂರು) ▲	₹ 71,300 (ಬೆಂಗಳೂರು) ▲	83 ▼

ಅಗ್ನಿ ಸ್ಪರ್ಶದೊಂದಿಗೆ ಸಿದ್ಧೇಶ್ವರ ಶ್ರೀ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ವಿಜಯಪುರ: ವಯೋಸಹಜ ಅನಾರೋಗ್ಯದಿಂದಾಗಿ ಸೋಮವಾರ ಲಿಂಗೈಕ್ಯರಾಗಿದ್ದ ಜ್ಞಾನ ಯೋಗಾಶ್ರಮದ ಸಿದ್ಧೇಶ್ವರ ಸ್ವಾಮೀಜಿ (82) ಅವರ ಅಂತ್ಯಕ್ರಿಯೆಯು ಆಶ್ರಮದ ಆವರಣದಲ್ಲಿ ಮಂಗಳವಾರ ರಾತ್ರಿ 8.45ಕ್ಕೆ ಅವರ ಅಂತಿಮ ಇಚ್ಛೆಯಂತೆ ಅಗ್ನಿಸ್ಪರ್ಶದೊಂದಿಗೆ ನೆರವೇರಿತು.

ಕತ್ತಲು ಆವರಿಸಿದ್ದ ಆಶ್ರಮದ ಆವರಣದಲ್ಲಿ, ಹೊಚ್ಚ ಹೊಸದಾಗಿ ವೃತ್ತಾಕಾರದಲ್ಲಿ ನಿರ್ಮಿಸಲಾಗಿದ್ದ ಚಿತಾಕಟ್ಟೆಗೆ ಸಚಿವೆ ಶಶಿಕಲಾ ಜೊಲ್ಲೆ ಮತ್ತು ಸಂಸದ ಅಣ್ಣಾಸಾಬ್ ಜೊಲ್ಲೆ ಪೂಜೆ ಸಲ್ಲಿಸಿ, ಕಟ್ಟೆಯ ಸುತ್ತಲೂ ದೀಪಬೆಳಗಿಸಿದರು.

ಸೈನಿಕ ಶಾಲೆಯ ಆವರಣದಲ್ಲಿ ಶ್ರೀಗಳ ಅಂತಿಮ ದರ್ಶನ ಮುಗಿದ ಬಳಿಕ ಪೊಲೀಸರು ಮೂರು ಸುತ್ತು ಕುಶಾಲತೋಪುಗಳನ್ನು ಹಾರಿಸಿ ಸರ್ಕಾರಿ ಗೌರವ ಅರ್ಪಿಸಿದರು. ಪುಷ್ಪಗಳಿಂದ ವಿಶೇಷವಾಗಿ ಅಲಂಕರಿಸಿದ್ದ ತೆರೆದ ವಾಹನದಲ್ಲಿ ಜ್ಞಾನ ಯೋಗಾಶ್ರಮದವರೆಗೆ ಶ್ರೀಗಳ ಅಂತಿಮಯಾತ್ರೆ ನಡೆಯಿತು. ಬಳಿಕ ಪಾರ್ಥಿವ ಶರೀರವನ್ನು ಅವರ ಗುರುಗಳಾದ ಮಲ್ಲಿಕಾರ್ಜುನ ಶಿವಯೋಗಿಗಳ ಪ್ರಣವ ಮಂಟಪ (ಗದ್ದುಗೆ) ಬಳಿ ಇರಿಸಿ, ಚಿತೆಯತ್ತ ತರಲಾಯಿತು. ಜಮಖಂಡಿ ತಾಲ್ಲೂಕಿನ ಹುಲ್ಯಾಳದ ಸದಾಶಿವ ಆಶ್ರಮದಿಂದ ತರಲಾಗಿದ್ದ 700 ಕೆ.ಜಿ ಶ್ರೀಗಂಧದ ಕಟ್ಟಿಗೆ ಮೇಲೆ ಶ್ರೀಗಳ ಪಾರ್ಥಿವ ಶರೀರವನ್ನಿಟ್ಟು, ಅಗ್ನಿ ಸ್ಪರ್ಶ ಮಾಡಲಾಯಿತು.

ಕನ್ನೇರಿ ಮಠದ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿರಿಗೆರೆಯ ತರಳಬಾಳು ಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕ ಬಿ.ಎಸ್. ಯಡಿಯೂರಪ್ಪ, ಸಚಿವ ಗೋವಿಂದ ಕಾರಜೋಳ, ಶಾಸಕ ಎಂ.ಬಿ.ಪಾಟೀಲ ಸೇರಿದಂತೆ ಹಲವು ಗಣ್ಯರು ಚಿತೆಗೆ ತುಪ್ಪ, ವಿಭೂತಿ ಅರ್ಪಿಸಿದರು.

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ವಿಜಯಪುರ ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಶ್ರೀಗಳ ಅಂತಿಮಯಾತ್ರೆಯಲ್ಲಿ ಮಂಗಳವಾರ ಕಂಡು ಬಂದ ಜನಸ್ತೋಮ –ಪ್ರಜಾವಾಣಿ ಚಿತ್ರ/ಗೋವಿಂದರಾಜ ಜವಳಿ

ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿ 1 ಕೆ.ಜಿ ಅಕ್ಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನ್ನಭಾಗ್ಯ' ಯೋಜನೆಯ ಫಲಾನುಭವಿಗಳಿಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ವಿತರಿಸಲಾಗುತ್ತಿರುವ 5 ಕೆ.ಜಿ ಆಹಾರ ಧಾನ್ಯದೊಂದಿಗೆ ಹೆಚ್ಚುವರಿಯಾಗಿ 1 ಕೆ.ಜಿ.ವಿತರಿಸುವ ಸಂಬಂಧ ಆದೇಶ ಹೊರಡಿಸಲಾಗಿದೆ. ಜನವರಿಯಿಂದಲೇ ಈ ಆದೇಶ ಅನ್ವಯವಾಗಲಿದೆ.

2022–23ನೇ ಸಾಲಿನ ಬಜೆಟ್‌ನಲ್ಲಿ ಹೆಚ್ಚುವರಿಯಾಗಿ 1 ಕೆ.ಜಿ ಆಹಾರ ಧಾನ್ಯ ವಿತರಿಸುವುದಾಗಿ ಘೋಷಿಸಲಾಗಿತ್ತು. ಆ ಪ್ರಕಾರ 2022ರ ಏಪ್ರಿಲ್‌ನಿಂದ 5 ಕೆ.ಜಿ ಆಹಾರ ಧಾನ್ಯದ ಜತೆಗೆ ಹೆಚ್ಚುವರಿ 1 ಕೆ.ಜಿ ವಿತರಿಸಲು ಆರಂಭಿಸಲಾಗಿತ್ತು. ಇದಾದ ಕೆಲವೇ ದಿನಗಳಲ್ಲಿ ಅಂದರೆ 2022 ಮೇನಿಂದ ಸೆಪ್ಟೆಂಬರ್‌ವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಆದೇಶ ಹೊರಡಿಸಲಾಗಿತ್ತು.

ಪಿಎಂಜಿಕೆಎವೈ ಯೋಜನೆ ಅಡಿ ಆದ್ಯತಾ ವಲಯ (ಬಿಪಿಎಲ್) ಮತ್ತು ಅಂತ್ಯೋದಯ ಪಡಿತರ ಚೀಟಿಗಳ ಪ್ರತಿ ಫಲಾನುಭವಿಗಳಿಗೆ ತಲಾ 5 ಕೆ.ಜಿ ಅಕ್ಕಿಯನ್ನು 2022 ರ ಅಕ್ಟೋಬರ್‌ನಿಂದ 2022 ಡಿಸೆಂಬರ್ ವರೆಗೆ ಮುಂದುವರಿಸಲಾಗಿತ್ತು. ಹೀಗಾಗಿ, ಆದ್ಯತಾ ವಲಯದ ಪಡಿತರ ಫಲಾನುಭವಿಗಳಿಗೆ 1 ಕೆ.ಜಿ ಅಕ್ಕಿಯನ್ನು ಹೆಚ್ಚುವರಿಯಾಗಿ ವಿತರಿಸುವುದನ್ನು ನಿಲ್ಲಿಸಲಾಗಿತ್ತು. ಪಿಎಂಜಿಕೆಎವೈ ಯೋಜನೆ ಡಿಸೆಂಬರ್‌ನಲ್ಲಿ ಕೊನೆಗೊಂಡಿದ್ದರಿಂದ 1 ಕೆ.ಜಿ ಆಹಾರ ಹೆಚ್ಚುವರಿಯಾಗಿ ವಿತರಿಸಲು ಸರ್ಕಾರ ಮುಂದಾಗಿದೆ.

ಕಾಂಗ್ರೆಸ್ ಟೀಕೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಹೊಸ ವರ್ಷದಲ್ಲಿ 81 ಕೋಟಿ ಬಡವರ ಪಡಿತರದಲ್ಲಿ ಶೇ 50ರಷ್ಟು ಕಡಿತಗೊಳಿಸಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟೀಕಿಸಿದರು.

ತಿಂಗಳಿಗೆ 10 ಕೆ.ಜಿ ಆಹಾರ ಧಾನ್ಯಕ್ಕೆ ಅರ್ಹರಾಗಿದ್ದ 81 ಕೋಟಿ ಭಾರತೀಯರು ಈಗ ಕೇವಲ ಐದು ಕೆ.ಜಿಯಷ್ಟನ್ನು ಮಾತ್ರ ಪಡೆಯಲಿದ್ದಾರೆ ಎಂದು ಮಂಗಳವಾರ ಕುಟುಕಿದ್ದಾರೆ.

ವಾಕ್ ಸ್ವಾತಂತ್ರ್ಯಕ್ಕೆ ಹೆಚ್ಚುವರಿ ನಿರ್ಬಂಧ ಹೇರಲಾಗದು: 'ಸುಪ್ರೀಂ' ಸಂವಿಧಾನ ಪೀಠದ ತೀರ್ಪು

ಜನಪ್ರತಿನಿಧಿ ಮಾತಿಗೆ ಅಂಕುಶ ಆಗದು

ನವದೆಹಲಿ (ಪಿಟಿಐ): ಜನಪ್ರತಿನಿಧಿಗಳ ವಾಕ್ ಸ್ವಾತಂತ್ರ್ಯದ ಮೇಲೆ ಹೆಚ್ಚುವರಿ ನಿರ್ಬಂಧ ಹೇರಲು ಸಾಧ್ಯವಿಲ್ಲ ಎಂದು ಸುಪ್ರೀಂಕೋರ್ಟ್‌ನ ಸಂವಿಧಾನ ಪೀಠವು ಮಂಗಳವಾರ ತೀರ್ಪು ನೀಡಿದೆ.

ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠವು ಈ ತೀರ್ಪು ಕೊಟ್ಟಿದೆ. ವಾಕ್ ಸ್ವಾತಂತ್ರ್ಯಕ್ಕೆ ಸಂವಿಧಾನದ ವಿಧಿ 19 (2)ರಲ್ಲಿ ಕೆಲವು ಮಿತಿಗಳನ್ನು ಹೇರಲು ಅವಕಾಶವಿದೆ. (ದೇಶದ ಸಾರ್ವಭೌಮತೆ ಮತ್ತು ಒಗ್ಗಟ್ಟು, ಭದ್ರತೆ, ಮಿತ್ರ ದೇಶಗಳ ಸಾರ್ವಭೌಮತೆಗೆ ಧಕ್ಕೆ, ಸಾರ್ವಜನಿಕ ಸುವ್ಯವಸ್ಥೆಗೆ ತೊಡಕು, ಘನತೆ ಅಥವಾ ನೈತಿಕತೆ ಅಥವಾ ನ್ಯಾಯಾಂಗ ನಿಂದನೆ ಮುಂತಾದ ವಿಚಾರಗಳಿಗೆ ಸಂಬಂಧಿಸಿ ಹಕ್ಕುಗಳ ಮೇಲೆ ವಿವೇಚನಾಯುಕ್ತವಾದ ನಿರ್ಬಂಧಗಳನ್ನು ಹೇರಬಹುದು ಎಂದು 19 (2) ವಿಧಿಯು ಹೇಳುತ್ತದೆ). ಜನಪ್ರತಿನಿಧಿಗಳ ಮೇಲೆ ಕೂಡ ಈ ನಿರ್ಬಂಧವನ್ನಷ್ಟೇ ಹೇರಲುಅವಕಾಶ ಇದೆ ಎಂದು ಪೀಠವು ಸ್ಪಷ್ಟಪಡಿಸಿದೆ.

ಸಚಿವರೊಬ್ಬರು ವ್ಯಕ್ತಿಯ ಹಕ್ಕುಗಳು ಉಲ್ಲಂಘನೆ ಆಗದ ರೀತಿಯಲ್ಲಿ ನೀಡಿದ ಹೇಳಿಕೆಯನ್ನು ಸಾಂವಿಧಾನಿಕ ಹಕ್ಕಿನ ಉಲ್ಲಂಘನೆ ಎಂದು ಹೇಳಲಾಗದು. ಆದರೆ, ಆ ಹೇಳಿಕೆಯ ಪರಿಣಾಮವಾಗಿ ಅಧಿಕಾರಿಗಳು ಕೈಗೊಂಡ ಕ್ರಮವು ವ್ಯಕ್ತಿಗೆ ಯಾವುದೇ ನಷ್ಟ/ಹಾನಿ ಮಾಡಿದರೆ, ಅದನ್ನು ಅಪರಾಧ ಎಂದು ಪರಿಗಣಿಸಬಹುದು ಎಂದೂ ತೀರ್ಪಿನಲ್ಲಿ ಹೇಳ ಲಾಗಿದೆ.

ಬುಲಂದ್‌ಶಹರ್‌ನ ಹೆದ್ದಾರಿ ಸಮೀಪ 2016ರ ಜುಲೈನಲ್ಲಿ ವ್ಯಕ್ತಿಯೊಬ್ಬರ ಹೆಂಡತಿ ಮತ್ತು ಮಗಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿ ಈ ತೀರ್ಪು ನೀಡಲಾಗಿದೆ. ಪ್ರಕರಣವನ್ನು ದೆಹಲಿಗೆ ವರ್ಗಾಯಿಸಬೇಕು ಎಂದು ಕೋರಿ ಅವರು ಅರ್ಜಿ ಸಲ್ಲಿಸಿದ್ದರು. ಸಾಮೂಹಿಕ ಅತ್ಯಾಚಾರ ಪ್ರಕರಣವು 'ರಾಜಕೀಯ ಪಿತೂರಿ' ಎಂದು ಉತ್ತರ ಪ್ರದೇಶದಲ್ಲಿ ಆಗ ಸಚಿವರಾಗಿದ್ದ ಆಜಂ ಖಾನ್ ಹೇಳಿಕೆ ನೀಡಿದ್ದರು. ಆಜಂ ಖಾನ್ ಮೇಲೆ ಪ್ರಕಣದ ದಾಖಲಿಸಬೇಕು ಎಂದೂ ವ್ಯಕ್ತಿಯು ಕೋರಿದ್ದರು.

ಅರ್ಜಿಯ ವಿಚಾರಣೆ ನಡೆಸಿದ್ದ ಪೀಠವು, ಜನಪ್ರತಿನಿಧಿಗಳ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿಗೆ ನಿರ್ಬಂಧ ಹೇರಲು ಸಾಧ್ಯವಿದೆಯೇ ಎಂಬುದನ್ನು ಪರಿಶೀಲನೆಗೆ ಒಳಪಡಿಸಿತ್ತು.

ಕಳೆದ ನ. 15ರಂದು ವಿಚಾರಣೆಯನ್ನು ಪೂರ್ಣಗೊಳಿಸಿ, ತೀರ್ಪು ಕಾಯ್ದಿರಿಸಲಾಗಿತ್ತು. ಸಾರ್ವಜನಿಕ ಹುದ್ದೆಯಲ್ಲಿರುವ ವ್ಯಕ್ತಿಗಳು ಆತ್ಮ ಸಂಯಮ ಪಾಲಿಸಬೇಕು ಮತ್ತು ಇತರರಿಗೆ ಅವಮಾನ ಮತ್ತು ಅಗೌರವ ತರುವ ರೀತಿಯ ಹೇಳಿಕೆಗಳನ್ನು ನೀಡಬಾರದು ಎಂದು ಪೀಠವು ಆಗ ಹೇಳಿತ್ತು. ಇದು ನಮ್ಮ ಸಾಂವಿಧಾನಿಕ ಸಂಸ್ಕೃತಿಯ ಧೋರಣೆಯಾಗಿದೆ. ಹಾಗಾಗಿ, ಜನಪ್ರತಿನಿಧಿಗಳಿಗೆ ನಡತೆ ಸಂಹಿತೆ ರೂಪಿಸುವ ಅಗತ್ಯ ಇಲ್ಲ ಎಂದೂ ಹೇಳಿತ್ತು. ಅರ್ಜಿಯ ವಿಚಾರಣೆಯನ್ನು ಮೂವರು ನ್ಯಾಯಮೂರ್ತಿಗಳ ಪೀಠವು ಆರಂಭಿಸಿತ್ತು. ಆದರೆ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಚಿವರು ಅತ್ಯಂತ ಸೂಕ್ಷ್ಮ ವಿಚಾರಗಳ ಕುರಿತು ಹೇಳಿಕೆ ನೀಡಿ, ತಮಗೆ ವಾಕ್ ಸ್ವಾತಂತ್ರ್ಯ ಇದೆ ಎಂದು ಹೇಳಿಕೊಳ್ಳಬಹುದೇ ಎಂಬ ಮಹತ್ವದ ವಿಚಾರಗಳನ್ನು ಪರಿಶೀಲನೆಗೆ ಒಳಪಡಿಸಬೇಕಿದ್ದುದರಿಂದ ಅರ್ಜಿಯನ್ನು ಸಂವಿಧಾನ ಪೀಠಕ್ಕೆ ವರ್ಗಾಯಿಸಲಾಗಿತ್ತು.

'ಸಚಿವರ ಹೇಳಿಕೆ ಸರ್ಕಾರದ ನಿಲುವಲ್ಲ'

ಸಚಿವರೊಬ್ಬರು ನೀಡಿದ ಹೇಳಿಕೆಯು ಸರ್ಕಾರದ್ದೇ ನಿಲುವು ಎಂದು ಹೇಳಲು ಆಗದು. ಸಾಮೂಹಿಕ ಹೊಣೆಗಾರಿಕೆಯ ತತ್ವವನ್ನು ಅನ್ವಯಿಸುವಾಗಲೂ ಸಚಿವರ ಹೇಳಿಕೆಯು ಸರ್ಕಾರದ ನಿಲುವು ಎಂಬ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ ಎಂದು ಪೀಠವು ಹೇಳಿದೆ.

ಸರ್ಕಾರವನ್ನು ರಕ್ಷಿಸಲು ಅಥವಾ ಸಮರ್ಥಿಸಲು ಸಚಿವರು ಹೇಳಿಕೆ ನೀಡಿದ್ದರೂ ಸಚಿವರ ಹೇಳಿಕೆಯು ಸರ್ಕಾರದ ನಿಲುವು ಎನ್ನಲಾಗದು ಎಂದು ಪೀಠವು ತಿಳಿಸಿದೆ.

ಆದರೆ, ಪೀಠದ ಭಾಗವಾಗಿದ್ದ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು ಭಿನ್ನವಾದ ನಿಲುವು ವ್ಯಕ್ತಪಡಿಸಿದ್ದಾರೆ. ಅಗೌರವ ತರುವಂತಹ ಹೇಳಿಕೆಯನ್ನು ಸಚಿವರು ತಮ್ಮ ಹುದ್ದೆಯ ಹೆಸರಿನಲ್ಲಿ ನೀಡಿದ್ದರೆ, ಆಗ ಈ ಹೇಳಿಕೆಯು ಸರ್ಕಾರದ ನಿಲುವು ಕೂಡ ಹೌದು ಎಂದು ಪರಿಗಣಿಸಬಹುದು ಎಂದು ನಾಗರತ್ನ ಅಭಿಪ್ರಾಯಪಟ್ಟಿದ್ದಾರೆ.

ಬಿ.ವಿ.ನಾಗರತ್ನ

ದ್ವೇಷ ಭಾಷಣಗಳು ನಮ್ಮ ಮೂಲಭೂತ ಮೌಲ್ಯಗಳ ಮೇಲೆಯೇ ದಾಳಿ ನಡೆಸುತ್ತವೆ. ಸಮಾಜವನ್ನು ಅಸಮಾನತೆಯತ್ತ ತಳ್ಳುತ್ತವೆ. ಭಾರತದಂತಹ ದೇಶದ ವಿಭಿನ್ನ ಹಿನ್ನೆಲೆಗಳ ಜನರ ಮೇಲೆ ದಾಳಿ ನಡೆಸುತ್ತವೆ ಎಂದು ನಾಗರತ್ನ ಅವರು ಹೇಳಿದ್ದಾರೆ.

ಪೀಠದಲ್ಲಿ ಇದ್ದವರು

- ನ್ಯಾಯಮೂರ್ತಿಗಳಾದ ಎಸ್. ಅಬ್ದುಲ್ ನಜೀರ್, ಬಿ.ಆರ್. ಗವಾಯಿ, ಎಸ್.ಆರ್. ಬೋಪಣ್ಣ, ವಿ. ರಾಮ ಸುಬ್ರಮಣ್ಯನ್, ಬಿ.ವಿ.ನಾಗರತ್ನ ಪೀಠದಲ್ಲಿದ್ದರು
- ದ್ವೇಷ ಭಾಷಣ ಮಾಡಿದ ಸಚಿವರ ವಿರುದ್ಧ ಪ್ರಧಾನಿ/ಮುಖ್ಯಮಂತ್ರಿ ಕ್ರಮ ಕೈಗೊಳ್ಳಬೇಕು ಎಂಬ ವಾದವನ್ನು ತಿರಸ್ಕರಿಸಲಾಗಿದೆ

ಪರಿಸರ ಅನುಮೋದನೆ: ರಾಜ್ಯದಿಂದಲೇ ಹೆಚ್ಚು ಪ್ರಸ್ತಾವ

ಅರಣ್ಯ ಸಚಿವಾಲಯದಲ್ಲಿ ರಾಜ್ಯದ 15 ಪ್ರಸ್ತಾವನೆ ಒಪ್ಪಿಗೆಗೆ ಬಾಕಿ

- ಮಂಜುನಾಥ ಹೆಬ್ಬಾರ್

ನವದೆಹಲಿ: ವಿವಿಧ ರಾಜ್ಯಗಳ ಅಭಿವೃದ್ಧಿ ಯೋಜನೆಗಳಿಗೆ ಅರಣ್ಯ ಪ್ರದೇಶದ ಬಳಕೆಗೆ ಪರಿಸರ ಅನುಮೋದನೆ (ಇ.ಸಿ.) ಕೋರಿ ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಮಾನ ಬದಲಾವಣೆ ಸಚಿವಾಲಯಕ್ಕೆ ಸಲ್ಲಿಕೆಯಾಗಿರುವ 117 ಪ್ರಸ್ತಾವನೆಗಳು ಅನುಮೋದನೆಗೆ ಬಾಕಿ ಇವೆ. ಅದರಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರದ ಪ್ರಸ್ತಾವನೆಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ಒಪ್ಪಿಗೆಗಾಗಿ ಕಾದು ಕುಳಿತಿವೆ.

ಮಹದಾಯಿ ಯೋಜನೆಯ ಕಳಸಾ ನಾಲಾ ತಿರುವು ಯೋಜನೆಗೆ 33 ಹೆಕ್ಟೇರ್ ಮೀಸಲು ಅರಣ್ಯವನ್ನು ಬಳಸಿಕೊಳ್ಳಲು ಕರ್ನಾಟಕ ಸರ್ಕಾರವು ಪರಿಸರ ಸಚಿವಾಲಯಕ್ಕೆ 2022ರ ಡಿಸೆಂಬರ್ 30 ರಂದು ಪ್ರಸ್ತಾವನೆ ಸಲ್ಲಿಸಿದೆ. ಇದರ ಬೆನ್ನಲ್ಲೇ, ಬಾಕಿ ಇರುವ ಪ್ರಸ್ತಾವನೆಗಳ ವಿಷಯವು ಮುನ್ನೆಲೆಗೆ ಬಂದಿದೆ. ಕರ್ನಾಟಕ ಹಾಗೂ ಮಹಾರಾಷ್ಟ್ರ (ತಲಾ 15), ರಾಜಸ್ಥಾನ ಹಾಗೂ ಗುಜರಾತ್ (ತಲಾ 12), ಒಡಿಶಾದ 11 ಪ್ರಸ್ತಾವನೆಗಳಿಗೆ ಅನುಮೋದನೆ ಸಿಕ್ಕಿಲ್ಲ. ಉಳಿದ ರಾಜ್ಯಗಳ ಅರ್ಜಿಗಳು ಒಂದಂಕಿಯಲ್ಲಿವೆ.

'ಅರಣ್ಯ ಸಂರಕ್ಷಣೆ ಕಾಯ್ದೆ 1980'ರ ಅಡಿ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಲು ಕೇಂದ್ರ ಅರಣ್ಯ, ಪರಿಸರ ಮತ್ತು ತಾಪಮಾನ ಬದಲಾವಣೆ ಸಚಿವಾಲಯಕ್ಕೆ ಪ್ರಸ್ತಾವನೆ ಸಲ್ಲಿಸಬೇಕು. ಪ್ರಸ್ತಾವನೆಗಳ ಸಾಧಕ–ಬಾಧಕಗಳನ್ನು ಪರಿಶೀಲಿಸಿ ಸಚಿವಾಲಯ ಅನುಮೋದನೆ ನೀಡುತ್ತದೆ. ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ 1,865 ಎಕರೆ ಅರಣ್ಯ ಬಳಕೆಗೆ (48 ಪ್ರಸ್ತಾವನೆಗಳು) ಪೂರ್ವಾನುಮೋದನೆ ನೀಡಲಾ ಗಿದೆ.

'ಯೋಜನೆಗಳಿಗೆ ಅರಣ್ಯ ಬಳಸುವ ಮುನ್ನ ಸಂಬಂಧಪಟ್ಟ ಇಲಾಖೆ ಗಳು ಸಚಿವಾಲಯದ ಪರಿವೇಶ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಇದರ ಬಗ್ಗೆ ಅರಣ್ಯ ಇಲಾಖೆಯು ಸ್ಥಳೀಯ ಅಧಿಕಾರಿಗಳಿಂದ ವರದಿ ತರಿಸಿಕೊಂಡು ಪರಿಶೀಲಿಸಿ ಸಚಿವಾಲಯಕ್ಕೆ ಪ್ರಸ್ತಾವನೆ ಸಲ್ಲಿಸುತ್ತದೆ. ಸಚಿವಾಲಯವು ಈ ಹಿಂದೆ ಈ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲು ಗರಿಷ್ಠ 105 ದಿನಗಳನ್ನು ತೆಗೆದುಕೊಳ್ಳುತ್ತಿತ್ತು. 2021ರಲ್ಲಿ ಅದನ್ನು 75 ದಿನಕ್ಕೆ ಇಳಿಸಲಾಗಿದೆ. ಈಗ 65 ದಿನಗಳಲ್ಲೇ ಒಪ್ಪಿಗೆ ನೀಡಲಾಗುತ್ತದೆ' ಎಂದು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದರು.

ಐದು ವರ್ಷಗಳಲ್ಲಿ 92,658 ಹೆಕ್ಟೇರ್ ಅರಣ್ಯ ಬಳಕೆ: 2017–2022ರ ಅವಧಿಯಲ್ಲಿ ಪರಿಸರ ಸಚಿವಾಲಯವು 4,218 ಪ್ರಸ್ತಾವನೆಗಳಿಗೆ ಅನುಮೋದನೆ ಕೊಟ್ಟಿದೆ. 92,658 ಹೆಕ್ಟೇರ್ ಅರಣ್ಯವನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಲು ಒಪ್ಪಿಗೆ ನೀಡಿದೆ. ಗಣಿಗಾರಿಕೆಗೆ 18,262 ಹೆಕ್ಟೇರ್, ರಸ್ತೆಗಳ ನಿರ್ಮಾಣಕ್ಕೆ 17,836 ಹೆಕ್ಟೇರ್, ನೀರಾವರಿ ಯೋಜನೆಗಳಿಗೆ 16,622 ಹೆಕ್ಟೇರ್ ಅರಣ್ಯವನ್ನು ಬಳಸಲಾಗಿದೆ.

'ಕಾಂಪಾ' ಯೋಜನೆಯಡಿ ಕರ್ನಾಟಕದಲ್ಲಿ 2017–18ರಲ್ಲಿ 3,521 ಹೆಕ್ಟೇರ್, 18–19ರಲ್ಲಿ 2,465 ಹೆಕ್ಟೇರ್, 19–20ರಲ್ಲಿ 1,370 ಹೆಕ್ಟೇರ್, 20–21ರಲ್ಲಿ 15,780 ಹೆಕ್ಟೇರ್ ಹಾಗೂ 2021–22ರಲ್ಲಿ 9,845 ಹೆಕ್ಟೇರ್ ಅರಣ್ಯೀಕರಣ ಮಾಡಲಾಗಿದೆ ಎಂದು ಅರಣ್ಯಾಧಿಕಾರಿಯೊಬ್ಬರು ತಿಳಿಸಿದರು.

ಆಧಾರ್: ವಿಳಾಸ ನವೀಕರಣಕ್ಕೆ ಹೊಸ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕುಟುಂಬದ ಮುಖ್ಯಸ್ಥರ ಒಪ್ಪಿಗೆ ಮೇರೆಗೆ ಆನ್‌ಲೈನ್ ಮೂಲಕ ಆಧಾರ್ ವಿಳಾಸ ನವೀಕರಿಸುವ ವ್ಯವಸ್ಥೆ ಜಾರಿಗೊಳಿಸಲಾಗಿದೆ' ಎಂದು ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರ (ಯುಐಡಿಎಐ) ಮಂಗಳವಾರ ತಿಳಿಸಿದೆ.

'ತಮ್ಮ ಹೆಸರಿನಲ್ಲಿ ಯಾವುದೇ ದಾಖಲೆ ಹೊಂದಿರದೇ ಇರುವವರಿಗೆ ಹಾಗೂ ಬೇರೆಬೇರೆ ಕಾರಣಗಳಿಗಾಗಿ ದೇಶದ ವಿವಿಧ ನಗರ ಅಥವಾ ಪಟ್ಟಣಗಳಿಗೆ ವಲಸೆ ಹೋಗುವ ಲಕ್ಷಾಂತರ ಮಂದಿಗೆ ನೂತನ ವ್ಯವಸ್ಥೆಯಿಂದ ಹೆಚ್ಚು ಅನುಕೂಲವಾಗಲಿದೆ' ಎಂದು ಹೇಳಿದೆ.

ವಿಳಾಸ ನವೀಕರಿಸಲು ಇಚ್ಛಿಸುವವರು ಕುಟುಂಬದ ಮುಖ್ಯಸ್ಥರೊಂದಿಗೆ ತಾವು ಹೊಂದಿರುವ ಸಂಬಂಧ ದೃಢೀಕರಿಸಲು ಅಗತ್ಯವಿರುವ ಪಡಿ ತರ ಚೀಟಿ, ವಿವಾಹ ನೋಂದಣಿ ಪ್ರಮಾಣ ಪತ್ರ, ಪಾಸ್‌ಪೋರ್ಟ್ ಅಥವಾ ಇತರೆ ದಾಖಲೆಗಳನ್ನು ಸಲ್ಲಿಸಬೇಕು. ಅರ್ಜಿದಾರರು ತಮ್ಮ ಹೆಸರಿನ ಜೊತೆಗೆ ಕುಟುಂಬ ಮುಖ್ಯಸ್ಥರ ಹೆಸರನ್ನೂ ಆನ್‌ಲೈನ್‌ನಲ್ಲಿ ನಮೂದಿಸಬೇಕು. ಬಳಿಕ ಮುಖ್ಯಸ್ಥರ ಮೊಬೈಲ್‌ಗೆ ಒಟಿಪಿ ಬರುತ್ತದೆ. ಅದನ್ನು ದೃಢೀಕರಿಸಿದರೆ ವಿಳಾಸ ನವೀಕರಣ ಪೂರ್ಣಗೊಳ್ಳಲಿದೆ.

₹ 83ಕ್ಕೆ ಕುಸಿದ ರೂಪಾಯಿ ಮೌಲ್ಯ

ಮುಂಬೈ (ಪಿಟಿಐ): ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಇದೇ ಮೊದಲ ಬಾರಿಗೆ ₹ 83ರ ಮಟ್ಟಕ್ಕೆ ಕುಸಿದಿದೆ.

ಅಮೆರಿಕದ ಡಾಲರ್ ಮೌಲ್ಯವೃದ್ಧಿ ಹಾಗೂ ದೇಶದ ಬಂಡವಾಳ ಮಾರುಕಟ್ಟೆಗಳಿಂದ ವಿದೇಶಿ ಬಂಡವಾಳದ ಹೊರಹರಿವು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣ.

ಮಂಗಳವಾರದ ವಹಿವಾಟಿನ ಆರಂಭದಲ್ಲಿ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ಡಾಲರ್ ಎದುರು ₹ 82.69 ಆಗಿತ್ತು. ದಿನದ ಅಂತ್ಯಕ್ಕೆ 22 ಪೈಸೆಯಷ್ಟು ಮೌಲ್ಯ ಕಳೆದುಕೊಂಡ ರೂಪಾಯಿ, ₹ 83ಕ್ಕೆ ತಲುಪಿತು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ರಣಜಿ: ಉನದ್ಕತ್ ಹ್ಯಾಟ್ರಿಕ್ ದಾಖಲೆ

ರಾಜ್‌ಕೋಟ್(ಪಿಟಿಐ): ಸೌರಾಷ್ಟ್ರ ತಂಡದ ಜೈದೇವ್ ಉನದ್ಕತ್ ಮಂಗಳವಾರ ಆರಂಭವಾದ ದೆಹಲಿ ಎದುರಿನ ರಣಜಿ ಕ್ರಿಕೆಟ್ ಪಂದ್ಯದ ಪ್ರಥಮ ಇನಿಂಗ್ಸ್‌ನ ಮೊದಲ ಓವರ್‌ನಲ್ಲಿಯೇ ಹ್ಯಾಟ್ರಿಕ್ ಗಳಿಸಿ ದಾಖಲೆ ನಿರ್ಮಿಸಿದರು.

ಒಳ ಪುಟಗಳು

ಕನಿಷ್ಠ ವೇತನ ನೀಡದಿದ್ದರೆ ಎಫ್‌ಐಆರ್ 5

ಸರ್ಕಾರಿ ಕಂಪನಿಗಳ ಲಾಭ ಶೇ 50 ಜಿಗಿತ 10

ಮತದಾರರ ಅಂತಿಮ ಪಟ್ಟಿ ಜ. 5ಕ್ಕೆ ಪ್ರಕಟ: ತುಷಾರ್ ಗಿರಿನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭೆ ಕ್ಷೇತ್ರಗಳಲ್ಲಿ 25 ವಿಧಾನಸಭೆ ಕ್ಷೇತ್ರಗಳ ಮತದಾರರ ಅಂತಿಮ ಪಟ್ಟಿಯನ್ನು ಜನವರಿ 5ರಂದು ಪ್ರಕಟಿಸಲಾಗುತ್ತದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಮಹದೇವಪುರ, ಶಿವಾಜಿನಗರ, ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರಗಳ ಮತದಾರರ ಪಟ್ಟಿ ಶೇ 100ರಷ್ಟು ಪರಿಷ್ಕರಣೆ ಆಗುತ್ತಿರುವುದರಿಂದ ಜ.15ರಂದು ಈ ಮೂರು ಕ್ಷೇತ್ರಗಳ ಮತದಾರರ ಅಂತಿಮ ಪಟ್ಟಿ ಪ್ರಕಟವಾಗಲಿದೆ ಎಂದು ಮಂಗಳವಾರ ತಿಳಿಸಿದರು.

ಪ್ರತಿ ವರ್ಷ ಸುಮಾರು ಒಂದು ಲಕ್ಷ ಜನ ಮತಪಟ್ಟಿಗೆ ಹೊಸದಾಗಿ ಸೇರ್ಪಡೆಯಾಗುತ್ತಾರೆ ಎಂದು ಅಂದಾಜಿಸಲಾಗಿದೆ. ನಗರದ ಜನಸಂಖ್ಯೆಗೆ ಹೋಲಿಸಿದರೆ ಶೇ 58ರಷ್ಟು ಮಂದಿ ಮಾತ್ರ ಮತದಾರರ ಪಟ್ಟಿಯಲ್ಲಿದ್ದಾರೆ. ಎಲ್ಲರನ್ನೂ ಸೇರಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಅವರು ಹೇಳಿದರು.

ಬಾಲಗಂಗಾಧರನಾಥ ಸ್ವಾಮೀಜಿ 78ನೇ ಜಯಂತ್ಯುತ್ಸವ

ಪ್ರಜಾವಾಣಿ ವಾರ್ತೆ

ಪುತ್ತೂರು: 'ಆದಿಚುಂಚನಗಿರಿ ಜಗದ್ಗುರು ಬಾಲಗಂಗಾಧರನಾಥ ಸ್ವಾಮೀಜಿ ಅವರು ಜಗತ್ತಿಗೆ ನೀಡಿದ ಕೊಡುಗೆಗಳನ್ನು ಜ್ಞಾಪಿಸುವ ಮತ್ತು ಸೇವಾ ಕಾರ್ಯಗಳನ್ನು ಸಮಾಜಕ್ಕೆ ತಿಳಿಸುವ ನಿಟ್ಟಿನಲ್ಲಿ ಅವರ 78ನೇ ಜಯಂತ್ಯುತ್ಸವವನ್ನು ಪುತ್ತೂರಿನ ಮಹಾಲಿಂಗೇಶ್ವರ ದೇವಳದ ಎದುರಿನ ಗದ್ದೆಯಲ್ಲಿ ಜ.22ರಂದು ಆಯೋಜಿಸಲಾಗಿದೆ' ಎಂದು ಕಾರ್ಯಕ್ರಮ ಸ್ವಾಗತ ಸಮಿತಿ ಗೌರವಾಧ್ಯಕ್ಷ, ಸಂಸದ ಡಿ.ವಿ.ಸದಾನಂದ ಗೌಡ ಹೇಳಿದರು.

ಸ್ವಾಮೀಜಿಯ ಜಯಂತ್ಯುತ್ಸವದ ಪ್ರಯುಕ್ತ ಪುತ್ತೂರಿನ ಒಕ್ಕಲಿಗ ಗೌಡ ಸೇವಾ ಸಂಘದ ಸಭಾಭವನದಲ್ಲಿ ಮಂಗಳವಾರ ನಡೆದ ಪೂರ್ವ ತಯಾರಿ ಸಭೆಯಲ್ಲಿ ಅವರು ಮಾತನಾಡಿದರು.

'ಸ್ವಾಮೀಜಿಯ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ 50 ಸಾವಿರಕ್ಕೂ ಅಧಿಕ ಮಂದಿ ಸೇರುವ ನಿರೀಕ್ಷೆ ಇದೆ' ಎಂದು ಹೇಳಿದರು.

ಕಾರ್ಯಕ್ರಮವನ್ನು ಜಾತ್ಯತೀತವಾಗಿ, ಪಕ್ಷಾತೀತವಾಗಿ, ರಾಜಕೀಯರಹಿತವಾಗಿ ಸಮಾಜಮುಖಿ ಕಾರ್ಯಕ್ರಮವಾಗಿ ಜೋಡಣೆ ಮಾಡಲಾಗುತ್ತಿದೆ. ಇದು ಒಕ್ಕಲಿಗ ಗೌಡ ಸಮುದಾಯಕ್ಕೆ ಮಾತ್ರ ಸೀಮಿತವಾದ ಕಾರ್ಯಕ್ರಮ ಅಲ್ಲ. ಪ್ರತೀ ಮನೆಯವರೂ ಪಾಲುದಾರರಾಗಬೇಕು' ಎಂದು ಮನವಿ ಮಾಡಿದರು.

ಬಸವನಗುಡಿಯಲ್ಲಿ ರಾಧಾಕೃಷ್ಣ ಫುಡ್ ಮೊಬೈಲ್ ಕ್ಯಾಂಟೀನ್‌ಗಳಿಗೆ ಸೋಮವಾರ ಚಾಲನೆ ನೀಡಲಾಯಿತು

₹10ಕ್ಕೆ ರುಚಿಕರವಾದ ಊಟ

ರಾಧಾಕೃಷ್ಣ ಮೊಬೈಲ್ ಕ್ಯಾಂಟೀನ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡವರ ಹಸಿವು ನೀಗಿಸುವ ಜತೆಗೆ ಸ್ವಾದಿಷ್ಟ ಮತ್ತು ಉತ್ತಮ ಗುಣಮಟ್ಟದ ಆಹಾರ ನೀಡುವ ಉದ್ದೇಶದಿಂದ ಬಸವನಗುಡಿಯಲ್ಲಿ 'ರಾಧಾಕೃಷ್ಣ ಫುಡ್' ಮೊಬೈಲ್ ಕ್ಯಾಂಟೀನ್‌ಗಳನ್ನು ಆರಂಭಿಸಲಾಗಿದೆ.

ಶಾಸಕ ರವಿಸುಬ್ರಮಣ್ಯ, ಮಾಜಿ ಉಪಮಹಾಪೌರ ಲಕ್ಷ್ಮೀನಾರಾಯಣ್ ಮತ್ತು ರಾಧಾಕೃಷ್ಣ ಫುಡ್ ಕ್ಯಾಂಟೀನ್ ಮಾಲೀಕರಾದ ಗಿರೀಶ್, ಲೋಕೇಶ್ ಅವರು ಮೊಬೈಲ್ ಕ್ಯಾಂಟೀನ್‌ಗಳಿಗೆ ಸೋಮವಾರ ಚಾಲನೆ ನೀಡಿದರು.

'ಕೇವಲ ₹10ಗೆ ಊಟ ಮತ್ತು ತಿಂಡಿ ನೀಡಲಾಗುತ್ತಿದೆ. ಬಡವರ ಪಾಲಿಗೆ ಈ ಮೊಬೈಲ್ ಕ್ಯಾಂಟೀನ್‌ಗಳು ಆಸರೆಯಾಗಲಿವೆ' ಎಂದು ಮಾಲೀಕರಾದ ಗಿರೀಶ್ ಮತ್ತು ಲೋಕೇಶ್ ತಿಳಿಸಿದ್ದಾರೆ.

'ನಗರ ಪ್ರದೇಶದಲ್ಲಿ ಯಾವುದೇ ಹೋಟೆಲ್‌ನಲ್ಲಿ ತಿಂಡಿ ಸೇವಿಸಲು ₹70ರಿಂದ ₹100 ಬೇಕು. ಆದರೆ, ರಾಧಾಕೃಷ್ಣ ಫುಡ್ ಮೊಬೈಲ್ ಕ್ಯಾಂಟೀನ್‌ನಲ್ಲಿ ₹10ರೂಪಾಯಿಗೆ ಹೊಟ್ಟೆ ತುಂಬುವಷ್ಟು ತಿಂಡಿ ನೀಡಲಾಗುತ್ತಿದೆ' ಎಂದು ಅವರು ತಿಳಿಸಿದ್ದಾರೆ.

'ಮೂರು ಮೊಬೈಲ್ ಕ್ಯಾಂಟೀನ್‌ಗಳು ಬಡವರು ಹೆಚ್ಚಿನ ಸಂಖ್ಯೆಯಲ್ಲಿರುವ ಸ್ಥಳಗಳಲ್ಲಿ ನಿಲ್ಲುತ್ತವೆ. ಮುಂಬರುವ ದಿನಗಳಲ್ಲಿ 15ಕ್ಕೂ ಹೆಚ್ಚು ಮೊಬೈಲ್ ಫುಡ್ ಕ್ಯಾಂಟೀನ್‌ಗಳನ್ನು ತೆರೆಯುವ ಉದ್ದೇಶ ಇದೆ' ಎಂದು ತಿಳಿಸಿದ್ದಾರೆ.

'ಇಡ್ಲಿ, ಚಿತ್ರಾನ್ನ, ಪುಲಾವ್, ಮೊಸರನ್ನ, ತರಕಾರಿ ಬಾತ್, ಉಪ್ಪಿಟ್ಟು, ಕೇಸರಿಬಾತ್ ನಮ್ಮಲ್ಲಿ ವಿಶೇಷ. ಬಡವರ ಹೊಟ್ಟೆ ಹಸಿವು ನೀಗಿಸಬೇಕು ಎಂಬ ಉದ್ದೇಶದಿಂದ ಆರಂಭಿಸಲಾಗಿದೆ. ನಗರ ಪ್ರದೇಶದಲ್ಲಿ ಬೇಡಿಕೆ ಹೆಚ್ಚಿದಂತೆ ಮತ್ತು ಬಡವರು ವಾಸಿಸುವ ಪ್ರದೇಶಗಳಲ್ಲಿ ಮೊಬೈಲ್ ಕ್ಯಾಂಟೀನ್ ಪ್ರಾರಂಭಿಸಲಾಗುವುದು. ರಾಧಾಕೃಷ್ಣ ಫುಡ್ ಕ್ಯಾಂಟೀನ್ ವತಿಯಿಂದ 5ಕ್ಕೂ ಹೆಚ್ಚು ಅನಾಥ ಮಕ್ಕಳ ಶಾಲೆಯ ನೂರಾರು ವಿದ್ಯಾರ್ಥಿಗಳಿಗೆ ಹಾಗೂ ವೃದ್ಧಾಶ್ರಮಕ್ಕೆ ಉಚಿತವಾಗಿ ಪ್ರತಿದಿನ ತಿಂಡಿ ವಿತರಿಸಲಾಗುತ್ತಿದೆ' ಎಂದು ವಿವರಿಸಿದ್ದಾರೆ.

ಲುಲು ಗ್ಲೋಬಲ್ ಮಾಲ್

ಲುಲು ಮಾಲ್‌ನಲ್ಲಿ ರಿಯಾಯಿತಿ

ಬೆಂಗಳೂರು: ರಾಜಾಜಿನಗರದ ಲುಲು ಗ್ಲೋಬಲ್ ಮಾಲ್‌ನಲ್ಲಿ ಹಾಗೂ ಫಾಲ್ಕನ್ ಸಿಟಿಯಲ್ಲಿನ ಲುಲು ಡೈಲಿಯಲ್ಲಿ ಜನವರಿ 31ರವರೆಗೆ 'ಎಂಡ್ ಆಫ್ ಸೀಸನ್ ಸೇಲ್' ನಡೆಯುತ್ತಿದೆ. ಜ. 5ರಿಂದ ಜನವರಿ 8ರ ಮಧ್ಯರಾತ್ರಿಯವರೆಗೆ ಲುಲು ಫ್ಯಾಷನ್ ಸ್ಟೋರ್, ಲುಲು ಕನೆಕ್ಟ್, ಲುಲು ಹೈಪರ್‌ಮಾರ್ಕೆಟ್ ಮತ್ತು ಲುಲು ಡೈಲಿಯಲ್ಲಿ ಬಹುತೇಕ ಬ್ರ್ಯಾಂಡ್‌ಗಳಿಗೆ ಶೇ50ರಷ್ಟು ರಿಯಾಯಿತಿ ಇರಲಿದೆ.

ಫ್ಯಾಷನ್, ಬಟ್ಟೆ, ಗಾಜೆಟ್, ಮನೆಬಳಕೆಯ ವಸ್ತುಗಳು ಮತ್ತು ಇತರ ಹಲವು ಉತ್ಪನ್ನಗಳ ಮೇಲೆ ದೊಡ್ಡ ಪ್ರಮಾಣದಲ್ಲಿ ರಿಯಾಯಿತಿ ಸಿಗಲಿದೆ ಎಂದು ಪ್ರಕಟಣೆ ತಿಳಿಸಿದೆ. ಲುಲು ಕನೆಕ್ಟ್‌ನಲ್ಲಿ ಎಲೆಕ್ಟ್ರಾನಿಕ್ ಗಾಜೆಟ್‌ಗಳ ಮೇಲೆ ಅತಿಹೆಚ್ಚಿನ ಪ್ರಮಾಣದ ರಿಯಾಯಿತಿ ಸಿಗಲಿದೆ.

ಲುಲು ಹೈಪರ್‌ಮಾರ್ಕೆಟ್ ಮತ್ತು ಲುಲು ಡೈಲಿಯಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ದಿನಬಳಕೆಯ ಉತ್ಪನ್ನಗಳು, ತಾಜಾ ಆಹಾರ ವಸ್ತುಗಳು, ತರಕಾರಿಗಳು, ಬೇಕರಿ ಉತ್ಪನ್ನಗಳು ಲಭ್ಯವಿದ್ದು, ಬ್ರ್ಯಾಂಡೆಡ್ ಉತ್ಪನ್ನಗಳ ಮೇಲೆ ರಿಯಾಯಿತಿ ಸಿಗಲಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನಿಡಸಾಲೆ ಪುಟ್ಟಸ್ವಾಮಯ್ಯ ಆಯ್ಕೆ

ನಿಡಸಾಲೆ ಪುಟ್ಟಸ್ವಾಮಯ್ಯ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ರಾಜರಾಜೇಶ್ವರಿ ನಗರ ವಿಧಾನಸಭೆ ಘಟಕವು ಹಮ್ಮಿಕೊಂಡಿರುವ ಸಾಹಿತ್ಯಸಮ್ಮೇಳನದ ಅಧ್ಯಕ್ಷರಾಗಿ ಕಲಾವಿದ ಹಾಗೂ ಲೇಖಕ ನಿಡಸಾಲೆ ಪುಟ್ಟಸ್ವಾಮಯ್ಯ ಆಯ್ಕೆಯಾಗಿದ್ದಾರೆ.

ಫೆಬ್ರುವರಿ ತಿಂಗಳಲ್ಲಿ ಈ ಸಮ್ಮೇಳನ ನಡೆಯಲಿದೆ ಎಂದು ಘಟಕದ ಅಧ್ಯಕ್ಷ ಉದಂತ ಶಿವಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಪಿಎಫ್ ಬಡ್ಡಿ ಯಥಾಸ್ಥಿತಿ

ನವದೆಹಲಿ (ಪಿಟಿಐ): ಜನರಲ್ ಪ್ರಾವಿಡೆಂಟ್ ಫಂಡ್‌ಗೆ (ಜಿಪಿಎಫ್) ನೀಡುವ ಬಡ್ಡಿ ದರವನ್ನು ಕೇಂದ್ರ ಸರ್ಕಾರವು ಶೇಕಡ 7.1ರಲ್ಲಿ ಕಾಯ್ದುಕೊಂಡಿದೆ.ಡಿಸೆಂಬರ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿಯೂ ಜಿಪಿಎಫ್‌ಗೆ ನೀಡುವ ಬಡ್ಡಿ ಶೇ 7.1ರಷ್ಟು ಇತ್ತು. ಈಗ ಮಾರ್ಚ್ ತ್ರೈಮಾಸಿಕದಲ್ಲಿಯೂ ಇದೇ ಬಡ್ಡಿ ದರ ಇರಲಿದೆ.

ರೈಲು ಭೂಮಿ ಅಭಿವೃದ್ಧಿ ಪ್ರಾಧಿಕಾರ

(ಭಾರತ ಸರ್ಕಾರದ ರೈಲ್ವೆ ಸಚಿವಾಲಯ ಅಡಿಯಲ್ಲಿನ ಒಂದು ಶಾಸನಬದ್ಧ ಪ್ರಾಧಿಕಾರ)
ಯೂನಿಟ್ ನಂ. 702–ಬಿ, 7ನೇ ಮಹಡಿ, ಕನ್ಸೆಕ್ಸ್ ಟವರ್–2, ಡಿಎಂಆರ್‌ಸಿ ಬಿಲ್ಡಿಂಗ್, ಅಜ್ಮೇರಿ ಗೇಟ್, ನವದೆಹಲಿ–110002 ಫೋನ್: +91–11–23232854, ಫ್ಯಾಕ್ಸ್: +91–11–23232835

ಇ–ಟೆಂಡರ್ ಮುಖಾಂತರ ಪ್ರಸ್ತಾವಣೆಗೆ ಮನವಿ
(ಆರ್‌ಎಫ್‌ಪಿ ನೋಟಿಸ್ ನಂ. ಆರ್‌ಎಲ್‌ಡಿಎ/ಆರ್‌ಎಫ್‌ಪಿ/ಸಿಡಿ–78/ಎಸ್‌ಆರ್‌ಡಿ–17/2022 ದಿನಾಂಕ 06.12.2022)

ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ಕನ್‌ಸ್ಟ್ರಕ್ಷನ್ (ಇಪಿಸಿ) ಮಾದರಿಯಲ್ಲಿ ಮಾಡ್ಯೂಲಾರ್ ಪರಿಕಲ್ಪನೆಯಲ್ಲಿ, ಲೈಟ್ ಹೌಸ್ ಯೋಜನೆಗಾಗಿ ಗುರಗಾಂವ್ ರೈಲು ನಿಲ್ದಾಣಕ್ಕೆ ಮಹತ್ವದ ಸುಧಾರಣೆಗಾಗಿ ಪ್ರಸ್ತಾವಣೆಗಳಿಗೆ (ಆರ್‌ಎಫ್‌ಪಿ) ಆಹ್ವಾನ

ನಿಲ್ದಾಣ	ನಿರ್ಮಾಣ ಅವಧಿ	ಬಿಡ್ ದಸ್ತಾವೇಜು ಶುಲ್ಕ	ಬಿಡ್ ಸೆಕ್ಯೂರಿಟಿ
ಗುರಗಾಂವ್ ರೈಲು ನಿಲ್ದಾಣ	15 ತಿಂಗಳು	ರೂ. 88,500/– (ಜಿಎಸ್‌ಟಿ@18% ಸೇರಿ)	ರೂ. 1.00 ಕೋಟಿ

ಬಿಡ್ ಪೂರ್ವ ಸಭೆ: 16.01.2023 ರಂದು 11:30 ಗಂಟೆಗೆ ಸ್ಥಳ: ಆರ್‌ಎಲ್‌ಡಿಎ ಕಚೇರಿ, ನವದೆಹಲಿ
ಆನ್‌ಲೈನ್‌ನಲ್ಲಿ ಇ–ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 28.02.2023 ರಂದು 15:00 ಗಂಟೆವರೆಗೆ.
ತಾಂತ್ರಿಕ ಇ–ಬಿಡ್‌ಗಳ ತೆರೆಯುವಿಕೆ: 03.03.2023 ರಂದು 15:30 ಗಂಟೆ.
ಯೋಜನೆಯ ಕುರಿತಾದ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ www.rlda.indianrailways.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನ www.tenderwizard.in/RLDA ಪೋರ್ಟಲ್‌ನಲ್ಲಿರುವ 'ಇ–ಟೆಂಡರ್' ಶೀರ್ಷಿಕೆಯನ್ನು ಪರಿಶೀಲಿಸಿರಿ.
ಯಾವುದೇ ಸ್ಪಷ್ಟೀಕರಣಗಳಿಗಾಗಿ, ದಯವಿಟ್ಟು ಇವರನ್ನು ಸಂಪರ್ಕಿಸಿರಿ:–

ಜಾ.ಜನರಲ್ ಮ್ಯಾನೇಜರ್/ಪಿ/ಎನ್‌ಡಿಎಲ್‌ಎಸ್ ಮೊ: 70110 51338 jgmpndls@rlda.railnet.gov.in	ಡೆ. ಜನರಲ್ ಮ್ಯಾನೇಜರ್/ಟೆಂಡರ್ ಮೊ: 90131 64466 dgmtender@rlda.railnet.gov.in	ಇ–ಬಿಡ್ ನೆರವಿಗಾಗಿ – ಶ್ರೀ. ಸೂರಜ್ ಸಿಂಗ್ ಮೊ: 95996 53865 suraj@etenderwizard.com

ಸೂಚನೆ:– ತಿದ್ದುಪಡಿ ಅಥವಾ ಮಾರ್ಪಾಡು ಉಂಟಾದಲ್ಲಿ, ಅಂತಹುದನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
ಎಎಂ/ಟೆಂಡರ್, (ಮೊ) 8750554811

ಸಾರ್ವಜನಿಕ ಪ್ರಕಟಣೆ

ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರು ಕೆಳಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಅಳ್ಳಾಳಸಂದ್ರ ಗ್ರಾಮದಲ್ಲಿರುವ 1 ಎಕರೆ 10 ಗುಂಟೆ ವಿಸ್ತೀರ್ಣವುಳ್ಳ ಜಮೀನನ್ನು ಕೆಳಕಂಡ ಷೆಡ್ಯೂಲಿನಲ್ಲಿ ಕ್ರಮವಾಗಿ ಕಾಣಿಸಿರುವ ಮಾಲೀಕರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತು ಸದರಿಯವರ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಷೆಡ್ಯೂಲ್ ಸ್ವತ್ತಿನ ಮೇಲೆ ಅನಿರ್ಬಂಧಿತ ಮಾಲೀಕತ್ವದ ಹಕ್ಕನ್ನು ಸಹ ಹೊಂದಿರುತ್ತಾರೆಂದು ತಿಳಿಸಿರುತ್ತಾರೆ.
ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ವ್ಯಕ್ತಿಯು ಯಾವುದೇ ತರಹದ ಹಕ್ಕುಗಳು ಅಥವಾ ಕ್ಲೇಮುಗಳೇನಾದರೂ ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ 7 ದಿನಗಳೊಳಗಾಗಿ ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷಿದಾರರು ಸದರಿ ಕೆಳಕಂಡ ವ್ಯಕ್ತಿಗಳ ಮಾಲೀಕತ್ವಕ್ಕೆ ಹಾಗೂ ಸದರಿ ಖರೀದಿಗೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತನ್ನು ಖರೀದಿಸಲು ಮುಂದಾಗುವರು.

ಷೆಡ್ಯೂಲ್ ಸ್ವತ್ತಿನ ವಿವರ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ತೂಬಗೆರೆ ಹೋಬಳಿ, ಅಳ್ಳಾಳಸಂದ್ರ ಗ್ರಾಮದಲ್ಲಿರುವ ಒಟ್ಟು ವಿಸ್ತೀರ್ಣ 1 ಎಕರೆ 10 ಗುಂಟೆ ಉಳ್ಳ ಈ ಕೆಳಗೆ ವಿವರಿಸಿರುವ ಸ್ಥಿರ ಸ್ವತ್ತು :

ಸರ್ವೆ ನಂ.	ವಿಸ್ತೀರ್ಣ (ಎ =ಗು)	ಸ್ವತ್ತಿನ ಮಾಲೀಕರ ಹೆಸರು	ಚಕ್ಕುಬಂದಿ ಪೂರ್ವ	ಚಕ್ಕುಬಂದಿ ಪಶ್ಚಿಮ	ಚಕ್ಕುಬಂದಿ ಉತ್ತರ	ಚಕ್ಕುಬಂದಿ ದಕ್ಷಿಣ
54/2	12.5	ಶ್ರೀ ಮುನಿರಾಜು, ಬಿನ್ ಲೇಟ್ ಶ್ರೀ ದೊಡ್ಡಚನ್ನಪ್ಪ	ಸರ್ವೆ ನಂ.46 ರ ಜಮೀನು	ಸರ್ವೆ ನಂ.54/3 ರ ಜಮೀನು	ಸರ್ವೆ ನಂ.50 ರ ಜಮೀನು	ಸರ್ವೆ ನಂ.54/1 ರ ಜಮೀನು
54/3	12.5	ಶ್ರೀ ಸುರೇಶ್, ಬಿನ್ ಲೇಟ್ ಶ್ರೀ ದೊಡ್ಡಚನ್ನಪ್ಪ	ಸರ್ವೆ ನಂ.54/2 ರ ಜಮೀನು	ಸರ್ವೆ ನಂ.54/4 ರ ಜಮೀನು	ಸರ್ವೆ ನಂ.50 ರ ಜಮೀನು	ಸರ್ವೆ ನಂ.54/1 ರ ಜಮೀನು
54/4	25	ಶ್ರೀಮತಿ ಮುನಿಯಮ್ಮ ಕೋಂ ಲೇಟ್ ಶ್ರೀ ಚಿಕ್ಕಚನ್ನಪ್ಪ	ಸರ್ವೆ ನಂ.54/3 ರ ಜಮೀನು	ಸರ್ವೆ ನಂ.52 ರ ಜಮೀನು	ಸರ್ವೆನಂ. 50 ಮತ್ತು 51 ರ ಜಮೀನುಗಳು	ಸರ್ವೆ ನಂ.54/1 ರ ಜಮೀನು

ಬೆಂಗಳೂರು ದಿನಾಂಕ : ಜನವರಿ 04, 2023

ಸಹಿ./– ಎ. ಸುಪ್ರೀತ್, ವಕೀಲರು
ಕ್ರೆಸ್ಟ್ ಲಾ ಪಾರ್ಟ್ನರ್ಸ್, 33, ಝೆವಿಯರ್ ಲೇಔಟ್, 1 ನೇ ಅಡ್ಡ ರಸ್ತೆ, ವಿಕ್ಟೋರಿಯಾ ರಸ್ತೆ, ಬೆಂಗಳೂರು – 560 047. ದೂ: 41473535 / 41473536

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/139/2022-23 ಪ್ರಕಟಣೆ ದಿನಾಂಕ: 03.01.2023.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಸತಿ"** ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
(1)	(2)	(3)	(4)	(5)	(6)	(7)	(8)	(9)
1)	ಶ್ರೀ ಕೆ.ವಾಸುದೇವಮೂರ್ತಿ ಬಿನ್ ಕೆಂಪಯ್ಯ.ಆರ್, ದೇವಣ್ಣನಪಾಳ್ಯ, ದಾಸನಪುರ, ಬೆಂಗಳೂರು ಉತ್ತರ ತಾಲ್ಲೂಕು.	ನೆಲಮಂಗಲ	ಸೋಂಪುರ	ಶಿವಗಂಗೆ	4/4	2–00	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವಸತಿ ಉಪಯೋಗಕ್ಕಾಗಿ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರೆಯುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು ಲಭ್ಯವಾಗುತ್ತದೆ. ಆದ್ದರಿಂದ ಸದರಿ ಪ್ರದೇಶವನ್ನು **ವ್ಯವಸಾಯ** ವಲಯದಿಂದ **ವಸತಿ** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/3847/ಆಕಾರ್/22–23

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ: ಬೆಂಅಪ್ರಾ/ನಯೋಸ/CLU-185/2618/2022–23 ದಿನಾಂಕ: 02.01.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಕೃಷ್ಣಮ್ಮ W/o. ಸುರೇಶ್	ಬೆಂಗಳೂರು ಪೂರ್ವ	ಬಿದರಹಳ್ಳಿ	ಬೈಯಪ್ಪನಹಳ್ಳಿ	183	2–00	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/365/2022-23 ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಹುಬ್ಬಳ್ಳಿಯಲ್ಲಿ ಪ್ರವಾಸ ಮೇಳ

ಸ್ಥಳ: 'ಅಡಿಗಾಸ್ ವರ್ಲ್ಡ್'
ನಂ. 15, 2ನೇ ಮಹಡಿ, ತಿರುಮಲಾ ಟ್ರೇಡ್ ಸೆಂಟರ್ ನಿಲೀಜಿನ್ ರಸ್ತೆ, ಟ್ರಾಫಿಕ್ ಐಲ್ಯಾಂಡ್, ಹುಬ್ಬಳ್ಳಿ – 580029

ದಿನಾಂಕ: ಜನವರಿ 7 ಶನಿವಾರ & 8 ಭಾನುವಾರ, ಬೆಳಿಗ್ಗೆ 10 ಗಂಟೆಯಿಂದ ಸಂಜೆ 6.00ಗಂಟೆಯವರೆಗೆ

ಯುರೋಪ್, ಬಾಲಿ, ಭೂತಾನ್, ಸಿಂಗಾಪುರ, ನೇಪಾಳ ಮುಂತಾದ ವಿದೇಶಿ ಪ್ರವಾಸಗಳ ಮತ್ತು ಚಾರಧಾಮ್ ಯಾತ್ರಾ, ಈಶಾನ್ಯ ಭಾರತ, ಗುಜರಾತ್, ಕಾಶಿ, ಗಯಾ, ಅಯೋಧ್ಯಾ ಮುಂತಾದ ಭಾರತೀಯ ಪ್ರವಾಸಗಳ ವಿವರಗಳನ್ನು ಅನುಭವಿ ತಜ್ಞರಿಂದ ಪಡೆಯಬಹುದಾಗಿದೆ. ರಾಜ್ಯ ಗೃಹ ಸಚಿವರಾದ ಶ್ರೀ ಅರಗ ಜ್ಞಾನೇಂದ್ರ ಅವರಿಂದ ಇತ್ತೀಚೆಗೆ ಬಿಡುಗಡೆಯಾದ 2023ನೇ ವರ್ಷದ ಪ್ರವಾಸದ ಕೈಪಿಡಿಯನ್ನು ಸಹ ಪಡೆಯಬಹುದು.

ಉದ್ಯೋಗ ಮೇಳ

ಪ್ರವಾಸೋದ್ಯಮದಲ್ಲಿ ದೇಶ & ವಿದೇಶ ಸುತ್ತಿ ಜ್ಞಾನಗಳಿಸುವುದರೊಂದಿಗೆ ವಿಪುಲ ಉದ್ಯೋಗಾವಕಾಶವಿರುತ್ತದೆ. ನಮ್ಮಲ್ಲಿ ಉದ್ಯೋಗ ಮಾಡಲು ಇಚ್ಛಿಸುವವರು ಹಾಗೂ ಆಸಕ್ತ ವಿದ್ಯಾವಂತರಿಂದ ಅರ್ಜಿ ಕರೆಯಲಾಗಿದ್ದು ತಮ್ಮ ಹೆಸರನ್ನು ಫೋ: 7483366378ಗೆ ಮುಂಚಿತವಾಗಿ ಕರೆ ಮಾಡಿ ನೊಂದಾಯಿಸಿಕೊಳ್ಳಬೇಕು.

ಸಂದರ್ಶನ ದಿನಾಂಕ: ಜನವರಿ 5 ಗುರುವಾರ & 6 ಶುಕ್ರವಾರ
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ
ಸ್ಥಳ: 'ಅಡಿಗಾಸ್ ವರ್ಲ್ಡ್' ನಂ. 15, 2ನೇ ಮಹಡಿ, ತಿರುಮಲಾ ಟ್ರೇಡ್ ಸೆಂಟರ್ ನಿಲೀಜಿನ್ ರಸ್ತೆ, ಟ್ರಾಫಿಕ್ ಐಲ್ಯಾಂಡ್, ಹುಬ್ಬಳ್ಳಿ – 580029

ಕಳೆದ ವರ್ಷದ ಜನಪ್ರಿಯ ಚಾರಧಾಮ್ ಯಾತ್ರಾ, ಕಾಶಿ–ಗಯಾ–ಅಯೋಧ್ಯಾ, ಸಪ್ತ ಜ್ಯೋತಿರ್ಲಿಂಗ, ಮಧ್ಯ ಪ್ರದೇಶ, ಗುಜರಾತ್ & ಶಿಮ್ಲಾ–ಮನಾಲಿ–ವೈಷ್ಣೋದೇವಿ ಪ್ರವಾಸಗಳ ಬುಕ್ಕಿಂಗ್ ಭರದಿಂದ ಸಾಗುತ್ತಿವೆ. ಕೂಡಲೇ ತಮ್ಮ ಸೀಟನ್ನು ಕಾಯ್ದಿರಿಸಿ.

ಯಶಸ್ವಿ 29ನೇ ವರ್ಷದಲ್ಲಿ

ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ "ಅನುಭವಿ ಸೇವಾ ಪೂರೈಕೆದಾರ" ಮಾನ್ಯತೆ & ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ

ಅಡಿಗಾಸ್ ಯಾತ್ರಾ ®

For 2023 New Brochure Whatsapp 8095800701
email: care@adigasyatra.com website: www.adigasyatra.com
944 94 78 944
ಬಸವನಗುಡಿ: 080-26616678 | ಮಲ್ಲೇಶ್ವರಂ: 080-23346678 | ಹುಬ್ಬಳ್ಳಿ: 0836-2256678
7022259003 7022259008 7022259005

HONEYMOON TOUR PACKAGES

For Your Dream Destination on your date
3*/4* Hotels & Resort, Meals, Site Seeing by Reserved car

Honeymoon Suppliments:
Candle Light Dinner | Bed Decoration | Surprise Gifts, Etc.



- ANDAMAN ISLANDS - 7 DAYS
- ASSAM - MEGHALAYA - 7 DAYS
- ENCHANTING KASHMIR - 6 DAYS
- AMRITSAR - DALHOUSIE - DHARMASHALA - 7 DAYS
- MP - JUNGLE & HERITAGE - 9 DAYS
- DARJEELING - GANGTOK - 6 DAYS
- DARJEELING - PELLING - GANGTOK - 8 DAYS
- SIKKIM - DARJEELING - 11 DAYS

- LADAKH - 6 DAYS
- RANN OF KUTCH - GUJARAT - 6 DAYS
- MEGHALAYA - 5 DAYS
- ARUNACHAL PRADESH - 8 DAYS
- NAINITAL - KAUSANI - CORBETT - 6 DAYS
- SUNDERBANS - 5 DAYS
- GOLDEN TRIANGLE - 6 DAYS
- ROYAL RAJASTHAN - 8 DAYS

- ANDAMAN ISLANDS - 5 DAYS
- GOA - 4 DAYS
- SHIMLA - MANALI - 7 DAYS
- KERALA - 5 DAYS
- OOTY - 3 DAYS
- KODAGU - 3 DAYS
- MYSURU - OOTY - KODAIKANAL - 6 DAYS
- KOVALAM - KANYAKUMARI - 4 DAYS
- KASHMIR - 6 DAYS

ಬಿಡಬ್ಲ್ಯುಎಸ್‌ಎಸ್‌ಬಿ ಅಧ್ಯಕ್ಷ ಜಯರಾಂ ಆದೇಶ; ಕೋಟ್ಯಂತರ ರೂಪಾಯಿ ನಷ್ಟ

ಬಿಲ್ ಹಣ ದುರುಪಯೋಗ: 13 ಮಂದಿ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಹಕರಿಂದ ಸಂಗ್ರಹಿಸಿದ ನಗದನ್ನು ಜಲ ಮಂಡಳಿಗೆ ಪಾವತಿಸದೆ ಕೋಟ್ಯಂತರ ರೂಪಾಯಿ ದುರುಪಯೋಗ ಮಾಡಿಕೊಂಡಿರುವ ಕಾರ್ಯನಿರ್ವಾಹಕ ಎಂಜಿನಿಯರ್ ಆರ್. ಶ್ರೀನಿವಾಸ್ ಸೇರಿದಂತೆ 13 ನೌಕರರನ್ನು ಬಿಡಬ್ಲ್ಯುಎಸ್‌ಎಸ್‌ಬಿ ಅಧ್ಯಕ್ಷರು ಅಮಾನತು ಮಾಡಿದ್ದಾರೆ.

ಜಲಮಂಡಳಿಯ ದಕ್ಷಿಣ, ಆಗ್ನೇಯ, ನೈರುತ್ಯ, ಉತ್ತರ, ಈಶಾನ್ಯ ನಿರ್ವಹಣಾ ಉಪ ವಿಭಾಗಗಳಲ್ಲಿ ಮ್ಯಾನುಯಲ್ ಕ್ಯಾಷ್ ಕೌಂಟರ್ ಮೂಲಕ ನೀರಿನ ಬಿಲ್ ಪಾವತಿ ಮೂಲಕ ಸಂಗ್ರಹಿಸಿದ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಪ್ರಕರಣದಲ್ಲಿ ಇವರು ಭಾಗಿಯಾಗಿರುವುದು ತನಿಖೆಯಿಂದ ಸಾಬೀತಾಗಿದೆ. ಹೀಗಾಗಿ ಈ 13 ಮಂದಿಯನ್ನು ಜ.3 ರಂದು ಅಮಾನತುಗೊಳಿಸಲಾಗಿದೆ.

ಗ್ರಾಹಕರು ನಗದಾಗಿ ಪಾವತಿಸಿದ ನೀರಿನ ಬಿಲ್ ಅನ್ನು ಸಜಲ ತಂತ್ರಾಂಶದಲ್ಲಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಕಂದಾಯ ವ್ಯವಸ್ಥಾಪಕ, ಹಿರಿಯ ಜಲಪರಿವೀಕ್ಷಕರ ಲಾಗಿನ್, ಪಾಸ್‌ವರ್ಡ್ ಬಳಸಿ ನಕಲಿ ಪಾವತಿಯನ್ನು ದಾಖಲಿಸಲಾಗಿದೆ. ಹಣವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂಬುದು ಮಂಡಳಿಯ ಪ್ರಥಮ ಪರಿಶೋಧನೆ ಹಾಗೂ ತನಿಖೆಯಿಂದಲೇ ತಿಳಿದುಬಂದಿತ್ತು. ಸಹಾಯಕ ಲೆಕ್ಕ ನಿಯಂತ್ರಕ ಜಿ. ಶಂಕರಾಚಾರ್ಯ ಅವರ ಮೂರು ತಂಡವನ್ನು ರಚಿಸಿ ಪರಿಶೋಧನೆ ಕಾರ್ಯ ನಡೆಸಿ ವರದಿ ಸಲ್ಲಿಸಲು ಅಧ್ಯಕ್ಷರು ಸೂಚಿಸಿದ್ದರು. ಈ ತಂಡ ಸಲ್ಲಿಸಿರುವ ವರದಿಯಲ್ಲಿ ಗುತ್ತಿಗೆ ನೌಕರರ ಜೊತೆಗೆ ಜಲಮಂಡಳಿ ಸಿಬ್ಬಂದಿಯೂ ಭಾಗಿಯಾಗಿರುವುದು ಬಹಿರಂಗವಾಗಿದೆ,

ಗ್ರಾಹಕರಿಂದ ಪಡೆದ ಚೆಕ್/ಡಿಡಿ ಹಾಗೂ ನಗದನ್ನು, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಕಂದಾಯ ವ್ಯವಸ್ಥಾಪಕರಿಗೆ ಸಜಲ ತಂತ್ರಾಂಶದಲ್ಲಿ ದಾಖಲಿಸುವ ಜವಾಬ್ದಾರಿ ವಹಿಸಲಾಗಿತ್ತು. ಅವರ ಲಾಗಿನ್‌ನಲ್ಲಿ ನಕಲಿ ದಾಖಲೆ ಮಾಡಲಾಗಿದೆ. ಹಣ ಮಾತ್ರ ಮಂಡಳಿಗೆ ಪಾವತಿಯಾಗಿಲ್ಲ. ಹೊರ ಗುತ್ತಿಗೆದಾರರು ನಗದನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ತನಿಖೆಯಿಂದ ತಿಳಿದುಬಂದಿತ್ತು. ಈ ಬಗ್ಗೆ ಯಾವುದೇ ಕ್ರಮ ಆಗಿರಲಿಲ್ಲ. ಈ ಬಗ್ಗೆ ನ್ಯೂನತೆ ಕಂಡುಬಂದಿದ್ದರೂ ಜಲಮಂಡಳಿಯ ಕಾರ್ಯನಿರ್ವಾಹಕ ಎಂಜಿನಿಯರ್ ಅವರಂಥ ಹಿರಿಯ ಅಧಿಕಾರಿ ಕ್ರಮ ಕೈಗೊಂಡಿರಲಿಲ್ಲ.

ಸಜಲ ತಂತ್ರಾಂಶದಲ್ಲಿ ನೀರಿನ ಬಿಲ್ ಪಾವತಿಯ ವಿವರ ಹಾಗೂ ಹಣ ಸಂಗ್ರಹ, ಮಂಡಳಿ ಖಾತೆಗೆ ವರ್ಗಾಯಿಸುವ ಜವಾಬ್ದಾರಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಹಾಗೂ ಕಂದಾಯ ವ್ಯವಸ್ಥಾಪಕ ಅವರದ್ದಾಗಿತ್ತು. ಆದರೆ ಇವರೊಂದಿಗೆ ಕಾರ್ಯನಿರ್ವಾಹಕ ಎಂಜಿನಿಯರ್‌ಗಳೂ ಸೇರಿಕೊಂಡು ದುರುಪಯೋಗ ಮಾಡಿಕೊಂಡು ಜಲಮಂಡಳಿಗೆ ಆರ್ಥಿಕ ನಷ್ಟ ಉಂಟುಮಾಡಿರುವುದು ತನಿಖೆಯಿಂದ ಬೆಳಕಿಗೆ ಬಂದಿದೆ.

ಅಮಾನತು ಆದವರು

ಕಾರ್ಯನಿರ್ವಾಹಕ ಎಂಜಿನಿಯರ್‌ಗಳಾದ ಆರ್. ಶ್ರೀನಿವಾಸ್, ಬಿ. ನಾಗೇಂದ್ರ, ವಿ. ಸ್ನೇಹಾ, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಕೆ. ವಿಶ್ವನಾಥ್, ಸಚಿನ್ ಪಾಟೀಲ್, ಕಂದಾಯ ವ್ಯವಸ್ಥಾಪಕರಾದ ಸಿ. ನಾಗರಾಜು, ಭೀಮಾ ಶಂಕರ್, ಎನ್. ರುದ್ರೇಶ್, ಹಿರಿಯ ಸಹಾಯಕ ಸಿ. ಸೋಮಶೇಖರ್, ಹಿರಿಯ ಸಹಾಯಕಿ ಎಂ. ಗೀತಾ, ಸಹಾಯಕರಾದ ಜಿ. ಎಸ್. ಭರತ್ ಕುಮಾರ್, ರಾಮಪ್ಪ ಮಡಿವಾಳರ, ಸಹಾಯಕ ಕಲ್ಯಾಣಅಧಿಕಾರಿ ಎಸ್. ಯೋಗೇಶ್.

ಕೃಷಿ ಇಲಾಖೆಯಿಂದ ನಡೆದ ರೈತ ದಿನಾಚರಣೆಯಲ್ಲಿ ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು

‘ಸಮಗ್ರ ಕೃಷಿ ನಿರ್ವಹಣೆ ಪದ್ಧತಿಯಿಂದ ಪರಿಹಾರ’

ಪ್ರಜಾವಾಣಿ ವಾರ್ತೆ

ಯಲಹಂಕ: ರೈತರು ಬೆಳೆಗಳನ್ನು ಬೆಳೆಯುವ ಸಂದರ್ಭದಲ್ಲಿ ರೋಗ ಮತ್ತು ಕೀಟಗಳ ಬಾಧೆಯು ಸಾಮಾನ್ಯ ಸಮಸ್ಯೆಯಾಗಿದ್ದು, ಇತ್ತೀಚೆಗೆ ಇದು ಹೆಚ್ಚಾಗಿದೆ. ರೈತರು ಹೆಚ್ಚಿನ ನಷ್ಟ ಅನುಭವಿಸುತ್ತಿದ್ದಾರೆ. ಸಮಗ್ರ ಕೃಷಿ ನಿರ್ವಹಣೆ ಪದ್ಧತಿ ಅನುಸರಿಸಿದರೆ ಪರಿಹಾರ ದೊರೆಯಲಿದೆ ಎಂದು ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿ ಡಾ.ಸಿ.ಪಿ.ಮಂಜುಳ ಹೇಳಿದರು.

ಕೃಷಿ ಇಲಾಖೆ, ತಾಲ್ಲೂಕು ಕೃಷಿಕ ಸಮಾಜ ಹಾಗೂ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಯುವಕ ರೈತಘಟಕದ ಸಹಯೋಗದಲ್ಲಿ ಯಶೋದ ನಗರದ ಸಹಾಯಕ ಕೃಷಿ ನಿರ್ದೇಶಕ ಕಚೇರಿಯ ಆವರಣದಲ್ಲಿ ಆಯೋಜಿಸಿದ್ದ ರೈತ ದಿನಾಚರಣೆಯಲ್ಲಿ ಅವರು ಮಾತನಾಡಿದರು.

‘ಹಿಂದೆ ಪಕ್ಷಿಗಳು ಕೀಟಗಳನ್ನು ತಿನ್ನುತ್ತಿದ್ದವು. ಕೊಟ್ಟಿಗೆ ಗೊಬ್ಬರ ಬಳಕೆ, ಬೂದಿ ಎರಚುವ ಪದ್ಧತಿಗಳನ್ನು ಕೃಷಿಯಲ್ಲಿ ಅನುಸರಿಸಲಾಗುತ್ತಿತ್ತು. ಆದರೆ, ಇಂದು ಕೇವಲ ಕೀಟನಾಶಕಗಳಿಗಷ್ಟೇ ಸೀಮಿತರಾಗಿದ್ದೇವೆ. ಇದರ ಪರಿಣಾಮ ಇಂತಹ ಸಮಸ್ಯೆಗಳು ಎದುರಾಗುತ್ತಿವೆ. ಹಳೆಯ ಪದ್ಧತಿಗಳ ಜೊತೆಗೆ ಕೀಟನಾಶಕಗಳನ್ನು ಅಗತ್ಯಕ್ಕೆ ತಕ್ಕಂತೆ ಬಳಸುವುದರಿಂದ ಮಣ್ಣಿನ ಆರೋಗ್ಯ ಫಲವತ್ತಾಗಿರುವುದರ ಜೊತೆಗೆ ಔಷಧಿಗಳಿಗೆ ತಗಲುವ ವೆಚ್ಚವೂ ಕಡಿಮೆಯಾಗಿ ಮನುಷ್ಯನ ಆರೋಗ್ಯ ಉತ್ತಮವಾಗಲಿದೆ’ ಎಂದು ತಿಳಿಸಿದರು.

ಕೃಷಿ ವಿಶ್ವವಿದ್ಯಾಲಯದ ಮಣ್ಣು ವಿಜ್ಞಾನಿ ಡಾ.ಜಿ.ಜಿ.ಕಾದಳ್ಳಿ, ಮಣ್ಣಿನ ಗುಣ-ವಿಶೇಷತೆಗಳು, ಮಹತ್ವ ಮತ್ತು ಸಂರಕ್ಷಣೆ ಕುರಿತು ಮಾಹಿತಿ ನೀಡಿದರು.

ಪ್ರಶಸ್ತಿ: ಆತ್ಮ ಯೋಜನೆ ಅಡಿಯಲ್ಲಿ 8 ಮಂದಿ ಹಾಗೂ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಯುವಕ ರೈತಘಟಕದ ವತಿಯಿಂದ 3 ಮಂದಿ ಪ್ರಗತಿಪರ ರೈತರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

‘ಶಾಸಕ ಅರವಿಂದ ಲಿಂಬಾವಳಿ ಬಂಧಿಸಿ’

ಬೆಂಗಳೂರು: ‘ಉದ್ಯಮಿ, ಕಗ್ಗಲೀಪುರದ ಪ್ರದೀಪ್ ಅವರ ಆತ್ಮಹತ್ಯೆ ಪ್ರಕರಣದಲ್ಲಿ ಬಿಜೆಪಿ ಶಾಸಕ ಅರವಿಂದ ಲಿಂಬಾವಳಿ ಸೇರಿದಂತೆ ಯಾರೇ ತಪ್ಪು ಮಾಡಿದ್ದರೂ ಬಂಧಿಸಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಇಲ್ಲದೇ ಇದ್ದರೆ ಸಾಕ್ಷ್ಯ ನಾಶ ಮಾಡಬಹುದು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮತ್ತು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗ ರೆಡ್ಡಿ ಜೊತೆ ಪ್ರದೀಪ್ ನಿವಾಸಕ್ಕೆ ಮಂಗಳವಾರ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದ ಬಳಿಕ ಮಾತನಾಡಿದರು.

‘ನ್ಯಾಯ ಕೊಡಿಸುವಂತೆ ಪ್ರದೀಪ್ ಪತ್ನಿ ಕೇಳಿದ್ದಾರೆ. ₹1.5 ಕೋಟಿ ಬಂಡವಾಳ ಹಾಕಿದ್ದೇವೆ. ಒಂದೇ ಒಂದು ಪೈಸೆ ಲಾಭ ಬಂದಿಲ್ಲ. ಹಣ ವಾಪಸ್ ಕೊಡಿ ಎನ್ನುವುದು ಅವರ ವಾದ. ಈ ಭಾಗದ ಶಾಸಕ ಲಿಂಬಾವಳಿ ಮಧ್ಯಪ್ರವೇಶಿಸಿ ವಿವಾದ ಇತ್ಯರ್ಥ ಮಾಡಿದ್ದಾರೆ. ಪ್ರದೀಪ್ ಸಾಯುವ ಮುನ್ನ ಬರೆದ ಮರಣಪತ್ರದಲ್ಲಿ ಲಿಂಬಾವಳಿ ಸೇರಿ ಆರು ಜನರ ಹೆಸರಿದೆ. ಕೂಡಲೇ ಎಲ್ಲರನ್ನೂ ಬಂಧಿಸಬೇಕು’ ಎಂದು ಆಗ್ರಹಿಸಿದರು.

ನಾಡಪ್ರಭು ಕೆಂಪೇಗೌಡ ಬಡಾವಣೆ ಅಭಿವೃದ್ಧಿ ಪರಿಶೀಲನೆ

ಎಲ್ಲ ಕೇಬಲ್‌ಗಳೂ ಭೂಗತ: ಆಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಎಲೆಕ್ಟ್ರಿಕಲ್ ಕೇಬಲ್‌ಗಳು, ಬೀದಿ ದೀಪ ಸೇರಿ ಎಲ್ಲ ಕೇಬಲ್‌ಗಳನ್ನು ಭೂಗತವಾಗಿ ಯುಟಿಲಿಟಿ ಡಕ್ಟ್‌ನಲ್ಲಿ ಹಾಕಲಾಗಿದೆ. ಇಂಧನ ಉಳಿತಾಯ ಮತ್ತು ಪರಿಣಾಮಕಾರಿ ದೀಪಕ್ಕಾಗಿ ಸ್ಮಾರ್ಟ್ ಸ್ಟ್ರೀಟ್ ಲೈಟಿಂಗ್ ಅಳವಡಿಸಲಾಗುತ್ತದೆ ಎಂದು ಬಿಡಿಎ ಆಯುಕ್ತ ಕುಮಾರ್ ನಾಯಕ್ ಹೇಳಿದರು.

ಕೆಂಪೇಗೌಡ ಬಡಾವಣೆ ನಿರ್ಮಾಣದ ಕಾಮಗಾರಿಗಳನ್ನು ಮಂಗಳವಾರ ಪರಿಶೀಲಿಸಿ ಅವರು ಮಾತನಾಡಿದರು.

‘ನೀರು ಸರಬರಾಜು, ಮರುಬಳಕೆಯ ನೀರು ಸರಬರಾಜು, ಭೂಗತ ಒಳಚರಂಡಿ ಮತ್ತು ವಿದ್ಯುತ್ ಜಾಲ ಸೇರಿ ಒಟ್ಟು ಜಾಲವನ್ನು ಸ್ಕಾಡಾ (ಎಸ್‌ಸಿಎಡಿಎ–ಮೇಲ್ವಿಚಾರಣಾ ನಿಯಂತ್ರಣ ಮತ್ತು ಡೇಟಾ ಸ್ವಾಧೀನ) ಮೂಲಕ ನಿಯಂತ್ರಿಸಿ, ನಿರ್ವಹಣೆ ಮಾಡಲಾಗುತ್ತದೆ ಎಂದರು.

2014ರಲ್ಲಿ ಬಡಾವಣೆ ಅಭಿವೃದ್ಧಿಪಡಿಸುವ ಕಾರ್ಯ ಕೈಗೊಳ್ಳಲಾಗಿದ್ದು, ಸೀಗೇಹಳ್ಳಿ, ಕೊಡಿಗೇಹಳ್ಳಿ, ಕನ್ನೆಳ್ಳಿ, ಮಾಂಗನಹಳ್ಳಿ, ಕೆಂಚನಪುರ, ಸೂಳಿಕೆರೆ, ರಾಮಸಂದ್ರ, ಕೊಮ್ಮಘಟ್ಟ, ಕೋಮಘಟ್ಟ ಕೃಷ್ಣಸಾಗರ, ಭೀಮನಕುಪ್ಪೆ, ಚಲ್ಲಘಟ್ಟ, ಬಹಿಸ್ಸೆ ಗ್ರಾಮಗಳ 12 ಗ್ರಾಮಗಳನ್ನು ಒಳಗೊಂಡಿದೆ. ಒಟ್ಟು ವಿಸ್ತೀರ್ಣ 4,043 ಎಕರೆ. ಮೊದಲ ಹಂತದಲ್ಲಿ 2,252 ಎಕರೆಗಳಲ್ಲಿ 26,500 ನಿವೇಶನಗಳನ್ನು ರಚಿಸಲಾಗಿದೆ ಎಂದರು.

ಬೆಂಗಳೂರು-ಮೈಸೂರು ರಸ್ತೆಯಿಂದ ಬೆಂಗಳೂರು-ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವ ಲೇಔಟ್‌ನ ಮಧ್ಯಭಾಗದಲ್ಲಿ 10.57 ಕಿ.ಮೀ. ಉದ್ದದ 100 ಮೀಟರ್ ಅಗಲದ ಮುಖ್ಯ ರಸ್ತೆ ಸಾಗಲಿದೆ. ಇದು ಎಲ್ಲ ಒಂಬತ್ತು ಬ್ಲಾಕ್‌ಗಳಿಗೆ ಪ್ರವೇಶ ಕಲ್ಪಿಸುತ್ತದೆ ಎಂದು ಹೇಳಿದರು.

ನೀರು ಸರಬರಾಜಿಗೆ 57.5 ಎಂಎಲ್ ಸಾಮರ್ಥ್ಯದ 4 ಜಿಎಲ್‌ಎಸ್‌ಆರ್‌ಗಳನ್ನು ನಿರ್ಮಿಸಲಾಗಿದೆ. ಸಂಸ್ಕರಿಸಿದ ನೀರು ಸರಬರಾಜಿಗೆ ಎಂಟು ಓವರ್ ಹೆಡ್ ಟ್ಯಾಂಕ್ ನಿರ್ಮಿಸಲಾಗಿದೆ. ತೋಟಗಾರಿಕೆ, ಫ್ಲಶಿಂಗ್ ಮತ್ತು ಯಾವುದೇ ಇತರ ಕುಡಿಯಲು ಯೋಗ್ಯವಲ್ಲದ ಉದ್ದೇಶಕ್ಕೆ ಇದನ್ನು ಸರಬರಾಜು ಮಾಡಲಾಗುತ್ತದೆ. ಮನೆಯಿಂದ ಬರುವ ಕೊಳಚೆ ನೀರನ್ನು ಸಂಸ್ಕರಿಸಲು 10 ಸಂಸ್ಕರಣಾ ಘಟಕ ನಿರ್ಮಿಸಲಾಗಿದೆ ಎಂದರು.

ಕೆಂಪೇಗೌಡ ಬಡಾವಣೆ ಅಭಿವೃದ್ಧಿಯ ಯೋಜನೆಯನ್ನು ಪರಿಶೀಲಿಸಲು ವಾರಕ್ಕೊಮ್ಮೆ ಸಭೆ ನಡೆಸಲಾಗುತ್ತಿದೆ. ಸಂಪರ್ಕಕ್ಕೆ ಸಂಬಂಧಿಸಿದ ಭೂಸ್ವಾಧೀನ ಸಮಸ್ಯೆಗಳು ಮತ್ತು ಭೂಮಿ ಸಡಿಲವಾದ ರೈತರಿಗೆ ಸೈಟ್ ಹಂಚಿಕೆಯ ಸಮಸ್ಯೆಗಳನ್ನು ಪರಿಹರಿಸಲಾಗಿದೆ. ಎಂಎಆರ್ ಕಾಮಗಾರಿಗಳು, ಲೇಔಟ್ ಕಾಮಗಾರಿಗಳು ಮತ್ತು ಯುಟಿಲಿಟಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಎಂಜಿನಿಯರ್‌ಗಳು ಮತ್ತು ಗುತ್ತಿಗೆದಾರರಿಗೆ ಗಡುವು ನೀಡಲಾಗಿದೆ ಎಂದು ತಿಳಿಸಿದರು.

ಕೆಂಪೇಗೌಡ ಬಡಾವಣೆಯಲ್ಲಿ ಯುಟಿಲಿಟಿ ಡಕ್ಟ್ ಕಾಮಗಾರಿಯನ್ನು ಆಯುಕ್ತ ಕುಮಾರ್ ನಾಯಕ್ ಮಂಗಳವಾರ ಪರಿಶೀಲಿಸಿ ಮಾತನಾಡಿದರು

ಬಿಬಿಎಂಪಿ ಸಹಾಯಕ ನಿರ್ದೇಶಕ ಸೇರಿ ಮೂವರು ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡವೊಂದರ ಸ್ವಾಧೀನ ಪ್ರಮಾಣಪತ್ರ (ಒ.ಸಿ) ಶುಲ್ಕ ಕಡಿಮೆ ಮಾಡಲು ₹3 ಲಕ್ಷ ಲಂಚ ಪಡೆದ ಆರೋಪದ ಮೇಲೆ ಬಿಬಿಎಂಪಿ ಬೊಮ್ಮನಹಳ್ಳಿ ವಲಯದ ನಗರ ಯೋಜನಾ ವಿಭಾಗದ ಸಹಾಯಕ ನಿರ್ದೇಶಕ ಪಟ್ಟಣಶೆಟ್ಟಿ ಸೇರಿದಂತೆ ಮೂವರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ರಾತ್ರಿ ಬಂಧಿಸಿದ್ದಾರೆ.

ನಗರ ಯೋಜನಾ ವಿಭಾಗದ ಪ್ರಥಮ ದರ್ಜೆ ಸಹಾಯಕ ಕೃಷ್ಣ ಮತ್ತು ಖಾಸಗಿ ಮಧ್ಯವರ್ತಿ ರವಿ ಬಂಧಿತ ಇತರರು. ಲಂಚದ ಮೊತ್ತ ಹಾಗೂ ಪ್ರಕರಣಕ್ಕೆ ಸಂಬಂಧಿಸಿದ ಕಡತಗಳನ್ನು ವಶಕ್ಕೆ ಪಡೆದಿರುವ ಲೋಕಾಯುಕ್ತ ಪೊಲೀಸರು, ಆರೋಪಿಗಳ ವಿಚಾರಣೆ ನಡೆಸುತ್ತಿದ್ದಾರೆ.

ಪದ್ಮಾವತಿ ಟಿ. ಎಂಬುವವರು ಎಚ್‌ಎಸ್‌ಆರ್ ಬಡಾವಣೆಯಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸಿದ್ದರು. ಕಟ್ಟಡ ನಿರ್ಮಾಣ ಪೂರ್ಣಗೊಂಡ ಬಳಿಕ ಸ್ವಾಧೀನ ಪ್ರಮಾಣಪತ್ರ ಕೋರಿ ನಗರ ಯೋಜನಾ ವಿಭಾಗದ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಕಡಿಮೆ ಶುಲ್ಕ ಪಡೆದು ಸ್ವಾಧೀನ ಪ್ರಮಾಣಪತ್ರ ನೀಡಲು ₹ 26 ಲಕ್ಷ ಲಂಚ ನೀಡುವಂತೆ ಪಟ್ಟಣಶೆಟ್ಟಿ ಮತ್ತು ಕೃಷ್ಣ ಬೇಡಿಕೆ ಇಟ್ಟಿದ್ದರು. ಪದ್ಮಾವತಿ ಅವರ ಪರವಾಗಿ ಕಿರಣ್ ಕುಮಾರ್ ಎಂಬುವವರು ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ದೂರು ನೀಡಿದ್ದರು.

ಆನ್‌ಲೈನ್ ಮೂಲಕ ಮುಂಗಡ: ಅರ್ಜಿದಾರರು ಮತ್ತು ಅಧಿಕಾರಿಗಳ ನಡುವೆ ಮಾತುಕತೆ ನಡೆದಿತ್ತು. ಚೌಕಾಸಿ ಬಳಿಕ ₹3 ಲಕ್ಷ ಲಂಚ ನೀಡಿದರೆ ಸ್ವಾಧೀನ ಪ್ರಮಾಣಪತ್ರ ನೀಡುವುದಾಗಿ ಆರೋಪಿಗಳು ತಿಳಿಸಿದ್ದರು. ₹96,500 ಅನ್ನು ಜನವರಿ 1ರಂದು ಆನ್‌ಲೈನ್ ಮೂಲಕವೇ ಪಟ್ಟಣಶೆಟ್ಟಿ ಪಡೆದುಕೊಂಡಿದ್ದರು.

ಬಾಕಿ ಉಳಿದ ₹2,03,500 ನಗದನ್ನು ಮಂಗಳವಾರ ತಲುಪಿಸುವಂತೆ ಅರ್ಜಿದಾರರಿಗೆ ಸೂಚಿಸಿದ್ದರು. ಮಂಗಳವಾರ ರಾತ್ರಿ ಬೊಮ್ಮನಹಳ್ಳಿಯ ನಗರ ಯೋಜನಾ ವಿಭಾಗದ ಕಚೇರಿಯಲ್ಲಿ ಕೃಷ್ಣ ಮತ್ತು ರವಿ ನಗದು ಪಡೆದುಕೊಂಡರು. ತಕ್ಷಣ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು, ಮೂವರನ್ನೂ ಬಂಧಿಸಿದರು.

Balmer Lawrie & Co. Ltd.
(A Government of India Enterprise)
(A MINIRATNA - I PSE)
LOGISTICS SERVICES - KARNATAKA
342 KONENA AGRAHARA, HAL POST, BANGALORE 560017
PH: +91-080-25227221, E-mail: thivagar.v@balmerlawrie.com

LOGISTICS SERVICES - KARNATAKA
NOTICE FOR VENDOR REGISTRATION

ಲಾಜಿಸ್ಟಿಕ್ ಟ್ರೇಡ್‌ಗೆ ಸಂಬಂಧಿತ ಟ್ರೈಲರ್ಸ್, ಟ್ರಾನ್ಸ್‌ಪೋರ್ಟ್ ವೆಹಿಕಲ್ ಪೂರೈಸುವ ಮತ್ತು ಕ್ರೇನ್, ಎಫ್‌ಎಲ್‌ಟಿ, ಲೇಬರ್, ಫ್ಯುಮಿಗೇಟಿಂಗ್ ಏಜೆನ್ಸಿ, ಸರ್ವೇಯರ್ಸ್, ಪ್ಯಾಕಿಂಗ್, ಲ್ಯಾಷಿಂಗ್ & ಚೋಕಿಂಗ್ ಸಂಬಂಧಿತ ಅರ್ಹ ವೆಂಡರ್‌ಗಳು ನಮ್ಮೊಂದಿಗೆ ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳಲು ಸೂಚನೆ. ಸದರಿ ಸೂಚನೆಯ ದಿನಾಂಕದಿಂದ 30 ದಿನಗಳೊಳಗೆ ನೋಂದಾಯಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.
ಆನ್‌ಲೈನ್: www.balmerlawrie.com
ಆಫ್‌ಲೈನ್: 080–25227221

ನವೋದಯ ವಿದ್ಯಾಲಯ ಸಮಿತಿ
ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಬರುವ ಒಂದು ಸ್ವಾಯತ್ತ ಸಂಸ್ಥೆ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಭಾರತ ಸರ್ಕಾರ

ಜವಾಹರ ನವೋದಯ ವಿದ್ಯಾಲಯಗಳಲ್ಲಿ (2023–24) 6ನೇ ತರಗತಿಗೆ ಪ್ರವೇಶ ಅಧಿಸೂಚನೆ
ಜವಾಹರ ನವೋದಯ ವಿದ್ಯಾಲಯಗಳಲ್ಲಿ 2023–24ನೇ ಸಾಲಿನಲ್ಲಿ 6ನೇ ತರಗತಿಯ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ವಿಶೇಷ ಲಕ್ಷಣಗಳು
- ಪ್ರತಿಯೊಂದು ಜಿಲ್ಲೆಯಲ್ಲಿ ಸಹಶಿಕ್ಷಣ ವಸತಿ ಶಾಲೆಗಳು
- ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ವಸತಿ ನಿಲಯಗಳು
- ಉಚಿತ ಶಿಕ್ಷಣ, ಊಟ ಮತ್ತು ವಸತಿ.
- ವಲಸೆ ನೀತಿಯ ಮುಖಾಂತರ ವಿಶಾಲ ಸಾಂಸ್ಕೃತಿಕ ವಿನಿಮಯ
- ಕ್ರೀಡೆ ಮತ್ತು ಆಟೋಟಗಳಿಗೆ ಉತ್ತೇಜನ
- ಎನ್‌ಸಿಸಿ, ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಎನ್‌ಎಸ್‌ಎಸ್

ವಿಶೇಷ ಲಕ್ಷಣಗಳು
ಗುಣಮಟ್ಟದ ಶಿಕ್ಷಣಕ್ಕೆ ವಿಶೇಷ ಮಹತ್ವ ಕೊಟ್ಟಿರುವುದರ ಪರಿಣಾಮವಾಗಿ

- JEE MAIN -2022: 7585 ವಿದ್ಯಾರ್ಥಿಗಳಲ್ಲಿ 4296 (56.6%) ಅರ್ಹರಾಗಿದ್ದಾರೆ.
- JEE Advanced-2022: 3000 ವಿದ್ಯಾರ್ಥಿಗಳಲ್ಲಿ 1010(33.7) ಅರ್ಹರಾಗಿದ್ದಾರೆ.
- NEET-2022: 24807 ವಿದ್ಯಾರ್ಥಿಗಳಲ್ಲಿ 19352 (78.0%) ಅರ್ಹರಾಗಿದ್ದಾರೆ.
- 10 ಮತ್ತು 12ನೇ ತರಗತಿಯ ಫಲಿತಾಂಶ (2021–22)
- ತರಗತಿ–10: 99.71% ತರಗತಿ 12: 98.93%

ಅರ್ಹತೆಗಳು
- ಅಭ್ಯರ್ಥಿಗಳು ಕಾರ್ಯ ನಿರ್ವಹಿಸುತ್ತಿರುವ ಸಂಬಂಧಿಸಿದ ಜನವಿಗಳ ಜಿಲ್ಲೆಯ ವಿಶ್ವಾಸಾರ್ಹ ನಿವಾಸಿಗಳೇ ಆಗಿರಬೇಕು ಮತ್ತು 2022–23ನೇ ಸಾಲಿನಲ್ಲಿ ಅದೇ ಜಿಲ್ಲೆಯ ಸರ್ಕಾರಿ/ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಯಲ್ಲಿ 5ನೇ ತರಗತಿಯಲ್ಲಿ ಓದುತ್ತಿರಬೇಕು.
- 3 ಮತ್ತು 4ನೇ ತರಗತಿಗಳಲ್ಲಿ ಸರ್ಕಾರಿ/ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಯಲ್ಲಿ ಪೂರ್ಣ ಶೈಕ್ಷಣಿಕ ವರ್ಷಗಳಲ್ಲಿ ಓದಿ ಉತ್ತೀರ್ಣರಾಗಿರಬೇಕು
- ಮತ್ತು 01.05.2011ರಿಂದ 30.4.2013ರ ಒಳಗೆ (ಎರಡೂ ದಿನಗಳು ಸೇರಿ) ಜನಿಸಿದವರಾಗಿರಬೇಕು.

ಮೀಸಲಾತಿ
- ಕನಿಷ್ಠ 75% ಸ್ಥಾನಗಳನ್ನು ಆ ಜಿಲ್ಲೆಯ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಂದ ತುಂಬಲಾಗುವುದು.
- ಎಸ್ ಸಿ, ಎಸ್ ಟಿ, ಒಬಿಸಿ ಹಾಗೂ ದಿವ್ಯಾಂಗ ಅಭ್ಯರ್ಥಿಗಳಿಗೆ ಸರ್ಕಾರದ ನಿಯಮದಂತೆ ಮೀಸಲಾತಿಯಿದೆ.
- ಕನಿಷ್ಠ 1/3 ಸ್ಥಾನಗಳು ಬಾಲಕಿಯರಿಗೆ ಮೀಸಲಾಗಿರುತ್ತವೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 31-01-2023
ಪರೀಕ್ಷೆಯ ದಿನಾಂಕ 29-04-2023
ಅರ್ಜಿ ಸಲ್ಲಿಸಲು ಮತ್ತು ವಿವರಗಳಿಗಾಗಿ ಜಾಲತಾಣ : https://navodaya.gov.in
ನವೋದಯ ವಿದ್ಯಾಲಯ ಸಮಿತಿಯ ಪ್ರಕಟಣೆ



ನಗರದಲ್ಲಿ ಇಂದು

ಹುಲಿಕಲ್ ನಟರಾಜ್ ಅವರ ‘ಹುಲಿ ಹೆಜ್ಜೆ’ ಅಭಿನಂದನಾ ಗ್ರಂಥ ಬಿಡುಗಡೆ: ಸಾನ್ನಿಧ್ಯ: ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಎ.ಎಸ್. ಕಿರಣ್ ಕುಮಾರ್, ಗ್ರಂಥ ಬಿಡುಗಡೆ: ಎನ್. ಸಂತೋಷ್ ಹೆಗ್ಡೆ, ಗ್ರಂಥದ ಕುರಿತು: ಕುಂ. ವೀರಭದ್ರಪ್ಪ, ಅಧ್ಯಕ್ಷತೆ: ಟಿ.ಎಸ್. ನಾಗಾಭರಣ, ಆಯೋಜನೆ: ರಾಷ್ಟ್ರೀಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10

ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ: ಪ್ರಿಯಾಕೃಷ್ಣ, ಅರೇನಹಳ್ಳಿ ಧರ್ಮೇಂದ್ರ ಕುಮಾರ್, ಆಯೋಜನೆ: ಸ್ವಯಂ ಜಾಗೃತಿ ಟ್ರಸ್ಟ್, ಸ್ಥಳ: ಶಾಸಕ ಪ್ರಿಯಾಕೃಷ್ಣ ಕಚೇರಿ, ಕಲ್ಯಾಣನಗರ, ಬೆಳಿಗ್ಗೆ 11

‘ವಿಶ್ವ ಬ್ರೈಲ್’ ದಿನ: ಅತಿಥಿಗಳು: ಎಲ್.ಕೆ. ಅತೀಕ್, ಲತಾಕುಮಾರಿ, ರವೀಂದ್ರ ಭಟ್ಟ, ರಾಜ್ ಕೃಷ್ಣಮೂರ್ತಿ, ಅಧ್ಯಕ್ಷತೆ: ಸತೇಂದರ್ ಸಿಂಗ್, ಆಯೋಜನೆ: ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್ ಕರ್ನಾಟಕ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಆವರಣ, ಅರಮನೆ ರಸ್ತೆ, ಮಧ್ಯಾಹ್ನ 3

ಹಾಸ್ಯಬ್ರಹ್ಮ ಟ್ರಸ್ಟ್ ದತ್ತಿ ಕಾರ್ಯಕ್ರಮ: ಉಪನ್ಯಾಸಕರು: ಕೆ.ಪಿ. ಪುತ್ತೂರಾಯ, ವಿಷಯ: ಬದುಕಿನಲ್ಲಿ ಹಾಸ್ಯ, ಅಧ್ಯಕ್ಷತೆ: ಪಿ.ವಿ. ನಾರಾಯಣ, ಆಯೋಜನೆ: ಬಿ.ಎಂ.ಶ್ರೀ., ಪ್ರತಿಷ್ಠಾನ, ಎಂ.ವಿ.ಸೀ ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಐದು ದಿನಗಳ ಸಾಮಾಜಿಕ ನಾಟಕೋತ್ಸವ ಮತ್ತು ಗೀತಗಾಯನ: ಅತಿಥಿಗಳು: ಮಾ. ಭಾಸ್ಕರ್, ಸದ್ದರಾಜಯ್ಯ, ಪ್ರತಿಭಾ ನಾರಾಯಣ್, ಡಬ್ಲ್ಯು. ಎಚ್. ಶಾಂತಕುಮಾರ್, ದೊಡ್ಡಮನೆ ವೆಂಕಟೇಶ್, ವರದರಾಜು, ಸಂಜೆ 5ಕ್ಕೆ, ನಾಟಕ ಪ್ರದರ್ಶನ: ‘ಗುರು ಶಿಷ್ಯರು’, ತಂಡ: ನವರಸಮ್ ಥಿಯೇಟರ್, ರಚನೆ: ಬೇಲೂರು ಕೃಷ್ಣಮೂರ್ತಿ, ನಿರ್ದೇಶನ: ರಾಘವೇಂದ್ರ ಎಸ್., ಆಯೋಜನೆ: ಏಕಲವ್ಯ ಫೌಂಡೇಷನ್, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ, ಸಂಜೆ 7

ಸುವರ್ಣ ಮಹೋತ್ಸವ ಸಮಾರಂಭ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಸ್ಮರಣ ಸಂಚಿಕೆ ಬಿಡುಗಡೆ: ಬಿ.ಎಸ್. ಯಡಿಯೂರಪ್ಪ, ಲಾಂಛನ ಬಿಡುಗಡೆ: ಮುರುಗೇಶ್ ನಿರಾಣಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಮಾರ್ಕೆಟಿಂಗ್ ಕಮ್ಯೂನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಸ್ಥಳ: ವೆಸ್ಟ್ ಎಂಡ್ ಕೋರ್ಟ್, ತಾಜ್ ವೆಸ್ಟ್ ಎಂಡ್, ರೇಸ್ ಕೋರ್ಸ್ ರಸ್ತೆ, ಸಂಜೆ 6.30

‘ಗೀತಾ ಸಂದೇಶ’ ಉಪನ್ಯಾಸ: ಉಪನ್ಯಾಸಕರು: ಭೀಮಸೇನಾಚಾರ್ಯ ಆತನೂರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್‌ನ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30.

DH DECCAN HERALD ಪ್ರಜಾವಾಣಿ
ನಮ್ಮ ಕಂಪನಿಯ ಕೆಳಕಂಡ ವಾಹನ
“ಎಲ್ಲಿ ಹೇಗಿದೆಯೋ ಅದೇ ಸ್ಥಿತಿಯಲ್ಲಿ” ಮಾರಾಟಕ್ಕಿದೆ.
HONDA CITY ZX PETROL 2007 AC
ವಾಹನವನ್ನು ನಂ.75, ಎಂ.ಜಿ. ರಸ್ತೆ, ಬೆಂಗಳೂರು-1 ಇಲ್ಲಿ ಕೆಲಸದ ಯಾವುದೇ ದಿನದಂದು ಬೆಳಿಗ್ಗೆ 10:00 ರಿಂದ ಸಂಜೆ 4:30 ರವರೆಗೆ ಪರಿಶೀಲಿಸಬಹುದು.
ಕಾನ್ಫಿಡೆನ್ಷಿಯಲ್ ಎಂದು ಸ್ಪಷ್ಟವಾಗಿ ನಮೂದಿಸಲಾದ ಲಕೋಟೆಯಲ್ಲಿ ಆಫರುಗಳನ್ನು ಮೊಹರು ಮಾಡಿ “ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್” ಇವರ ಹೆಸರಿಗೆ ರೂ.5,000/- ಮೌಲ್ಯದ ಡಿ.ಡಿ. ರೂಪದ ಇಎಂಡಿ ಜೊತೆಗೆ ದಿನಾಂಕ 09-01-2023 (FC Upto 2027-Kms run 1,22,650) ರಂದು ಅಥವಾ ಇದಕ್ಕಿಂತ ಮುಂಚಿತವಾಗಿ ಕೆಳಗೆ ತಿಳಿಸಿರುವವರಿಗೆ ಸಲ್ಲಿಸತಕ್ಕದ್ದು.
ಯಾವುದೇ ಕಾರಣ ನೀಡದೆ ಯಾವುದೇ ಆಫರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಂಪನಿ ಕಾಯ್ದಿರಿಸಿಕೊಂಡಿದೆ.
ಮ್ಯಾನೇಜರ್ – ಅಡ್ಮಿನಿಸ್ಟ್ರೇಷನ್
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್
ನಂ. 75, ಎಂ. ಜಿ. ರಸ್ತೆ, ಬೆಂಗಳೂರು–560 001
ಫೋನ್: 45557208 / 319. Mob: 9606931751, 9901501367

ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ
ಬನ್ನೂರು ರಸ್ತೆ, ಪಂಪ್ ಹೌಸ್ ಪಕ್ಕ, ಮಂಡ್ಯ – 571401
Website : www.mandya.uda.gov.in Email : commissionermuda@gmail.com
ಸಂ. : ಮಂನಪ್ರಾ/ನಯೋಎ/ಭೂಬ/20/2022–23 ದಿನಾಂಕ : 03.01.2023
ಪತ್ರಿಕಾ ಪ್ರಕಟಣೆ
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14 (ಎ)(1)ರನ್ವಯ)
(ಭೂ ಉಪಯೋಗ ಬದಲಾವಣೆಯ ಸರ್ಕಾರದ ಮಾರ್ಗಸೂಚಿ ಸಂಖ್ಯೆ : UDD/165/BMR/2012 ದಿನಾಂಕ : 12.10.2012)
ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ಕಸಬಾ – 1 ಹೋಬಳಿ, ಕೊಮ್ಮೇರಹಳ್ಳಿ ಗ್ರಾಮದ ಸರ್ವೆ ನಂ. 208 (ಹಳೇ ಸ.ನಂ. 46) ರಲ್ಲಿ 25 ಎಕರೆ ಜಮೀನು ಮೇ॥ ಚಿನ್ನಮಾಸ್ತ ಪ್ರಾಪರ್ಟೀಸ್ ಪ್ರೈವೇಟ್ ಲಿ., ನಂ.3, ಸಲಾರಪೂರಿಯಾ ವಿಂಡರ್ಸ್, 4ನೇ ಹಂತ, ಹಲಸೂರು ರಸ್ತೆ, ಬೆಂಗಳೂರು ಇವರ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುತ್ತಾರೆ.
ಸದರಿ ಜಮೀನು ಸರ್ಕಾರದಿಂದ ಅನುಮೋದಿತ ಮಹಾಯೋಜನೆಯಂತೆ ವ್ಯವಸಾಯ ವಲಯದಲ್ಲಿ ಗುರುತಿಸಲಾಗಿದ್ದು, ಈ ಸಂಬಂಧ ಪ್ರಸ್ತಾವಿತ ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) (1) ರನ್ವಯ ಕ್ರಮವಹಿಸಿ ಅರ್ಜಿದಾರರ ಕೋರಿಕೆಯಂತೆ ವಾಣಿಜ್ಯ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಸಾರ್ವಜನಿಕರಿಂದ ಸಲಹೆ, ಸೂಚನೆ ಅಥವಾ ಆಕ್ಷೇಪಣೆಗಳಿದ್ದಲ್ಲಿ ಲಿಖಿತ ಪತ್ರದ ಮುಖೇನ ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ ಹದಿನೈದು (15) ದಿನಗಳ ಅವಧಿಯೊಳಗೆ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ ಇವರಿಗೆ ಸಲ್ಲಿಸಬೇಕೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಿದೆ. ಸದರಿ ಅವಧಿ ಹೊರತಾಗಿ ಸ್ವೀಕೃತವಾಗುವ ಲಿಖಿತ ಪತ್ರಗಳಿಗೆ ಯಾವುದೇ ಮಾನ್ಯತೆ ನೀಡಲಾಗುವುದಿಲ್ಲ.
ಸಹಿ/– ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ಮಂಡ್ಯ

THE BIG DISCOUNT SALE
All New 2022 Collection at Mill Rate

SINCE 1960 ® hakoba
Embroidery beyond your imagination
CHIKAN EMBROIDERIES
Check out the Export Dress Materials, Punjabi Suit Fabrics, Sarees, Organdi, Voile, Terrene, Shiffon, Taspa, Swiss Voile, Ready-made Palazzo Pant, Kurtis, Legging Embroidered & Dupattas.
HEAVY DISCOUNT UPTO 50%
Shop online at www.hakoba.in
Venue THE CANARA UNION
No. 42, 8th Main, 13th Cross, Canara Union Road, Bangalore - 03.
KALAVISION

ಮರು ಅಭಿವೃದ್ಧಿಗೆ ಬಿಬಿಎಂಪಿಯಿಂದ ₹4 ಕೋಟಿ • ಒಳಚರಂಡಿ ನೀರಿಗಿಲ್ಲ ತಡೆ • ಮಾಡಿದ್ದ ಕಾಮಗಾರಿಗೆ ಮತ್ತೆ ವೆಚ್ಚ

ಅಮೃತಹಳ್ಳಿ ಕೆರೆ: ₹5 ಕೋಟಿಯ ಕಲ್ಮಶ ಗುಂಡಿ

• ಆರ್. ಮಂಜುನಾಥ್

ಬೆಂಗಳೂರು: ಮೂರು ವರ್ಷಗಳ ಹಿಂದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ₹5 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಿದ್ದ ಅಮೃತಹಳ್ಳಿ ಕೆರೆ ಕಸ-ಕಲ್ಮಶದ ಗುಂಡಿಯಾಗಿದ್ದು, ಬಿಬಿಎಂಪಿ ಮತ್ತೆ ₹4 ಕೋಟಿಯಲ್ಲಿ ಮತ್ತೆ ಅಭಿವೃದ್ಧಿ ಮಾಡಲು ಮುಂದಾಗಿದೆ.

ಸ್ಥಳೀಯರ ಸಾಕಷ್ಟು ಹೋರಾಟದ ನಂತರ ಬಿಡಿಎ 2015ರಲ್ಲಿ ಅಮೃತಹಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸಲು ಮುಂದಾಯಿತು. ಒಂದಷ್ಟು ಒತ್ತುವರಿಯನ್ನು ಬಿಟ್ಟು ಬೇಲಿಯನ್ನು ಹಾಕಿ, ಏರಿ ನಿರ್ಮಿಸಿ, ವಾಕಿಂಗ್ ಪಾಥ್ ಅನ್ನೂ ಅಭಿವೃದ್ಧಿಪಡಿಸಿತು. ಬಿಡಿಎ ₹5 ಕೋಟಿಗೂ ಹೆಚ್ಚು ವೆಚ್ಚ ಮಾಡಿದ ನಂತರ ಕೆರೆಯನ್ನು ಅನಾಥವನ್ನಾಗಿ ಮಾಡಿತಾದರೂ ಒಳಚರಂಡಿ ನೀರು ಹರಿಯುವುದನ್ನು ತಡೆಯಲಿಲ್ಲ. ಹೀಗಾಗಿ ಅಭಿವೃದ್ಧಿ ಕಂಡಿದ್ದ ಕೆರೆ ನಿರ್ವಹಣೆ ಇಲ್ಲದೆ ವಿಷ ಉಣಿಸುವ ತಾಣವಾಯಿತು.

ಸ್ಥಳೀಯರು ಕೆರೆಯ ಸ್ವಚ್ಛತೆಗೆ ಸಾಕಷ್ಟು ಮನವಿ ಮಾಡಿಕೊಂಡರೂ ಜನಪ್ರತಿನಿಧಿಗಳು, ಅಧಿಕಾರಿಗಳು ಕಿವಿಗೊಟ್ಟಿರಲಿಲ್ಲ. ಆದರೆ, ಬಿಡಿಎಯಿಂದ ಕೆರೆ ಬಿಬಿಎಂಪಿಗೆ ವರ್ಗಾವಣೆಯಾಗಿದ್ದೇ ತಡ ಅಮೃತಹಳ್ಳಿ ಕೆರೆಯ ಅಭಿವೃದ್ಧಿ ಯೋಜನೆಗೆ ಚಾಲನೆ ಸಿಕ್ಕಿತು. 15ನೇ ಹಣಕಾಸು ಯೋಜನೆಯಡಿ ₹4 ಕೋಟಿ ವೆಚ್ಚದಲ್ಲಿ ಕೆರೆ ಅಭಿವೃದ್ಧಿಗೆ ಬಿಬಿಎಂಪಿ ಮುಂದಾಯಿತು. 2022ರ ಮೇನಲ್ಲಿ ತಾಂತ್ರಿಕವಾಗಿಯೂ ಯೋಜನೆಗೆ ಸಮ್ಮತಿ ಸಿಕ್ಕರೂ ಕಾಮಗಾರಿ ಮಾತ್ರ ಆರಂಭವಾಗಿಲ್ಲ.

ಪ್ರಜಾವಾಣಿ ವಿಶೇಷ

'ಬಿಡಿಎ ಅಭಿವೃದ್ಧಿಯ ನಂತರ ಟೇಪ್ ಕಟ್ ಮಾಡಿದ್ದು ಬಿಟ್ಟರೆ ಬೇರೇನೂ ಮಾಡಲಿಲ್ಲ. ಕೆರೆಯಲ್ಲಿ ಒಳಚರಂಡಿ ನೀರು ನೇರವಾಗಿ ಹರಿಯುತ್ತಿದ್ದು, ಅದೇ ತುಂಬಿ ದುರ್ವಾಸೆ ಬೀರುತ್ತಿದೆ. ಜೊಂಡು ಪೂರ್ಣವಾಗಿ ಬೆಳೆದಿದೆ. ಇದೀಗ ಚುನಾವಣೆ ಬಂದಾಗ ಕೆರೆ ನೆನಪಾಗಿದೆ' ಎಂದು ಸ್ಥಳೀಯರಾದ ಜಯಲಕ್ಷ್ಮಿ ದೂರಿದರು.

'ಏರಿ, ಫೆನ್ಸಿಂಗ್, ಚೈನ್ ಲಿಂಕ್ ಸೇರಿ ಹಲವು ಸೌಲಭ್ಯಗಳನ್ನು ಬಿಡಿಎ ಅಭಿವೃದ್ಧಿ ಮಾಡಿದೆ. ಆದರೆ, ಮತ್ತೆ ಅದೇ ಸೌಲಭ್ಯಗಳಿಗೆ, ಅಂದರೆ ಆಗಿರುವ ಕೆಲಸಗಳನ್ನೇ ಮತ್ತೆ ಹಾಳುಗೆಡವಿ ಮಾಡಲು ಲಕ್ಷಾಂತರ ರೂಪಾಯಿ ವೆಚ್ಚ ಮಾಡಲಾಗುತ್ತಿದೆ' ಎಂದು ರಾಜೇಶ್ ದೂರಿದರು.

'ಬಿಡಿಎ ಅಭಿವೃದ್ಧಿ ಮಾಡಿದ್ದು ಸರಿ ಇರಲಿಲ್ಲ. ಕೊಳಕು ಹರಿಯುತ್ತಿತ್ತು. ಮತ್ತೆ ಬಿಬಿಎಂಪಿಗೆ ಹಸ್ತಾಂತರಿಸಿ ಮತ್ತೆ ಅಭಿವೃದ್ಧಿ ಮಾಡುತ್ತಿದ್ದಾರೆ. ಇದೀಗ ಏನೋ ಕೆಲಸ ಆರಂಭವಾಗಿದೆ' ಎಂದು ಅಮೃತನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ದೇವರಾಜ್‌ಗೌಡ ಹೇಳಿದರು.

ಕಾಮಗಾರಿ ಆರಂಭ...

'ಹಿಂದೆ ಬಿಡಿಎ ಅಭಿವೃದ್ಧಿ ಮಾಡಿತ್ತು. ಈಗ ಅಮೃತಹಳ್ಳಿ ಕೆರೆಯಲ್ಲಿ ಪೂರ್ಣ ಕೊಳಕಿದೆ. ಅದನ್ನು ಹೊರಹಾಕಿ, ಒಳಚರಂಡಿ ನೀರು ಹರಿಯದಂತೆ ಪೈಪ್‌ಲೈನ್ ಅಳವಡಿಸುತ್ತಿದ್ದೇವೆ. ನೀರನ್ನು ಹೊರಹಾಕುವ ಕೆಲಸ ಆರಂಭವಾಗಿದ್ದು, ಶೀಘ್ರ ಅಭಿವೃದ್ಧಿ ಕಾಮಗಾರಿ ಮುಗಿಸುತ್ತೇವೆ. ಕೆರೆ ಅಭಿವೃದ್ಧಿ ಪ್ರಾಧಿಕಾರದಿಂದ ಡಿಪಿಆರ್ ಅನುಮೋದನೆ ವಿಳಂಬವಾಯಿತು. ಹೀಗಾಗಿ ಕಾಮಗಾರಿ ಆರಂಭವೂ ತಡವಾಯಿತು' ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅಕ್ಷತ್ ಹೇಳಿದರು.

ಕೆರೆ ಅಭಿವೃದ್ಧಿಗೆ ಬಿಬಿಎಂಪಿ ವೆಚ್ಚ

- **24** ಎಕರೆ — ಅಮೃತ ಹಳ್ಳಿ ಕೆರೆಯ ವಿಸ್ತೀರ್ಣ
- **₹4** ಕೋಟಿ — ಕೆರೆ ಅಭಿವೃದ್ಧಿಗೆ ಮಂಜೂರಾಗಿರುವ ಒಟ್ಟು ಮೊತ್ತ
- **₹61.17** ಲಕ್ಷ — ಕೆರೆಯ ರಸ್ತೆ ಬದಿ ಫೆನ್ಸಿಂಗ್, ಕೆರೆಯಲ್ಲಿ ಮರು ಫೆನ್ಸಿಂಗ್
- **₹43.92** ಲಕ್ಷ — ಕಾಲುವೆ ಮಾರ್ಗ ಬದಲು
- **₹36.25** ಲಕ್ಷ — ತೆರೆದ ಪ್ರದೇಶದ ಅಭಿವೃದ್ಧಿ
- **₹34.20** ಲಕ್ಷ — ಹೂಳು ತೆಗೆಯುವ ಕೆಲಸ
- **₹32.98** ಲಕ್ಷ — ಹೂಳು ನಿರ್ಬಂಧ ಕಾಮಗಾರಿ
- **₹26.71** ಲಕ್ಷ — ಚೈನ್‌ಲಿಂಕ್ ಫೆನ್ಸಿಂಗ್
- **₹21.69** ಲಕ್ಷ — ಕೆರೆ ಏರಿ, ವಾಕ್‌ಪಾಥ್ ಮರು ಅಭಿವೃದ್ಧಿ
- **₹16.86** ಲಕ್ಷ — ಏರಿಗೆ ಕಲ್ಲು ಕಾಮಗಾರಿ
- **₹10** ಲಕ್ಷ — ಒಳಹರಿವು ನಿರ್ಮಾಣ, ಶೌಚಾಲಯ, ನಾಲಾ ಅಭಿವೃದ್ಧಿ
- **₹7.29** ಲಕ್ಷ — ಪ್ರವೇಶದ್ವಾರದಲ್ಲಿ ಚರಂಡಿ
- **₹54.46** ಲಕ್ಷ — ಯು–ಆಕಾರದ ಚರಂಡಿ ನಿರ್ಮಾಣ

ಬಿಡಿಎ ಅಭಿವೃದ್ಧಿ ಮಾಡಿರುವ ಅಮೃತಹಳ್ಳಿ ಕೆರೆಯ ಸ್ಥಿತಿ

ಮತ್ತೆ ಡಿಪಿಆರ್‌ಗೆ ₹4.75 ಲಕ್ಷ

ಅಮೃತಹಳ್ಳಿ ಕೆರೆಯನ್ನು ಅಭಿವೃದ್ಧಿ ಮಾಡಲು ಬಿಡಿಎ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸೇರಿದಂತೆ ಎಲ್ಲದಕ್ಕೂ ವೆಚ್ಚ ಮಾಡಿತ್ತು. ಆದರೆ ಇದೀಗ ಬಿಬಿಎಂಪಿ ಮತ್ತೆ ಡಿಪಿಆರ್ ಮಾಡಿದೆ. ಅದಕ್ಕೆ ಜಿಎಸ್‌ಟಿ ಸೇರಿ ₹4.75 ಲಕ್ಷ ವೆಚ್ಚ ಮಾಡಿದೆ. ಆದರೆ ಇದರಲ್ಲೂ ಒಳಚರಂಡಿ ನೀರು ಕೆರೆಗೆ ಬರದಂತೆ ತಡೆಯಲು ಯಾವುದೇ ಕ್ರಮ ಕೈಗೊಂಡಿಲ್ಲ.

'ಅಮೃತಹಳ್ಳಿಗೆ ಇರುವುದೇ ಒಂದು ಒಳಹರಿವು. ಸಹಕಾರನಗರದಿಂದ ಬರುವ ರಾಜಕಾಲುವೆಯಲ್ಲಿ ಒಳಚರಂಡಿ ನೀರೇ ಇರುತ್ತದೆ. ಇದು ಬರದಂತೆ ತಡೆದರೆ ಕೆರೆಗೆ ನೀರು ಎಲ್ಲಿಂದಲೂ ಹರಿಯುವುದಿಲ್ಲ. ಇನ್ನೊಂದು ಹರಿವು ಕೆರೆಯ ಬದಿಯಲ್ಲಿ, ಅದನ್ನು ದಾಟಿ ಹೋಗುತ್ತದೆ. ಬಿಡಿಎ ಫೆನ್ಸಿಂಗ್ ಮಾಡಿತ್ತು. ಮತ್ತೆ ಅದನ್ನೇ ಮಾಡಲಾಗುತ್ತಿದೆ. ಮಾಡಿದ ಕೆಲಸಕ್ಕೇ ಮತ್ತೆ ಕೋಟ್ಯಂತರ ರೂಪಾಯಿ ವೆಚ್ಚ ಮಾಡುವ ಬದಲು, ನೀರು ಸಂಸ್ಕರಣೆ ಘಟಕವನ್ನು (ಎಸ್‌ಟಿಪಿ) ಹಾಕಿದ್ದರೆ ಸಾಕಿತ್ತು. ಇದಕ್ಕೆ ಕೆರೆ ಅಭಿವೃದ್ಧಿ ಪ್ರಾಧಿಕಾರ ಹೇಗೆ ಅನುಮತಿ ನೀಡಿದೆಯೋ ಗೊತ್ತಿಲ್ಲ' ಎಂದು ಸ್ಥಳೀಯರಾದ ಕಿರಣ್ ದೂರಿದರು.

ಸುದ್ದಿ 2 ನಿಮಿಷ

ಅಪಘಾತ: ಗಾರ್ಮೆಂಟ್ಸ್ ಕಾರ್ಖಾನೆ ಉದ್ಯೋಗಿ ಸಾವು

ಬೆಂಗಳೂರು: ಉಲ್ಲಾಳ 100 ಅಡಿ ರಸ್ತೆಯಲ್ಲಿ ಸೋಮವಾರ ತಡರಾತ್ರಿ ಟೆಂಪೊ ಟ್ರಾವೆಲರ್ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಗಾರ್ಮೆಂಟ್ಸ್ ಕಾರ್ಖಾನೆ ಉದ್ಯೋಗಿ ಆರ್. ಲೋಹಿತ್ (22) ಎಂಬುವವರು ಮೃತಪಟ್ಟಿದ್ದಾರೆ.

'ಪಾವಗಡದ ಲೋಹಿತ್, ಕೆಂಗೇರಿ ಉಪನಗರದಲ್ಲಿ ವಾಸವಿದ್ದರು. ಕೆಲಸ ಮುಗಿಸಿ ತಡರಾತ್ರಿ 1.30ರ ಸುಮಾರಿಗೆ ಬೈಕ್‌ನಲ್ಲಿ ಮನೆಯತ್ತ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ಪಲ್ಸರ್ ಬೈಕ್‌ನಲ್ಲಿ (ಕೆಎ 41 ಇಎನ್ 6075) ಲೋಹಿತ್ ತೆರಳುತ್ತಿದ್ದರು. ಮುದ್ದಿನಪಾಳ್ಯ ಜಂಕ್ಷನ್ ಕಡೆಯಿಂದ ಕೆಂಗೇರಿ ಕಡೆಗೆ ಟೆಂಪೊ ಟ್ರಾವೆಲರ್ ಹೊರಟಿತ್ತು. ಚಾಲಕ, ಅತಿ ವೇಗವಾಗಿ ನಿರ್ಲಕ್ಷ್ಯದಿಂದ ಟೆಂಪೊ ಟ್ರಾವೆಲರ್ ಚಲಾಯಿಸಿದ್ದ. ಇದರಿಂದಾಗಿ ಬೈಕ್‌ಗೆ ಟೆಂಪೊ ಟ್ರಾವೆಲರ್ ಡಿಕ್ಕಿ ಹೊಡೆದಿತ್ತು.'

'ಬೈಕ್ ಭಾಗಶಃ ಜಖಂಗೊಂಡು, ಲೋಹಿತ್ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು. ಇದರಿಂದಾಗಿ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಟೆಂಪೊ ಟ್ರಾವೆಲರ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

ಆಟೊ, ದ್ವಿಚಕ್ರ ವಾಹನ ಕಳವು: ಚಾಲಕ ಬಂಧನ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ವಾಹನ ಕಳ್ಳತನ ಮಾಡುತ್ತಿದ್ದ ಆರೋಪಿ ಸಲ್ಮಾನ್ ಪಾಷಾ (24) ಎಂಬುವವರನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

'ವಿಜಯನಗರದ ಶಾಮಣ್ಣ ಗಾರ್ಡನ್ ನಿವಾಸಿ ಸಲ್ಮಾನ್, ಅಪರಾಧ ಹಿನ್ನೆಲೆಯುಳ್ಳವ. ಅಪರಾಧ ಪ್ರಕರಣವೊಂದರಲ್ಲಿ ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದಿದ್ದ. ಈತನಿಂದ ₹ 2.63 ಲಕ್ಷ ಮೌಲ್ಯದ ಆಟೊ ಹಾಗೂ ನಾಲ್ಕು ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆಟೊ ಚಾಲಕನಾಗಿದ್ದ ಸಲ್ಮಾನ್, ನಗರದ ಹಲವೆಡೆ ಸುತ್ತಾಡುತ್ತಿದ್ದ. ದ್ವಿಚಕ್ರ ವಾಹನ ಹಾಗೂ ಆಟೊ ಗುರುತಿಸಿ ಕದ್ದೊಯ್ಯುತ್ತಿದ್ದ. ಅವುಗಳನ್ನು ಮಾರಾಟ ಮಾಡಿ ಹಣ ಗಳಿಸುತ್ತಿದ್ದ. ದ್ವಿಚಕ್ರ ವಾಹನಗಳ ಬಿಡಿಭಾಗಗಳನ್ನೂ ಮಾರುತ್ತಿದ್ದ.'

'ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಆರೋಪಿ ಇತ್ತೀಚೆಗೆ ಆಟೊ ಕದ್ದಿದ್ದ. ಈ ಬಗ್ಗೆ ದಾಖಲಾಗಿದ್ದ ದೂರಿನ ತನಿಖೆ ಕೈಗೊಂಡಾಗ ಆರೋಪಿ ಸಿಕ್ಕಿಬಿದ್ದ' ಎಂದೂ ತಿಳಿಸಿದರು.

'ಅಲೆಮಾರಿಗಳಿಗೆ ಸಾಮಾಜಿಕ ನ್ಯಾಯ ಸಿಗಲಿ'

ಸಾಹಿತ್ಯ ಸಾಂಸ್ಕೃತಿಕ ಕಲೋತ್ಸವ • ರಾಜಕೀಯ ಪ್ರಾತಿನಿಧ್ಯ ನೀಡಲು ಎಚ್. ಕಾಂತರಾಜ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಲೆಮಾರಿ ಮತ್ತು ಅರೆ ಅಲೆಮಾರಿಗಳಿಗೆ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ನ್ಯಾಯ ಒದಗಿಸಬೇಕು' ಎಂದು ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಎಚ್. ಕಾಂತರಾಜ ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಅಲೆಮಾರಿ-ಅರೆ ಅಲೆಮಾರಿ ಜನಾಂಗಗಳ ಒಕ್ಕೂಟ ಮಂಗಳವಾರ ನಗರದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಅಲೆಮಾರಿ ಮತ್ತು ಅರೆ ಅಲೆಮಾರಿ ಸಾಹಿತ್ಯ ಸಾಂಸ್ಕೃತಿಕ ಕಲೋತ್ಸವದಲ್ಲಿ ಮಾತನಾಡಿದ ಅವರು, 'ಅಲೆಮಾರಿ ಮತ್ತು ಅರೆ ಅಲೆಮಾರಿಗಳು ಹಿಂದುಳಿದ ವರ್ಗಗಳಲ್ಲೇ ಅತಿ ಹಿಂದುಳಿದವರು. ಇವರ ಬದುಕು ಇಂದು ಶೋಚನೀಯ ಸ್ಥಿತಿಯಲ್ಲಿದೆ' ಎಂದು ವಿವರಿಸಿದರು.

ನಗರದಲ್ಲಿ ಮಂಗಳವಾರ ನಡೆದ ಅಲೆಮಾರಿ ಮತ್ತು ಅರೆ ಅಲೆಮಾರಿ ಸಾಹಿತ್ಯ ಸಾಂಸ್ಕೃತಿಕ ಕಲೋತ್ಸವದಲ್ಲಿ ಜೋಗಿ ಜನಾಂಗದ ಕಲಾವಿದರು ಕಿನ್ನರಿ ನುಡಿಸಿದರು
– ಪ್ರಜಾವಾಣಿ ಚಿತ್ರ

'ಕರ್ನಾಟಕದಲ್ಲಿ 46 ಅಲೆಮಾರಿ ಮತ್ತು ಅರೆ ಅಲೆಮಾರಿ ಜಾತಿಗಳಿವೆ. ಈ ಸಮುದಾಯಗಳನ್ನು ಪ್ರವರ್ಗ–1ರಲ್ಲಿ ಸೇರಿಸಲಾಗಿದೆ. ಆದರೆ, ಪ್ರವರ್ಗ–1ರಲ್ಲಿ 95 ಸಮುದಾಯಗಳಿವೆ. ಉಳಿದ ಸಮುದಾಯಗಳ ಜತೆಗೆ ಅಲೆಮಾರಿಗಳು ಮತ್ತು ಅರೆ ಅಲೆಮಾರಿಗಳು ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ, ಸರ್ಕಾರಿ ನೌಕರಿಯಿಂದ ವಂಚಿತರಾಗುತ್ತಿದ್ದಾರೆ. ಜತೆಗೆ, ರಾಜಕೀಯ ಪ್ರಾತಿನಿಧ್ಯ ದೊರೆಯುತ್ತಿಲ್ಲ ಮತ್ತು ಈಗಿನ ಪರಿಸ್ಥಿತಿಯಲ್ಲಿ ಚುನಾವಣೆ ಎದುರಿಸಲು ಸಾಧ್ಯವಿಲ್ಲ. ಹೀಗಾಗಿ, ವಿಧಾನ ಪರಿಷತ್ ಮತ್ತು ರಾಜ್ಯಸಭೆಗೆ ಈ ಸಮುದಾಯಕ್ಕೆ ಸೇರಿದ ವ್ಯಕ್ತಿಗಳನ್ನು ನಾಮಕರಣ ಮಾಡಬೇಕು' ಎಂದು ಆಗ್ರಹಿಸಿದರು.

'ಜನಸಂಖ್ಯೆಗೆ ಅನುಗುಣವಾಗಿಯೇ ಪ್ರವರ್ಗ–1ರಲ್ಲಿ ಪ್ರತ್ಯೇಕ ಮೀಸಲಾತಿ ನೀಡಬೇಕು ಎನ್ನುವ ಈ ಸಮುದಾಯಗಳ ಬೇಡಿಕೆಯನ್ನು ಸರ್ಕಾರ ಪರಿಗಣಿಸಬೇಕು. ಆಧುನಿಕ ಯುಗದಲ್ಲಿ ಅಲೆಮಾರಿಗಳ ಕುಲಕಸಬುಗಳು ನಶಿಸುತ್ತಿವೆ. ಆದ್ದರಿಂದ, ಪರ್ಯಾಯ ಉದ್ಯೋಗಗಳನ್ನು ಕಲ್ಪಿಸಬೇಕು' ಎಂದು ಕೋರಿದರು.

ವಿಧಾನ ಪರಿಷತ್ ಸದಸ್ಯ ಎಂ. ನಾಗರಾಜ್ ಮಾತನಾಡಿ, 'ಶಿಕ್ಷಣಕ್ಕೆ ಸಮುದಾಯವು ಪ್ರಾತಿನಿಧ್ಯ ನೀಡಬೇಕು ಮತ್ತು ಭ್ರಷ್ಟಾಚಾರ ವಿರುದ್ಧ ಹೋರಾಟ ಮಾಡುವ ಯುವಕರನ್ನು ಬೆಳೆಸಬೇಕು' ಎಂದು ಸಲಹೆ ನೀಡಿದರು.

ಒಕ್ಕೂಟದ ಗೌರವಾಧ್ಯಕ್ಷ ಕೆ. ರವೀಂದ್ರ ಶೆಟ್ಟಿ ಮಾತನಾಡಿ, '46 ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗಗಳ ಕುಲಶಾಸ್ತ್ರೀಯ ಅಧ್ಯಯನ ಮಾಡಬೇಕು' ಎಂದು ಕೋರಿದರು.

ಅಧ್ಯಕ್ಷ ತುಕರಾಮ ನಾಗಪ್ಪ ವಾಷ್ಮರ, ಪ್ರಧಾನ ಕಾರ್ಯದರ್ಶಿ ಪ್ರತಾಪ್ ಕುಮಾರ್ ಓ. ಜೋಗಿ ಇದ್ದರು.

ಮಕ್ಕಳ ವಚನ ಮೇಳ ನೋಂದಣಿ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರವೀಂದ್ರ ಕಲಾಕ್ಷೇತ್ರದಲ್ಲಿ ಜ.10ರಿಂದ ನಡೆಯಲಿರುವ ಮಕ್ಕಳ ವಚನ ಮೇಳಕ್ಕೆ ನೋಂದಾಯಿಸಿಕೊಳ್ಳುವ ಅವಧಿಯನ್ನು ಜ.8ರವರೆಗೆ ವಿಸ್ತರಿಸಲಾಗಿದೆ.

ಮಾಂಟೆಸರಿಯಿಂದ ಹತ್ತನೇ ತರಗತಿವರೆಗಿನ ವಿದ್ಯಾರ್ಥಿಗಳಿಗಾಗಿ ವಚನಜ್ಯೋತಿ ಬಳಗವು ಮಕ್ಕಳ ವಚನ ಮೇಳ ಆಯೋಜಿಸಿದೆ. ವಚನ ಗಾಯನ, ವಚನ ಪ್ರಬಂಧ, ವಚನ ನೃತ್ಯ, ವಚನ ವಿವೇಚನೆ, ವಚನ ಚಿತ್ರ, ವಚನ ರೂಪಕ, ವಚನ ಕಂಠಪಾಠ, ವಚನ ಅಂತ್ಯಾಕ್ಷರಿ, ವಚನ ರಸಪ್ರಶ್ನೆ, ವಚನ ವೇಷಭೂಷಣ ಮತ್ತು ಸಮೂಹ ವಚನ ಗಾಯನ ಸ್ಪರ್ಧೆಗಳನ್ನು ನಡೆಸಲಾಗುತ್ತಿದೆ. ಮಾಹಿತಿಗೆ ಬಳಗದ ಅಧ್ಯಕ್ಷ ಪಿನಾಕಪಾಣಿ (ಮೊ.98451 84267) ಅವರನ್ನು ಸಂಪರ್ಕಿಸಬಹುದು.

ಮೊಬೈಲ್ ಪಡೆದು ಪರಾರಿ: ಬ್ಲ್ಯಾಕ್‌ಮೇಲ್ ಮಾಡಿ ಸಿಕ್ಕಿಬಿದ್ದ

ಬೆಂಗಳೂರು: ಸ್ನೇಹಿತನ ಜೊತೆ ಮಾತನಾಡುವುದಾಗಿ ಹೇಳಿ ಮೊಬೈಲ್ ಪಡೆದು ಪರಾರಿಯಾಗಿದ್ದ ಆರೋಪಿ ಪವನ್ ಎಂಬುವವರು, ಮೊಬೈಲ್ ಮಾಲೀಕರನ್ನು ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

'ಜಾರ್ಖಂಡ್‌ನ ದೇವಬ್ರತ್ ಸಿಂಗ್ ಎಂಬುವವರು ದೂರು ನೀಡಿದ್ದರು' ಎಂದು ಯಶವಂತ ಪುರ ಪೊಲೀಸರು ಹೇಳಿದರು.

'ಮೊಬೈಲ್ ಪಡೆದಿದ್ದ ಆರೋಪಿ, ಮಾತನಾಡುವ ಸೋಗಿನಲ್ಲೇ ಪರಾರಿಯಾಗಿ, ಮೊಬೈಲ್ ಲಾಕ್ ತೆರೆದು ಪರಿಶೀಲಿಸಿದ್ದ. ಸ್ನೇಹಿತೆ ಜೊತೆಗೆ ದೇವಬ್ರತ್ ತೆಗೆಸಿಕೊಂಡಿದ್ದ ಫೋಟೊ ಹಾಗೂ ವಿಡಿಯೊ ನೋಡಿದ್ದ. ಅವುಗಳನ್ನೇ ಇಟ್ಟುಕೊಂಡು ದೇವಬ್ರತ್ ಅವರ ತಂದೆ ತಾಯಿಗೆ ಫೋನ್ ಮಾಡಿದ್ದ. ₹ 50 ಸಾವಿರ ಕೊಡುವಂತೆ ಒತ್ತಾಯಿಸಿದ್ದ. ಹಣ ಕೊಡದಿದ್ದರೆ, ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವುದಾಗಿ ಬೆದರಿಸಿದ್ದ' ಎಂದು ತಿಳಿಸಿದರು.

ಹತ್ಯೆ: ಚಾರ್ಮಾಡಿ ಘಾಟಿಯಲ್ಲಿ ಹುಡುಕಾಟ

ಉಜಿರೆ/ಬೆಂಗಳೂರು: ಕೋಣನಕುಂಟೆಯ ಹರಿನಗರ ನಿವಾಸಿ ಎಚ್. ಶರತ್ ಅವರನ್ನು ಅಪಹರಿಸಿ ಹತ್ಯೆ ಮಾಡಿದ್ದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು, ಮೃತದೇಹಕ್ಕಾಗಿ ಚಾರ್ಮಾಡಿ ಘಾಟಿ ಪ್ರದೇಶದಲ್ಲಿ ಹುಡುಕಾಟ ಆರಂಭಿಸಿದ್ದಾರೆ.

'ಸಬ್ಸಿಡಿ ದರದಲ್ಲಿ ಸರ್ಕಾರದಿಂದ ಕಾರು ಕೊಡಿಸುವುದಾಗಿ ಹೇಳಿದ್ದ ಶರತ್, ಚಿಕ್ಕಬಳ್ಳಾಪುರ ಹಾಗೂ ಯಲಹಂಕದ ಹಲವರಿಂದ ಹಣ ಪಡೆದಿದ್ದರು. ಕಾರು ಕೊಡಿಸದೇ ಜನರನ್ನು ವಂಚಿಸಿದ್ದರು. ಈ ಸಂಬಂಧ ಶರತ್ ವಿರುದ್ಧ ಪ್ರಕರಣವೂ ದಾಖಲಾಗಿತ್ತು. ಇದರ ನಡುವೆಯೇ ಶರತ್ ಅವರನ್ನು ಅಪಹರಿಸಿದ್ದ ಆರೋಪಿಗಳು, ಹತ್ಯೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

'ಅಪಹರಣ ಹಾಗೂ ಹತ್ಯೆ ಸಂಬಂಧ ದಾಖಲಾದ ಪ್ರಕರಣದ ತನಿಖೆಗೆ ವಿಶೇಷ ತಂಡ ರಚಿಸಲಾಗಿತ್ತು. ಆರೋಪಿಗಳಾದ ಎಚ್.ಜಿ. ವೆಂಕಟಾಚಲಪತಿ, ಅವರ ಪುತ್ರ ಎ.ವಿ.ಶರತ್ ಕುಮಾರ್, ಸಹಚರರಾದ ಆರ್.ಶ್ರೀಧರ್, ಕೆ. ಧನುಷ್, ಯಲಹಂಕದ ಎಂ.ಪಿ. ಮಂಜುನಾಥ್, ಉದಯ, ನವೀನ್, ಸಂಕೇತ್, ಭೋಗೇಶ್, ಗೋವಿಂದ್ ಅವರನ್ನು ಬಂಧಿಸಲಾಗಿತ್ತು. ಶರತ್ ಅವರನ್ನು ಕೊಂದಿರುವುದಾಗಿ ಹೇಳಿದ್ದ ಆರೋಪಿಗಳು, ಚಾರ್ಮಾಡಿ ಘಾಟಿಯಲ್ಲಿ ಮೃತದೇಹ ಬಿಸಾಕಿರುವುದಾಗಿ ಮಾಹಿತಿ ನೀಡಿದ್ದರು.'

ಮೃತದೇಹ ಸಿಗುವುದು ಅನುಮಾನ: ಚಾರ್ಮಾಡಿ ಘಾಟಿಗೆ ಹೋಗಿರುವ ಪೊಲೀಸರ ತಂಡ, ರಸ್ತೆಯ ಅಕ್ಕ-ಪಕ್ಕದ ಅರಣ್ಯ ಪ್ರದೇಶದಲ್ಲಿ ಹುಡುಕಾಟ ನಡೆಸುತ್ತಿದೆ. 9 ತಿಂಗಳ ಹಿಂದೆಯೇ ಹತ್ಯೆ ಮಾಡಿ, ಮೃತದೇಹವನ್ನು ಎಸೆಯಲಾಗಿದೆ. ಸದ್ಯದ ಸ್ಥಿತಿಯಲ್ಲಿ ಮೃತದೇಹ ಸಿಗುವುದು ಅನುಮಾನವೆಂದು ಸ್ಥಳೀಯರು ಹೇಳುತ್ತಿದ್ದಾರೆ.

'ಚಾರ್ಮಾಡಿ ಘಾಟಿ ಸಾಕಷ್ಟು ಕಣಿವೆ ಪ್ರದೇಶದಲ್ಲಿದೆ. ಘಾಟಿಯ ಸ್ಥಳಗಳಲ್ಲಿ ವಿಪರೀತ ಪೊದೆ ಹಾಗೂ ಆಳವಾದ ಕಂದಕಗಳಿವೆ. ಮಳೆ ಸುರಿಯುವ ವೇಳೆಯಲ್ಲಿ ಮೃತದೇಹ ನೀರಿನಲ್ಲಿ ಕೊಚ್ಚಿಕೊಂಡು ಹೋಗಿರಬಹುದು. ಅರಣ್ಯದಲ್ಲಿ ವನ್ಯಮೃಗಗಳಿದ್ದು, ಮೃತದೇಹ ತಿಂದು ಹಾಕಿರಬಹುದು' ಎಂದು ಸ್ಥಳೀಯರು ಅನುಮಾನ ವ್ಯಕ್ತಪಡಿಸುತ್ತಿದ್ದಾರೆ.

ವಿದ್ಯಾರ್ಥಿನಿ ಹತ್ಯೆ: ಪ್ರೆಸಿಡೆನ್ಸಿ ವಿ.ವಿ ಆಡಳಿತ ಮಂಡಳಿ ವಿರುದ್ಧವೂ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಟೆಕ್ ವಿದ್ಯಾರ್ಥಿನಿ ಲಯಸ್ಮಿತಾ (19) ಹತ್ಯೆ ಸಂಬಂಧ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ವಿರುದ್ಧವೂ ಎಫ್‌ಐಆರ್ ದಾಖಲಾಗಿದೆ.

ರಾಜಾನುಕುಂಟೆ ದಿಬ್ಬೂರು ಬಳಿಯ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿ ಲಯಸ್ಮಿತಾ (19) ಅವರನ್ನು ಚಾಕುವಿನಿಂದ ಇರಿದು ಸೋಮವಾರ ಹತ್ಯೆ ಮಾಡಲಾಗಿತ್ತು. ಕೃತ್ಯ ಎಸಗಿದ್ದ ಆರೋಪಿ ಪವನ್ ಕಲ್ಯಾಣ್ (23) ಸಹ ಚಾಕುವಿನಿಂದ ಇರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು.

'ಲಯಸ್ಮಿತಾ ಕುಟುಂಬದವರ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿ ಪವನ್ ಕಲ್ಯಾಣ್ ಹಾಗೂ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯವರನ್ನು ಆರೋಪಿಯನ್ನಾಗಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಗುಟ್ಟಹಳ್ಳಿಯ ಲಯಸ್ಮಿತಾ, ಬಿ.ಟೆಕ್ ವ್ಯಾಸಂಗ ಮಾಡುತ್ತಿದ್ದರು. ಅವರ ಸಂಬಂಧಿಯೇ ಆಗಿರುವ ಪವನ್, ನೃಪತುಂಗ ವಿಶ್ವವಿದ್ಯಾಲಯದಲ್ಲಿ ಬಿಸಿಎ ಓದುತ್ತಿದ್ದ. ಮಾತುಕತೆಗೆಂದು ಪ್ರೆಸಿಡೆನ್ಸಿ ಕಾಲೇಜಿಗೆ ಬಂದು ಲಯಸ್ಮಿತಾ ಅವರನ್ನು ಕೊಂದಿದ್ದ' ಎಂದು ಪೊಲೀಸರು ಹೇಳಿದರು.

'ಬೇರೆ ಕಾಲೇಜಿನ ವಿದ್ಯಾರ್ಥಿಯನ್ನು ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದವರು ಒಳಗೆ ಬಿಟ್ಟಿದ್ದಾರೆ. ಪ್ರಕರಣದಲ್ಲಿ ವಿಶ್ವವಿದ್ಯಾಲಯದವರ ನಿರ್ಲಕ್ಷ್ಯವೂ ಇದೆ. ಹೀಗಾಗಿ, ಆಡಳಿತ ಮಂಡಳಿಯವರನ್ನು ಆರೋಪಿಯನ್ನಾಗಿ ಮಾಡಲಾಗಿದೆ. ಅವರಿಗೂ ನೋಟಿಸ್ ನೀಡಿ, ವಿಚಾರಣೆ ನಡೆಸಲಾಗುವುದು' ಎಂದು ತಿಳಿಸಿದರು.

'ಸದ್ಯ ಪವನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಆರೋಗ್ಯದಲ್ಲಿ ಸಂಪೂರ್ಣ ಚೇತರಿಕೆ ಕಂಡುಬಂದ ನಂತರ ಹೇಳಿಕೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದರು.

ಡ್ರಗ್ಸ್ ಮಾರಾಟ: ರೌಡಿ ಸೇರಿ ಮೂವರ ಬಂಧನ

ಬೆಂಗಳೂರು: ನಗರದಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ರೌಡಿ ಸೇರಿ ಮೂವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ರೌಡಿ ಸೈಯದ್ ಯಾರಬ್, ಉಮ್ರಾನ್ ಬಾಷಾ ಹಾಗೂ ಶಹಬಾಜ್ ಖಾನ್ ಬಂಧಿತರು. ಇವರಿಂದ ₹ 3 ಲಕ್ಷ ಮೌಲ್ಯದ 25 ಗ್ರಾಂ ಎಂಡಿಎಂಎ, 22 ಎಲ್‌ಎಸ್‌ಡಿ ಕಾಗದ ಚೂರುಗಳು, 1 ಕೆ.ಜಿ ಗಾಂಜಾ, ಎರಡು ಮೊಬೈಲ್ ಹಾಗೂ ತೂಕದ ಯಂತ್ರ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆಡುಗೋಡಿ ಠಾಣೆಯ ರೌಡಿ ಪಟ್ಟಿಯಲ್ಲಿ ಸೈಯದ್ ಯಾರಬ್ ಹೆಸರಿದೆ. ಹಲವು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ ಈತ, ಜೈಲಿಗೆ ಹೋಗಿ ಬಂದಿದ್ದ. ಅಕ್ರಮವಾಗಿ ಹಣ ಸಂಪಾದಿಸಲೆಂದು ತನ್ನದೇ ತಂಡ ಕಟ್ಟಿಕೊಂಡು ಡ್ರಗ್ಸ್ ಮಾರಾಟ ಮಾಡುತ್ತಿದ್ದ.'

ಸಿಸಿಬಿ ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿರುವ ಡ್ರಗ್ಸ್ ಹಾಗೂ ಮೊಬೈಲ್

'ಜಗಜೀವನ್‌ರಾಮ್ ನಗರ ಠಾಣೆ ವ್ಯಾಪ್ತಿಯಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಡ್ರಗ್ಸ್ ಮಾರಾಟ ಮಾಡುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಕಂಪನಿಗಳ ಉದ್ಯೋಗಿಗಳು ಹಾಗೂ ಕೆಲ ಕಾರ್ಮಿಕರು ಆರೋಪಿಗಳ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು' ಎಂದು ತಿಳಿಸಿದರು.

'ಆರೋಪಿಗಳು ತಮ್ಮ ಜೊತೆ ಮಾರಕಾಸ್ತ್ರಗಳನ್ನೂ ಇಟ್ಟುಕೊಂಡು ಓಡಾಡುತ್ತಿದ್ದರು. ಜನರನ್ನು ಬೆದರಿಸಿ ಸುಲಿಗೆ ಮಾಡುತ್ತಿದ್ದ ಬಗ್ಗೆಯೂ ಮಾಹಿತಿ ಇದೆ. ಮಾರಕಾಸ್ತ್ರಗಳನ್ನೂ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಸ್ನೇಹಿತನ ಕೊಲೆ: ಜೀವಾವಧಿ ಶಿಕ್ಷೆ ಕಾಯಂ

ಬೆಂಗಳೂರು: ಹಣಕ್ಕಾಗಿ ಸ್ನೇಹಿತನನ್ನು ಅಪಹರಿಸಿ ಕೊಲೆಗೈದ ಪ್ರಕರಣವೊಂದರಲ್ಲಿ ಮುಂಬೈನ ಇಬ್ಬರು ಯುವತಿಯರೂ ಸೇರಿದಂತೆ ನಾಲ್ವರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದ ಸೆಷನ್ಸ್ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

'ಸೆಷನ್ಸ್ ನ್ಯಾಯಾಲಯದ ಆದೇಶ ರದ್ದುಗೊಳಿಸಬೇಕು' ಎಂದು ಕೋರಿ ಅಪರಾಧಿಗಳಾದ ಜಾರ್ಖಂಡ್‌ನ ರೋಹಿತ್ ಕುಮಾರ್, ಮುಂಬೈನ ಶಿವಾನಿ ಠಾಕೂರ್, ಪ್ರೀತಿ ರಾಜ್ ಮತ್ತು ಬಿಹಾರದ ವಾರೀಶ್ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

'ಸಾಕ್ಷ್ಯಾಧಾರಗಳನ್ನು ಮರು ಪರಿಶೀಲಿಸಿದರೆ ವಿಚಾರಣಾ ನ್ಯಾಯಾಲಯದ ಆದೇಶದಲ್ಲಿ ಹೈಕೋರ್ಟ್ ಮಧ್ಯಪ್ರವೇಶ ಮಾಡುವ ಅಗತ್ಯ ಕಂಡುಬರುತ್ತಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ, ನಾಲ್ವರು ಮೇಲ್ಮನವಿದಾರರಿಗೆ 2014ರ ನವೆಂಬರ್ 6ರಂದು ಶಿಕ್ಷೆ ವಿಧಿಸಿದ ಸೆಷನ್ಸ್ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿದಿದೆ.

ಪ್ರಕರಣವೇನು?: ರಾಜಸ್ಥಾನದ ತುಷಾರ್ ನಗರದಲ್ಲಿ ಎಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದರು. 2011ರ ಜನವರಿ 14ರಂದು ಕಾಣೆಯಾಗಿದ್ದರು. ಏಳು ದಿನಗಳ ನಂತರ ಅವರ ಮೃತದೇಹ ವೀರಸಾಗರ ರಸ್ತೆಯ ನೀಲಗಿರಿ ತೋಪಿನಲ್ಲಿ ಪತ್ತೆಯಾಗಿತ್ತು. ಈ ಸಂಬಂಧ ಸೋಲದೇವನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

'ವಾರಿಶ್ ಮತ್ತು ತುಷಾರ್ ರಾಜಸ್ಥಾನದಲ್ಲಿ ಒಟ್ಟಿಗೇ ವ್ಯಾಸಂಗ ಮಾಡಿದ್ದರು. ಶ್ರೀಮಂತ ಕುಟುಂಬದ ಹಿನ್ನೆಲೆ ಹೊಂದಿದ್ದ ತುಷಾರ್ ಅವರನ್ನು ಅಪಹರಿಸಿ ಹಣ ವಸೂಲಿ ಮಾಡುವ ಉದ್ದೇಶದಿಂದ ವಾರಿಶ್ ಸಂಚು ರೂಪಿಸಿದ್ದ. ಇದರ ಅನುಸಾರ ಆತನ ಸ್ನೇಹಿತರು ತುಷಾರ್ ಅವರನ್ನು ಜನವರಿ 14ರಂದು ಉಪಾಯದಿಂದ ಅಪಹರಿಸಿದ್ದರು. ನಂತರ ಕೊಲೆ ಮಾಡಿ ಸಾಕ್ಷ್ಯ ನಾಶ ಮಾಡಿದ್ದಾರೆ' ಎಂದು ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

ಪುಂಡಾನೆ ಸೆರೆ

ಗುಂಡ್ಲುಪೇಟೆ: ತಾಲ್ಲೂಕಿನ ಬೆಟ್ಟದ ಮಾದಹಳ್ಳಿಯ ಬಳಿ ರೈತನ ಮೇಲೆ ದಾಳಿ ಮಾಡಿದ್ದ ಆನೆಯನ್ನು ಹಂಚೀಪುರ ಗ್ರಾಮದ ಬಳಿಯ ಜಮೀನಿನಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿ ಸೆರೆ ಹಿಡಿದಿದ್ದಾರೆ.

ಮಂಗಳವಾರ ಬೆಳಿಗ್ಗೆ ಹಂಚೀಪುರ ಬಳಿ ಆನೆ ಕಾಣಿಸಿಕೊಂಡಿತ್ತು. ಅಭಿಮನ್ಯು, ಮಹೇಂದ್ರ, ಭೀಮ, ಗಣೇಶ್ ಸಾಕಾನೆಗಳನ್ನು ಇಲ್ಲಿಗೆ ಕರೆತಂದು ಕಾರ್ಯಚರಣೆ ನಡೆಸಿದರು.

ಮಧ್ಯಾಹ್ನ ಆನೆಗೆ ಅರಿವಳಿಕೆ ಮದ್ದು ನೀಡಿದ ಬಳಿಕ ಆನೆ ನಿತ್ರಾಣವಾಯಿತು. ನಾಲ್ಕು ಸಾಕಾನೆಗಳು ಸುತ್ತುವರಿದವು. ನಂತರ ಕ್ರೇನ್ ಮೂಲಕ ಲಾರಿಗೆ ಆನೆಯನ್ನು ಹಾಕಿ, ರಾಂಪುರ ಆನೆ ಶಿಬಿರಕ್ಕೆ ಕಳುಹಿಸಲಾಯಿತ್ತು.

ಆಯುರ್ವೇದ ಚಿಕಿತ್ಸೆ: ನಕಲಿ ವೈದ್ಯ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಪಕ್ಕದಲ್ಲಿ ಶೆಡ್ ಹಾಕಿಕೊಂಡು ಆಯುರ್ವೇದ ಚಿಕಿತ್ಸೆ ನೀಡುವುದಾಗಿ ಹೇಳಿ ಜನರಿಂದ ಹಣ ಪಡೆದು ವಂಚಿಸುತ್ತಿದ್ದ ನಕಲಿ ವೈದ್ಯ ಸೇರಿ 3 ಆರೋಪಿಗಳನ್ನು ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ರಾಜಸ್ಥಾನದ ಮೊಹಮ್ಮದ್ ಸಮೀನ್ ಅಲಿಯಾಸ್ ಡಾ. ಮಲ್ಲಿಕ್ (50), ಶೈಫ್ ಅಲಿ (25) ಹಾಗೂ ಮೊಹಮ್ಮದ್ ರಹೀಸ್ (55) ಬಂಧಿತರು. ನೆಲಮಂಗಲ ಬಳಿ ತಾತ್ಕಾಲಿಕ ಶೆಡ್ ಹಾಕಿಕೊಂಡಿದ್ದ ಮೂವರು, ಆರೋಗ್ಯ ಸಮಸ್ಯೆ ನಿವಾರಣೆ ಮಾಡುವುದಾಗಿ ಹೇಳಿ ಜನರನ್ನು ವಂಚಿಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಶಾಂತಿನಗರದ ಬಸಪ್ಪ ರಸ್ತೆಯ ನಿವಾಸಿ ಪಂಕಜ್ ಎಂಬುವರು ವಂಚನೆ ಬಗ್ಗೆ ದೂರು ನೀಡಿದ್ದರು. ತನಿಖೆ ಕೈಗೊಂಡು ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ₹ 3.50 ಲಕ್ಷ ನಗದು, 4 ಕಾರು ಹಾಗೂ 3 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು ಬಂಧಿಸಿರುವ ಆರೋಪಿಗಳು ಹಾಗೂ ಜಪ್ತಿ ಮಾಡಿದ ನಗದು

'ಪಂಕಜ್ ತಾಯಿ ಕಾಲುನೋವು ಸಮಸ್ಯೆಯಿಂದ ಬಳಲುತ್ತಿದ್ದರು. ಕೆಲ ದಿನಗಳ ಹಿಂದೆಯಷ್ಟೇ ನೋವಿನ ಜಾಗದಲ್ಲಿ ಕೀವು ತುಂಬಿಕೊಂಡಿತ್ತು. ಹಲವೆಡೆ ಚಿಕಿತ್ಸೆ ಪಡೆದರೂ ಪರಿಹಾರ ಸಿಕ್ಕಿರಲಿಲ್ಲ. ಪರಿಚಯಸ್ಥರೊಬ್ಬರ ಮೂಲಕ ಪಂಕಜ್ ಅವರನ್ನು ಸಂಪರ್ಕಿಸಿದ್ದ ಆರೋಪಿಗಳು, ತಮ್ಮ ಬಳಿ ಇರುವ ಔಷಧದಿಂದ ನೋವು ಗುಣವಾಗುತ್ತದೆ ಎಂದು ಹೇಳಿ ಒಂದು ಹನಿ ಔಷಧಕ್ಕೆ ₹ 4 ಸಾವಿರ ಎಂದು ಹೇಳಿ ಒಟ್ಟು ₹ 8.08 ಲಕ್ಷ ಪಡೆದಿದ್ದರು' ಎಂದು ಪೊಲೀಸರು ಹೇಳಿದರು.

ಬೆಂಗಳೂರು ನಗರ ವಿ.ವಿ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಹೇಳಿಕೆ

'160 ಬೋಧಕರ ನೇಮಕ ಪ್ರಕ್ರಿಯೆ ಶೀಘ್ರ ಆರಂಭ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಶೀಘ್ರದಲ್ಲೇ 160 ಬೋಧಕ ಮತ್ತು 120 ಬೋಧಕೇತರ ಕಾಯಂ ಸಿಬ್ಬಂದಿಯ ನೇಮಕಾತಿ ಪ್ರಕ್ರಿಯೆಯು ಆರಂಭವಾಗಲಿದೆ ಎಂದು ಕುಲಪತಿ ಪ್ರೊ. ಲಿಂಗರಾಜ ಗಾಂಧಿ ತಿಳಿಸಿದರು.

ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಪರಿಷತ್ತು (ನ್ಯಾಕ್) ಪುನರ್ ಮನನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ವಿಶ್ವವಿದ್ಯಾಲಯದಲ್ಲಿ ಆಡಳಿತ ಸುಧಾರಣೆ ಜತೆಗೆ ಶೈಕ್ಷಣಿಕ ಗುಣಮಟ್ಟ ಮತ್ತು ಸಂಶೋಧನೆಗೆ ಆದ್ಯತೆ ನೀಡಲಾಗುತ್ತಿದೆ' ಎಂದರು. 'ಒಂದೂವರೆ ಶತಮಾನಕ್ಕೂ ಹೆಚ್ಚು ಸುದೀರ್ಘ ಇತಿಹಾಸವಿರುವ ಸೆಂಟ್ರಲ್ ಕಾಲೇಜಿನ ಪಾರಂಪರಿಕ ಕಟ್ಟಡಗಳ ಪುನರುಜ್ಜೀವನ ಕಾರ್ಯವು ಭರದಿಂದ ಸಾಗಿದೆ. ನೂತನ ಶೈಕ್ಷಣಿಕ ವಿಭಾಗ ಮತ್ತು ಕ್ರೀಡಾ ಸಂಕೀರ್ಣಗಳ ನಿರ್ಮಾಣ ಹಾಗೂ ಗ್ರಂಥಾಲಯ ಆಧುನೀಕರಣ ಕಾರ್ಯವೂ ಪ್ರಗತಿಯಲ್ಲಿದೆ' ಎಂದು ಅವರು ವಿವರಿಸಿದರು.

'ರಾಜ್ಯದ ದೊಡ್ಡ ವಿಶ್ವವಿದ್ಯಾಲಯಗಳ ಪೈಕಿ ಪ್ರಮುಖವಾಗಿರುವ ಬೆಂಗಳೂರು ನಗರ ವಿಶ್ವವಿದ್ಯಾಲಯವು 240 ಸಂಯೋಜಿತ ಮತ್ತು ಸ್ವಾಯುತ್ತ ಕಾಲೇಜುಗಳ ವ್ಯಾಪ್ತಿಯನ್ನು ಹೊಂದಿದ್ದು, ಸುಮಾರು 1.35 ಲಕ್ಷ ವಿದ್ಯಾರ್ಥಿಗಳ ಬೃಹತ್ ಸಮೂಹ ಹೊಂದಿದ್ದು ಕಳೆದ ನಾಲ್ಕೈದು ವರ್ಷಗಳ ಅವಧಿಯಲ್ಲಿ ಅಗಾಧ ಪ್ರಗತಿ ಸಾಧಿಸಿದೆ' ಎಂದು ಅವರು ಹೇಳಿದರು.

ಉಪನ್ಯಾಸ ನೀಡಿದ ನ್ಯಾಕ್ ಸಹಾಯಕ ಸಲಹೆಗಾರ ಡಾ. ವಿನಿತಾ ಸಾಹು, 'ವಿಶ್ವವಿದ್ಯಾಲಯಗಳು ಸಂಶೋಧನಾ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡುವುದರ ಜತೆಗೆ ಉದ್ಯಮ ವಲಯದ ಸಹಭಾಗಿತ್ವದೊಂದಿಗೆ ಉತ್ತಮ ಪ್ರಗತಿ ಸಾಧಿಸಬಹುದಾಗಿದೆ' ಎಂದು ಪ್ರತಿಪಾದಿಸಿದರು. ಬಿಸಿಯು ಕುಲಸಚಿವ ಸಿ.ಎನ್. ಶ್ರೀಧರ, ಪ್ರೊ. ವಿ. ಲೋಕೇಶ, ವಿತ್ತಾಧಿಕಾರಿ ಜಿ.ಪಿ ರಘು ಇದ್ದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ನಡೆದ ಪುನರ್‌ಮನನ ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಮಾತನಾಡಿದರು. ಕುಲಸಚಿವ ಸಿ.ಎನ್. ಶ್ರೀಧರ, ಡಾ. ವಿನಿತಾ ಸಾಹು ಇದ್ದರು

ಖಾಸಗಿ ಕಂಪನಿಗಳ ಟ್ಯಾಕ್ಸಿಗಳಿಗೆ ಅವಕಾಶ • ವಿಮಾನ ನಿಲ್ದಾಣ ಪ್ರಾಧಿಕಾರದ ವಿರುದ್ಧ ಅಸಮಾಧಾನ

ಕೆಎಸ್‌ಟಿಡಿಸಿ ಟ್ಯಾಕ್ಸಿ ಚಾಲಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆಎಸ್‌ಟಿಡಿಸಿ ಟ್ಯಾಕ್ಸಿಗಳನ್ನು ವಿಮಾನ ನಿಲ್ದಾಣದ ಸೇವೆಗೆ ಉಳಿಸುವಂತೆ ಒತ್ತಾಯಿಸಿ ಚಾಲಕರು ಶಾಸಕ ನಿಸರ್ಗ ನಾರಾಯಣ ಸ್ವಾಮಿ ಅವರಿಗೆ ಮನವಿ ಸಲ್ಲಿಸಿದರು

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ (ಕೆಎಸ್‌ಟಿಡಿಸಿ) ಟ್ಯಾಕ್ಸಿಗಳನ್ನು ಕಡೆಗಣಿಸಿ ಖಾಸಗಿ ಕಂಪನಿಗಳ ಟ್ಯಾಕ್ಸಿಗಳಿಗೆ ವಿಮಾನ ನಿಲ್ದಾಣ ಪ್ರಾಧಿಕಾರ ಅನುಕೂಲ ಮಾಡಿಕೊಡುತ್ತಿದೆ ಎಂದು ಆರೋಪಿಸಿ ಟ್ಯಾಕ್ಸಿ ಮಾಲೀಕರು, ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಕಾರು ಚಾಲಕರು ಮಂಗಳವಾರ ವಿಮಾನ ನಿಲ್ದಾಣ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

'2008 ರಿಂದಲೂ ಟ್ಯಾಕ್ಸಿ ಸೇವೆ ನೀಡುತ್ತಿದ್ದೇವೆ. ಆದರೆ, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಾಧಿಕಾರದ ಸಿಬ್ಬಂದಿ ಆ್ಯಪ್ ಆಧಾರಿತ ಓಲಾ, ಊಬರ್ ಸಂಸ್ಥೆಗಳೊಂದಿಗೆ ಒಳ ಒಪ್ಪಂದ ಮಾಡಿಕೊಂಡು ಅವರಿಗೆ ಅನುಕೂಲಕರ ವಾತಾವರಣ ಸೃಷ್ಟಿಸುತ್ತಿದ್ದಾರೆ. ಜತೆಗೆ ಕೆಎಸ್‌ಟಿಡಿಸಿ ಟ್ಯಾಕ್ಸಿ ಚಾಲಕರಿಗೆ ಕಿರುಕುಳ ನೀಡುತ್ತಿದ್ದಾರೆ' ಎಂದು ಚಾಲಕರ ಸಂಘಟನೆ ಅಧ್ಯಕ್ಷ ರಮೇಶ್ ಗೌಡ ಆರೋಪಿಸಿದರು.

ವಿಮಾನ ನಿಲ್ದಾಣದಲ್ಲಿದ್ದ ಕೌಂಟರ್ ಬಂದ್: ರಾಜ್ಯ ಪ್ರವಾಸೋದ್ಯಮ ಮಾಹಿತಿ ನೀಡಲು ವಿಮಾನ ನಿಲ್ದಾಣದಲ್ಲಿ ಕೌಂಟರ್ ತೆರೆಯಲಾಗಿತ್ತು. ಈಗ ಆ ಕೌಂಟರ್ ಬಂದ್ ಮಾಡಲಾಗಿದೆ. ಇದರಿಂದ ಕೆಎಸ್‌ಟಿಡಿಸಿ ಟ್ಯಾಕ್ಸಿ ಚಾಲಕರಿಗೆ ನಷ್ಟವಾಗಿದೆ ಎಂದು ಚಾಲಕ ಧರ್ಮೇಂದ್ರ ಡಿ.ಆರ್. ದೂರಿದರು.

'ಕೇಂದ್ರ ಸರ್ಕಾರದ ಅಧಿಸೂಚನೆಯಂತೆ ಡಿಜಿಟಲ್ ಫೇರ್ ಮೀಟರ್ ಅಳವಡಿಸಿಕೊಂಡು, ನ್ಯಾಯಯುತವಾಗಿ ಬಾಡಿಗೆ ಪಡೆಯುತ್ತಿದ್ದೇವೆ. ಓಲಾ, ಊಬರ್ ರೀತಿ ಗಂಟೆಗೊಂದು ದರ ನಮ್ಮಲ್ಲಿ ಇಲ್ಲ' ಎಂದರು.

ಕಾನೂನು ಬಾಹಿರ ಕಾರ್ಯಾಚರಣೆ: 'ಓಲಾ ಮತ್ತು ಊಬರ್‌ನವರ ಟ್ಯಾಕ್ಸಿ ಅಗ್ರಿಗೇಟರ್ ಪರವಾನಗಿ ಮುಕ್ತಾಯವಾಗಿದ್ದರೂ ವಿಮಾನ ನಿಲ್ದಾಣದ ಲ್ಯಾಂಡ್ ಸೈಡ್ ಮುಖ್ಯಸ್ಥರಾದ ವಿಶಾಲ್, ಸಂಜಯ್ ಚಂದ್ರ, ಮುಕೇಶ್ ಮತ್ತು ಗಜೇಂದ್ರ ಕಾನೂನು ಬಾಹಿರವಾಗಿ ಖಾಸಗಿ ಕಾರುಗಳ ಕಾರ್ಯಾಚರಣೆಗೆ ಅವಕಾಶ ನೀಡಿದ್ದಾರೆ. ಸಾರಿಗೆ ಇಲಾಖೆ ಅಧಿಕಾರಿಗಳು ಮೌನ ವಹಿಸಿದ್ದಾರೆ' ಎಂದು ಕೆಂ.ಅಂ.ವಿ ಟ್ಯಾಕ್ಸಿ ಚಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ಜಗನ್ನಾಥ್ ಆರೋಪಿಸಿದರು.

ಕಿರುಕುಳ: ಚಾಲಕರ ಹಕ್ಕುಗಳನ್ನು ವಿಮಾನ ನಿಲ್ದಾಣದ ಅಧಿಕಾರಿಗಳ ಗಮನಕ್ಕೆ ತಂದರೆ, ಸುಖಾಸುಮ್ಮನೆ ದಂಡ ವಿಧಿಸುವುದು, ಪ್ರಯಾಣಿಕರು ಇದ್ದರೂ ಅವರಿಗೆ ಟ್ಯಾಕ್ಸಿ ದೊರೆಯದಂತೆ ಮಾಡುವುದು. ವೈಯಕ್ತಿಕವಾಗಿ ಟ್ರಿಪ್ ಮಾಡುತ್ತಿದ್ದೀರಿ ಎಂದು ಆರೋಪಿಸಿ ಟ್ಯಾಕ್ಸಿಗಳನ್ನು ಕಪ್ಪುಪಟ್ಟಿಗೆ ಸೇರಿಸುವ ಮೂಲಕ ಕಿರುಕುಳ ನೀಡಲಾಗುತ್ತಿದೆ. ಅಧಿಕಾರಿಗಳ ವರ್ತನೆಯಿಂದ ಒಂಬತ್ತು ಚಾಲಕರು ಹೃದಯಾಘಾತದಿಂದ ಮೃತರಾಗಿದ್ದಾರೆ.

ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾದರೂ ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ ಎಂದು ಚಾಲಕರು ದೂರಿದರು.

ಕೆಎಸ್‌ಟಿಡಿಸಿ ಉಳಿಸಿ: ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಶಾಸಕ ನಿಸರ್ಗ ನಾರಾಯಣಸ್ವಾಮಿ ಚಾಲಕರಿಂದ ಮನವಿ ಪತ್ರ ಸ್ವೀಕರಿಸಿ ಮಾತನಾಡಿ, 'ವಿಮಾನ ನಿಲ್ದಾಣ ಅಧಿಕಾರಿಗಳು ಚಾಲಕರ ಕ್ಷೇಮಾಭಿವೃದ್ಧಿಗೆ ಸಹಕರಿಸುವಂತಹ ನಿರ್ಧಾರ ಕೈಗೊಳ್ಳಬೇಕು. ತ್ವರಿತವಾಗಿ ಪ್ರವಾಸೋದ್ಯಮ ಇಲಾಖೆ ಟ್ಯಾಕ್ಸಿಗಳಿಗೆ ಮೊದಲ ಆದ್ಯತೆಯಲ್ಲಿ ಟ್ರಿಪ್ ನೀಡಬೇಕು. ವಿಮಾನ ನಿಲ್ದಾಣ ಪ್ರಾರಂಭದ ದಿನಗಳಿಂದ ಇರುವವರನ್ನು ಒಕ್ಕಲೆಬ್ಬಿಸುವ ಕೆಲಸ ಸಲ್ಲದು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಖಾಸಗಿ ಲಾಬಿ: ಕೃತಕ ಅಭಾವ ಸೃಷ್ಟಿ

ವಿಮಾನ ನಿಲ್ದಾಣದಲ್ಲಿ ಟ್ಯಾಕ್ಸಿಗಳ ಅಭಾವವಿದೆ ಎಂದು ಸರ್ಕಾರ ಹಾಗೂ ಪ್ರಾಧಿಕಾರಗಳಿಗೆ ಸುಳ್ಳು ವರದಿ ನೀಡಿ ಖಾಸಗಿ ಕಂಪನಿಗಳಿಂದ ಹೆಚ್ಚುವರಿ ಟ್ಯಾಕ್ಸಿ ಸೇವೆ ಒದಗಿಸಲು ದೊಡ್ಡ ಮಟ್ಟದಲ್ಲಿ ಷಡ್ಯಂತ್ರ ರೂಪಿಸಲಾಗಿದೆ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಗಳು ಹೇಳಿದ್ದಾರೆ.

ವಿಮಾನ ನಿಲ್ದಾಣದಿಂದ ಕೆಎಸ್‌ಟಿಡಿಸಿ ನಿತ್ಯ 3,000 ಟ್ರಿಪ್ ಟ್ಯಾಕ್ಸಿ ಓಡಿಸುತ್ತಿದೆ. ಪ್ರತಿ ತಿಂಗಳೂ ₹50 ಲಕ್ಷಕ್ಕಿಂತ ಅಧಿಕ ಶುಲ್ಕವನ್ನು ವಿಮಾನ ನಿಲ್ದಾಣ ಪಡೆಯುತ್ತಿದೆ.

ಒಟ್ಟಿನಲ್ಲಿ ಕೆಎಸ್‌ಟಿಡಿಸಿ ಟ್ಯಾಕ್ಸಿ ಸೇವೆಯನ್ನು ಪೂರ್ತಿಯಾಗಿ ಸ್ಥಗಿತ ಮಾಡಲು ಅಧಿಕಾರಿಗಳು, ಖಾಸಗಿ ಸಂಸ್ಥೆಗಳ ಲಾಬಿ ಯತ್ನಿಸುತ್ತಿದೆ ಎಂದು ಅವರು ಮಾಹಿತಿ ನೀಡಿದರು.

ಖಾಸಗಿ ಕಂಪನಿ ಪಾಲಾದ ಪಾರ್ಕಿಂಗ್

2008ರಲ್ಲಿ ಕೆಎಸ್‌ಟಿಡಿಸಿ ಕಾರುಗಳ ಪಾರ್ಕಿಂಗ್‌ಗೆ 400 ವಾಹನ ನಿಲ್ಲಿಸುವಷ್ಟು ಜಾಗ ಕಲ್ಪಿಸಲಾಗಿತ್ತು. ಆದರೆ, ಈಗ ಕೇವಲ 30 ಕಾರು ನಿಲುಗಡೆಗಷ್ಟೇ ಜಾಗ ಉಳಿದಿದೆ. ಈ ಜಾಗದಲ್ಲಿ ಕೆಎಸ್‌ಟಿಡಿಸಿ ಬಿಟ್ಟಿಯಾಗಿ ಕಾರು ನಿಲ್ಲಿಸುವುದಿಲ್ಲ. ಪ್ರತಿ ಟ್ರಿಪ್‌ಗೆ ₹120ರಂತೆ ವಿಮಾನ ನಿಲ್ದಾಣ ಶುಲ್ಕ ಪಾವತಿಸುತ್ತೇವೆ. ಆದಾಗ್ಯೂ, ವಿಮಾನ ನಿಲ್ದಾಣದಲ್ಲಿ ಖಾಸಗಿ ಕಂಪನಿಗಳಿಗೆ ಹೆಚ್ಚು ಪಾರ್ಕಿಂಗ್ ಸ್ಥಳವಕಾಶ ಕಲ್ಪಿಸಲಾಗಿದ್ದು, ಸರ್ಕಾರಿ ಪ್ರಾಯೋಜಿತ ಕಾರುಗಳಿಗೆ ಅನ್ಯಾಯವೆಸಗಲಾಗುತ್ತಿದೆ ಎಂದು ಚಾಲಕರು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ರೇಸ್

ಮೂನ್‌ಲೈಟ್ ಕ್ವೀನ್ ಗೆಲ್ಲುವ ನಿರೀಕ್ಷೆ

ಮೈಸೂರು ಬುಕ್‌ಮೇಕರ್ಸ್ ಅಸೋಸಿಯೇಷನ್ ಜುವೆನೈಲ್ ಮಿಲಿಯನ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮೂನ್‌ಲೈಟ್ ಕ್ವೀನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 01.00ಕ್ಕೆ ಪ್ರಾರಂಭವಾಗಲಿರುವ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಬಾಕಸ್ 1, ಲೀಡ್ ಸಿಂಗರ್ 2, ಪವರ್ ಪೋರ್ಟ್ 3
2ನೇ ರೇಸ್: ಕಂಟ್ರೀಸ್ ಪೇಸ್ 2, ಮಿಸ್ ಬೈನಾ 5, ರಾಯಲ್ ಟೈಟಲ್ 4,
3ನೇ ರೇಸ್: ಸ್ಟೋನ್ ಹೌಸ್ 4, ಸ್ವಿಸ್ ಟೈಗ್ರೆಸ್ 3, ಡೀಮಸ್ 2
4ನೇ ರೇಸ್: ಮೆಡೋ ಫ್ಲವರ್ 4, ಐ ದಿ ಮೈಂಡ್ 3, ಎನ್‌ಆರ್‌ಐ ಮಿಲ್ಲೇನಿಯಮ್ 2
5ನೇ ರೇಸ್: ಗ್ಯಾಮ 6, ಜ್ಯುವೆಲ್ ಥೀಫ್ 1, ಅಮೇಜೋನಿಯ 4
6ನೇ ರೇಸ್: ಫ್ಲಮಿಂಗೋ ಡ್ಯಾನ್ಸರ್ 6, ಸಮಯ್ ಬಲ್ವಾನ್ 7, ಬ್ರೇಕ್ ಅವೇ 5
7ನೇ ರೇಸ್: ಮೂನ್‌ಲೈಟ್ ಕ್ವೀನ್ 9, ಸೆನ್ಸೇಷನಲ್ ಟೈಟಲ್ 12, ರನ್ನಿಂಗ್ ಬೋಲ್ಟ್ 11
8ನೆ ರೇಸ್: ಅಚೂಕ್ 1, ಮ್ಯಾಜಿಕ್ ಸರ್ಕಲ್ 3, ಕಾಪರ್ ಸನ್‌ರೈಸ್ 8
9ನೇ ರೇಸ್: ಗಿನ್‌ಟೋಕಿ 7, ಹೀರೋಡೊಟಸ್ 10, ಸರ್ ಕ್ಯಾಲ್ಕುಲಸ್ 8

ಉತ್ತಮ ಬೆಟ್: ಗ್ಯಾಮ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ಚಿತ್ರಾವಳಿ

ಮಹದೇವಪುರ ಕ್ಷೇತ್ರದ ಹೂಡಿ ವಾರ್ಡ್‌ನ ಸಾದರಮಂಗಲ ಶಕ್ತಿ ಕೇಂದ್ರದ ವ್ಯಾಪ್ತಿಯಲ್ಲಿ ಆಗಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ವಿವರವುಳ್ಳ ನೂತನ ವರ್ಷದ ಕ್ಯಾಲೆಂಡರ್ ಅನ್ನು ಶಾಸಕ ಅರವಿಂದ ಲಿಂಬಾವಳಿ ಬಿಡುಗಡೆ ಮಾಡಿದರು. ಕ್ಷೇತ್ರದ ಅಧ್ಯಕ್ಷ ಮನೋಹರರೆಡ್ಡಿ, ಗ್ರಾಮಾಂತರ ಅಧ್ಯಕ್ಷ ನಟರಾಜ್, ಮುಖಂಡರಾದ ಮಂಜುನಾಥ್, ಹೂಡಿ ಪಿಳ್ಳಪ್ಪ ಇದ್ದರು.

ರಾಮಮೂರ್ತಿನಗರದ ಅಂಬೇಡ್ಕರ್ ನಗರದಲ್ಲಿ ಕನ್ನಡ ರಾಜ್ಯೋತ್ಸವದಲ್ಲಿ ಮುಖಂಡ ಆರ್.ಮಂಜುನಾಥ್ ಅವರು ವಿದ್ಯಾರ್ಥಿಗಳನ್ನು ಸನ್ಮಾನಿಸಿದರು. ಬಿಜೆಪಿ ಮುಖಂಡ ಎಂ.ಭಕ್ತಣ್ಣ, ಶ್ರೀರಾಮರೆಡ್ಡಿ, ಮೈಸೂರು ನಾರಾಯಣಸ್ವಾಮಿ, ಚಂದ್ರು ಇದ್ದರು.

ಹೆಗ್ಗನಹಳ್ಳಿಯಲ್ಲಿ ನಡೆದ ಉಚಿತ ನೇತ್ರ ತಪಾಸಣಾ ಶಿಬಿರದಲ್ಲಿ ವ್ಯಕ್ತಿಗೆ ಡಾ.ನಾಗಲಕ್ಷ್ಮಿ ಅವರು ಕನ್ನಡಕ ವಿತರಿಸಿದರು. ಕಾಂಗ್ರೆಸ್ ಮುಖಂಡರಾದ ಗೋವಿಂದರಾಜು, ರವಿಕುಮಾರ್, ಜಗದೀಶ್ ಇದ್ದರು.

ಕಣ್ಣು ದಾನಕ್ಕೆ ಸಲಹೆ

ಪೀಣ್ಯ ದಾಸರಹಳ್ಳಿ: 'ದೇಶದಲ್ಲಿ ಲಕ್ಷಾಂತರ ಜನರು ಕಣ್ಣುಗಳಿಲ್ಲದೇ ಬದುಕು ಸಾಗಿಸುತ್ತಿದ್ದಾರೆ. ಅಂಥವರ ಪಾಲಿಗೆ ನೇತ್ರ ದಾನದ ಮೂಲಕ ಬೆಳಕು ನೀಡಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಎಲ್ಲರೂ ಸಾವಿನ ಬಳಿಕ ಕಣ್ಣು ದಾನ ಮಾಡಲು ಮುಂದಾಗಬೇಕು' ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಾ.ನಾಗಲಕ್ಷ್ಮಿ ಹೇಳಿದರು.

ಹೆಗ್ಗನಹಳ್ಳಿಯಲ್ಲಿ ಡಾ. ನಾಗಲಕ್ಷ್ಮಿ ಫೌಂಡೇಷನ್ ವತಿಯಿಂದ ಉಚಿತ ನೇತ್ರ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

'ಜೀವನದಲ್ಲಿ ಸಾವು ಖಚಿತವಾಗಿದ್ದರೂ ನಾವು ಸುಖ, ಸಂಪತ್ತು, ಆಸ್ತಿ, ಅಂತಸ್ತು ಹುಡುಕುವುದರಲ್ಲಿ ಹಣಗಳಿಸುವುದರಲ್ಲಿಯೇ ಕಾಲ ಕಳೆಯುತ್ತಿದ್ದೇವೆ. ಪರೋಪಕಾರ ಎಂಬುದು ಗೌಣವಾಗಿವಾಗಿದೆ' ಎಂದು ವಿಷಾದಿಸಿದರು.

ಶಿಬಿರದಲ್ಲಿ 600ಕ್ಕೂ ಅಧಿಕ ಜನರ ನೇತ್ರಗಳನ್ನು ವೈದ್ಯರು ತಪಾಸಣೆ ಮಾಡಿದರು. 20 ಜನರಿಗೆ ಶಸ್ತ್ರ ಚಿಕಿತ್ಸೆಗೆ ಸೂಚಿಸಲಾಯಿತು. ನಾರಾಯಣ ನೇತ್ರಾಲಯದ ಸಿಬ್ಬಂದಿ ತಪಾಸಣೆ ಮಾಡಿದರು. ಕಾಂಗ್ರೆಸ್ ಮುಖಂಡರಾದ ಗೋವಿಂದರಾಜು, ರವಿಕುಮಾರ್, ಜಗದೀಶ್ ಹಾಜರಿದ್ದರು.

ಖೋಟಾ ನೋಟು– ಇಬ್ಬರ ಸೆರೆ

ಮಂಗಳೂರು: ಖೋಟಾ ನೋಟು ಸಾಗಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಕದ್ರಿ ಠಾಣೆಯ ಪೊಲೀಸರು ನಂತೂರಿನ ಬಳಿ ಸೋಮವಾರ ಬಂಧಿಸಿದ್ದಾರೆ. ಆರೋಪಿಗಳಿಂದ ₹ 500 ಮುಖಬೆಲೆಯ ಖೋಟಾ ನೋಟುಗಳನ್ನು ವಶಪಡಿಸಿಕೊಂಡಿದ್ದು, ಅದರ ಮೊತ್ತ ₹ 4.50 ಲಕ್ಷ.

ಬಂಟ್ವಾಳ ತಾಲ್ಲೂಕಿನ ಬಿ.ಸಿ.ರೋಡ್ ನಿವಾಸಿ ನಿಜಾಮುದ್ದೀನ್ ಅಲಿಯಾಸ್ ನಿಜಾಮ್ (32) ಮತ್ತು ಮಂಗಳೂರು ಜೆಪ್ಪು ನಿವಾಸಿ ರಜೀಮ್ ಅಲಿಯಾಸ್ ರಾಫಿ (31) ಬಂಧಿತ ಆರೋಪಿಗಳು.

ಈ ಕುರಿತು ಮಾಹಿತಿ ನೀಡಿದ ನಗರ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್, 'ಪೊಲೀಸರು ನಂತೂರು ವೃತ್ತದ ಬಳಿ ವಾಹನಗಳ ತಪಾಸಣೆ ನಡೆಸುತ್ತಿದ್ದರು. ಈ ವೇಳೆ ಪೊಲೀಸರನ್ನು ಕಂಡ ಆರೋಪಿಗಳು ದ್ವಿಚಕ್ರ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಹೋಗಿದ್ದಾರೆ. ಅವರ ಈ ನಡೆಯಿಂದ ಅನುಮಾನಗೊಂಡ ಪೊಲೀಸ್ ಸಿಬ್ಬಂದಿ ಅವರನ್ನು ಬೆನ್ನಟ್ಟಿದ್ದರು. ಅವರನ್ನು ವಶಕ್ಕೆ ಪಡೆದು ತಪಾಸಣೆ ನಡೆಸಿದಾಗ ₹ 4.50 ಲಕ್ಷ ಮೊತ್ತದ ₹ 500 ಮುಖಬೆಲೆಯ ಖೋಟಾ ನೋಟುಗಳು ಅವರ ಬಳಿ ಪತ್ತೆಯಾಗಿದ್ದವು' ಎಂದರು.

'ಬೆಂಗಳೂರಿನ ಡೇನಿಯಲ್ ಎಂಬಾತನಿಂದ ಖೋಟಾ ನೋಟುಗಳನ್ನು ಪಡೆದು ಚಲಾವಣೆ ಮಾಡಲು ಯತ್ನಿಸಿರುವುದಾಗಿ ಆರೋಪಿಗಳು ತಿಳಿಸಿದ್ದಾರೆ. ಡೇನಿಯಲ್‌ನನ್ನು ಬೆಂಗಳೂರಿನ ಪೊಲೀಸರು ಬೇರೆ ಪ್ರಕರಣದಲ್ಲಿ ಈಗಾಗಲೇ ಬಂಧಿಸಿದ್ದಾರೆ. ಈ ಖೋಟಾ ನೋಟುಗಳು ಕೊಯಮತ್ತೂರಿನಲ್ಲಿ ಮುದ್ರಣಗೊಂಡಿವೆ. ಸಾಲ ಮರುಪಾವತಿಯ ಉದ್ದೇಶಕ್ಕಾಗಿ ಖೋಟಾ ನೋಟುಗಳನ್ನು ಪಡೆದಿದ್ದಾಗಿ ಆರೋಪಿಗಳು ತಿಳಿಸಿದ್ದಾರೆ' ಎಂದು ಅವರು ತಿಳಿಸಿದರು.

2,44,481 ಅರ್ಜಿಗಳು ತಿರಸ್ಕೃತ

ಅರಣ್ಯಹಕ್ಕು ಕಾಯ್ದೆ: 16,127 ಪ್ರಕರಣಗಳಲ್ಲಿ ಭೂಮಿ ಹಕ್ಕುಪತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಹಕ್ಕು ಕಾಯ್ದೆ–2006 ರಡಿ 2022ರ ನವೆಂಬರ್ ಅಂತ್ಯದವರೆಗೆ ಒಟ್ಟು 2,94,292 ಅರ್ಜಿಗಳು ಸಲ್ಲಿಕೆಯಾಗಿದ್ದು, ಈ ಪೈಕಿ 2,44,481 ಅರ್ಜಿಗಳು ತಿರಸ್ಕೃತಗೊಂಡಿವೆ.

16,127 ಪ್ರಕರಣಗಳಲ್ಲಿ ಭೂಮಿ ಹಕ್ಕುಪತ್ರ ವಿತರಿಸಿದ್ದು, ಫಲಾನುಭವಿಗಳಿಗೆ 56,406 ಎಕರೆ ಭೂಮಿ ಮಂಜೂರು ಮಾಡಲಾಗಿದೆ. ಇನ್ನೂ 33,684 ಅರ್ಜಿಗಳು ಬಾಕಿ ಉಳಿದಿವೆ.

ತಲೆತಲಾಂತರಗಳಿಂದ ಅರಣ್ಯಗಳಲ್ಲಿ ವಾಸಿಸುತ್ತಿದ್ದರೂ ಅರಣ್ಯವಾಸಿಗಳ ಹಕ್ಕುಗಳನ್ನು ದಾಖಲಿಸದೇ ಇರುವ, ಅರಣ್ಯವಾಸಿ ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳಿಗೆ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಹಾಗೂ ದಾಖಲಿಸುವ ಅವಕಾಶವನ್ನು ಈ ಕಾಯ್ದೆ ನೀಡಿದೆ.

ಇದರಡಿ ಪರಿಶಿಷ್ಟ ಪಂಗಡದವರಿಂದ 47,713 ಅರ್ಜಿ ಸಲ್ಲಿಕೆಯಾಗಿದೆ. 12,762 ಪ್ರಕರಣಗಳಲ್ಲಿ ಹಕ್ಕುಪತ್ರ ವಿತರಿಸಿದ್ದು, 17,653 ಎಕರೆ ಜಮೀನು ವಿತರಿಸಲಾಗಿದೆ. 32,960 ಅರ್ಜಿಗಳು ತಿರಸ್ಕೃತಗೊಂಡಿದ್ದು, 1,991 ಅರ್ಜಿಗಳು ಇತ್ಯರ್ಥವಾಗಿಲ್ಲ ಎಂದು ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ ಮೂಲಗಳು ತಿಳಿಸಿವೆ.

ಇತರೇ ಪಾರಂಪರಿಕ ಕ್ಲೇಮುದಾರರೇ ಹೆಚ್ಚಿನ ಪ್ರಮಾಣದಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಈ ವಿಭಾಗದಲ್ಲಿ 2,42,640 ಅರ್ಜಿಗಳು ಸಲ್ಲಿಕೆಯಾಗಿದ್ದು, ಈ ಪೈಕಿ 2,07,750 ಅರ್ಜಿಗಳು ತಿರಸ್ಕೃತವಾಗಿವೆ. 2,021 ಅರ್ಜಿಗಳು ಪುರಸ್ಕೃತಗೊಂಡಿದ್ದು, 2,415 ಎಕರೆ ಭೂಮಿ ಮಂಜೂರು ಮಾಡಲಾಗಿದೆ.20,869 ಅರ್ಜಿಗಳ ಇತ್ಯರ್ಥವಾಗಿಲ್ಲ.

ಅಲ್ಲದೇ, ಸಮುದಾಯ ಹಕ್ಕುಗಳ ವಿಭಾಗದಲ್ಲಿ 5,999 ಅರ್ಜಿಗಳು ಸಲ್ಲಿಕೆಯಾಗಿದ್ದು, 1,344 ಅರ್ಜಿಗಳು ಪುರಸ್ಕೃತಗೊಂಡಿದ್ದು, 36,340.55 ಎಕರೆ ಜಮೀನು ಮಂಜೂರು ಮಾಡಲಾಗಿದೆ. 3,771 ಅರ್ಜಿಗಳು ತಿರಸ್ಕೃತಗೊಂಡಿದ್ದು, 824 ಅರ್ಜಿಗಳು ಇತ್ಯರ್ಥಕ್ಕೆ ಬಾಕಿ ಉಳಿದಿವೆ.

ಕಾಯ್ದೆಯ ಪ್ರಕಾರ 2005ರ ಡಿಸೆಂಬರ್ 13 ಕ್ಕೂ ಮುಂಚೆ ಅನುಸೂಚಿತ ಬುಡಕಟ್ಟುಗಳು ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರಬೇಕು. ಇಲ್ಲವೇ ಜೀವನೋಪಾಯಕ್ಕಾಗಿ ಅರಣ್ಯವನ್ನು ಅವಲಂಬಿಸಿರಬೇಕು. ಇತರೆ ಪಾರಂಪರಿಕ ಅರಣ್ಯವಾಸಿಯೆಂದರೆ 2005 ರ ಡಿಸೆಂಬರ್ 13 ಕ್ಕೂ ಮುಂಚೆ ಕೊನೆಯ ಪಕ್ಷ ಮೂರು ತಲೆಮಾರಿನವರೆಗೆ (ಒಂದು ತಲೆಮಾರು ಎಂದರೆ 25 ವರ್ಷಗಳ ಅವಧಿ) ಅರಣ್ಯದಲ್ಲಿ ವಾಸಿಸುತ್ತಿರುವ ಅಥವಾ ಜೀವನೋಪಾಯಕ್ಕಾಗಿ ಯಾವುದೇ ವ್ಯಕ್ತಿ ಅರಣ್ಯ ಜಮೀನಿನ ಮೇಲೆ ಅವಲಂಬಿತರಾಗಿರಬೇಕು.

ನೆಫ್ರೊ ಯುರಾಲಜಿ: 5 ವರ್ಷ ಕಳೆದರೂ ಕಟ್ಟಡ ಅಪೂರ್ಣ

ಪ್ರಜಾವಾಣಿ ವಾರ್ತೆ



ನಿರ್ಮಾಣ ಹಂತದಲ್ಲಿರುವ ನೆಫ್ರೊ ಯುರಾಲಜಿ ಸಂಸ್ಥೆಯ 150 ಹಾಸಿಗೆಗಳ ಕಟ್ಟಡ –ಪ್ರಜಾವಾಣಿ ಚಿತ್ರ

ಬೆಂಗಳೂರು: ಕೋವಿಡ್ ಹಾಗೂ ಅನುದಾನದ ಕೊರತೆಯಿಂದಾಗಿ ಐದು ವರ್ಷಗಳಾದರೂ ನೆಫ್ರೊ ಯುರಾಲಜಿ ಸಂಸ್ಥೆಯ 150 ಹಾಸಿಗೆಗಳ ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿಲ್ಲ. ಇದರಿಂದಾಗಿ ಮೂತ್ರಪಿಂಡ ಸಮಸ್ಯೆ ಎದುರಿಸುತ್ತಿರುವ ರೋಗಿಗಳಿಗೆ ಚಿಕಿತ್ಸೆ ಸಮಸ್ಯೆಯಾಗಿದೆ.

ಡಯಾಲಿಸಿಸ್ ಹಾಗೂ ಮೂತ್ರಪಿಂಡಕ್ಕೆ ಸಂಬಂಧಿಸಿದ ವಿವಿಧ ಚಿಕಿತ್ಸೆಗಳಿಗೆ ಸಂಸ್ಥೆಗೆ ರಾಜ್ಯದ ವಿವಿಧೆಡೆಯಿಂದ ರೋಗಿಗಳು ಬರುತ್ತಾರೆ. ಸದ್ಯ ಸಂಸ್ಥೆಯಲ್ಲಿ 20 ಡಯಾಲಿಸಿಸ್ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಪ್ರತಿನಿತ್ಯ 80 ರಿಂದ 90 ಮಂದಿಗೆ ಡಯಾಲಿಸಿಸ್ ಮಾಡಲಾಗುತ್ತಿದೆ. ಸುಮಾರು 300 ರೋಗಿಗಳು ನಿತ್ಯ ಸಂಸ್ಥೆಗೆ ಭೇಟಿ ನೀಡುತ್ತಾರೆ. ರೋಗಿಗಳ ಸಂಖ್ಯೆ ಹೆಚ್ಚಳದಿಂದ 2016ರಲ್ಲಿಯೇ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ 150 ಹಾಸಿಗೆಗಳ ಕಟ್ಟಡ ನಿರ್ಮಾಣಕ್ಕೆ ಅಡಿಗಲ್ಲು ಹಾಕಲಾಗಿತ್ತು. 2018ರಲ್ಲಿ ನಿರ್ಮಾಣ ಕಾಮಗಾರಿ ಪ್ರಾರಂಭವಾಗಿತ್ತು. ಆದರೆ, ಈವರೆಗೂ ಕಾಮಗಾರಿ ಪೂರ್ಣಗೊಂಡಿಲ್ಲ.

ಕಟ್ಟಡ ಕಾಮಗಾರಿ ಪ್ರಾರಂಭದ ವೇಳೆ ₹ 18.4 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿತ್ತು. ನಿರ್ಮಾಣ ಸಾಮಗ್ರಿಗಳ ವೆಚ್ಚ ಹೆಚ್ಚಳ ಹಾಗೂ ಹೊಸ ಘಟಕಗಳ ಸೇರ್ಪಡೆಯಿಂದ ಮತ್ತೆ ₹ 8 ಕೋಟಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸರ್ಕಾರದ ಅನುಮೋದನೆ ದೊರೆಯದಿರುವುದು ಕಾಮಗಾರಿಗೆ ಹಿನ್ನಡೆಯಾಗಿದೆ. ನೂತನ ಕಟ್ಟಡವು 30 ಹಾಸಿಗೆಗಳ ಡಯಾಲಿಸಿಸ್ ಘಟಕ, 20 ಹಾಸಿಗೆಗಳ ತೀವ್ರ ನಿಗಾ ಘಟಕವನ್ನೂ ಒಳಗೊಂಡಿರಲಿದೆ.

'ಮೂರು ಮಹಡಿಯಲ್ಲಿ ಎರಡು ಮಹಡಿಯ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ. ಸದ್ಯ ಬಣ್ಣ ಮತ್ತು ಕೊಳಾಯಿ ಕೆಲಸ ಬಾಕಿ ಉಳಿದಿದೆ. ಡಯಾಲಿಸಿಸ್, ಐಸಿಯು ಘಟಕಗಳ ನಿರ್ಮಾಣ ಕಾಮಗಾರಿ ಬಾಕಿ ಉಳಿದಿದೆ. ಅಂದಾಜು ವೆಚ್ಚ ಈಗ ಹೆಚ್ಚಳವಾಗಿದೆ' ಎಂದು ಸಂಸ್ಥೆಯ ನಿರ್ದೇಶಕ ಡಾ. ಕೇಶವಮೂರ್ತಿ ತಿಳಿಸಿದರು.

'ಕೋವಿಡ್ ಕಾಣಿಸಿಕೊಂಡ ಬಳಿಕ ಲಾಕ್‌ಡೌನ್‌ನಿಂದಾಗಿ ಕಟ್ಟಡ ನಿರ್ಮಾಣ ಕಾಮಗಾರಿ ಸ್ಥಗಿತವಾಗಿತ್ತು. ಇದು ಕೂಡ ವಿಳಂಬಕ್ಕೆ ಕಾರಣ. ಸದ್ಯ ಕಾಮಗಾರಿ ನಡೆಯುತ್ತಿದ್ದು, ಆದಷ್ಟು ಶೀಘ್ರ ಸೇವೆ ಪ್ರಾರಂಭಿಸಲಾಗುವುದು' ಎಂದು ಹೇಳಿದರು.

ದಿನಾಂಕ ಇಲ್ಲದ ಪತ್ರ ಟ್ವೀಟ್: ಎಎಪಿ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಮಹದಾಯಿ ಮತ್ತು ಕಳಸಾ ಬಂಡೂರಿ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿ ದಂತೆ ಕೇಂದ್ರ ಜಲ ಆಯೋಗ(ಸಿಡಬ್ಲ್ಯುಸಿ) ಅನುಮತಿ ನೀಡಿದ ಕುರಿತು ದಿನಾಂಕವೇ ಇಲ್ಲದ ಪತ್ರವನ್ನು 2022ರ ಡಿ. 29ರಂದು ಟ್ವೀಟ್ ಮಾಡಿದ್ದಾರೆ' ಎಂದು ಆಮ್ ಆದ್ಮಿ ಪಕ್ಷ(ಎಎಪಿ) ಆಕ್ಷೇಪ ವ್ಯಕ್ತಪಡಿಸಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ಮುಖಂಡ ಬ್ರಿಜೇಶ್ ಕಾಳಪ್ಪ, 'ಮಹದಾಯಿ ಮತ್ತು ಕಳಸಾ ಬಂಡೂರಿ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೇಂದ್ರ, ರಾಜ್ಯದಲ್ಲಿರುವ ಬಿಜೆಪಿ ಸರ್ಕಾರಗಳು ರಾಜ್ಯದ ಜನರನ್ನು ವಂಚಿಸುತ್ತಿದ್ದಾರೆ. ಕೇವಲ ಚುನಾವಣೆಯ ಉದ್ದೇಶದಿಂದ ಕೇಂದ್ರ ಜಲ ಆಯೋಗವು ಅನುಮತಿ ನೀಡಿದೆ ಎಂದು ಬಿಂಬಿಸಲಾಗುತ್ತಿದೆ' ಎಂದರು.

ಬಿಜೆಪಿಯ ಡಬಲ್ ಎಂಜಿನ್ ಸರ್ಕಾರವು ಮಹದಾಯಿ ವಿವಾದದಲ್ಲಿ ರಾಜ್ಯಕ್ಕೆ ನ್ಯಾಯ ದೊರಕಿಸಿಕೊಟ್ಟಿದೆ ಎಂದು ಇಷ್ಟಕ್ಕೇ ಬಿಂಬಿಸುವುದು ಸರಿಯಲ್ಲ. ಕೇಂದ್ರ ಸರ್ಕಾರ 2010ರಲ್ಲಿ ಸುಪ್ರೀಂಕೋರ್ಟ್ ನ್ಯಾ. ಜೆ. ಎಂ. ಪಾಂಚಾಲ್ ಅವರ ನೇತೃತ್ವದಲ್ಲಿ ಮಹದಾಯಿ ನದಿ ವಿವಾದ ನ್ಯಾಯಮಂಡಳಿ ರಚಿಸಿತ್ತು. ಕರ್ನಾಟಕ, ಗೋವಾ ಹಾಗೂ ಮಹಾರಾಷ್ಟ್ರ ಸರ್ಕಾರಗಳ ವಾದಗಳನ್ನು ಆಲಿಸಿ 2018ರ ಅಗಸ್ಟ್ 14ರಂದು ನ್ಯಾಯಮಂಡಳಿಯು ತನ್ನ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿತ್ತು. ಆದರೆ ಆ ತೀರ್ಪಿನ ಅನುಷ್ಠಾನಕ್ಕೆ ಇಷ್ಟು ವರ್ಷ ಕಾಯುವ ಅಗತ್ಯವೇನಿತ್ತು' ಎಂದು ಪ್ರಶ್ನಿಸಿದರು.

ಮಹದಾಯಿ ಹೋರಾಟಗಾರ ಮತ್ತು ಎಎಪಿ ಮುಖಂಡ ವಿಕಾಸ್ ಸೊಪ್ಪಿನ್ ಮಾತನಾಡಿ, 'ಬಿಜೆಪಿಯು ಈ ವಿಚಾರದಲ್ಲಿ ಬೀಗಬೇಕಾದ ಅಗತ್ಯವಿಲ್ಲ. ಬದಲಾಗಿ, ಈ ಯೋಜನೆಯಿಂದ ಅನುಕೂಲ ಪಡೆಯಬಹುದಾದ ಹುಬ್ಬಳ್ಳಿ-ಧಾರವಾಡ, ನರಗುಂದ, ನವಲಗುಂದ, ಬಾದಾಮಿ, ರೋಣ, ಗದಗ ಹಾಗೂ ಸುಮಾರು 100 ಗ್ರಾಮಗಳಿಗೆ ಶೀಘ್ರವೇ ಕುಡಿಯುವ ನೀರು ಒದಗಿಸಲು ಗಂಭೀರ ಪ್ರಯತ್ನ ಮಾಡಲಿ' ಎಂದು ಹೇಳಿದರು.

ಶುದ್ಧಜಲ ಅಭಿಯಾನ

ಉಜಿರೆ (ದಕ್ಷಿಣ ಕನ್ನಡ): ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಜನವರಿ ತಿಂಗಳಿನಲ್ಲಿ ರಾಜ್ಯದೆಲ್ಲೆಡೆ ಶುದ್ಧಜಲ ಅಭಿಯಾನ ಆಯೋಜಿಸಿದ್ದು, ಒಂದು ಲಕ್ಷ ಜನರಿಗೆ ಶುದ್ಧ ಜಲ ಬಳಕೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಎಲ್.ಎಚ್. ಮಂಜುನಾಥ್ ತಿಳಿಸಿದ್ದಾರೆ.

ರಾಜ್ಯದಲ್ಲಿ ಶೇ 60ರಷ್ಟು ಪ್ರದೇಶಗಳಲ್ಲಿ ಕುಡಿಯುವ ನೀರಿನಲ್ಲಿ ಅಗತ್ಯ ಪ್ರಮಾಣಕ್ಕಿಂತ ಹೆಚ್ಚು ಫ್ಲೋರೈಡ್, ಶೇ 20ರಷ್ಟು ಅಧಿಕ ನೈಟ್ರೇಟ್ ಹಾಗೂ ಶೇ 30ರಷ್ಟು ಸೂಕ್ಷ್ಮಾಣುಗಳಿಂದ ನೀರು ಕಲುಷಿತವಾಗಿ ಜನರು ರೋಗಗಳಿಗೆ ತುತ್ತಾಗುತ್ತಿದ್ದಾರೆ. ಬೆಳಗಾವಿ, ಬೀದರ್, ಚಿತ್ರದುರ್ಗ, ದಾವಣಗೆರೆ, ಹಾಸನ, ಗದಗ, ಕೋಲಾರ ಮೊದಲಾದ ಕಡೆಗಳಲ್ಲಿ ಫ್ಲೋರೈಡ್ ಸಮಸ್ಯೆ ಅಧಿಕವಾಗಿ ಕಂಡು ಬಂದಿದೆ' ಎಂದರು.

ಅಭಿಯಾನದಲ್ಲಿ ಶಾಲಾ ಮಕ್ಕಳಿಗೆ ಮಾಹಿತಿ, ಜಾಥಾ, ಕರಪತ್ರ ಹಂಚಿಕೆ, ಬೀದಿನಾಟಕ, ಸಾರ್ವಜನಿಕರಿಗೆ ಮಾಹಿತಿ, ಮನೆಗಳಿಗೆ ಭೇಟಿ ಮೊದಲಾದ 400ಕ್ಕೂ ಮಿಕ್ಕಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಅನುದಾನ ಬಿಡುಗಡೆಗೂ ಕಮಿಷನ್: ಗುತ್ತಿಗೆದಾರರ ಸಂಘ

ಪ್ರಜಾವಾಣಿ ವಾರ್ತೆ

ಎ.ಡಿ. ಬಲರಾಮಯ್ಯ

ತುಮಕೂರು: 'ಸರ್ಕಾರದ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಹಣ ಕೊಟ್ಟರೆ ಮಾತ್ರ ಅನುದಾನ ಬಿಡುಗಡೆಯಾಗುತ್ತಿದೆ. ಅನೇಕ ಸಂದರ್ಭದಲ್ಲಿ ಶೇ 6ರಿಂದ ಶೇ 10ರಷ್ಟು ಕಮಿಷನ್ ಕೊಡಬೇಕಿದೆ' ಎಂದು ಗುತ್ತಿಗೆದಾರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಎ.ಡಿ. ಬಲರಾಮಯ್ಯ ಆರೋಪಿಸಿದ್ದಾರೆ.

'ರಾಜಕಾರಣಿಗಳಿಂದ ಹಿಡಿದು ಇಲಾಖೆಯಲ್ಲಿ ಚೆಕ್ ಬರೆಯುವ ಹಂತದವರೆಗೆ ಲಂಚ ಕೇಳುವುದು ಹಕ್ಕು ಎಂದುಕೊಂಡಿದ್ದಾರೆ. ಪ್ರತಿ ಇಲಾಖೆಯಲ್ಲಿ ಭ್ರಷ್ಟಾಚಾರ ಜಾಸ್ತಿಯಾಗಿದೆ' ಎಂದು ಅವರು ಇಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

'ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ₹10 ರಿಂದ ₹15 ಕೋಟಿ ನೀಡುತ್ತಿದ್ದಾರೆ. ಕಾಂಗ್ರೆಸ್, ಜೆಡಿಎಸ್ ಶಾಸಕರ ಕ್ಷೇತ್ರಗಳಿಗೆ ಹಣ ಕೊಡುವುದಿಲ್ಲ. ಹಣ ಕೊಟ್ಟವರಿಗೆ ಗುತ್ತಿಗೆ ನೀಡಿ, ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಈ ಹಿಂದೆ ಜನಸಂಖ್ಯೆ, ಭೌಗೋಳಿಕ ಆಧಾರದ ಮೇಲೆ ಹಣ ಬಿಡುಗಡೆ ಮಾಡುತ್ತಿದ್ದರು' ಎಂದರು. ಸಮಯಕ್ಕೆ ಸರಿಯಾಗಿ ಹಣ ಬಿಡುಗಡೆಯ ಭರವಸೆ ಪತ್ರ (ಎಲ್‌ಒಸಿ) ನೀಡಬೇಕು. ಜಿಎಸ್‌ಟಿ ಪ್ರಮಾಣವನ್ನು ಶೇ 18ರಿಂದ ಶೇ 12ಕ್ಕೆ ಇಳಿಸಬೇಕು. ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರಬೇಕು ಮತ್ತು ಭ್ರಷ್ಟಾಚಾರ ನಿರ್ಮೂಲನೆ ಮಾಡಬೇಕು ಎಂಬ ಪ್ರಮುಖ ಬೇಡಿಕೆ ಮುಂದಿಟ್ಟುಕೊಂಡು ಜ.10ರಂದು ಹೋರಾಟ ಮಾಡಲಾಗುತ್ತಿದೆ ಎಂದರು.

ಸಂಘದ ಪದಾಧಿಕಾರಿಗಳಾದ ಸುರೇಶ್‌ಕುಮಾರ್, ಕೋದಂಡರಾಮು, ಶಶಿಧರ್, ಬಿ.ಆರ್.ವೇಣುಗೋಪಾಲ್ ಕೃಷ್ಣ ಇದ್ದರು.

ಜ.10ರಂದು ಪ್ರತಿಭಟನೆ

ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಬಂಧನ ವಿರೋಧಿಸಿ, ಗುತ್ತಿಗೆದಾರರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಗುತ್ತಿಗೆದಾರರ ಸಂಘದಿಂದ ಜ.10ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗಿದೆ.

ದಲಿತ ಮಹಿಳೆಗೆ ವಂಚನೆ, ಅತ್ಯಾಚಾರ, ಕ್ರಿಮಿನಲ್ ಪಿತೂರಿ ಆರೋಪ

ಸ್ಯಾಂಟ್ರೋ ರವಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಸ್ಯಾಂಟ್ರೋ ರವಿ

ಮೈಸೂರು: ವಿವಾಹಿತನೆಂಬುದನ್ನು ಮುಚ್ಚಿಟ್ಟು, ಪರಿಶಿಷ್ಟ ಸಮುದಾಯದ ಮಹಿಳೆಯನ್ನು ವಂಚಿಸಿ ಮದುವೆಯಾಗಿ, ಜಾತಿ ನಿಂದನೆ ಮಾಡಿ, ಹಲ್ಲೆ ನಡೆಸಿ, ಜೀವ ಬೆದರಿಕೆ ಹಾಕಿ, ವರದಕ್ಷಿಣೆ ಕಿರುಕುಳ ನೀಡಿ, ಸುಳ್ಳು ಪ್ರಕರಣ ದಾಖಲಿಸಿದ ಆರೋಪದ ಮೇರೆಗೆ ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿ ವಿರುದ್ಧ ಇಲ್ಲಿನ ವಿಜಯನಗರ ಠಾಣೆಯಲ್ಲಿ ಸೋಮವಾರ ಎಫ್‌ಐಆರ್ ದಾಖಲಾಗಿದೆ.

ನಗರದ ಸಂತ್ರಸ್ತ ಮಹಿಳೆ ಹಾಗೂ ಅವರ ಕುಟುಂಬದ ಸದಸ್ಯರು ಒಡನಾಡಿ ಸೇವಾ ಸಂಸ್ಥೆಯ ನೆರವು ಪಡೆದು ದೂರು ದಾಖಲಿಸಿದ್ದಾರೆ. 'ತನಿಖೆ ಆರಂಭಿಸಿರುವ ಪೊಲೀಸರು ಮಹಿಳೆಯನ್ನು ಮಂಗಳವಾರ ಆರೋಗ್ಯ ತಪಾಸಣೆಗೆ ಕರೆದೊಯ್ದಿದ್ದರು' ಎಂದು ಮೂಲಗಳು ತಿಳಿಸಿವೆ.

ವರದಕ್ಷಿಣೆ ನಿಷೇಧ ಕಾಯ್ದೆ, ಪರಿಶಿಷ್ಟರ ಮೇಲಿನ ದೌರ್ಜನ್ಯ ನಿಯಂತ್ರಣ ಕಾಯ್ದೆ, ಐಪಿಸಿ 506 (ಉದ್ದೇಶಪೂರ್ವಕ ಅವಹೇಳನ, ಮನಶಾಂತಿ ಕೆಡಿಸುವ ಪ್ರಯತ್ನ), 504 (ಕ್ರಿಮಿನಲ್ ಪಿತೂರಿ), 376 (ಅತ್ಯಾಚಾರ), 270 (ಪ್ರಾಣಹಾನಿಕರವಾದ ಸೋಂಕು ಹರಡುವ ಯತ್ನ), ಬಲವಂತದ ಗರ್ಭಪಾತ (313) ಹಾಗೂ 323 (ಹಲ್ಲೆ), 498ಎ (ಕೌಟುಂಬಿಕ ದೌರ್ಜನ್ಯ) ಅಡಿ ಪ್ರಕರಣ ದಾಖಲಿಸಲಾಗಿದೆ.

'ದೌರ್ಜನ್ಯದ ಘಟನೆಗಳು 2019–2022ರ ನಡುವೆ ನಡೆದಿವೆ. ಆರೋಪಿಯು 2019ರಲ್ಲಿ ಉದ್ಯೋಗ ನೀಡುವ ನೆಪದಲ್ಲಿ ಕರೆಸಿಕೊಂಡು ಮತ್ತು ಬರುವ ಜ್ಯೂಸ್ ನೀಡಿ, ಪ್ರಜ್ಞೆ ತಪ್ಪಿಸಿ ಅತ್ಯಾಚಾರ ನಡೆಸಿದ್ದ. ನನ್ನ ಬೆತ್ತಲೆ ಫೋಟೋಗಳನ್ನು ತೆಗೆದು ಬೆದರಿಕೆ ಹಾಕಿದ್ದ. ನಂತರ ಮೈಸೂರಿನಲ್ಲೇ ವಕೀಲ ಶಶಿಭೂಷಣ್ ಎಂಬುವವರ ಮನೆಯಲ್ಲಿ ಮದುವೆಯಾದ. ಬಳಿಕವೂ ಹಿಂಸೆ ನೀಡಿದ. ನನ್ನ ಮೇಲೆ ಹಾಗೂ ನನ್ನ ತಂಗಿಯ ವಿರುದ್ಧ ಬೆಂಗಳೂರಿನ ಕಾಟನ್‌ಪೇಟೆ ಠಾಣೆಯಲ್ಲಿ ಸುಳ್ಳು ಪ್ರಕರಣ ದಾಖಲಿಸಿ ಜೈಲಿಗೆ ಕಳಿಸಿದ್ದ' ಎಂದು ಆರೋಪಿಸಿದ್ದಾರೆ.

'ತನಗೆ ಲೈಂಗಿಕ ಸೋಂಕು ಇದೆ ಎಂಬುದು ಗೊತ್ತಿದ್ದರೂ ಆರೋಪಿ ಪತಿ ನನಗೂ ಕೂಡ ಸೋಂಕನ್ನು ತಗುಲಿಸಿದ್ದಾನೆ. ಸೋಂಕು ಪ್ರಾಣಾಂತಕವಾಗಿದ್ದು, ಔಷಧಿ ಇಲ್ಲ. ವರದಕ್ಷಿಣೆ ಕಿರುಕುಳ ನೀಡಿ, ಒತ್ತಾಯಪೂರ್ವಕ ಗರ್ಭಪಾತ ಮಾಡಿಸಿದ್ದಾನೆ. ಹಣದ ದುರಾಸೆಯಿಂದ ಮತ್ತೊಬ್ಬರೊಂದಿಗೆ ಲೈಂಗಿಕ ಸಂಪರ್ಕ ಮಾಡುವಂತೆ ಒತ್ತಾಯಿಸಿದ್ದಾನೆ' ಎಂದು ಮಹಿಳೆ ದೂರಿನಲ್ಲಿ ಆರೋಪಿಸಿದ್ದಾರೆ.

ಕಮಿಷನರ್ ಭೇಟಿ: ವಿಜಯನಗರ ಠಾಣೆಯಲ್ಲಿ ದೂರು ದಾಖಲಾಗುವ ಮುನ್ನ ಯುವತಿ ಮತ್ತು ಕುಟುಂಬದ ಸದಸ್ಯರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರನ್ನು ಭೇಟಿ ಮಾಡಿದ್ದರು. ಅವರ ಸೂಚನೆ ಮೇರೆಗೆ ಠಾಣೆಗೆ ತೆರಳಿ ದೂರು ನೀಡಿದ್ದರು.

'ಮಹಿಳೆಗೆ ಹಾಗೂ ಆಕೆಯ ಕುಟುಂಬದವರಿಗೆ ನ್ಯಾಯ ಸಿಗುವವರೆಗೂ ಹೋರಾಟ ನಿಲ್ಲುವುದಿಲ್ಲ' ಎಂದು ಒಡನಾಡಿ ಸಂಸ್ಥೆಯ ಸಂಚಾಲಕರಾದ ಎಂ.ಎಲ್. ಪರಶುರಾಂ ಮತ್ತು ಸ್ಟ್ಯಾನ್ಲಿ ಪ್ರತಿಕ್ರಿಯಿಸಿದ್ದಾರೆ.

> ಸಂತ್ರಸ್ತೆಗೆ ಅನ್ಯಾಯವಾಗಲು ಸಹಕರಿಸಿದ ವಕೀಲರಾದ ಶಶಿಭೂಷಣ ಮತ್ತು ವರಲಕ್ಷ್ಮಿ ಅವರ ವಿರುದ್ಧವೂ ಎಫ್‌ಐಆರ್ ದಾಖಲಿಸಬೇಕು ಎಂದು ಪೊಲೀಸರನ್ನು ಆಗ್ರಹಿಸಿದ್ದೇವೆ
>
> **ಸ್ಟ್ಯಾನ್ಲಿ,** ಒಡನಾಡಿ ಸಂಚಾಲಕ

> ಇಬ್ಬರು ವಕೀಲರ ವಿರುದ್ಧ ನೇರ ಆರೋಪಗಳೇನೂ ಇಲ್ಲದಿರುವುದರಿಂದ, ತನಿಖೆ ಬಳಿಕ ಅಗತ್ಯ ಕ್ರಮ ಕೈಗೊಳ್ಳಲಾಗುವುದು
>
> **ಬಿ.ರಮೇಶ್**
> ನಗರ ಪೊಲೀಸ್ ಆಯುಕ್ತ, ಮೈಸೂರು

ಮುಖ್ಯಾಂಶಗಳು

- ವಿವಾಹಿತನೆಂಬುದನ್ನು ಮುಚ್ಚಿಟ್ಟು ಮದುವೆಯಾಗಿದ್ದ ಆರೋಪಿ
- ₹10 ಲಕ್ಷ ವರದಕ್ಷಿಣೆ ಕೊಡುವಂತೆ ಕಿರುಕುಳ, ಹಲ್ಲೆ
- ಪದೇ ಪದೇ ಜಾತಿನಿಂದನೆ, ಕಿರುಕುಳ: ಆರೋಪ

ಮೋದಿ ಎದುರು ಮುಖ್ಯಮಂತ್ರಿ ಬೊಮ್ಮಾಯಿ ಗಡಗಡ: ಲೇವಡಿ

ಹಗರಿಬೊಮ್ಮನಹಳ್ಳಿ/ಹೊಸಪೇಟೆ (ವಿಜಯನಗರ ಜಿಲ್ಲೆ): 'ಕಾಂಗ್ರೆಸ್ಸಿನವರ ದಮ್ಮು, ತಾಕತ್ತಿನ ಬಗ್ಗೆ ಮಾತನಾಡುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಎದುರು ನಾಯಿ ಮರಿ ತರಹ ಮಾಡುತ್ತಾರೆ. ಗಡಗಡ ಎಂದು ನಡುಗುತ್ತಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಲೇವಡಿ ಮಾಡಿದರು.

ಹಗರಿಬೊಮ್ಮನಹಳ್ಳಿಯಲ್ಲಿ ಮಂಗಳವಾರ ಸಂಜೆ ಏರ್ಪಡಿಸಿದ್ದ ಮಾಲವಿ ಜಲಾಶಯದ ವಿಜಯೋತ್ಸವ ಹಾಗೂ ಸಾರ್ಥಕ ನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 15ನೇ ಹಣಕಾಸಿನ ಆಯೋಗದ ಮಧ್ಯಂತರ ವರದಿಯಲ್ಲಿ ರಾಜ್ಯಕ್ಕೆ ₹5,495 ಕೋಟಿ ವಿಶೇಷ ಅನುದಾನ ಕೇಂದ್ರ ಸರ್ಕಾರ ಕೊಡಬೇಕೆಂದು ಶಿಫಾರಸು ಮಾಡಲಾಗಿದೆ. ನಮ್ಮ ರಾಜ್ಯವನ್ನು ಪ್ರತಿನಿಧಿಸುವ ನಿರ್ಮಲಾ ಸೀತಾರಾಮನ್ ಅವರು ಅನುದಾನ ಕೊಡಲಾಗುವುದಿಲ್ಲ ಎಂದು ಪತ್ರ ಬರೆದಿದ್ದಾರೆ. 'ಆಪರೇಷನ್ ಕಮಲ'ದ ಮೂಲಕ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಆ ಅನುದಾನ ತರುವ ತಾಕತ್ತು, ದಮ್ಮು ಇದೆಯೇ? ರಾಜ್ಯದ ಅನೇಕ ಅಭಿವೃದ್ಧಿ ಕೆಲಸಗಳಿಗೆ ಕೇಂದ್ರ ಸರ್ಕಾರ ಅನುದಾನ ಕೊಡುತ್ತಿಲ್ಲ. ರಾಜ್ಯವನ್ನು ಪ್ರತಿನಿಧಿಸುವ 25 ಜನ ಸಂಸದರಿದ್ದರೂ ಏನೂ ಆಗುತ್ತಿಲ್ಲ' ಎಂದು ದೂರಿದರು.

ತಲಾ 10 ಕೆ.ಜಿ ಅಕ್ಕಿ ಉಚಿತ

'ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಪ್ರತಿಯೊಬ್ಬರಿಗೂ ಉಚಿತವಾಗಿ ನೀಡಲಾಗುತ್ತಿದ್ದ 7 ಕೆ.ಜಿ. ಅಕ್ಕಿ ಪ್ರಮಾಣವನ್ನು ಬಿಜೆಪಿ ಸರ್ಕಾರ 5 ಕೆ.ಜಿ.ಗೆ ಇಳಿಸಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರತಿಯೊಬ್ಬರಿಗೂ ತಲಾ 10 ಕೆ.ಜಿ ಅಕ್ಕಿ ಉಚಿತವಾಗಿ ವಿತರಿಸಲಾಗುವುದು. ರಾಜ್ಯದಲ್ಲಿ ಯಾರೂ ಹಸಿವಿನಿಂದ ಮಲಗಬಾರದು. ಹಸಿವು ಮುಕ್ತ ಕರ್ನಾಟಕ ಆಗಬೇಕು' ಎಂದು ಹೇಳಿದರು.

ಸಿದ್ದೇಶ್ವರ ಶ್ರೀಗಳಿಗೆ ಅಂತಿಮ ನಮನ ಸಲ್ಲಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿ.ಎಸ್‌ಯಡಿಯೂರಪ್ಪ

ಸಿದ್ಧೇಶ್ವರ ಶ್ರೀಗಳ ಪಾರ್ಥಿವ ಶರೀರದ ಅಂತಿಮ ಯಾತ್ರೆ

– ಚಿತ್ರಗಳು: ಇಂದ್ರಕುಮಾರ ದಸ್ತೇನವರ

ಸಿದ್ದೇಶ್ವರ ಶ್ರೀಗಳ ಇಚ್ಛೆಯಂತೆ ಅಗ್ನಿಸ್ಪರ್ಶ • ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಬಂದ ಭಕ್ತರು

ಶರಣರ ಬದುಕು ಮರಣದಲ್ಲಿ ಅನಾವರಣ

• ಬಸವರಾಜ್ ಸಂಪಳ್ಳಿ

ವಿಜಯಪುರ: 'ಶರಣರ ಬದುಕನ್ನು ಮರಣದಲ್ಲಿ ಕಾಣು' ಎನ್ನುವ ಮಾತು ಮಂಗಳವಾರ ನಡೆದ ವಿಜಯಪುರ ಜ್ಞಾನ ಯೋಗಾಶ್ರಮದ ಸಿದ್ಧೇಶ್ವರ ಶ್ರೀಗಳ ಅಂತಿಮ ದರ್ಶನ, ಅಂತ್ಯ ಸಂಸ್ಕಾರದಲ್ಲಿ ಅಕ್ಷರಶಃ ನಿಜವಾಯಿತು.

ಶ್ರೀಗಳ ಪ್ರವಚನವನ್ನು ಆಲಿಸಿದ್ದ ಅಪಾರ ಸಂಖ್ಯೆಯ ಜನರು ಅವರ ಅಂತಿಮ ದರ್ಶನ ಪಡೆದರು. ಕರ್ನಾಟಕ ಮಾತ್ರವಲ್ಲದೇ ನೆರೆಯ ಮಹಾರಾಷ್ಟ್ರ, ತೆಲಂಗಾಣ, ಗೋವಾ ರಾಜ್ಯಗಳಿಂದಲೂ ಸಹಸ್ರಾರು ಜನರು ಬಂದು ನಡೆದಾಡುವ ದೇವರಿಗೆ ಅಂತಿಮ ನಮನ ಸಲ್ಲಿಸಿ, ಭಾರದ ಹೃದಯದಿಂದ ವಿದಾಯ ಹೇಳಿದರು.

ಶ್ರೀಗಳು ಸರಿಯಾಗಿ 45 ನಿಮಿಷ ಪ್ರವಚನ ನೀಡುತ್ತಿದ್ದರು. ಆ ವೇಳೆ ನಿಶ್ಯಬ್ದ ಆವರಿಸಿರುತ್ತಿತ್ತು. ಆದರೆ, ಮಂಗಳವಾರ ಸೈನಿಕ ಶಾಲೆಯ ವಿಶಾಲವಾದ ಆವರಣದಲ್ಲಿ ಪ್ರವಾಹದೋಪಾದಿಯಲ್ಲಿ ತಮ್ಮ ಬಳಿಗೆ ಹರಿದು ಬಂದ ಭಕ್ತರು, ಮಠಾಧೀಶರು, ಜನಪ್ರತಿನಿಧಿಗಳ ಮಾತುಗಳನ್ನು ಶ್ರೀಗಳು ಮೌನದಿಂದ ಆಲಿಸುತ್ತಿದ್ದಂತೆ ಭಾಸವಾಯಿತು.

ಸದಾಕಾಲ ಶ್ವೇತ ವಸ್ತ್ರಧಾರಿಯಾಗಿರುತ್ತಿದ್ದ ಸಿದ್ಧೇಶ್ವರ ಶ್ರೀಗಳ ಅಂತಿಮ ದಿನದಂದೂ ಶುಭ್ರ, ಶ್ವೇತಧಾರಿಯಾಗಿ ಕಂಗೊಳಿಸುತ್ತಿದ್ದರು. ಗೌರವಾರ್ಥ ತ್ರಿವರ್ಣ ಧ್ವಜವನ್ನು ಶ್ರೀಗಳ ಪಾರ್ಥಿವ ಶರೀರ ಮುಂದೆ ಹಾಸಿಡಲಾಗಿತ್ತು.

ಶ್ರೀಗಳ ಪಾರ್ಥಿವ ಶರೀರವನ್ನು ದರ್ಶನಕ್ಕೆ ಇಡಲಾಗಿದ್ದ ವೇದಿಕೆ ಮೇಲೆ ಮಂತ್ರಿ, ಮಹೋದಯರ ನುಡಿ-ನಮನಗಳ ಜೊತೆಗೆ ದೂರದಿಂದಲೇ ಕೈಮುಗಿದು ನಿಂತ ಶ್ರೀಸಾಮಾನ್ಯರ ಅಂತರಂಗದ ಮಾತುಗಳು ಸಿದ್ಧೇಶ್ವರ ಶ್ರೀಗಳಿಗೆ ಅರ್ಪಿತವಾದವು.

ಲಕ್ಷೋಪಲಕ್ಷ ಸಂಖ್ಯೆಯ ಭಕ್ತರು...

ಸಿದ್ಧೇಶ್ವರರು ಅಸ್ತಂಗತರಾದ ಸುದ್ದಿ ತಿಳಿಯುತ್ತಲೇ ರಾಜ್ಯ, ನೆರೆ ರಾಜ್ಯದ ಹಾದಿಗಳೆಲ್ಲವೂ ವಿಜಯಪುರ ನಗರದತ್ತಲೇ ಮುಖ ಮಾಡಿರುವಂತೆ ಕಂಡುಬಂದಿತು. ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಬಂದಿದ್ದ ಭಕ್ತರ ಭಜನೆ, ಕೀರ್ತನೆ, ಜಯಘೋಷಗಳು ಗುಮ್ಮಟ ನಗರಿಯಲ್ಲಿ ಪ್ರತಿಧ್ವನಿಸಿದವು.

ಜ್ಞಾನ ಯೋಗಾಶ್ರಮದತ್ತ ಸೋಮವಾರ ರಾತ್ರಿಯಿಂದಲೇ ಬರತೊಡಗಿದ್ದ ಜನ, ವಾಹನಗಳು ಮಂಗಳವಾರ ರಾತ್ರಿವರೆಗೂ ಬರುತ್ತಲೇ ಇದ್ದವು. ಎಷ್ಟೆಂದು ಅವುಗಳಿಗೆ ಲೆಕ್ಕ ಇಟ್ಟವರಿಲ್ಲ. 'ಜ್ಞಾನ ಗುಮ್ಮಟ'ದ ಅಂತಿಮ ದರ್ಶನಕ್ಕೆ ಬಂದ ಭಕ್ತರಿಗೆ ಇಡೀ ನಗರವೇ ಅಡುಗೆ ಮಾಡಿ, ಊಣ ಬಡಿಸಿತು. ನೀರುಣಿಸಿ ದಾಹ ನೀಗಿತು.

ತಮ್ಮೂರ 'ಮುಕುಟಮಣಿ'ಯನ್ನು ಕಳೆದುಕೊಂಡ ವಿಜಯಪುರ ನಗರ ದಿನವಿಡೀ ಮೌನಕ್ಕೆ ಶರಣಾಗಿತ್ತು. ಶ್ರೀಗಳ ಲಿಂಗೈಕ್ಯದ ಗೌರವಾರ್ಥ ಅಂಗಡಿ, ಮಳಿಗೆ, ಸಿನಿಮಾ ಮಂದಿರಗಳು ಸೇರಿದಂತೆ ಎಲ್ಲ ಬಗೆಯ ವ್ಯಾಪಾರ, ವಹಿವಾಟು ಸ್ಥಗಿತಗೊಳಿಸಿ, ಬಾಗಿಲು ಮುಚ್ಚಲಾಗಿತ್ತು.

ಅಂತಿಮಯಾತ್ರೆ ಮೆರವಣಿಗೆ:

ವಿಶೇಷವಾಗಿ ಸಿದ್ಧಪಡಿಸಲಾಗಿದ್ದ ತೆರದ ವಾಹನದಲ್ಲಿ ಸೈನಿಕ ಶಾಲಾವರಣದಿಂದ ಶಿವಾಜಿ ವೃತ್ತ, ಗಾಂಧಿ ಚೌಕಿ, ಸಿದ್ಧೇಶ್ವರ ದೇವಾಲಯ, ಬಿಎಲ್‌ಡಿಇ ಆಸ್ಪತ್ರೆ ಮಾರ್ಗವಾಗಿ ಜ್ಞಾನಯೋಗಾಶ್ರಮದವರೆಗೆ ಶ್ರೀಗಳ ಅಂತಿಮಯಾತ್ರೆ ನಡೆಯಿತು. ಯಾತ್ರೆ ಸಾಗಿದ ಮಾರ್ಗದುದ್ದಕ್ಕೂ ಮಹಿಳೆಯರು ರಂಗೋಲಿ ಬಿಡಿಸಿದ್ದರು. ರಸ್ತೆಯ ಇಕ್ಕೆಲಗಳಲ್ಲಿ ಸಹಸ್ರಾರು ಜನರು ಭಕ್ತಿ,ಭಾವದಿಂದ ಕೈಮುಗಿದು ಕಳುಹಿಸಿಕೊಟ್ಟರು.

'ಶರಣರಿಗೆ ಮರಣವೇ ಮಹಾನವಮಿ' ಎಂಬಂತೆ ನಡೆದ ಶ್ರೀಗಳ ಅಂತಿಮ ದರ್ಶನ ಮತ್ತು ಯಾತ್ರೆ ಸಾಕ್ಷೀಕರಿಸಿತು.

ಸಿದ್ಧೇಶ್ವರ ಶ್ರೀಗಳ ಪಾರ್ಥಿವ ಶರೀರಕ್ಕೆ ಅಗ್ನಿಸ್ಪರ್ಶ ಮಾಡಲಾಯಿತು
–ಪ್ರಜಾವಾಣಿ ಚಿತ್ರ

ಸಿದ್ಧೇಶ್ವರ ಶ್ರೀಗಳ ಅಂತಿಮ ಅಭಿವಂದನ ಪತ್ರ

ವಿಜಯಪುರ: ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಸ್ವಾಮೀಜಿ 2014ರ ಗುರುಪೂರ್ಣಿಮೆಯಂದು ಮೂವರು ಸಾಕ್ಷಿಗಳೊಂದಿಗೆ 'ಅಂತಿಮ ಅಭಿವಂದನ ಪತ್ರ' ಬರೆದಿಟ್ಟಿದ್ದರು. ಅದರ ಪ್ರಕಾರ, 'ದೇಹವನ್ನು ಭೂಮಿಯಲ್ಲಿಡುವ ಬದಲು ಅಗ್ನಿಯರ್ಪಿತ ಮಾಡುವುದು, ಶ್ರಾದ್ಧಿಕ ವಿಧಿ-ವಿಧಾನಗಳು ಅನಗತ್ಯ. ಚಿತಾಭಸ್ಮವನ್ನು ನದಿ ಅಥವಾ ಸಾಗರದಲ್ಲಿ ವಿಸರ್ಜಿಸುವುದು ಹಾಗೂ ಯಾವುದೇ ಬಗೆಯ ಸ್ಮಾರಕ ನಿರ್ಮಿಸಲಾಗದು' ಎಂದು ಬರೆಯಲಾಗಿದೆ.

'ಬದುಕು ಅನುಭವಗಳ ಪ್ರವಾಹ. ಅದರ ಸಿರಿವಂತಿಕೆಯು ವಿಶ್ವ ಚಿಂತನೆ ಹಾಗೂ ಸತ್ಯ ಶೋಧನೆಗಳಿಂದ. ಅದರ ಸೌಂದರ್ಯವು ರಾಗ ದ್ವೇಷ ರಹಿತವಾದ ಹಾಗೂ ಅಸೀಮಿತವಾದ ಸದ್ಭಾವದಿಂದ. ಅದನ್ನು ಸುಭಗ ಹಾಗೂ ಸಮೃದ್ಧಗೊಳಿಸುವುದೇ 'ಸಾಧನೆ'. ಅಂತಹ ಜೀವನದ ಉಪಯುಕ್ತವಾದ ಅನುಭವಗಳನ್ನು ಆಸಕ್ತರೊಂದಿಗೆ ಹಂಚಿಕೊಳ್ಳುವುದೇ ಧರ್ಮ. ಅದು ಸ್ವ-ಪರ ನೆಮ್ಮದಿಗೆ ಕಾರಣ.'

'ನನ್ನದು ಆವೇಗವಿಲ್ಲದ, ಸಾವಧಾನದ ಸಾಮಾನ್ಯ ಬದುಕು. ಅದನ್ನು ರೂಪಿಸಿದವರು ಗುರುದೇವರು. ಅದನ್ನು ಹದುಳಿಸಿದವರು ನಾಡಿನ ಪೂಜ್ಯರು, ಹಿತೈಷಿಗಳು, ಸಹ- ಹೃದಯರು, ಸಾಧಕರು ಹಾಗೂ ಶ್ರೀ ಸಾಮಾನ್ಯರು. ನಿಸರ್ಗವು ಮೈಮನಸ್ಸುಗಳಿಗೆ ತಂಪನ್ನಿತ್ತಿದೆ. ತಾತ್ವಿಕ ಚಿಂತನೆಗಳು ತಿಳಿ ಬೆಳಗ ಹರಡಿವೆ. ಜಾಗತಿಕ ತತ್ವಜ್ಞಾನಿಗಳ ಮತ್ತು ವಿಜ್ಞಾನಿಗಳ ಶೋಧನೆಗಳು ದೃಷ್ಟಿಯ ಪರಿಸೀಮೆಯನ್ನು ದೂರ ದೂರ ಸರಿಸಿವೆ. ಆದ್ದರಿಂದಲೇ ನಾನು ಎಲ್ಲರಿಗೂ ಎಲ್ಲದಕ್ಕೂ ಉಪಕೃತ.

'ಬದುಕು ಮುಗಿಯುತ್ತಿದೆ; ದೀಪ ಆರಿದಂತೆ; ತೆರೆ ಅಡಗಿದಂತೆ; ಮೇಘ ಕರಗಿದಂತೆ. ಉಳಿಯುವುದು ಬರೀ ಬಯಲು. ಮಹಾಮೌನ, ಶೂನ್ಯ ಸತ್ಯ! ಹಲವು ದಶಕಗಳ ಕಾಲ ಈ ಅದ್ಭುತ ಜಗತ್ತಿನಲ್ಲಿ ಬಾಳಿದ್ದೇನೆ; ನೋಡಿ ತಿಳಿದು ಅನುಭವಿಸಿದ್ದೇನೆ. ನನ್ನ ಬದುಕು ಕೊನೆಗೊಳ್ಳುವ ಮುಂಚೆ ಅದನ್ನು ಕೃತಜ್ಞತೆಯಿಂದ ಸ್ಮರಿಸಬೇಕು. ಅದಕ್ಕಾಗಿ ಈ ಅಂತಿಮ ಅಭಿವಂದನ ಪತ್ರ' ಎಂದು ಬರೆದಿದ್ದಾರೆ.

ಅಂತಿಮ ನೆನಹು:

'ಸತ್ಯವೂ ಇಲ್ಲ, ಅಸತ್ಯವೂ ಇಲ್ಲ.
ಸಹಜವೂ ಇಲ್ಲ, ಅಸಹಜವೂ ಇಲ್ಲ.
ನಾನೂ ಇಲ್ಲ, ನೀನೂ ಇಲ್ಲ.
ಇಲ್ಲ, ಇಲ್ಲ ಎಂಬುದು ತಾನಿಲ್ಲ.
ಗುಹೇಶ್ವರನೆಂಬುದು ತಾ ಬಯಲು ಅಂತ್ಯ ಪ್ರಣಮಾಂಜಲಿಃ!
ಸ್ವಾಮಿ ಸಿದ್ಧೇಶ್ವರ

ಸಾಕ್ಷಿದಾರರು: ನ್ಯಾ.ಎ.ಎಸ್.ಪಚ್ಚಾಪುರ, ಹೈಕೋರ್ಟ್, ಬೆಂಗಳೂರು. ನ್ಯಾ.ಎಸ್.ಎಸ್. ಸುಲ್ತಾನಪುರ, ಫ್ಯಾಮಿಲಿ ಕೋರ್ಟ್, ವಿಜಯಪುರ ಹಾಗೂ ಕಾಡಸಿದ್ಧೇಶ್ವರ ಮಹಾ ಸ್ವಾಮೀಜಿ, ಕನ್ಹೇರಿಮಠ, ಕೊಲ್ಹಾಪುರ.

ನಡೆದಾಟ ನಿಲ್ಲಿಸಿದ ದೇವರಿಗೆ ಪುಟಾಣಿಯಿಂದ ಮುತ್ತಿನ ನಮನ – ಚಿತ್ರ: ರಾಜು ಢವಳಗಿ

ಮಾತನಾಲಿಸುತ್ತಾ ಮೌನಕ್ಕೆ ಜಾರಿದ ಅಪ್ಪೋರು...

• ರಶ್ಮಿ ಎಸ್.

ವಿಜಯಪುರ: ಮಕ್ಕಳನ್ನು ಹೆಗಲಮೇಲೆ ಹೊತ್ತ ಅಪ್ಪಂದಿರು, ಒಡಲೊಳಗಿರುವ ಮಗುವ ನೇವರಿಸುತ್ತ ಬಂದ ತಾಯಂದಿರು, ನೆರೆತ ಕೂದಲ, ಭಾರದ ಹೆಜ್ಜೆ ಇಡುತ್ತಿದ್ದ ವಯೋವೃದ್ಧರು ಎಲ್ಲರೂ ಮೌನ ಹೊತ್ತು ಹೆಜ್ಜೆ ಹಾಕುತ್ತಿದ್ದರು.

'ಅಪ್ಪೋರು... ಅಜ್ಜಾರು' ಎನ್ನುತ್ತಲೇ ಕಣ್ಣೀರಾಗುತ್ತಿದ್ದವರು, ಗದ್ಗದ ಕಂಠದಲ್ಲಿಯೇ ಭಜನೆ ಹಾಡಲು ಆರಂಭಿಸುತ್ತಿದ್ದರು. ರಸ್ತೆಯ ಎರಡೂ ಬದಿಯಲ್ಲಿ ನೀರುಣಿಸುವವರು, ಪ್ರಸಾದ ಹಂಚುವವರು, ಹಣ್ಣು ಹಂಚುವವರು ಇದ್ದರು. ಬರ್ರಿ ಅಕ್ಕಾರ, ಅಣ್ಣಾರ.. ಒಂದೆರಡು ತುತ್ತು ಪ್ರಸಾದ ತೊಗೊಂಡು ಹೋಗ್ರಿ ಎಂದು ಉಪಚರಿಸುತ್ತಿದ್ದರು.

ಅಂತಿಮಯಾತ್ರೆ ಸಾಗುವ ಮಾರ್ಗದಲ್ಲಿಯೂ ಜಾತಿ ಭೇದವಿಲ್ಲದೆ ಎಲ್ಲ ಮತ ಧರ್ಮದವರೂ ಉಣಬಡಿಸುವಲ್ಲಿ, ನೀರುಣಿಸುವಲ್ಲಿ, ಪಾನಕ ಹಂಚುವುದರಲ್ಲಿ ನಿರತರಾಗಿದ್ದರು.

'ಅಜ್ಜನ ಮುಖ ದರ್ಶನವಾಯಿತೆ?' ಎಂದು ಕೇಳಿದಾಗ, 'ನೋಡಾಕ ಬಂದೋರಿಗೆ ವ್ಯವಸ್ಥೆ ಮಾಡಿದ್ರ ಸಾಕ್ರಿ, ಅಜ್ಜಾರು ಈ ಸೇವೆಯೊಳಗದಾರ. ನಾವು ಇದರೊಳಗ ಅವರನ್ನ ಕಾಣ್ತೇವಿ. ಕೊಡೂದ್ರೊಳಗ, ಹಂಚೂದ್ರೊಳಗ ನಮ್ಮಜ್ಜಾರು ನಮಗ ಸಿಗ್ತಾರ. ನಾವು ಇದೇ ಊರೋರು. ರಾತ್ರಿ ದರ್ಶನ ತೊಗೊಂಡು ಬಂದೇವಿ. ಈಗ ನಮ್ಮೂರಿಗೆ ಬರೋರು ಹಸಕೊಂಡು, ನೀರಡಿಸಿ ಹೋಗಬಾರದಲ್ಲ... ಅದಕ್ಕ ಸೇವಾಕ ನಿಂತೇವಿ' ಅಂದ್ರು.

'ಹೆಸರೇನ್ರಿ?' ಎಂದಾಗ...'ಹೆಸರು ಬ್ಯಾಡ್ರಿ.. ಪ್ರಸಾದ ಬೇಕಾದ್ರ ಪ್ಲೇಟ್ ತೊಗೊರಿ, ಮುಂದಿನೋರಿಗೆ ದಾರಿ ಮಾಡ್ರಿ' ಅನ್ನುತ್ತಲೇ ಪಲಾವ್ ಹಂಚುತ್ತಿದ್ದರು.

ತಮ್ಮ ತಮ್ಮ ಶಕ್ತ್ಯಾನುಸಾರ ಉಪ್ಪಿಟ್ಟು, ಚಿತ್ರಾನ್ನ, ಕಲ್ಲಂಗಡಿ ಹಣ್ಣು, ಬಾಳೆಹಣ್ಣು, ಬಿಸ್ಕತ್ತು– ಹೀಗೆ ಹಂಚುತ್ತಲೇ ಇದ್ದರು. ಕುಡಿಯಲು ಚಹಾ, ಪಾನಕ, ಮಜ್ಜಿಗೆ, ಜೂಸುಗಳೂ ಇದ್ದವು.

ಬೆಳಗಿನ ಜಾವವೇ ಊರಿಂದ ಬಂದವರು, ಸಾಲುಗಳಲ್ಲಿ ನಿಂತು ದರ್ಶನ ಪಡೆದು ಆಚೆ ಬಂದಿದ್ದರು. ಜಿಲ್ಲಾ ಆಸ್ಪತ್ರೆಯ ಆವರಣದ ಹೊರಗೆ, ಮರದ ನೆರಳಿನಲ್ಲಿ ಕುಂತು ಹಾಡುತ್ತಿದ್ದರು. 'ಅಜ್ಜಾರ ಯಾತ್ರೆ ಹೋದ ಮ್ಯಾಲೆ ಊರಿಗೆ ಹೊರಡ್ತೀವಿ' ಅಂದವರೆ ಬಿಡುವಿಲ್ಲದಂತೆ ಹಾಡುತ್ತಿದ್ದರು.

'ಎಲ್ಲೆಲ್ಲಿ ಆಡಿ ಬಂದಿ ಕೋಗಿಲೆ...ಎಲ್ಲಾ ಕಡೆ ಹಾಡಿ ಬಂದಿ ಕೋಗಿಲೆ' ಅಂತ ಸುಶ್ರಾವ್ಯವಾಗಿ ಹಾಡುತ್ತಿದ್ದ ಜಮಖಂಡಿಯ ಹದಿನಾಲ್ಕು ಜನ ಹೆಂಗಳೆಯರು ತಮ್ಮ ಸಿದ್ದಪ್ಪಜ್ಜನನ್ನು ನೆನೆಯುತ್ತಿದ್ದರು.

ಇಂಥ ಭಜನೆ ಮಂಡಳಿಗಳ ಧ್ವನಿಯಲ್ಲಿ ಸಿದ್ಧೇಶ್ವರ ಶ್ರೀಗಳು ಉಲಿಯುತ್ತಿದ್ದರು. ಸೇವೆ ಮಾಡುವವರ ಉಪಚಾರದಲ್ಲಿ ನಲಿಯುತ್ತಿದ್ದರು.

ನೆರೆದವರೆಲ್ಲ 'ಸಿದ್ಧೇಶ್ವರ ಮಹಾರಾಜ್ ಕಿ ಜೈ' ಅಂದಾಗ.. ಹಾಡಿನಂತೆ ಜನರ ಪಾಡಿಗೆ ಸಾಂತ್ವನ ಹೇಳುತ್ತಿದ್ದ ಶ್ರೀಗಳು ಮೌನವಾಗಿದ್ದರು. ಮೊದಲ ಬಾರಿಗೆ ಶ್ರೀಗಳು ಮೌನವಾಗಿದ್ದರು. ಜನರು ಮಾತಾಡುತ್ತಿದ್ದರು. ಈವರೆಗೂ ಸ್ವಾಮೀಜಿ ಮಾತಿಗೆ ಮೈಯೆಲ್ಲ ಕಿವಿಯಾಗಿಸಿಕೊಂಡು ಮೌನವಾಗಿದ್ದ ಭಕ್ತರು, ಮುಗಿಲು ಮುಟ್ಟುವಷ್ಟು ಜಯಕಾರ ಹಾಕುತ್ತಿದ್ದರೂ ಸ್ವಾಮೀಜಿ ಮೌನವಾಗಿದ್ದರು.

ಅಗ್ನಿ ಸ್ಪರ್ಶದೊಂದಿಗೆ ಸಿದ್ಧೇಶ್ವರ ಶ್ರೀ ಅಂತ್ಯಕ್ರಿಯೆ

ಒಂದನೇ ಪುಟದಿಂದ...

ಸ್ವಾಮೀಜಿಗಳೆಲ್ಲ ದೀರ್ಘದಂಡ ನಮಸ್ಕಾರ ಸಲ್ಲಿಸಿದರು.

ಆಶ್ರಮದ ಶಿಷ್ಯರು ಗುರುವಿನ ಕೃಪೆಯ ಹಾಡು ಹಾಡುತ್ತ ವಿದಾಯ ಕೋರಿದರು. 'ಜ್ಯೋತಿ ಬೆಳಗುತಿದೆ.. ಪರಂ ಜ್ಯೋತಿ ಬೆಳಗುತಿದೆ', 'ಶಿವಾಯ ನಮ ಓಂ' ಉದ್ಘೋಷಗಳ ನಡುವೆ ಶ್ರೀಗಳ ಅಂತ್ಯಕ್ರಿಯೆ ನಡೆಯಿತು. ಇಡೀ ಆಶ್ರಮ ನೀರವ ಮೌನಕ್ಕೆ ಜಾರಿತು.

ನಾಡಿನ ವಿವಿಧ ಮಠಾಧೀಶರು, ಜನಪ್ರತಿನಿಧಿಗಳು, ಆಶ್ರಮವಾಸಿಗಳು, ಪೊಲೀಸರು, ಶ್ರೀಗಳಿಗೆ ಚಿಕಿತ್ಸೆ ನೀಡಿದ್ದ ವೈದ್ಯರು ಅಂತ್ಯಕ್ರಿಯೆಗೆ ಸಾಕ್ಷಿಯಾದರು.

ಚಿತೆಯ ಬೆಂಕಿ ನೆಲಕಚ್ಚುವ ಮುನ್ನ, 'ಮನೆಗೆ ಹೋಗಿ ಪ್ರಸಾದ ಸ್ವೀಕರಿಸಿ' ಎಂದು ಕೋರಲಾಯಿತು. 'ಚಿತಾಭಸ್ಮ ಬೇಕಾದವರು, ಆಶ್ರಮದಲ್ಲಿ ಹೆಸರು ನೋಂದಾಯಿಸಬೇಕು. ನಂತರ ಭಸ್ಮವನ್ನು ನದಿ, ಸಮುದ್ರಗಳಿಗೆ ವಿಸರ್ಜಿಸಬೇಕು' ಎಂದು ಆಶ್ರಮದವರು ಪ್ರಕಟಿಸಿದರು.

ಕೆಪಿಟಿಸಿಎಲ್ ಅಕ್ರಮ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲಿ ನಡೆದ ಅಕ್ರಮಕ್ಕೆ ಸಂಬಂಧಿಸಿದಂತೆ, ಪೊಲೀಸರು ಮಂಗಳವಾರ ಮತ್ತೆ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಇವರೊಂದಿಗೆ ಬಂಧಿತರ ಸಂಖ್ಯೆ 45ಕ್ಕೆ ಏರಿಕೆಯಾಗಿದೆ. ಬಂಧಿತರಲ್ಲಿ ಮೂವರು ಯುವತಿಯರೂ ಇದ್ದಾರೆ.

ಗೋಕಾಕ ತಾಲ್ಲೂಕು ಮರಡಿಮಠದ ವೈಷ್ಣವಿ ಬಾಳಪ್ಪ ಸನದಿ (21), ಉಪ್ಪಾರಟ್ಟಿಯ ಸುಧಾರಾಣಿ ಹೂವಪ್ಪ ಅರಬಾಂವಿ (24), ತುಕ್ಕಾನಟ್ಟಿಯ ಐಶ್ವರ್ಯ ರಾಮಚಂದ್ರ ಬಾಗೇವಾಡಿ (22) ಹಾಗೂ ಬಗರನಾಳದ ಬಸವರಾಜ ರಾಮಪ್ಪ ಹಾವಡಿ (27) ಬಂಧಿತರು.

ಇವರೆಲ್ಲರೂ ಗೋಕಾಕ ಪರೀಕ್ಷಾ ಕೇಂದ್ರದಲ್ಲಿ ಮೈಕ್ರೊಚಿಪ್, ಮೊಬೈಲ್ ಹಾಗೂ ಇತರ ಎಲೆಕ್ಟ್ರಾನಿಕ್ ಡಿವೈಸ್‌ಗಳನ್ನು ಬಳಸಿ ಪರೀಕ್ಷೆ ಬರೆದಿದ್ದರು. ಆರೋಪಿಗಳಿಂದ ಅಕ್ರಮಕ್ಕೆ ಬಳಸಿದ ಎಲ್ಲ ಸಾಮಗ್ರಿಗಳನ್ನೂ ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ ತಿಳಿಸಿದ್ದಾರೆ.

ವೈಷ್ಣವಿ ಬಾಳಪ್ಪ ಸನದಿ

ಸುಧಾರಾಣಿ ಅರಬಾಂವಿ

ಐಶ್ವರ್ಯ ಬಾಗೇವಾಡಿ

ಬಸವರಾಜ ಹಾವಡಿ

ಎಲ್ಲರನ್ನೂ ಬುಧವಾರ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗಿದೆ.

ನೇಮಕಾತಿ ಹಗರಣ: ಮತ್ತಿಬ್ಬರ ಬಂಧನ

ಚಿತ್ರದುರ್ಗ: ನಕಲಿ ದಾಖಲೆ ಸೃಷ್ಟಿಸಿ 'ಬೆಸ್ಕಾಂ'ನಲ್ಲಿ ಅನುಕಂಪದ ಆಧಾರದಲ್ಲಿ ನೇಮಕಾತಿ ಹೊಂದಿದ ಹಗರಣದ ತನಿಖೆ ನಡೆಸುತ್ತಿರುವ ಪೊಲೀಸರು ಇನ್ನಿಬ್ಬರು ನೌಕರರನ್ನು ಮಂಗಳವಾರ ಬಂಧಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ 10ಕ್ಕೆ ಏರಿದೆ.

ಬೆಂಗಳೂರಿನ ದಕ್ಷಿಣ ವಲಯ ಕಚೇರಿಯ ಹಿರಿಯ ಸಹಾಯಕಿ ವೈಷ್ಣವಿ ಹಾಗೂ ಹಿರಿಯ ಸಹಾಯಕ ನಾಗೇಶ್ ಬಂಧಿತರು.

ಅನುಕಂಪದ ಆಧಾರದ ಮೇಲೆ ಅನರ್ಹರನ್ನು ನೇಮಕ ಮಾಡಿಕೊಂಡು 'ಬೆಸ್ಕಾಂ'ಗೆ ವಂಚಿಸಿದ ಪ್ರಕರಣದಲ್ಲಿ ಈ ಇಬ್ಬರು ಶಾಮೀಲಾಗಿದ್ದು ತನಿಖೆಯ ವೇಳೆ ಬೆಳಕಿಗೆ ಬಂದಿತ್ತು. ಕರ್ತವ್ಯಕ್ಕೆ ಗೈರಾಗಿ ತಲೆಮರೆಸಿಕೊಂಡಿದ್ದ ಆರೋಪಿಗಳನ್ನು ಕೋಟೆ ಠಾಣೆಯ ಪೊಲೀಸರು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ.

ಕೆಪಿಟಿಸಿಎಲ್– ಕನಿಷ್ಠ 35 ಅಂಕ ಪಡೆಯಲು ಎಂಜಿನಿಯರ್‌ಗಳು ವಿಫಲ

505 ಹುದ್ದೆ: 501 ಅಭ್ಯರ್ಥಿಗಳಷ್ಟೆ ಅರ್ಹರು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಕೆಪಿಟಿಸಿಎಲ್), ಬೆಸ್ಕಾಂ, ಸೆಸ್ಕ್, ಹೆಸ್ಕಾಂ, ಮೆಸ್ಕಾಂ ಮತ್ತು ಜೆಸ್ಕಾಂಗಳ ಆಡಳಿತ ವ್ಯಾಪ್ತಿಯ ಕಚೇರಿಗಳಲ್ಲಿ ಖಾಲಿ ಇರುವ 1,492 ವಿವಿಧ ಹುದ್ದೆಗಳ ನೇಮಕಾತಿಗೆ ನಡೆದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅರ್ಹತೆಗೆ ನಿಗದಿಪಡಿಸಿದ ಅಂಕಗಳಿಸಿದ ಅಭ್ಯರ್ಥಿಗಳ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮಂಗಳವಾರ ಪ್ರಕಟಿಸಿದೆ.

ಆದರೆ, ಸಹಾಯಕ ಎಂಜಿನಿಯರ್ (ವಿದ್ಯುತ್) 505 ಹುದ್ದೆಗಳಿಗೆ (ಉಳಿಕೆ ವೃಂದದ 393, ಬ್ಯಾಕ್‌ಲಾಗ್ 6 , ಕಲ್ಯಾಣ ಕರ್ನಾಟಕ 106) ಅರ್ಜಿ ಸಲ್ಲಿಸಿದವರ ಪೈಕಿ, ಕನಿಷ್ಠ 35 ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದು ಅರ್ಹರಾದ ಅಭ್ಯರ್ಥಿಗಳ ಸಂಖ್ಯೆ ಕೇವಲ 501!

> ಈ ಬಾರಿಯ ಸ್ಪರ್ಧಾತ್ಮಕ ಪರೀಕ್ಷೆ ಅಭ್ಯರ್ಥಿಗಳಿಗೆ ಕಷ್ಟಕರವಾಗಿತ್ತು. ತಪ್ಪು ಉತ್ತರಗಳಿಗೆ ಅಂಕಗಳ ಕಡಿತವೂ ಇತ್ತು. ಹೀಗಾಗಿ, ಅರ್ಹರ ಸಂಖ್ಯೆ ಕಡಿಮೆಯಾಗಿದೆ
>
> **ಎಸ್.ರಮ್ಯಾ**
> ಕಾರ್ಯನಿರ್ವಾಹಕ ನಿರ್ದೇಶಕಿ, ಕೆಇಎ

ಸಲ್ಲಿಕೆಯಾದ ಒಟ್ಟು ಅರ್ಜಿಗಳಲ್ಲಿ 23,979 ಅಭ್ಯರ್ಥಿಗಳ ಅರ್ಜಿಗಳು ಪರೀಕ್ಷೆ ಬರೆಯಲು ಅರ್ಹವಾಗಿದ್ದವು. ಆ ಮೂಲಕ, ಈ ಹುದ್ದೆಗಳಿಗೆ ಅಗತ್ಯವಾದಷ್ಟು ಸಂಖ್ಯೆಯ ಅಭ್ಯರ್ಥಿಗಳು ಅರ್ಹತೆಗೆ ನಿಗದಿಪಡಿಸಿದ್ದ ಗರಿಷ್ಠ ಅಂಕ ಗಳಿಸಲು ವಿಫಲರಾಗಿದ್ದಾರೆ. ಅಷ್ಟೇ ಅಲ್ಲ, ಕಿರಿಯ ಸಹಾಯಕ ಹುದ್ದೆ ಹೊರತುಪಡಿಸಿದರೆ, ಇತರ ಹುದ್ದೆಗಳಿಗೆ ಅರ್ಹತೆ ಪಡೆದವರ ಸಂಖ್ಯೆಯೂ ಕಡಿಮೆಯಿದೆ.

ಕಿರಿಯ ಎಂಜಿನಿಯರ್ (ವಿದ್ಯುತ್) ಒಟ್ಟು 570 (ಉಳಿಕೆ ವೃಂದ 477 , ಬ್ಯಾಕ್‌ಲಾಗ್ 11 , ಕಲ್ಯಾಣ ಕರ್ನಾಟಕ 82) ಹುದ್ದೆಗಳಿಗೆ ಪರೀಕ್ಷೆಗೆ 22,920 ಅರ್ಜಿಗಳು ಅರ್ಹವಾಗಿದ್ದವು. ಈ ಪೈಕಿ, 1,049 ಅಭ್ಯರ್ಥಿಗಳು ಮಾತ್ರ 35 ಮತ್ತು ಅದಕ್ಕಿಂತ ಹೆಚ್ಚು ಅಂಕ ಗಳಿಸಿ ಅರ್ಹರಾಗಿದ್ದಾರೆ. ವಿಶೇಷವೆಂದರೆ, ಈ ಹುದ್ದೆಗಳಿಗೂ 1:2 ಅನುಪಾತದಲ್ಲಿ ಅಭ್ಯರ್ಥಿಗಳು ಅರ್ಹರಾಗಿಲ್ಲ.

ಸಹಾಯಕ ಎಂಜಿನಿಯರ್ (ಸಿವಿಲ್) ಒಟ್ಟು 28 (ಉಳಿಕೆ ವೃಂದ 21, ಕಲ್ಯಾಣ ಕರ್ನಾಟಕ 7) ಹುದ್ದೆಗಳಿಗೆ 24,316 ಅರ್ಜಿಗಳ ಪೈಕಿ, ಪರೀಕ್ಷೆ ಬರೆದವರಲ್ಲಿ 35ಕ್ಕೂ ಹೆಚ್ಚು ಅಂಕ ಪಡೆದವರು 700 ಮಂದಿ ಇದ್ದಾರೆ. ಕಿರಿಯ ಎಂಜಿನಿಯರ್ (ಸಿವಿಲ್) ಒಟ್ಟು 29 (ಉಳಿಕೆ ವೃಂದ 21, ಕಲ್ಯಾಣ ಕರ್ನಾಟಕ 8) ಹುದ್ದೆಗಳಿಗೆ 15,140 ಮಂದಿಯಲ್ಲಿ ಪರೀಕ್ಷೆ ಬರೆದವರಲ್ಲಿ 3,010 ಅಭ್ಯರ್ಥಿಗಳು ಮಾತ್ರ 35ಕ್ಕೂ ಹೆಚ್ಚು ಅಂಕ ಪಡೆದಿದ್ದಾರೆ.

ಅತೀ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿರುವ ಕಿರಿಯ ಸಹಾಯಕ 358 ಹುದ್ದೆಗಳಿಗೆ ಪರೀಕ್ಷೆ ಬರೆಯಲು 3,10,960 ಅಭ್ಯರ್ಥಿಗಳು ಅರ್ಹವಾಗಿದ್ದರು. ಅವುಗಳಲ್ಲಿ 35ಕ್ಕೂ ಹೆಚ್ಚು ಅಂಕವನ್ನು 61,174 ಅಭ್ಯರ್ಥಿಗಳು ಗಳಿಸಿದ್ದಾರೆ. ಈ ಹುದ್ದೆಗಳಿಗೆ ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಅರ್ಹರಿದ್ದಾರೆ.

'ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮ 2021ರ ಪ್ರಕಾರ, ಅಭ್ಯರ್ಥಿ ಅರ್ಹತೆ ಪಡೆಯಲು ಸ್ಪರ್ಧಾತ್ಮಕ ಪರೀಕ್ಷೆಯ ಒಟ್ಟು ಅಂಕಗಳಲ್ಲಿ ಕನಿಷ್ಠ ಶೇ 35ರಷ್ಟು ಅಂಕ ಗಳಿಸುವುದು ಕಡ್ಡಾಯವಾಗಿದೆ. ಈ ಹುದ್ದೆಗಳಿಗೆ ಐಚ್ಛಿಕ ವಿಷಯದಲ್ಲಿ 100 ಅಂಕಗಳಿಗೆ ಪರೀಕ್ಷೆ ನಡೆದಿದೆ' ಎಂದು ಕೆಇಎ ಮೂಲಗಳು ತಿಳಿಸಿವೆ.

ಕೆಪಿಟಿಸಿಎಲ್ ಹುದ್ದೆ– ಅಭ್ಯರ್ಥಿಗಳು ಗಳಿಸಿದ ಅಂಕ

ವೃಂದ	ಗರಿಷ್ಠ	ಕನಿಷ್ಠ
ಕಿರಿಯ ಎಂಜಿನಿಯರ್ (ಸಿವಿಲ್)	81.25	35
ಕಿರಿಯ ಎಂಜಿನಿಯರ್ (ವಿದ್ಯುತ್)	74.25	35
ಸಹಾಯಕ ಎಂಜಿನಿಯರ್ (ಸಿವಿಲ್)72	35	35
ಸಹಾಯಕ ಎಂಜಿನಿಯರ್ (ವಿದ್ಯುತ್)	63.75	35
ಕಿರಿಯ ಸಹಾಯಕ	79.75	35

ಪರೀಕ್ಷಾ ಅಕ್ರಮ: 41 ಬಂಧನ

ಕಿರಿಯ ಸಹಾಯಕರ ನೇಮಕಾತಿಗೆ ನಡೆದ ಪರೀಕ್ಷೆಯಲ್ಲಿ ಭಾರಿ ಅಕ್ರಮ ನಡೆದಿರುವುದು ಈಗಾಗಲೇ ಬಹಿರಂಗವಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಈವರೆಗೆ 41 ಮಂದಿಯನ್ನು ಬಂಧಿಸಿದ್ದಾರೆ. ಮೈಕ್ರೊಚಿಪ್, ಮೊಬೈಲ್ ಹಾಗೂ ಇತರ ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸಿ ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗಿರುವುದು ತನಿಖೆಯಲ್ಲಿ ಗೊತ್ತಾಗಿದೆ.

ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಗೆ ನೆರವು • ನಿರ್ಬಂಧ ಸಡಿಲಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಧನಸಹಾಯ: ಗರಿಷ್ಠ ₹5 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಗೆ ನೀಡುವ 'ಧನಸಹಾಯ'ಕ್ಕೆ ಸಂಬಂಧಿಸಿದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕೆಲ ನಿರ್ಬಂಧಗಳನ್ನು ಕೈಬಿಟ್ಟಿದೆ. ಸಂಸ್ಥೆಯೊಂದಕ್ಕೆ ನೀಡುವ ಗರಿಷ್ಠ ಅನುದಾನದ ಮಿತಿಯನ್ನು ₹ 2 ಲಕ್ಷದಿಂದ ₹ 5 ಲಕ್ಷಕ್ಕೆ ಹೆಚ್ಚಳ ಮಾಡಲಾಗಿದೆ.

ಈ ಬಗ್ಗೆ ಇಲಾಖೆ ಆದೇಶ ಹೊರಡಿಸಿದೆ. ಇಲಾಖೆಯು ವಿಧಿಸಿದ ನಿರ್ಬಂಧಗಳ ಬಗ್ಗೆ ಕಳೆದ ನ. 27ರಂದು 'ಧನಸಹಾಯಕ್ಕೆ ಕಾರ್ಯಕ್ರಮದ ನಿರ್ಬಂಧ' ಎಂಬ ಶೀರ್ಷಿಕೆಯಡಿ 'ಪ್ರಜಾವಾಣಿ' ವಿಶೇಷ ವರದಿ ಪ್ರಕಟಿಸಿತ್ತು. ಬಳಿಕ ಕಲಾವಿದರು ಹಾಗೂ ಸಾಂಸ್ಕೃತಿಕ ಸಂಘ–ಸಂಸ್ಥೆಗಳ ಪ್ರಮುಖರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಪ್ರತಿಭಟಿಸಿದ್ದರು. ಈಗ ಧನಸಹಾಯಕ್ಕೆ ಸಂಬಂಧಿಸಿದ ನಿಯಮಗಳನ್ನು ಇಲಾಖೆ ಪರಿಷ್ಕರಿಸಿದೆ.

ಮೂರು ವರ್ಷ ನಿರಂತರವಾಗಿ ಅನುದಾನ ಪಡೆಯುವ ಸಂಘ–ಸಂಸ್ಥೆಗಳು ನಾಲ್ಕನೇ ವರ್ಷಕ್ಕೆ ಧನಸಹಾಯ ಪಡೆಯುವಂತಿಲ್ಲ ಎಂಬ ನಿಯಮವನ್ನು ಕೈಬಿಡಲಾಗಿದೆ. ಧನಸಹಾಯ ಪಡೆದು ಆಯೋಜಿಸುವ ಕಾರ್ಯಕ್ರಮಗಳ ಮಾಹಿತಿಯನ್ನು ಕಡ್ಡಾಯವಾಗಿ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರ ಗಮನಕ್ಕೆ ತರಬೇಕು, ಅವರನ್ನು ಕಡ್ಡಾಯವಾಗಿ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕು ಎಂಬ ನಿಯಮವನ್ನೂ ಕೈಬಿಡಲಾಗಿದೆ.

ನಿಗದಿತ ಅವಧಿಯೊಳಗೆ ದಾಖಲೆ ಮರು ಸಲ್ಲಿಸದೇ ಅರ್ಜಿ ತಿರಸ್ಕೃತಗೊಂಡಲ್ಲಿ, ತಾಂತ್ರಿಕ ಕಾರಣದಿಂದ ಸೇವಾಸಿಂಧು ತಂತ್ರಾಂಶದಲ್ಲಿ ದಾಖಲೆ ಸಲ್ಲಿಸಲು ಸಾಧ್ಯವಾಗದಿದ್ದಲ್ಲಿ, ಸದರಿ ದಾಖಲೆಗಳನ್ನು ಭೌತಿಕವಾಗಿ ಜಿಲ್ಲಾ ಸಮಿತಿ ಮುಂದೆ ಮಂಡಿಸಬೇಕು ಎಂದು ತಿಳಿಸಲಾಗಿದೆ. ಹಿಂದೆ ಮರುಸಲ್ಲಿಸಲು 10 ದಿನ ಸಮಯ ನೀಡಲಾಗಿತ್ತು.

ಕಾರ್ಯಕ್ರಮ ನಿರ್ಬಂಧ ಸಡಿಲಿಕೆ: ಕಾರ್ಯಕ್ರಮದ ವಿಡಿಯೊ, ಫೋಟೊ ಸೇರಿ ಅಗತ್ಯ ದಾಖಲಾತಿಗಳನ್ನು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವಾಗ ತಾಂತ್ರಿಕ ತೊಂದರೆ ಕಾಣಿಸಿ ಕೊಂಡಲ್ಲಿ, ಸಹಾಯಕ ನಿರ್ದೇಶಕರ ಅಧಿಕೃತ ಇ -ಮೇಲ್ ವಿಳಾಸಕ್ಕೆ ನಿಗದಿತ ದಾಖಲೆಗಳನ್ನು ಕಳುಹಿಸಬಹುದು ಎಂದು ನೂತನ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಅರ್ಜಿ ಸಲ್ಲಿಸುವ ಸಂಘ–ಸಂಸ್ಥೆಗಳು ನಿಗದಿತ ಅವಧಿಯೊಳಗೆ ಕನಿಷ್ಠ ಮೂರು ಕಾರ್ಯಕ್ರಮಗಳನ್ನು ನಡೆಸಿರಬೇಕು ಎಂಬ ನಿಯಮವನ್ನೂ ಕೈಬಿಡಲಾಗಿದೆ.

ಇತರೆ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸಿದ ಕಾರ್ಯಕ್ರಮಗಳನ್ನು ಪರಿಗಣಿಸತಕ್ಕದ್ದಲ್ಲ ಎಂಬ ನಿಯಮವನ್ನು ರದ್ದುಪಡಿಸಲಾಗಿದೆ. ಧನಸಹಾಯ ಪಡೆದು ಏರ್ಪಡಿಸುವ ಕಾರ್ಯಕ್ರಮಗಳನ್ನು ಜೂನ್‌ನಿಂದ ಜನವರಿ ಅಂತ್ಯದೊಳಗೆ ಪೂರ್ಣಗೊಳಿಸುವುದು. ಜನವರಿ ನಂತರದ ಕಾರ್ಯಕ್ರಮಗಳಿಗೆ ಮುಂದಿನ ಆರ್ಥಿಕ ವರ್ಷದಲ್ಲಿ ಧನಸಹಾಯಕ್ಕೆ ಪರಿಗಣಿಸುವುದು ಸೇರಿ ಕೆಲ ನಿಯಮಗಳನ್ನು ಕೈಬಿಡಲಾಗಿದೆ.

ಫಾತಿಮತ್‌ಗೆ ಸಹಪಾಠಿಗಳೇ ಆಸರೆ

ಬಡತನವಿದ್ದರೂ ಅಂಗವಿಕಲೆಗೆ ಕಲಿಯುವ ಹಂಬಲ

• ಸತೀಶ್ ಕೊಣಾಜೆ

ಫಾತಿಮತ್ ನಿಶಾರನ್ನು ಗಾಲಿ ಕುರ್ಚಿಯಲ್ಲಿ ತರಗತಿಗೆ ಕರೆದುಕೊಂಡು ಹೋಗುತ್ತಿರುವ ಸಬ್ರಿನಾ, ಸಫೀರ ಮತ್ತು ಸೌಜನ್ಯಾ

ಮುಡಿಪು (ದಕ್ಷಿಣ ಕನ್ನಡ): ಬಡತನದಲ್ಲೇ ಜೀವನ ಸಾಗಿಸುತ್ತಿರುವ ಕುಟುಂಬದಲ್ಲಿ ಅಂಗವೈಕಲ್ಯದೊಂದಿಗೆ ಜನಿಸಿದ ಫಾತಿಮತ್ ನಿಶಾ ಅವರ ಶಿಕ್ಷಣದ ಕನಸು ನನಸಾಗಿಸಲು ಟೊಂಕಕಟ್ಟಿ ನಿಂತಿದ್ದಾರೆ ಅವರ ಸಹಪಾಠಿಗಳು.

ಕೊಣಾಜೆ ಗ್ರಾಮದ ಬಾಡಿಗೆ ಮನೆಯಲ್ಲಿ ವಾಸವಾಗಿರುವ ಆಸ್ಯಮ್ಮ ಅವರ ಪುತ್ರಿ ಫಾತಿಮತ್ ನಿಶಾಗೆ ಈಗ 17ರ ಹರಯ. ಪದವು ಮಹಾತ್ಮ ಗಾಂಧಿ ಪ್ರೌಢಶಾಲೆಯ ಹತ್ತನೇ ತರಗತಿಯಲ್ಲಿ ಕಲಿಯುತ್ತಿರುವ ಅವರ ನಿತ್ಯದ ಎಲ್ಲ ಕೆಲಸಗಳಿಗೂ ತರಗತಿಯ ವಿದ್ಯಾರ್ಥಿನಿಯರು ನೆರವಾಗುತ್ತಿದ್ದಾರೆ.

ಪ್ರತಿಭಾನ್ವಿತ ವಿದ್ಯಾರ್ಥಿನಿ ನಿಶಾ ಅವರ ತಂದೆ ಹಲೀಮ್ ಕೆಲವು ವರ್ಷಗಳ ಹಿಂದೆ ತೀರಿಹೋಗಿದ್ದಾರೆ. ಅಜ್ಜಿ ಮೈಮುನಾ, ತಾಯಿ ಮತ್ತು ಕಿರಿಯ ಸಹೋದರನೊಂದಿಗೆ ಕೊಣಾಜೆಯ ಹಸನ್ ಕಾಂಪೌಂಡ್‌ನಲ್ಲಿ ನಿಶಾ ವಾಸವಾಗಿದ್ದಾರೆ. ಬೀಡಿ ಕಾರ್ಮಿಕೆಯಾಗಿರುವ ತಾಯಿಯ ದುಡಿಮೆಯಿಂದ ಎಲ್ಲರ ಜೀವನವೂ ಸಾಗಿಸಬೇಕಾದ ಅನಿವಾರ್ಯ ಸ್ಥಿತಿ ಈ ಕುಟುಂಬದ್ದು.

ಪ್ರಜಾವಾಣಿ ವಿಶೇಷ

ನಿಶಾಗೆ ಕೈ ಮತ್ತು ಕಾಲುಗಳಲ್ಲಿ ಬಲವಿಲ್ಲದ ಸಮಸ್ಯೆ ಜನಿಸುವಾಗಲೇ ಇತ್ತು. ಅಂಗವೈಕಲ್ಯದ ನಡುವೆಯೇ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಿದ ಫಾತಿಮತ್ ಅವರನ್ನು ಹೈಸ್ಕೂಲ್‌ಗೆ ಕಳುಹಿಸದೇ ಇರಲು ಮನೆಯಲ್ಲಿ ನಿರ್ಧಾರವಾಗಿತ್ತು. ನಿರಾಸೆಯ ನಡುವೆಯೇ ಹಠ ಹಿಡಿದು ಓದಲು ಮುಂದಾದ ಅವರಿಗೆ ಬೆನ್ನೆಲುಬು ಆಗಿ ನಿಂತವರು ಗೆಳತಿಯರಾದ ಸಬ್ರಿನಾ, ಫಾತಿಮತ್ ಸಫೀರಾ, ಸೌಜನ್ಯಾ ಅವರ ತಂಡ.

> **ಫಾತಿಮತ್ ನೆರವಿಗೆ ಅನೇಕರಲ್ಲಿ ಮನವಿ ಮಾಡಿದ್ದೆ. ನಾಸಿರ್ ಅವರು ಆಟೊ ಬಾಡಿಗೆಯ ವ್ಯವಸ್ಥೆ ಮಾಡಿದ್ದಾರೆ. ಇನ್ನಷ್ಟು ನೆರವಿಗೆ ಸಮಾಜ ಮುಂದಾಗಬೇಕು**
> **ಮೀನಾ ಗಾಂವ್ಕರ್,** ಕೊಣಾಜೆ ಶಾಲೆಯಿಂದ ವರ್ಗವಾದ ಮುಖ್ಯ ಶಿಕ್ಷಕಿ

> **ಫಾತಿಮತ್ ನಿಶಾ ಅನೇಕ ವರ್ಷಗಳಿಂದ ತರಗತಿಗೆ ಟಾಪರ್. ಸಮಾಜ ಸಹಕರಿಸಿ ಓದಿಗೆ ನೆರವಾದರೆ ಆಕೆ ಮುಂದೊಂದು ದಿನ ಸಾಧಕಿಯಾಗುವುದರಲ್ಲಿ ಸಂದೇಹವಿಲ್ಲ.**
> **ರಾಜೀವ್ ನಾಯ್ಕ್,** ಪ್ರಭಾರ ಮುಖ್ಯಶಿಕ್ಷಕ

ಶೌಚಾಲಯದಲ್ಲೂ ನೆರವು: ಶಾಲೆಗೆ ಆಟೊದಲ್ಲಿ ಬರುವ ಫಾತಿಮತ್ ನಿಶಾರನ್ನು ಎತ್ತಿ ಗಾಲಿ ಕುರ್ಚಿಯಲ್ಲಿ ಕುಳ್ಳಿರಿಸಿ ತರಗತಿಯೊಳಗೆ ಕರೆದುಕೊಂಡು ಹೋಗುವ ಸಹಪಾಠಿಗಳು ಶೌಚಾಲಯದಲ್ಲೂ ನೆರವಾಗುತ್ತಾರೆ.

ಕಲಿಕೆಯಲ್ಲಿ ಮುಂದೆ ಇರುವ ಫಾತಿಮತ್, ವೈದ್ಯೆಯಾಗುವ ಕನಸು ಕಂಡಿದ್ದಾರೆ. 'ವೈದ್ಯೆಯಾಗಿ ಬಡವರಿಗೆ ಮತ್ತು ಅಂಗವಿಲರಿಗೆ ಉಚಿತ ಚಿಕಿತ್ಸೆ ನೀಡಬೇಕೆಂಬುದು ನನ್ನ ಮಹದಾಸೆ' ಎನ್ನುವ ಫಾತಿಮತ್ 'ಸಹಪಾಠಿಗಳ ಸಹಕಾರಕ್ಕೆ ಹೇಗೆ ಕೃತಜ್ಞತೆ ಸಲ್ಲಿಸಬೇಕೆಂಬುದು ತಿಳಿಯುತ್ತಿಲ್ಲ' ಎಂದರು.

ಪ್ಲಾಸ್ಟಿಕ್ ಸರ್ಜರಿ ಉಚಿತ ಶಿಬಿರ

ಬೆಂಗಳೂರು: ನಗರದ ಫ್ರೆಂಡ್ಸ್ ವೆಲ್‌ಫೇರ್ ಆರ್ಗನೈಸೇಷನ್ ವತಿಯಿಂದ ಬನಶಂಕರಿಯ ಆವಲಹಳ್ಳಿಯಲ್ಲಿರುವ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ಜ.15ರಿಂದ 24ರವರೆಗೆ ಉಚಿತವಾಗಿ ಪ್ಲಾಸ್ಟಿಕ್ ಸರ್ಜರಿ ಮಾಡುವ ಶಿಬಿರ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಜ.15ರಂದು ಬೆಳಿಗ್ಗೆ 8.30ರಿಂದ ರೋಗಿಗಳ ತಪಾಸಣೆ ನಡೆಯಲಿದೆ. ಅಪಘಾತ ಸಂತ್ರಸ್ತರಿಗೆ, ಆ್ಯಸಿಡ್ ಬಾಧಿತರಿಗೆ, ಕೈಗಾರಿಕಾ ಅಥವಾ ವಿದ್ಯುತ್ ಸುಟ್ಟ ಗಾಯದ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ಜರ್ಮನಿಯ ವೈದ್ಯರ ತಂಡ ಉಚಿತ ಚಿಕಿತ್ಸೆ ನೀಡಲಿದೆ. ಜ.16ರಿಂದ 24ರವರೆಗೆ ಶಸ್ತ್ರಚಿಕಿತ್ಸೆ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ– 9880307780 ಅಥವಾ 9148741707ಗೆ ಸಂಪರ್ಕಿಸಿ.

ಕ್ಷೇತ್ರ ವಿಂಗಡಣೆ ಕರಡು ಪಟ್ಟಿ ಪ್ರಕಟ

ಜಿಲ್ಲಾ, ತಾಲ್ಲೂಕು ಪಂಚಾಯಿತಿ: ಆಕ್ಷೇಪಣೆ ಸಲ್ಲಿಸಲು ಜ.16ರವರೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ರಾಜ್ಯದ 31 ಜಿಲ್ಲೆಗಳ ಜಿಲ್ಲಾ ಪಂಚಾಯಿತಿಗಳು ಹಾಗೂ ತಾಲ್ಲೂಕು ಪಂಚಾಯಿತಿಗಳ ಕ್ಷೇತ್ರಗಳ ಪುನರ್ ವಿಂಗಡಣೆ ಪ್ರಕ್ರಿಯೆಯ ಮೊದಲ ಹಂತವನ್ನು ಪೂರ್ಣಗೊಳಿಸಿದೆ. ಕ್ಷೇತ್ರಗಳ ಕರಡು ಪಟ್ಟಿಯನ್ನು ಸೋಮವಾರ ಪ್ರಕಟಿಸಿದೆ.

ಪ್ರತಿ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳ ವಿವರಗಳೊಂದಿಗೆ ಅಧಿಸೂಚನೆ ಹೊರಡಿಸಲಾಗಿದೆ. ಹಿಂದಿನ ಬಾರಿ 30 ಜಿಲ್ಲೆಗಳಿಗೆ ಸೀಮಿತವಾಗಿ ಕ್ಷೇತ್ರ ಪುನರ್ ವಿಂಗಡಣೆ ಪಟ್ಟಿ ಪ್ರಕಟಿಸಲಾಗಿತ್ತು. ವಿಜಯನಗರ ಜಿಲ್ಲೆ ರಚನೆ ಆಗಿರುವುದರಿಂದ 31 ಜಿಲ್ಲಾ ಪಂಚಾಯಿತಿಗಳಿಗೆ ಕ್ಷೇತ್ರ ಪುನರ್ ವಿಂಗಡಣೆ ಮಾಡಲಾಗಿದೆ. ಅವಿಭಜಿತ ಬಳ್ಳಾರಿ ಜಿಲ್ಲಾ ಪಂಚಾಯಿತಿಯಲ್ಲಿ 40 ಕ್ಷೇತ್ರಗಳಿದ್ದವು. ಈಗ ಎರಡೂ ಜಿಲ್ಲೆಗಳಲ್ಲಿ ತಲಾ 28 ಕ್ಷೇತ್ರಗಳನ್ನು ಸೃಜಿಸಲಾಗಿದೆ.

ಬೆಳಗಾವಿ ಜಿಲ್ಲಾ ಪಂಚಾಯಿತಿಯಲ್ಲಿ ಅತ್ಯಧಿಕ 91 ಕ್ಷೇತ್ರಗಳಿವೆ. ತುಮಕೂರು ಜಿಲ್ಲಾ ಪಂಚಾಯಿತಿಯಲ್ಲಿ 57, ಉತ್ತರ ಕನ್ನಡ ಜಿಲ್ಲಾ ಪಂಚಾಯಿತಿಯಲ್ಲಿ 54, ಕಲಬುರ ಜಿಲ್ಲಾ ಪಂಚಾಯಿತಿಯಲ್ಲಿ 48 ಕ್ಷೇತ್ರಗಳಿವೆ. ಕೊಡಗು ಮತ್ತು ಗದಗ ಜಿಲ್ಲಾ ಪಂಚಾಯಿತಿಗಳು ಅತಿ ಕಡಿಮೆ ಸದಸ್ಯ ಸ್ಥಾನಗಳನ್ನು ಹೊಂದಿದ್ದು, ತಲಾ 25 ಕ್ಷೇತ್ರಗಳಿವೆ.

ಆಕ್ಷೇಪಣೆ ಸಲ್ಲಿಸಲು 15 ದಿನ: ಈಗ ಪ್ರಕಟಿಸಿರುವ ಕರಡು ಪಟ್ಟಿಯಲ್ಲಿರುವ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಗಡಿ, ವ್ಯಾಪ್ತಿ ಮತ್ತಿತರ ವಿಚಾರಗಳಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಸಲ್ಲಿಸಲು ಜ. 16ರ ಸಂಜೆ 5 ಗಂಟೆಯವರೆಗೂ ಕಾಲಾವಕಾಶ ನೀಡಲಾಗಿದೆ.

ಆನ್‌ಲೈನ್ ಮೂಲಕ, ಖುದ್ದಾಗಿ ಅಥವಾ ಅಂಚೆ ಮೂಲಕ ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಕಚೇರಿಗೆ ಆಕ್ಷೇಪಣೆ ಸಲ್ಲಿಸಬಹುದು ಎಂದು ಆಯೋಗವು ಅಧಿಸೂಚನೆಯಲ್ಲಿ ತಿಳಿಸಿದೆ.

ಆನ್‌ಲೈನ್ ಮೂಲಕ ಆಕ್ಷೇಪಣೆ ಸಲ್ಲಿಸುವವರು https://rdpr.karnataka.gov.in/rdc/public/ ವೆಬ್‌ಸೈಟ್‌ನ ಮುಖಪುಟವನ್ನು ಪ್ರವೇಶಿಸಿ, ಎಡ ಭಾಗದಲ್ಲಿರುವ 'ಸಾರ್ವಜನಿಕ ಸಲಹೆಗಳು' ಎಂಬ ಶೀರ್ಷಿಕೆಯ ಮೇಲೆ ಕ್ಲಿಕ್ ಮಾಡಿ, ಅಲ್ಲಿ ಆಕ್ಷೇಪಣೆಗಳನ್ನು ದಾಖಲಿಸಬಹುದು ಎಂದು ಆಯೋಗ ಹೇಳಿದೆ.

ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ, ಮೂರನೇ ಗೇಟ್, ಎರಡನೇ ಮಹಡಿ, ಕೊಠಡಿ ಸಂಖ್ಯೆ- 222/ಎ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವೀದಿ, ಬೆಂಗಳೂರು- 560001 ಈ ವಿಳಾಸಕ್ಕೆ ಖುದ್ದಾಗಿ ಅಥವಾ ಅಂಚೆ ಮೂಲಕ ಆಕ್ಷೇಪಣೆಗಳನ್ನು ಸಲ್ಲಿಸುವುದಕ್ಕೂ ಅವಕಾಶ ನೀಡಲಾಗಿದೆ.

ಜೆ.ಪಿ.ನಡ್ಡಾ 3 ಜಿಲ್ಲೆ ಪ್ರವಾಸ

ಬೆಂಗಳೂರು: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಇದೇ 5, 6 ರಂದು ಚಿತ್ರದುರ್ಗ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳಲ್ಲಿ ಪಕ್ಷದ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನ ತಿಳಿಸಿದ್ದಾರೆ.

5ರಂದು ಮಧ್ಯಾಹ್ನ ತುಮಕೂರು ಮತ್ತು ಮಧುಗಿರಿಯ ಶಕ್ತಿ ಕೇಂದ್ರಗಳ ಪ್ರಮುಖರ ಸಭೆಯಲ್ಲಿ ಭಾಗವಹಿಸುವರು. ಬಳಿಕ ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಲಿದ್ದಾರೆ. ಚಿತ್ರದುರ್ಗದಲ್ಲಿ ಎಸ್‌ಸಿ, ಎಸ್‌ಟಿ, ಒಬಿಸಿ ಕಾರ್ಯಕರ್ತ ಸಮಾವೇಶದಲ್ಲಿ ಭಾಗವಹಿಸುವರು. ಬಳಿಕ ಮಾದಾರ ಚೆನ್ನಯ್ಯ ಗುರುಪೀಠ, ಸಿರಿಗೆರೆ ಮತ್ತು ತರಳಬಾಳು ಮಠಕ್ಕೆ ಭೇಟಿ ನೀಡುವರು.

6 ರಂದು ಬೆಳಿಗ್ಗೆ ಅವರು ಹರಿಹರದ ಪಂಚಮಸಾಲಿ ಮಠ, ಬೆಳ್ಳುಡಿಯ ಕನಕಗುರುಪೀಠ, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠಕ್ಕೆ ಭೇಟಿ ನೀಡಲಿದ್ದಾರೆ. ಬಳಿಕ ಬೂತ್ ವಿಜಯ ಅಭಿಯಾನ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಸಂಜೆ ತುಮಕೂರು ಜಿಲ್ಲೆ ಸಿರಾದಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸುವರು. ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ದಾವಣಗೆರೆ, ತುಮಕೂರು ಜಿಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು ಎಂದು ತಿಳಿಸಿದ್ದಾರೆ.

'ಕೈ' ಟಿಕೆಟ್: ಡಿಕೆಶಿ ಇಂದು ದೆಹಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಗೆ ಸುಮಾರು 150 ಕ್ಷೇತ್ರಗಳಿಗೆ ಪಕ್ಷದ ಅಭ್ಯರ್ಥಿಗಳ ಹೆಸರನ್ನು ಸಂಕ್ರಾಂತಿ (ಜ.14) ಕಳೆಯುತ್ತಿದ್ದಂತೆ ಘೋಷಿಸಲು ತಯಾರಿ ನಡೆಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ರಾಹುಲ್ ಗಾಂಧಿ ಸೇರಿದಂತೆ ಪಕ್ಷದ ವರಿಷ್ಠರ ಜೊತೆ ಸಮಾಲೋಚಿಸಲು ಬುಧವಾರ ದೆಹಲಿ ಪ್ರವಾಸ ಕೈಗೊಳ್ಳಲಿದ್ದಾರೆ.

'ಬುಧವಾರ ಬೆಳಿಗ್ಗೆ ತುರುವೇಕೆರೆಯಲ್ಲಿ ಪಕ್ಷದ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಬಳಿಕ ದೆಹಲಿಗೆ ತೆರಳಲಿದ್ದಾರೆ. ರಾಹುಲ್ ಗಾಂಧಿ, ಕೆ.ಸಿ.ವೇಣುಗೋಪಾಲ್ ಮತ್ತು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಲಿದ್ದಾರೆ. ಒಟ್ಟಿಗೆ ಭೇಟಿ ಮಾಡಲಿದ್ದಾರೆಯೇ ಅಥವಾ ಪ್ರತ್ಯೇಕವಾಗಿ ಭೇಟಿ ಮಾಡಲಿದ್ದಾರೆಯೇ ಎಂಬ ಬಗ್ಗೆ ಖಚಿತವಾಗಿಲ್ಲ' ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

'ಇದೇ 6ರಂದು ಅರಮನೆ ಮೈದಾನದಲ್ಲಿ ಪಕ್ಷದ 'ನಾ ನಾಯಕಿ' ಸಮಾವೇಶ ನಡೆಯಲಿದೆ. ಈ ಸಮಾವೇಶಕ್ಕೆ ಪ್ರಿಯಾಂಕಾ ಗಾಂಧಿ ಬರಬೇಕಿತ್ತು. ಆದರೆ, ಅದೇ ದಿನ ಅವರಿಗೆ ಬೇರೆ ಕಾರ್ಯಕ್ರಮ ಇರುವುದರಿಂದ ಜ. 8ರಂದು ಚಿತ್ರದುರ್ಗದಲ್ಲಿ ಪಕ್ಷದ ವತಿಯಿಂದ ಪರಿಶಿಷ್ಟ ಜಾತಿ, ಪಂಗಡಗಳ ಐಕ್ಯತಾ ಸಮಾವೇಶಕ್ಕೆ ಆಹ್ವಾನಿಸಲು ಉದ್ದೇಶಿಸಲಾಗಿದೆ. ಪ್ರಿಯಾಂಕಾ ಗಾಂಧಿ ಅವರನ್ನು ರಾಜ್ಯಕ್ಕೆ ಕರೆದುಕೊಂಡು ಬರುವ ಬಗ್ಗೆಯೂ ಪಕ್ಷದ ನಾಯಕರ ಜೊತೆ ಶಿವಕುಮಾರ್ ಚರ್ಚೆ ನಡೆಸುವ ಸಾಧ್ಯತೆ ಇದೆ' ಎಂದೂ ಮೂಲಗಳು ಹೇಳಿವೆ.

ಸಮನ್ವಯ ಸಮಿತಿಗಳ ರಚನೆ

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಲು ಪಕ್ಷದ ಹಿರಿಯ ನಾಯಕರು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳಲಿದ್ದು, ಅದರ ಯಶಸ್ಸಿಗೆ ಎರಡು ಪ್ರತ್ಯೇಕ ಸಮನ್ವಯ ಸಮಿತಿಗಳನ್ನು ಕೆಪಿಸಿಸಿ ರಚಿಸಿದೆ.

ಉತ್ತರ ಕರ್ನಾಟಕದಲ್ಲಿ ನಾಯಕರ ಪ್ರವಾಸವನ್ನು ವ್ಯವಸ್ಥಿತವಾಗಿ ಆಯೋಜಿಸಲು ಕೆಪಿಸಿಸಿ ಉಪಾಧ್ಯಕ್ಷ ಬಸವರಾಜ ರಾಯರಡ್ಡಿ ನೇತೃತ್ವದಲ್ಲಿ ಮತ್ತು ದಕ್ಷಿಣ ಕರ್ನಾಟಕ ಭಾಗದ ಜಿಲ್ಲೆಗಳ ಪ್ರವಾಸ ಉಸ್ತುವಾರಿಗೆ ಮತ್ತೊಬ್ಬ ಉಪಾಧ್ಯಕ್ಷ, ರಾಜ್ಯಸಭೆ ಸದಸ್ಯ ಜಿ.ಸಿ.ಚಂದ್ರಶೇಖರ್ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿದೆ.

ರಾಯರಡ್ಡಿ ನೇತೃತ್ವದ ಸಮಿತಿಯಲ್ಲಿ ಪಕ್ಷದ ನಾಯಕರಾದ ವಿ.ಆರ್. ಸುದರ್ಶನ್, ಎನ್.ಎಸ್.ಬೋಸರಾಜ್, ಪ್ರಕಾಶ್ ರಾಠೋಡ್, ಆರ್. ಬಿ.ತಿಮ್ಮಾಪೂರ, ವೀರಕುಮಾರ್ ಪಾಟೀಲ್, ಅರವಿಂದ ಅರಳಿ ಸೇರಿ 21 ಮಂದಿ ಮತ್ತು ಎಲ್ಲ ಮುಂಚೂಣಿ ಘಟಕ, ಸೆಲ್, ವಿಭಾಗಗಳ ಅಧ್ಯಕ್ಷರು ಇದ್ದಾರೆ. ಜಿ.ಸಿ. ಚಂದ್ರಶೇಖರ್ ನೇತೃತ್ವದ ಸಮಿತಿಯಲ್ಲಿ ಕೆ. ಗೋವಿಂದರಾಜ್, ಎಚ್.ಎಂ. ರೇವಣ್ಣ, ಎಸ್. ರವಿ, ಮಂಜುನಾಥ ಭಂಡಾರಿ, ನಸೀರ್ ಅಹ್ಮದ್ ಸೇರಿದಂತೆ 28 ಮಂದಿ ಇದ್ದಾರೆ. ಜೊತೆಗೆ ಪಕ್ಷದ ಮುಂಚೂಣಿ ಘಟಕಗಳ ಅಧ್ಯಕ್ಷರೂ ಇದ್ದಾರೆ.

'ಪಕ್ಷದ ನಾಯಕರು ಕೈಗೊಳ್ಳುವ ರಾಜ್ಯ ಪ್ರವಾಸದ ಸಂದರ್ಭದಲ್ಲಿ ಕೆಪಿಸಿಸಿ ಉಸ್ತುವಾರಿ ಪದಾಧಿಕಾರಿಗಳು, 2023ರ ಟಿಕೆಟ್ ಆಕಾಂಕ್ಷಿಗಳು, ಬ್ಲಾಕ್ ಘಟಕಗಳ ಸಮನ್ವಯಕಾರರು, ಮುಂಚೂಣಿ ಮತ್ತು ಜಿಲ್ಲಾ ಘಟಕಗಳ ಮುಖ್ಯಸ್ಥರು ಜೊತೆಗೆ ಇರಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೂಚಿಸಿದ್ದಾರೆ.

ಮತದಾರರ ಸೇರ್ಪಡೆ ಕಾರ್ಯ ಚುರುಕುಗೊಳಿಸಿ: ಆಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿಗೆ ಅರ್ಹ ಮತದಾರರ ಹೆಸರು ಸೇರಿಸುವ ಕಾರ್ಯ ಚುರುಕುಗೊಳಿಸಬೇಕು. ಪರಿಷ್ಕೃತ ಪಟ್ಟಿಯಲ್ಲಿ ಕನಿಷ್ಠ 3 ಲಕ್ಷ ಹೊಸ ಮತದಾರರು ಸೇರ್ಪಡೆಯಾಗುವಂತೆ ಕ್ರಮವಹಿಸಬೇಕು ಎಂದು ಕೇಂದ್ರ ಚುನಾವಣಾ ಆಯೋಗದ ಉಪಚುನಾವಣಾ ಆಯುಕ್ತ ಅಜಯ್ ಭಾದೂ ಸೂಚನೆ ನೀಡಿದ್ದಾರೆ.

ರಾಜ್ಯ ವಿಧಾನಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಚುನಾವಣಾ ಪೂರ್ವ ತಯಾರಿ ಕಾರ್ಯಗಳ ಪರಿಶೀಲನೆ ನಡೆಸಲು ಸೋಮವಾರ ನಗರಕ್ಕೆ ಬಂದಿದ್ದ ಅವರು ಹಿರಿಯ ಅಧಿಕಾರಿಗಳ ಜತೆ ಚರ್ಚೆ ನಡೆಸಿದರು. ಮಂಗಳವಾರ ಎಲ್ಲ ಜಿಲ್ಲಾ ಚುನಾವಣಾಧಿಕಾರಿಗಳ ಜತೆಗೆ ಅವರು ವರ್ಚುವಲ್ ಆಗಿ ಸಭೆ ನಡೆಸಿದರು.

ಇದೇ ತಿಂಗಳು ಪ್ರಕಟವಾಗುವ ಪರಿಷ್ಕೃತ ಅಂತಿಮ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಚರ್ಚೆ ನಡೆದಿದೆ. ಮುಖ್ಯವಾಗಿ ಅಂತಿಮ ಮತದಾರರ ಪಟ್ಟಿ ತಯಾರಿಕೆಯಲ್ಲಿ ಮೃತಪಟ್ಟವರ ಹೆಸರು ತೆಗೆದುಹಾಕುವುದು, ವಿಳಾಸ ಬದಲಾದವರು, ಹೆಸರುಗಳ ವರ್ಗಾವಣೆ, ಮತ್ತು ಹೊಸ, ಯುವ ಮತದಾರರ ಹೆಸರುಗಳ ಸೇರ್ಪಡೆಗೆ ಸಂಬಂಧಿಸಿ ಆಯೋಗದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ಮತದಾರರ ಪಟ್ಟಿಯಲ್ಲಿ ಸಾರ್ವಜನಿಕರ ಮಾಹಿತಿ ಸರಿಯಾಗಿರಬೇಕು. ಯಾವುದೇ ಕಾರಣಕ್ಕೂ ಪಟ್ಟಿಯಲ್ಲಿರುವ ಅರ್ಹ ಮತದಾರರ ಹೆಸರುಗಳನ್ನು ಕೈಬಿಡದಂತೆ ಎಚ್ಚರಿಕೆ ವಹಿಸಬೇಕು. ಜಿಲ್ಲಾ ಚುನಾವಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಜಿಲ್ಲೆಗಳಲ್ಲಿ ಖುದ್ದು ಭೇಟಿ ನೀಡಿ ಪರಿಶೀಲಿಸಬೇಕು. ಪ್ರತಿ ಮನೆಗೂ ಭೇಟಿ ನೀಡಿ ಸರಿಯಾದ ಮಾಹಿತಿಯನ್ನು ಅಧಿಕಾರಿಗಳು ಸಂಗ್ರಹಿಸಿರುವ ಬಗ್ಗೆ ನಿಗಾವಹಿಸಬೇಕು ಎಂದರು.

ಅಲ್ಲದೇ, ಅಂತಿಮ ಮತದಾರರ ಪಟ್ಟಿಯ ತಯಾರಿಯಲ್ಲಿ ತಮ್ಮ ಜಿಲ್ಲಾ ವ್ಯಾಪ್ತಿಗಳ ವಿಧಾನಸಭಾ ಕ್ಷೇತ್ರಗಳಲ್ಲಿ ಅತ್ಯಂತ ಕಡಿಮೆ ಸೇರ್ಪಡೆಗೊಂಡಿರುವ ಮತ್ತು ತೆಗೆದುಹಾಕಿರುವ 10 ಮತ ಕೇಂದ್ರಗಳನ್ನು ಗುರುತಿಸಿ ಅವುಗಳಿಗೆ ಸಕಾರಣ ಗುರುತಿಸಿ ಸರಿಮಾಡುವಂತೆಯೂ ಸೂಚಿಸಿದರು.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ನಂದಿನಿ–ಅಮೂಲ್: ಅಮಿತ್ ಶಾ ಹೇಳಿದ್ದೇನು?

ಭಾಗವಹಿಸುವವರು

ಸಂವಾದ

ಡಾ. ಶಂಕರ ಸಿದ್ಧಾಂತಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಮಾಜಿ ನಿರ್ದೇಶಕ, ಬೆಂಗಳೂರು

ಸಿದಗೌಡ ಮೋದಗಿ ರಾಜ್ಯಾಧ್ಯಕ್ಷ, ಭಾರತೀಯ ಕೃಷಿಕ ಸಮಾಜ, ಬೆಳಗಾವಿ

ಎಲ್. ಗಂಗಾಧರಮೂರ್ತಿ ರಾಜ್ಯ ಪ್ರಧಾನ ಕಾರ್ಯದರ್ಶಿ, ಜೆಡಿಎಸ್

ಮಾಗಡಿ ನರಸಿಂಹಮೂರ್ತಿ ಅಧ್ಯಕ್ಷ ಬಮೂಲ್, ರಾಮನಗರ

ಮಧ್ಯಾಹ್ನ 12ರಿಂದ 1ರವರೆಗೆ

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಪ್ರಜಾವಾಣಿ ಕನ್ನಡ ಧ್ವನಿ

ಅಬಕಾರಿ ಹಗರಣ–ಐವರಿಗೆ ಮಧ್ಯಂತರ ಜಾಮೀನು

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣದಲ್ಲಿ ಐದು ಮಂದಿ ಆರೋಪಿಗಳಿಗೆ ದೆಹಲಿಯ ಕೋರ್ಟ್ ಮಂಗಳವಾರ ಮಧ್ಯಂತರ ಜಾಮೀನು ಮಂಜೂರು ಮಾಡಿದೆ. ಆರೋಪಿಗಳು ಸಲ್ಲಿಸಿರುವ ಜಾಮೀನು ಅರ್ಜಿಗಳಿಗೆ ಸಂಬಂಧಿಸಿದಂತೆ ಇದೇ 24ರೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ದೆಹಲಿ ಕೋರ್ಟ್, ಸಿಬಿಐಗೆ ನಿರ್ದೇಶನ ನೀಡಿದೆ.

ಸವಿತಾ, ಸರಜೂ ಕಾಟ್ಕರ್‌ಗೆ ಕೆಎಸ್‌ನ ಪ್ರಶಸ್ತಿ

ಪ್ರಜಾವಾಣೀ ವಾರ್ತೆ

ಸವಿತಾ ನಾಗಭೂಷಣ್



ಗರ್ತಿಕೆರೆ ರಾಘಣ್ಣ

ಸರಜೂ ಕಾಟ್ಕರ್

ಎಂ.ಕೆ.ಜಯಶ್ರೀ

ಮಂಡ್ಯ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೆ.ಎಸ್.ನರಸಿಂಹಸ್ವಾಮಿ ಟ್ರಸ್ಟ್ ನೀಡುವ 'ಕೆಎಸ್‌ನ ಸಾಹಿತ್ಯ' ಹಾಗೂ 'ಕಾವ್ಯ ಗಾಯನ ಪ್ರಶಸ್ತಿ'ಗೆ ಸವಿತಾ ನಾಗಭೂಷಣ, ಸರಜೂ ಕಾಟ್ಕರ್ ಸೇರಿದಂತೆ ನಾಲ್ವರು ಸಾಧಕರನ್ನು ಆಯ್ಕೆ ಮಾಡಲಾಗಿದೆ.

2021–22ನೇ ಸಾಲಿನ ಸಾಹಿತ್ಯ ಪ್ರಶಸ್ತಿಗೆ ಕವಯಿತ್ರಿ ಸವಿತಾ ನಾಗಭೂಷಣ್, 2022–23ನೇ ಸಾಲಿನ ಸಾಹಿತ್ಯ ಪ್ರಶಸ್ತಿಗೆ ಕವಿ ಸರಜೂ ಕಾಟ್ಕರ್ ಆಯ್ಕೆಯಾಗಿದ್ದಾರೆ. 2021–22ನೇ ಸಾಲಿನ ಕಾವ್ಯ ಗಾಯನ ಪ್ರಶಸ್ತಿಗೆ ಗಾಯಕಿ ಎಂ.ಕೆ.ಜಯಶ್ರೀ, 2022–23ನೇ ಸಾಲಿನ ಕಾವ್ಯ ಗಾಯನ ಪ್ರಶಸ್ತಿಗೆ ಗಾಯಕ ಗರ್ತಿಕೆರೆ ರಾಘಣ್ಣ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಗಳು ತಲಾ ₹25 ಸಾವಿರ ನಗದು, ಸ್ಮರಣಿಕೆಯನ್ನು ಒಳಗೊಂಡಿವೆ. ಜ.5ರಂದು ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ರೇಷ್ಮೆ, ಯುವಜನ ಸೇವೆ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಇದೇ 30ಗಳಲ್ಲಿ ಕಾಂಗ್ರೆಸ್ ಮೊದಲ ಪಟ್ಟಿ: ಸಿದ್ದರಾಮಯ್ಯ

ಹಗರಿಬೊಮ್ಮನಹಳ್ಳಿ/ಹೊಸಪೇಟೆ (ವಿಜಯನಗರ): 'ವಿಧಾನಸಭಾ ಚುನಾವಣೆಗೆ ಈ ತಿಂಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆಗೊಳಿಸುವುದರ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಇಲ್ಲಿನ ಮಾಲವಿ ಜಲಾಶಯ 13 ವರ್ಷಗಳ ನಂತರ ಭರ್ತಿಯಾದ ಹಿನ್ನೆಲೆಯಲ್ಲಿ ಶಾಸಕ ಭೀಮಾನಾಯ್ಕ ಮಂಗಳವಾರ ಏರ್ಪಡಿಸಿದ್ದ 'ಸಾರ್ಥಕ ನಮನ' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬಂದಿದ್ದ ಅವರು ಪತ್ರಕರ್ತರೊಂದಿಗೆ ಮಾತನಾಡಿದರು. ರಾಜ್ಯದಾದ್ಯಂತ ಕಾಂಗ್ರೆಸ್ ಪರ ಅಲೆ ಇರುವುದರಿಂದಲೇ ಈ ಸಲ ಚುನಾವಣೆಗೆ ಎಲ್ಲ ಕ್ಷೇತ್ರಗಳಲ್ಲಿ ಟಿಕೆಟ್ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಾಗಿದೆ ಎಂದರು.

ಡಿ ಗ್ರೂಪ್ ಹೊರಗುತ್ತಿಗೆ ನೌಕರರ ಪರ ಸಮಾಜ ಕಲ್ಯಾಣ ಇಲಾಖೆ ಸುತ್ತೋಲೆ

ಕನಿಷ್ಠ ವೇತನ ನೀಡದಿದ್ದರೆ ಎಫ್‌ಐಆರ್

• ಕೆ.ನರಸಿಂಹಮೂರ್ತಿ

ಮೈಸೂರು: ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳು, ವಸತಿ ಶಾಲೆ, ಕಾಲೇಜುಗಳಲ್ಲಿರುವ 'ಡಿ' ಗ್ರೂಪ್ ಹೊರಗುತ್ತಿಗೆ ನೌಕರರು, ಹೊರ ಸಂಪನ್ಮೂಲ ಸಿಬ್ಬಂದಿಗೆ ನಿಯಮಿತವಾಗಿ ವೇತನ ಮತ್ತು ಕನಿಷ್ಠ ವೇತನ ಪಾವತಿಯಾಗದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿರುವ ಸರ್ಕಾರ, ಅಂಥ ಏಜೆನ್ಸಿ/ಗುತ್ತಿಗೆದಾರರ ವಿರುದ್ಧ ಎಫ್‌ಐಆರ್ ದಾಖಲಿಸಲು ಸೂಚಿಸಿದೆ.

ಈ ಸಂಬಂಧ ಡಿ.28ರಂದು ಇಲಾಖೆಯು ಸುತ್ತೋಲೆ ಹೊರಡಿಸಿದ್ದು, ಇಲಾಖೆಯ ಆಯುಕ್ತರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ನಿರ್ದೇಶಕರು ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕರಿಗೆ ರವಾನಿಸಿದೆ. ಜಿಲ್ಲಾಮಟ್ಟದ ಜಂಟಿ/ಉಪ ನಿರ್ದೇಶಕರು, ಸಮನ್ವಯಾಧಿಕಾರಿಗಳೇ ಎಫ್‌ಐಆರ್ ದಾಖಲಿಸಬೇಕು ಎಂದೂ ಸ್ಪಷ್ಟಸೂಚನೆ ನೀಡಿದೆ.

ಮೈಸೂರಿನಲ್ಲಿ ಡಿ.17–18ರಂದು ಎಐಯುಟಿಯುಸಿ ಸಂಯೋಜಿತ ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘವು ಆಯೋಜಿಸಿದ್ದ 'ಹಾಸ್ಟೆಲ್ ಹೊರಗುತ್ತಿಗೆ ಕಾರ್ಮಿಕರ ಪ್ರಥಮ ರಾಜ್ಯ ಸಮ್ಮೇಳನ'ದ ಬಳಿಕ ಈ ಸುತ್ತೋಲೆ ಹೊರಬಿದ್ದಿರುವುದು ವಿಶೇಷ.

'ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕನಿಷ್ಠ ವೇತನಕ್ಕಿಂತ ಕಡಿಮೆ ವೇತನ/ಗೌರವಧನ ಪಾವತಿಸುತ್ತಿರುವುದು ಕಂಡುಬಂದರೆ, ಅಂಥ ಏಜೆನ್ಸಿ, ಗುತ್ತಿಗೆದಾರರ ವಿರುದ್ಧ ತಕ್ಷಣವೇ ಎಫ್‌ಐಆರ್ ದಾಖಲಿಸಬೇಕು. ಇಎಸ್‌ಐ/ಪಿಎಫ್ ಸೌಲಭ್ಯವನ್ನು ಸಂಬಂಧಿಸಿದ ಪ್ರಾಧಿಕಾರಗಳಿಗೆ ಸರಿಯಾಗಿ ಪಾವತಿಸಿದವರ ವಿರುದ್ಧವೂ ಎಫ್‌ಐಆರ್ ದಾಖಲಿಸಬೇಕು' ಎಂದು ಸೂಚಿಸಲಾಗಿದೆ.

'ಹೆಚ್ಚುವರಿ ಅಡುಗೆ ಸಿಬ್ಬಂದಿ ವಿದ್ಯಾರ್ಥಿಗಳು ಹೆಚ್ಚಿರುವ ವಿದ್ಯಾರ್ಥಿ ನಿಲಯಗಳು, ವಸತಿ ಶಾಲೆ, ಕಾಲೇಜುಗಳಲ್ಲಿ ಇಬ್ಬರು ಅಡುಗೆಯವರು ಇದ್ದರೆ, ಹೆಚ್ಚುವರಿಯಾಗಿ ಇನ್ನೊಬ್ಬರನ್ನು ನೇಮಿಸಿಕೊಂಡು, ವಾರಕ್ಕೊಮ್ಮೆ ರಜೆ ಕೊಡಬೇಕು' ಎಂದೂ ಸುತ್ತೋಲೆ ತಿಳಿಸಿದೆ.

'ರಾತ್ರಿ ಕಾವಲುಗಾರರನ್ನು ಹಗಲು ಹೊತ್ತಿನಲ್ಲೂ ಬಳಸಿಕೊಳ್ಳುವುದಕ್ಕೆ ಕಡಿವಾಣ ಹಾಕಿದ್ದು, ಅವರು ರಾತ್ರಿ ಎಂಟು ಗಂಟೆಗಳ ಕಾಲ ಮಾತ್ರ ಕೆಲಸ ಮಾಡಬೇಕು' ಎಂದೂ ಸುತ್ತೋಲೆ ಸ್ಪಷ್ಟಪಡಿಸಿದೆ.

'ವಾರದ ರಜೆ ಕೊಡಬೇಕು, ಎಂಟು ಗಂಟೆ ಕಾಲವಷ್ಟೇ ಕೆಲಸ ಮಾಡಿಸಬೇಕೆಂಬ ಬೇಡಿಕೆಗಳು ಈಡೇರಿರಲಿಲ್ಲ. ಅಂತಿಮವಾಗಿ ಸರ್ಕಾರ ಈ ಬಗ್ಗೆಯೂ ಸುತ್ತೋಲೆ ಹೊರಡಿಸಿದ್ದು ಸ್ವಾಗತಾರ್ಹ' ಎಂದು ಕಾರ್ಮಿಕರ ಸಂಘದ ಅಧ್ಯಕ್ಷ ಕೆ.ಸೋಮಶೇಖರ್ ಯಾದಗಿರಿ ಪ್ರತಿಕ್ರಿಯಿಸಿದರು.

'ಇದುವರೆಗೂ ರಾತ್ರಿ ಕಾವಲುಗಾರರಿಂದ ದಿನದ 24 ಗಂಟೆಯೂ ಕೆಲಸ ಮಾಡಿಸಲಾಗುತ್ತಿತ್ತು. ಅದಕ್ಕೂ ಕಡಿವಾಣ ಹಾಕಿದ್ದು ಸಂತಸದ ವಿಚಾರ' ಎಂದರು.

ಗಮನ ಸೆಳೆದ 'ಪ್ರಜಾವಾಣಿ' ವರದಿ

ಮೈಸೂರಿನಲ್ಲಿ ಡಿ.17–18ರಂದು ಎಐಯುಟಿಯುಸಿ ಸಂಯೋಜಿತ ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘವು ಆಯೋಜಿಸಿದ್ದ 'ಹಾಸ್ಟೆಲ್ ಹೊರಗುತ್ತಿಗೆ ಕಾರ್ಮಿಕರ ಪ್ರಥಮ ರಾಜ್ಯ ಸಮ್ಮೇಳನ'ದ ವರದಿಗಳ ಮೂಲಕ 'ಪ್ರಜಾವಾಣಿ' ಸರ್ಕಾರದ ಗಮನ ಸೆಳೆದಿದ್ದರಿಂದ ಈ ಸುತ್ತೋಲೆ ಹೊರಬೀಳುವಂತಾಯಿತು' ಎಂದು ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘದ ಅಧ್ಯಕ್ಷ ಕೆ.ಸೋಮಶೇಖರ್ ಯಾದಗಿರಿ ಅಭಿಪ್ರಾಯಪಟ್ಟರು.

> **ಎಫ್‌ಐಆರ್ ದಾಖಲಿಸಬೇಕು ಎಂಬ ನಿಯಮ ಅಸ್ತಿತ್ವದಲ್ಲಿದ್ದರೂ, ಜಾರಿಯಲ್ಲಿರಲಿಲ್ಲ. ಸುತ್ತೋಲೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.**
> **ಕೆ.ಸೋಮಶೇಖರ್ ಯಾದಗಿರಿ,** ಅಧ್ಯಕ್ಷ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘ

ಉದ್ಯೋಗ ವಾಣಿ

ಉನ್ನತ ಶಿಕ್ಷಣ ಇಲಾಖೆ
6ನೇ ಮಹಡಿ, 2ನೇ ಗೇಟ್, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು-560 001.

ಸಂಖ್ಯೆ: ಇಡಿ/40/ಕೆವಿವಿ/2022 ದಿನಾಂಕ: 02-01-2023

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಕುಲಪತಿಗಳ ಹುದ್ದೆಯ ನೇಮಕಾತಿ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳ ಹುದ್ದೆಗೆ ಕನ್ನಡ ವಿಶ್ವವಿದ್ಯಾಲಯ ಅಧಿನಿಯಮ, 1991ರ ಪಕರಣ 13(2)ರಡಿ ಅರ್ಜಿ ಆಹ್ವಾನಿಸಲಾಗಿದೆ.

ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರವು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನಿಸಿದೆ. ಈ ಅಧಿಸೂಚನೆಯ ದಿನಾಂಕದಿಂದ 20 ದಿನಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿ ನಮೂನೆ ಮತ್ತು ಈ ಸಂಬಂಧ ಹೆಚ್ಚಿನ ವಿವರಗಳನ್ನು ಉನ್ನತ ಶಿಕ್ಷಣ ಇಲಾಖೆಯ https://hed.karnataka.gov.in ಅಧಿಕೃತ ಜಾಲತಾಣದಿಂದ ಪಡೆಯಬಹುದು.

ಸಹಿ/- ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ.

DIPR/CP/RO3844/AAPL/2022-23

ಪ್ರಜಾವಾಣಿ
ಉದ್ಯೋಗಾವಕಾಶದ ಜಾಹೀರಾತಿಗಾಗಿ ಸಂಪರ್ಕಿಸಿ:
ಮೊ: 96069 12220

CENTRE FOR NANO AND SOFT MATTER SCIENCES
Arkavathi, Survey No.7, Shivanapura, Dasanapura Hobli, BENGALURU NORTH - 562 162

No. CeNS/2022-23/Rec./Advt 30 December 2022

RECRUITMENT IN FACULTY POSITION

The Centre for Nano and Soft Matter Sciences (CeNS) is a premiere scientific autonomous institute under the aegis of Department of Science and Technology, Government of India, carrying out Research & Development of specific areas in Nano Science and Technology including Soft Matter. It also emphasizes on basic research leading to new phenomena, processes and prototyping of devices. CeNS invites applications for a Faculty position of Scientist C from eligible individuals who wish to complement and extend the CeNS research activities.

Positions	Pay Level
Scientist 'C' (One post)	Rs. 15600-39100 - Level 10 7th CPC

Interested candidates may apply for the position in the prescribed online format (https://www.cens.res.in/en/opportunities/scientific-and-technical).

The applicant should upload copies of two important publications, a statement of research plans, a statement of technology initiative plans, and arrange to have three letters of recommendation along with the application. Last date to receive completed online applications is **20 January 2023.**

Sd/- Administration and Finance Officer

Hyderabad Karnataka Education Society
Head Office: SAC Building, PDA Engineering College Campus, Kalaburagi-585102

Ref. No. HKES/A4/Accts /2022-23/3134 Date: 28-12-2022

WANTED

Hyderabad Karnataka Education Society, Kalaburagi invites applications from the eligible candidates for the following post.

Sl. No.	Post	No.of Posts	Name of the College	Required Qualification & Experience	Age Limit	Salary Component
1	Principal	01	Poojya Dr. Shivakumar Swamiji, School of Architecture, PDA Engineering College Campus, Kalaburagi	Requisite Qualification with 10 Years of Experience in both Teaching & Administration	Below 65 Years	Rs. 2,00,000/- PM
2	Principal	01	Dr. Maalakaraddy Homeopathic Medical College & Hospital, Kalaburagi	Requisite Qualification with 10 Years of Experience in both Teaching & Administration	Below 65 Years	Rs. 2,00,000/- PM

Note:- A] Interested Candidates may apply with educational qualifications and experience Certificate.
B] Application with relevant documents should be submitted to the **Administrative officer, H. K. E. Society's Head Office, SAC Building, PDA Engineering College Campus, Kalaburagi-585102 on or before 25.01.2023.**
C] Application received after the last date will not be considered.

Place: Kalaburagi

Sd/-
DR. BHIMASHANKAR C. BILGUNDI
PRESIDENT,
H.K.E.SOCIETY, KALABURAGI





ಈಗ ನಮಗೆ 5ಜಿಯಲ್ಲಿ ಸೆಕೆಂಡಿಗೆ 500 ಎಂಬಿವರೆಗೆ ವೇಗದ ಡೇಟಾ ಸಿಗುತ್ತಿದೆ. ಆದರೆ ಇದು ಸಾಲದು ಎಂಬ ಸ್ಥಿತಿಗೆ ಇನ್ನೇನು ಸ್ವಲ್ಪ ದಿನಗಳಲ್ಲೇ ನಾವು ತಲುಪುವುದರಲ್ಲಿದ್ದೇವೆ.

5ಜಿಗೆ ಶಕ್ತಿ ನೀಡುವ ಸ್ಮಾಲ್ ಸೆಲ್‌ಗಳು

ಕೃಷ್ಣ ಭಟ್

ಕಳೆದ ಒಂದು ವರ್ಷದಿಂದಲೂ ನಮ್ಮ ಮೊಬೈಲ್‌ಗೆ 5ಜಿ ಯಾವಾಗ ಬರುತ್ತದೆ ಎಂದು ಕಾಯುತ್ತಿದ್ದೆವು. ಈಗ ಮೊಬೈಲ್‌ಗೆ 5ಜಿ ಬಂದಿದೆ. ಅದರ ಜೊತೆಗೇ ನಾವು ಡೇಟಾ ಬಳಸುವ ಪ್ರಮಾಣವೂ ಹೆಚ್ಚಾಗುತ್ತಿದೆ. 5ಜಿಯಲ್ಲಿ ಒಂದು ಬಾರಿ ನೆಟ್‌ವರ್ಕ್‌ನ ಸ್ಪೀಡ್ ಟೆಸ್ಟ್ ಮಾಡಿದರೆ 300ರಿಂದ 500 ಎಂಬಿ ಡೇಟಾ ಖಾಲಿಯಾಗುತ್ತಿದೆ. ಇದೇ ಡೇಟಾವನ್ನು ಕೆಲವೇ ವರ್ಷಗಳ ಹಿಂದೆ 3ಜಿ ನೆಟ್‌ವರ್ಕ್ ಇದ್ದಾಗ ನಾವು ಇಡೀ ತಿಂಗಳು ಬಳಸುತ್ತಿದ್ದೆವು!

ಈ ಬಳಕೆ ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಾಗಲಿದೆ. ಅಷ್ಟೇ ಅಲ್ಲ, ಈ ಡೇಟಾದ ವೇಗವೂ ನಮಗೆ ಸಾಲುವುದಿಲ್ಲ. ಈಗ ನಮಗೆ 5ಜಿಯಲ್ಲಿ ಸೆಕೆಂಡಿಗೆ 500 ಎಂಬಿ ವರೆಗೆ ವೇಗದ ಡೇಟಾ ಸಿಗುತ್ತಿದೆ. ಆದರೆ ಇದು ಸಾಲದು ಎಂಬ ಸ್ಥಿತಿಗೆ ಇನ್ನೇನು ಸ್ವಲ್ಪ ದಿನಗಳಲ್ಲೇ ನಾವು ತಲುಪುವುದರಲ್ಲಿದ್ದೇವೆ. ನಮಗೆ ಈಗ ವರ್ಚುವಲ್ ರಿಯಾಲಿಟಿಯಲ್ಲಿ ಗೇಮಿಂಗ್, ವಿಡಿಯೊ ಸ್ಟ್ರೀಮಿಂಗ್‌ಗಳಿಗೆಲ್ಲ ಇನ್ನಷ್ಟು ಡೇಟಾ ಬೇಕಾಗುತ್ತದೆ. ಶಾಪಿಂಗ್ ಕಾಂಪ್ಲೆಕ್ಸ್‌ಗಳು ವರ್ಚುವಲ್ ಆಗುವ ಹೊತ್ತಿಗೆ ಅಂಗಿಯನ್ನೋ ಪ್ಯಾಂಟನ್ನೋ ವರ್ಚುವಲ್ ಆಗಿ ನಾವು ನೋಡುವುದಕ್ಕೆ ನಮಗೆ ಒಂದಾದ ಮೇಲೆ ಒಂದರಂತೆ ಪಟಪಟನೆ ನೋಡಲು ಸೆಕೆಂಡಿಗೆ 500 ಎಂಬಿ ವೇಗದ ಡೇಟಾ ಸಾಲದು ಎಂಬ ಪರಿಸ್ಥಿತಿ ಬರುತ್ತದೆ. ಆಗ ನಮಗೆ 5ಜಿಯಿಂದ ಮುಂದೇನು ಎಂಬ ಸವಾಲು ಕಾಡಲು ಶುರುವಾಗುತ್ತದೆ.

ಇದಕ್ಕೆ ಈಗಾಗಲೇ ಟೆಲಿಕಾಂ ಕಂಪನಿಗಳು ತಯಾರಾಗಿವೆ. ಅದೇ 'ಸ್ಮಾಲ್ ಸೆಲ್'ಗಳು. ಇವುಗಳನ್ನು 'ಬೇಸ್ ಸ್ಟೇಷನ್'ಗಳು, 'ಮ್ಯಾಕ್ರೋ ಬೇಸ್ ಸ್ಟೇಷನ್'ಗಳು ಎಂದೂ ಕರೆಯಲಾಗುತ್ತದೆ. ನಮಗೆ ಈಗ ಸಿಗುತ್ತಿರುವ 5ಜಿ ಸಂಕೇತಗಳು ಮೊಬೈಲ್ ಟವರ್‌ನಿಂದ ಹೊರಟು, ನೇರವಾಗಿ ಮೊಬೈಲ್ ತಲುಪುತ್ತಿವೆ. ಇವೆಲ್ಲ 700 ಮೆಗಾಹರ್ಟ್ಸ್ ತರಂಗಾಂತರಗಳು. ಇದರಲ್ಲಿ ಹೆಚ್ಚೆಂದರೆ 500 ಎಂಬಿ ಡೇಟಾ ಹೊತ್ತೊಯ್ಯಬಲ್ಲದು. ಈ ತರಂಗಾಂತರಗಳ ಅನುಕೂಲವೆಂದರೆ ಇವು ದೂರದವರೆಗೆ ಸಾಗಬಲ್ಲವು. ಗೋಡೆಯಂತಹ ಘನವಸ್ತುವನ್ನೂ ಭೇದಿಸಿ ಸಾಗುತ್ತವೆ.

ಆದರೆ ಹೆಚ್ಚಿನ ಡೇಟಾ ಬೇಕು ಎಂದರೆ 26 ಗಿಗಾಹರ್ಟ್ಸ್ ತರಂಗಾಂತರಗಳನ್ನು ನಾವು ಬಳಸಬೇಕು. ಆದರೆ, ಇದರ ಸಮಸ್ಯೆಯೇನೆಂದರೆ, ಒಂದು ಸಣ್ಣ ತರಗೆಲೆ ಎದುರಾದರೂ ಈ ತರಂಗಾಂತರ ಅದನ್ನು ದಾಟಿ ಮುಂದೆ ಹೋಗದು. ಈ ಬ್ಯಾಂಡ್‌ನಿಂದ ಹೊರಡುವ ಸಂಕೇತಗಳು ಹೆಚ್ಚೆಂದರೆ ಒಂದು ಮೈಲು ದೂರ ಹೋಗಬಹುದು. ಹಾಗಾಗಿ ಈ ಮಿಲಿಮೀಟರ್ ವೇವ್ ಮೂಲಕ ಸಾಗುವ ಡೇಟಾವನ್ನು ಮನೆಯ ಒಳಗೆ ಬಳಸುವುದಕ್ಕೆ ನಮಗೆ ಸ್ಮಾಲ್ ಸೆಲ್ ರೇಡಿಯೋ ಉಪಕರಣಗಳು ಬೇಕು. ಈ ಸ್ಮಾಲ್ ಸೆಲ್ ರೇಡಿಯೋಗಳು ತರಂಗಾಂತರಗಳನ್ನು ಇನ್ನಷ್ಟು ದೂರಕ್ಕೆ ಕೊಂಡೊಯ್ಯಲು ಸಹಾಯ ಮಾಡುತ್ತವೆ. ಸಿಗ್ನಲ್ ಬೂಸ್ಟರ್ ರೀತಿ ಇವು ಕೆಲಸ ಮಾಡುತ್ತವೆ.

ಈ ಸ್ಮಾಲ್ ಸೆಲ್ ರೇಡಿಯೋ ಸಾಧನಗಳಲ್ಲೂ ಹಲವು ರೀತಿ ಇವೆ. ಈಗಾಗಲೇ ರಿಲಾಯನ್ಸ್ ಜಿಯೋ ಒಂದು 'ಜಿಯೋ ಏರ್ ಫೈಬರ್' ಎಂಬ ಉಪಕರಣವನ್ನು ಬಿಡುಗಡೆ ಮಾಡುವುದಾಗಿ ಘೋಷಿಸಿದೆ. ಅದು ವೈಫೈ ಸಾಧನದ ರೀತಿ ಕೆಲಸ ಮಾಡುತ್ತದೆ. ಅದರ ಹೊರತಾಗಿ, ಹೊರಾಂಗಣದಲ್ಲಿ ಅಳವಡಿಸಬಹುದಾದ ಸ್ಮಾಲ್ ಸೆಲ್ ಸಾಧನಗಳು ವ್ಯಾಪಕವಾಗಿ ಅಳವಡಿಕೆಯಾಗುವ ದಿನಗಳು ದೂರವಿಲ್ಲ.

ಇವುಗಳನ್ನು ಹೆಚ್ಚು ಹೆಚ್ಚು ಡೇಟಾ ಬಳಕೆಯಾಗುವ ಪ್ರದೇಶಗಳಾದ ಮಾರ್ಕೆಟ್, ಸಂತೆಬೀದಿಗಳು, ಬಸ್‌ಸ್ಟ್ಯಾಂಡ್‌ಗಳು, ಮಾಲ್‌ಗಳಲ್ಲಿ ಅಳವಡಿಸಲಾಗುತ್ತದೆ. ಇವುಗಳಿಗೆ ಬಹುಶಃ 2023ರಲ್ಲಿ ಬಹುದೊಡ್ಡ ಮಾರುಕಟ್ಟೆಯೇ ಸೃಷ್ಟಿಯಾಗುವ ಲಕ್ಷಣವಿದೆ. ಅಲ್ಲದೆ, ಕಂಪನಿಗಳು ತಮ್ಮ ಕ್ಯಾಂಪಸ್ ಒಳಗೆ ಕೂಡ ಇವುಗಳನ್ನು ಖರೀದಿ ಮಾಡಿ ಅಳವಡಿಸಲು ತೊಡಗುತ್ತವೆ. ಈ ಸ್ಮಾಲ್ ಸೆಲ್ ಸಾಧನಗಳು ಕೇವಲ 5ಜಿಯಲ್ಲಿ ಮಾತ್ರವಲ್ಲ, ಮುಂಬರುವ 6ಜಿಯಲ್ಲೂ ಬಳಕೆಯಾಗುತ್ತವೆ.

ಇದನ್ನು ಅಳವಡಿಸುವುದು ತುಂಬಾ ಸುಲಭ. ಅಷ್ಟೇ ಅಲ್ಲ, ಇದರ ಬೇಡಿಕೆ ಹೆಚ್ಚುತ್ತಿರುವ ಹಾಗೆಯೇ ಉತ್ಪಾದನೆ ವೆಚ್ಚ ಕೂಡ ಕಡಿಮೆಯಾಗುವುದರಿಂದ ಅಷ್ಟೇ ಬೇಗ ಇವು ಬಳಕೆಗೂ ಬರುವ ಸಾಧ್ಯತೆಗಳಿವೆ.

ಇದರಲ್ಲಿ ಸಾಮಾನ್ಯವಾಗಿ ಮೂರು ಮುಖ್ಯ ವಿಧಗಳನ್ನು ತಾಂತ್ರಿಕವಾಗಿ ಗುರುತಿಸಲಾಗುತ್ತದೆ. ಫೆಮ್‌ಟೋಸೆಲ್‌ಗಳು ಸಾಮಾನ್ಯವಾಗಿ 150 ಅಡಿ ದೂರದವರೆಗೆ ಸಂಕೇತಗಳನ್ನು ಹರಿಬಿಡುತ್ತವೆ. 15 ಜನರು ಇದನ್ನು ಬಳಸಬಹುದು. ಇದರ ವೆಚ್ಚ ಕಡಿಮೆ. ಸಾಮಾನ್ಯವಾಗಿ ಒಂದು ಬೀದಿಗೆ ಈ ಫೆಮ್‌ಟೋಸೆಲ್‌ಗಳು ಸಾಲುತ್ತವೆ. ಹೆಚ್ಚಾಗಿ ಮನೆಗಳಲ್ಲಿ ಇವುಗಳನ್ನು ಬಳಸಬಹುದು. ರಿಲಾಯನ್ಸ್ ಜಿಯೋ ಘೋಷಿಸಿದ ಜಿಯೋ ಏರ್‌ಫೈಬರ್ ಇದೇ ವ್ಯಾಪ್ತಿಗೆ ಒಳಪಡುವ ಸಾಧನವಾಗಿದೆ. ಇನ್ನು ಪಿಕೋಸೆಲ್‌ಗಳು ಕಚೇರಿಗಳು, ಆಸ್ಪತ್ರೆ ಮತ್ತು ಶಾಪಿಂಗ್ ಕಾಂಪ್ಲೆಕ್ಸ್‌ಗಳಿಗೆ ಸೂಕ್ತ. ಇವು ಸುಮಾರು 800 ಅಡಿಯವರೆಗೆ ಸಂಕೇತವನ್ನು ಹೊತ್ತೊಯ್ಯಬಲ್ಲವು. 50-60 ಜನರು ಇದನ್ನು ಒಮ್ಮೆಗೆ ಬಳಸಬಹುದು. ಇದಕ್ಕಿಂತ ಮೈಕ್ರೋಸೆಲ್‌ಗಳು ಸ್ವಲ್ಪ ಹೆಚ್ಚು ಸಾಮರ್ಥ್ಯವುಳ್ಳವು. ಇವುಗಳಿಗೆ ಸುಮಾರು 200 ಜನರು ಸಂಪರ್ಕಿಸಿಕೊಂಡು ಡೇಟಾ ಬಳಕೆ ಮಾಡಬಹುದು ಮತ್ತು ಸುಮಾರು 2 ಕಿ.ಮೀ.ವರೆಗೆ ಸಂಕೇತಗಳನ್ನು ಸಾಗಿಸಬಲ್ಲವು. ಬಹುಶಃ 2022 ಅನ್ನು ನಾವು 5ಜಿ ಜಪಿಸುತ್ತ ಕಳೆದಿದ್ದೇವೆ. 2023ರಲ್ಲಿ 5ಜಿಯ ನಿಜವಾದ ಅನುಭವವನ್ನು ಪಡೆಯಲು ಶುರು ಮಾಡುತ್ತೇವೆ. ಅದರ ನಂತರ, 2024ರ ವರ್ಷವನ್ನು ನಾವು ಸ್ಮಾಲ್ ಸೆಲ್‌ಗಳ ಬಗ್ಗೆ ಮಾತನಾಡುತ್ತ ಕಳೆಯಲಿದ್ದೇವೆ. ❖

ಮಲಗುಳಿಗೆಯೊಂದು ಬಂದಿದೆ

ಕೊಳ್ಳೇಗಾಲ ಶರ್ಮ



'ಹೇಲು ತಿನ್ನುವ ಬುದ್ಧಿ' ಎಂದು ಬೈಯುವವರಿಗೆ ಎಚ್ಚರಿಕೆ. ಇದೋ ಮಲವೇ ತುಂಬಿರುವ ಗುಳಿಗೆಯೊಂದು ಬಂದಿದೆ! ದೇಹದೊಳಗೆ ಕಸಿ ಮಾಡಬಲ್ಲ ಇದನ್ನು ವಿಶೇಷ ಚಿಕಿತ್ಸೆಯಾಗಿ ಬಳಸಬಹುದು ಎಂದು ಅಮೆರಿಕದ ಆಹಾರ ಮತ್ತು ಔಷಧ ನಿಯಂತ್ರಣ ಸಂಸ್ಥೆ 'ಎಫ್‌ಡಿಎ' ಕಳೆದ ತಿಂಗಳು ಪರವಾನಗಿ ನೀಡಿದೆ.

ಮಲಗುಳಿಗೆಯೇ ಎಂದು ಅಸಹ್ಯ ಪಡಬೇಕಿಲ್ಲ. ಈ ಗುಳಿಗೆ ಮಲದಂತೆ ಕಾಣುವುದೂ ಇಲ್ಲ. ಅದನ್ನು ತಿನ್ನಲೂ ಬೇಕಿಲ್ಲ. ಅವಶ್ಯಕ ಇರುವ ರೋಗಿಗಳಿಗೆ ಅದನ್ನು ಗುದದ ಮೂಲಕ ಒಳತಳ್ಳಿ ಕಸಿ ಮಾಡಲಾಗುವುದು ಎನ್ನುತ್ತದೆ, ಎಫ್‌ಡಿಎ.

'ರಿಬಯೋಟಾ' ಎಂಬ (Rebyota) ಹೆಸರಿನ ಈ ಗುಳಿಗೆಯನ್ನು ಕರುಳಿನ ಸೋಂಕಿನಿಂದ ನರಳುವವರಿಗೆ ನೀಡಲಾಗುವುದು. ಅದರಲ್ಲಿಯೂ ವಿಶೇಷವಾಗಿ 'ಕ್ಲಾಸ್ಟ್ರಿಡಿಯೋಡಿಸ್ ಡಿಫೀಸೈಲ್ ಸೋಂಕು' ಎಂದು ಕರೆಯುವ, 'ಕ್ಲಾಸ್ಟ್ರಿಡಿಯೋಡಿಸ್ ಡಿಫೀಸೈಲ್' ಎನ್ನುವ ಬ್ಯಾಕ್ಟೀರಿಯಾದಿಂದಾಗುವ ಕಾಯಿಲೆಯಿಂದ ಬಳಲುವ ರೋಗಿಗಳಿಗೆ ಇದನ್ನು ಚಿಕಿತ್ಸೆ ಎಂದು ಎಫ್‌ಡಿಎ ಪರವಾನಗಿ ನೀಡಿದೆ.

ಮಲಗುಳಿಗೆಯೇ ಎಂದು ಅಸಹ್ಯ ಪಡಬೇಕಿಲ್ಲ. ಈ ಗುಳಿಗೆ ಮಲದಂತೆ ಕಾಣುವುದೂ ಇಲ್ಲ. ಅದನ್ನು ತಿನ್ನಲೂ ಬೇಕಿಲ್ಲ. ಅವಶ್ಯಕ ಇರುವ ರೋಗಿಗಳಿಗೆ ಅದನ್ನು ಗುದದ ಮೂಲಕ ಒಳತಳ್ಳಿ ಕಸಿ ಮಾಡಲಾಗುವುದು

'ರಿಬಯೋಟಾ' ಎನ್ನುವ ಮಲಗುಳಿಗೆಯನ್ನು ಹದಿನೆಂಟು ವರ್ಷ ಮೀರಿದ ವಯಸ್ಕರಿಗೆ ಚಿಕಿತ್ಸೆಯಾಗಿ ನೀಡಬಹುದಂತೆ. ಈ ಚಿಕಿತ್ಸೆಗೆ ಕಾರಣ, ಕರುಳಿನಲ್ಲಿ ಸೂಕ್ಷ್ಮಜೀವಿಗಳ ಕೊರತೆ. ನಮ್ಮ ಕರುಳು ಸೂಕ್ಷ್ಮಜೀವಿಗಳ ಸಾಗರ. ಹಲವು ಬಗೆಯ ಬ್ಯಾಕ್ಟೀರಿಯಾಗಳು ಅಲ್ಲಿ ನೆಲೆಸಿವೆ. ಆದರೆ ಕೆಲವೊಂದು ಸಂದರ್ಭದಲ್ಲಿ ಅವೆಲ್ಲವೂ ಕಾಣೆಯಾಗಿ, ತೊಂದರೆ ನೀಡುವ ಕ್ಲಾಸ್ಟ್ರೀಡಿಯೋಡಿಸ್‌ನಂತಹ ಬ್ಯಾಕ್ಟೀರಿಯಾಗಳಷ್ಟೆ ಉಳಿದುಕೊಳ್ಳಬಹುದು. ಇಂತಹ ಸನ್ನಿವೇಶಗಳು ದೇಹಕ್ಕೆ ಅಪಾಯಕಾರಿ ಎನ್ನುತ್ತಾರೆ ವೈದ್ಯರು.

ಮಲಗುಳಿಗೆಗಳ ಕಸಿಯನ್ನು 'ಫೀಕಲ್ ಟ್ರಾನ್ಸ್‌ಪ್ಲಾಂಟ್' ಎನ್ನುತ್ತಾರೆ. ಸಾಮಾನ್ಯವಾಗಿ ಕರುಳಿನಲ್ಲಿರುವ ಬ್ಯಾಕ್ಟೀರಿಯಾಗಳನ್ನು ನಮ್ಮ ಆಹಾರಪದ್ಧತಿ ಹಾಗೂ ಔಷಧಗಳ ವಿಪರೀತ ಬಳಕೆ ಬದಲಿಸಿಬಿಡುತ್ತವೆ. ಹಾನಿಕಾರಕ ಸೋಂಕು ಉಂಟಾಗುತ್ತದೆ. ಅತಿಯಾದ ಆ್ಯಂಟಿಬಯಾಟಿಕ್ ಬಳಕೆ ಹಾಗೂ ನಾರಿನಂಶ ಕಡಿಮೆ ಇರುವಂತಹ ಆಹಾರ ಪದಾರ್ಥಗಳ ಸೇವನೆ ಕರುಳಿನಲ್ಲಿ ಸಹಜವಾಗಿಯೇ ಇರುವ ಸೂಕ್ಷ್ಮಜೀವಿಗಳ ಬೆಳವಣಿಗೆಗೆ ತೊಡಕಾಗುತ್ತವೆ. ಅವುಗಳ ಸಂಖ್ಯೆ ಕಡಿಮೆಯಾಗುತ್ತದೆ. ಕ್ಲಾಸ್ಟ್ರೀಡಿಯೋಡಿಸಿನಂತಹ ಹಾನಿಕಾರಕ ಜೀವಿಗಳು ನೆಲೆಸುವುದಕ್ಕೆ ಹಾದಿ ಮಾಡಿಕೊಡುತ್ತವೆ.

ರಿಬಯೋಟಾ ಹೀಗೆ ಕರುಳಿನ ಬ್ಯಾಕ್ಟೀರಿಯಾ ಕೊರತೆಗಳನ್ನು ನೀಗುವ ಒಂದು ಉಪಾಯ. ಕರುಳಿನ ಬ್ಯಾಕ್ಟೀರಿಯಾಗಳು ಸುದೀರ್ಘ ಸೋಂಕಿನಿಂದಾಗಿ ಅತಿಯಾಗಿ ಪ್ರತಿಜೈವಿಕ - ಆ್ಯಂಟಿಬಯಾಟಿಕ್ - ಔಷಧಗಳನ್ನು ಬಳಸುವುದರಿಂದ ಕಾಣೆಯಾಗುತ್ತವೆ. ಕ್ಲಾಸ್ಟ್ರಿಡಿಯೋಡಿಸ್ ಅಲ್ಲಿ ನೆಲೆಸುತ್ತದೆ. ಒಂದು ವೇಳೆ ಈ ಬ್ಯಾಕ್ಟೀರಿಯಾ ಆ್ಯಂಟಿಬಯಾಟಿಕ್ಕನ್ನು ತಾಳಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಂಡಿದ್ದರೆ, ಎಷ್ಟೇ ಔಷಧ ಕೊಟ್ಟರೂ ಕರುಳಿನ ಸೋಂಕು ನೀಗುವುದಿಲ್ಲ ಹೊಟ್ಟೆನೋವು, ಭೇದಿ ಮೊದಲಾದ ತೊಂದರೆಗಳಿಂದಾಗಿ ಮತ್ತೆ ಮತ್ತೆ ನರಳಬೇಕಾಗುತ್ತದೆ. ಅಷ್ಟೇ ಅಲ್ಲ, ಕೆಲವೊಮ್ಮೆ ಚಿಕಿತ್ಸೆ ಫಲ ಕೊಡದೆ ಸಾವೂ ಉಂಟಾಗಬಹುದು.

ಅಮೆರಿಕೆಯಲ್ಲಿ ಪ್ರತಿ ವರ್ಷವೂ ಹೀಗೆ ಕ್ಲಾಸ್ಟ್ರಿಡಿಯೋಡಿಸ್ ಸೋಂಕಿನಿಂದಾಗಿ ಅಂದಾಜು ಹದಿನೈದು ಸಾವಿರದಿಂದ ಮೂವತ್ತು ಸಾವಿರ ಮಂದಿ ಮರಣಿಸುತ್ತಾರೆ ಎಂಬ ಲೆಕ್ಕವಿದೆ. ಇದಕ್ಕಿಂತಲೂ ಹೆಚ್ಚು ಮಂದಿ ಹೊಟ್ಟೆಯ ಹುಣ್ಣಿನಿಂದ ಭಾರತದಲ್ಲಿ ಸಾಯುತ್ತಾರೆ ಎನ್ನುವುದು ಗಮನಾರ್ಹ. ಆದರೆ ಕ್ಲಾಸ್ಟ್ರೀಡಿಯೋಡಿಸ್ ಸೋಂಕಿನಿಂದ ಆಗುವ ಸಾವನ್ನು ತಡೆಯಲು ಹಲವು ಚಿಕಿತ್ಸೋಪಾಯಗಳನ್ನು ವೈದ್ಯರು ಹುಡುಕುತ್ತಿದ್ದರು. ಕರುಳಿನಿಂದ ಕಾಣೆಯಾದ ಬ್ಯಾಕ್ಟೀರಿಯಾಗಳನ್ನು ಕೃತಕವಾಗಿ ಮರಳಿ ಕಸಿ ಮಾಡಿದರೆ ಹೇಗೆ ಎನ್ನುವ ಯೋಚನೆಯೇ ರಿಬಯೋಟಾ ಎನ್ನುವ ಮಲಗುಳಿಗೆಗೆ ಮೂಲ.

ರಿಬಯೋಟಾವನ್ನು ಕ್ಲಾಸ್ಟ್ರಿಡಿಯೋಸಿಸ್ ಸೋಂಕು ಮರುಕಳಿಸುತ್ತಿದ್ದ ರೋಗಿಗಳಿಗೆ ನೀಡಿ ಪರೀಕ್ಷಿಸಲಾಗಿದೆ. ಇವರೆಲ್ಲರಿಗೂ ಆ್ಯಂಟಿಬಯಾಟಿಕ್ಕನ್ನು ನೀಡಿ, ಗುಣವಾಯಿತು ಎಂದು ತಿಳಿದಾಗಲೂ ಸೋಂಕು ಹಾಗೂ ಭೇದಿ ಮರುಕಳಿಸಿದ್ದುವು. ಒಟ್ಟು ಒಂಬೈನೂರ ಎಪ್ಪತ್ತೆಂಟು ರೋಗಿಗಳನ್ನು ಪರೀಕ್ಷಿಸಲಾಯಿತು. ಇವರಲ್ಲಿ ಕೆಲವರಿಗೆ ಒಂದು ಗುಳಿಗೆ ರಿಬಯೋಟಾವನ್ನು ಕಸಿ ಮಾಡಲಾಯಿತು. ಇನ್ನು ಕೆಲವರಿಗೆ ಸುಳ್ಳು ಗುಳಿಗೆಯನ್ನು ಕಸಿ ಮಾಡಲಾಯಿತು. ಕೆಲವರಿಗೆ ಒಂದು ಸುಳ್ಳುಗುಳಿಗೆ, ಹಾಗೂ ಒಂದು ರಿಬಯೋಟಾವನ್ನು ಕಸಿ ಮಾಡಲಾಯಿತು. ಅನಂತರ ಎಂಟು ವಾರಗಳೊಳಗೆ ಇವರಲ್ಲಿ ಕಾಯಿಲೆ ಮರುಕಳಿಸುತ್ತದೆಯೋ ಎಂದು ಗಮನಿಸಲಾಯಿತು. ರಿಬಯೋಟಾ ಪಡೆದವರಲ್ಲಿ ಮುಕ್ಕಾಲು ಪಾಲು ಮಂದಿಗೆ ಕಾಯಿಲೆ ಮರುಕಳಿಸಲಿಲ್ಲ. ಅದನ್ನು ಪಡೆಯದ ಸುಳ್ಳುಗುಳಿಗೆಯನ್ನಷ್ಟೆ ಪಡೆದವರಲ್ಲಿ ಅರ್ಧಕ್ಕರ್ಧ ಜನರಲ್ಲಿ ಕಾಯಿಲೆ ಮರುಕಳಿಸಿತ್ತು ಎನ್ನುತ್ತದೆ ಎಫ್‌ಡಿಎ.

ರಿಬಯೋಟಾವನ್ನು ಆರೋಗ್ಯವಂತ ಜನರ ಮಲದಿಂದ ತಯಾರಿಸಲಾಗುತ್ತದೆ. ಮಲವನ್ನು ಒಣಗಿಸಿ, ಇತರೆ ರಸಾಯನಿಕಗಳು ಇಲ್ಲದಂತೆ ಶುಚಿಗೊಳಿಸಿ, ಕೇವಲ ಬ್ಯಾಕ್ಟೀರಿಯಾಗಳಷ್ಟೆ ಇರುವಂತೆ ಮಾಡಿ ನೀಡಲಾಗುತ್ತದೆ. ಆರೋಗ್ಯವಂತರಿಂದಲೇ ಮಲವನ್ನು ಪಡೆದಿದ್ದರೂ, ತೊಂದರೆ ಕೊಡಬಲ್ಲ ಬ್ಯಾಕ್ಟೀರಿಯಾಗಳೂ ಇರಬಹುದು. ಅವರು ಸೇವಿಸಿದ ಆಹಾರದಲ್ಲಿನ ಅಲರ್ಜಿಕಾರಕಗಳೂ ತೊಂದರೆ ಕೊಡಬಹುದು ಎನ್ನುತ್ತಾರೆ, ವೈದ್ಯರು. ರಿಬಯೋಟಾವನ್ನು ಪಡೆದ ಕೆಲವರಿಗೆ ಸ್ವಲ್ಪ ಕಾಲ ಹೊಟ್ಟೆ ನೋವು, ಭೇದಿ, ಹೂಸು ಇದ್ದುವಂತೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ

ಸಮಾಜ ವಿಜ್ಞಾನ

ಮಾದರಿ ಪ್ರಶ್ನೋತ್ತರ–

1) **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ**

1) ಸರ್ ಎಂ. ವಿಶ್ವೇಶ್ವರಯ್ಯನವರು. ಅವರು .... ರಲ್ಲಿ 'ಭಾರತಕ್ಕೆ ಯೋಜಿತ ಅರ್ಥ ವ್ಯವಸ್ಥೆ' ಪುಸ್ತಕವನ್ನು ಪ್ರಕಟಿಸಿದರು

ಎ) 1929 ಬಿ) 1934

ಸಿ) 1942 ಡಿ) 1936

ಉತ್ತರ(ಬಿ) 1934

2) ರಾಸಾಯನಿಕ ಗೊಬ್ಬರಗಳಿಗೆ ಬದಲಾಗಿ ಜೈವಿಕ ಗೊಬ್ಬರ, ರಾಸಾಯನಿಕ ಕ್ರಿಮಿನಾಶಕಗಳಿಗೆ ಬದಲಾಗಿ ಜೈವಿಕ ಕ್ರಿಮಿನಾಶಕಗಳ ಬಳಕೆಗೆ ಪ್ರೋತ್ಸಾಹಿಸಿ. ಕೃಷಿಯಲ್ಲಿ ಎಲ್ಲ ರೀತಿಯ ಪರಸರ ಸ್ನೇಹಿ ತಂತ್ರಗಳನ್ನು ಬಳಸಿ, ಕೃಷಿ ಉತ್ಪಾದನೆಯನ್ನು ದ್ವಿಗುಣಗೊಳಿಸುವುದನ್ನು .... ಎಂದು ಗುರುತಿಸಲಾಗುತ್ತಿದೆ.

ಎ) ಮೊದಲ ಹಸಿರು ಕ್ರಾಂತಿ

ಬಿ) ಎರಡನೇ ಹಸಿರು ಕ್ರಾಂತಿ

ಸಿ) ಮೂರನೇ ಹಸಿರು ಕ್ರಾಂತಿ

ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಬಿ) 'ಎರಡನೇ ಹಸಿರು ಕ್ರಾಂತಿ'

3) 1800ರಲ್ಲಿ ನಾಗರಿಕ ಸೇವೆಗೆ ಸೇರ ಬಯಸುವವರಿಗೆ ಶಿಕ್ಷಣವನ್ನು ನೀಡಲು ಕಾರ್ನ್‌ವಾಲೀಸನು ಕಲ್ಕತ್ತಾದಲ್ಲಿ ....ನ್ನು ಸ್ಥಾಪಿಸಿದನು.

ಎ) ಫೋರ್ಟ್ ವಿಲಿಯಂ ಕಾಲೇಜು

ಬಿ) ಲಾಹೋರ್ ಹಿಂದು ಕಾಲೇಜು

ಸಿ) ಅಲಿಘರ್ ಮುಸ್ಲಿಂ ಯೂನಿವರ್ಸಿಟಿ

ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– ಎ)

4) 'ದ್ವಿ ಸರ್ಕಾರ ಪದ್ಧತಿ' ಎಂದರೆ.............................

ಎ) ನಾಗರಿಕ ಮತ್ತು ಅಪರಾಧ ನ್ಯಾಯ ನಿರ್ವಹಣಾ ವ್ಯವಸ್ಥೆಯನ್ನು ಭಾರತೀಯ ಅಧಿಕಾರಿಗಳಿಗೆ ನೀಡಲಾಯಿತು. ಮತ್ತು ಕಂದಾಯ ವಸೂಲಾತಿ, ವಸೂಲಾದ ಕಂದಾಯದ ನಿರ್ವಹಣಾ ಆಡಳಿತವನ್ನು ಬ್ರಿಟಿಷರು ತಮ್ಮ ಬಳಿಯೇ ಇಟ್ಟುಕೊಂಡರು.

ಬಿ) ಕಂದಾಯ ವಸೂಲಾತಿ, ವಸೂಲಾದ ಕಂದಾಯದ ನಿರ್ವಹಣಾ ಆಡಳಿತವನ್ನು ಭಾರತೀಯ ಅಧಿಕಾರಿಗಳಿಗೆ ನೀಡಲಾಯಿತು. ಮತ್ತು ನಾಗರಿಕ ಮತ್ತು ಅಪರಾಧ ನ್ಯಾಯ ನಿರ್ವಹಣಾ ವ್ಯವಸ್ಥೆಯನ್ನು ಬ್ರಿಟಿಷರು ತಮ್ಮ ಬಳಿಯೇ ಇಟ್ಟುಕೊಂಡರು.

ಸಿ) ಕಂದಾಯ ವಸೂಲಾತಿ, ನಾಗರಿಕ ಮತ್ತು ಅಪರಾಧ ನ್ಯಾಯ ನಿರ್ವಹಣೆ, ವಸೂಲಾದ ಕಂದಾಯದ ನಿರ್ವಹಣಾ ಆಡಳಿತವನ್ನು ಬ್ರಿಟಿಷರು ತಮ್ಮ ಬಳಿಯೇ ಇಟ್ಟುಕೊಂಡು ಸಮಗ್ರ ಆಡಳಿತವನ್ನು ನಡೆಸುವುದು.

ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಎ) ನಾಗರಿಕ ಮತ್ತು ಅಪರಾಧ ನ್ಯಾಯ ನಿರ್ವಹಣಾ ವ್ಯವಸ್ಥೆಯನ್ನು ಭಾರತೀಯ ಅಧಿಕಾರಿಗಳಿಗೆ ನೀಡಲಾಯಿತು. ಮತ್ತು ಕಂದಾಯ ವಸೂಲಾತಿ, ವಸೂಲಾದ ಕಂದಾಯದ ನಿರ್ವಹಣಾ ಆಡಳಿತವನ್ನು ಬ್ರಿಟಿಷರು ತಮ್ಮ ಬಳಿಯೇ ಇಟ್ಟುಕೊಂಡರು.

5) ಹೈದರಾಲಿಯು ಯಾವ ಅರಸನನ್ನು ಗೃಹ ಬಂಧನದಲ್ಲಿರಿಸಿ ಅಧಿಕಾರವನ್ನು ತನ್ನ ಕೈಗೆತ್ತಿಕೊಂಡನು.?

ಎ) ಚಿಕ್ಕದೇವರಾಜ ಒಡೆಯರು

ಬಿ) ಎರಡನೇ ಕೃಷ್ಣರಾಜ ಒಡೆಯ

ಸಿ) ಜಯಚಾಮರಾಜ ಒಡೆಯರ್

ಡಿ) ಯದು ರಾಜ

ಉತ್ತರ:– (ಬಿ) ಎರಡನೇ ಕೃಷ್ಣರಾಜ ಒಡೆಯ

6) ರಾಜಸ್ತಾನದ ಜೈಸಲ್ಮೇರ್ ಜಿಲ್ಲೆಯ ರೂಯ್ಲಿಯ ವಾರ್ಷಿಕ ಸರಾಸರಿ ಮಳೆಯ .ಸೆಂ ಮೀ ಗಳಷ್ಟಾಗಿದೆ. ಇದು ಮಳೆ ಭಾರತದಲ್ಲಿ ಅತಿಕಡಿಮೆ ಮಳೆಯನ್ನು ಪಡೆಯುವ ಪ್ರದೇಶವಾಗಿದೆ.

ಎ) 2.2 ಬಿ) 3.9

ಸಿ) 12.4 ಡಿ) 8.3

ಉತ್ತರ:–(ಡಿ) 8.3

2) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಹಿರಾಕುಡ್ ಯೋಜನೆಯನ್ನು ಯಾವ ರಾಜ್ಯದಲ್ಲಿ ನಿರ್ಮಿಸಲಾಗಿದೆ? ಯಾವ ನದಿಗೆ ನಿರ್ಮಿಸಲಾಗಿದೆ?

ಉತ್ತರ : ಹಿರಾಕುಡ್ ಯೋಜನೆಯು ಒಡಿಶಾ ರಾಜ್ಯದಲ್ಲಿದೆ, ಮಹಾನದಿಯನ್ನು ಬಳಸಿಕೊಂಡು ಕಣಿವೆ ಯೋಜನೆ ರೂಪಿಸಲಾಗಿದೆ

2) **ಕೃಷ್ಣ ಮೇಲ್ದಂಡೆಯ ಯೋಜನೆಯ ಲಾಭವನ್ನು ಯಾವೆಲ್ಲಾ ಜಿಲ್ಲೆಗಳು ಲಾಭ ಪಡೆಯುತ್ತಿವೆ?**

ಉತ್ತರ:– ಬಾಗಲಕೋಟೆ, ವಿಜಯಪುರ, ಕಲಬುರಗಿ, ಯಾದಗೀರಿ ಹಾಗೂ ಬೆಳಗಾವಿ ಜಿಲ್ಲೆಯ ಕೆಲವು ಭಾಗಗಳು ಈ ಯೋಜನೆಯ ಲಾಭವನ್ನು ಪಡೆಯುತ್ತವೆ.

3) ಯಾವ ರಾಜ್ಯವು ಅತಿ ಹೆಚ್ಚು ಹುಲ್ಲುಗಾವಲನ್ನು ಹೊಂದಿದೆ?

ಉತ್ತರ:– ಹಿಮಾಚಲ ಪ್ರದೇಶ

4) 1617ರಲ್ಲಿ ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಯಾರು ಬಂದನು?

ಉತ್ತರ:– ಸರ್. ಥಾಮಸ್ ರೋ

4) ಸಹಾಯಕ ಸೈನ್ಯ ಪದ್ಧತಿಗೆ ಒಳಗಾದ ಮೊದಲ ರಾಜ್ಯ ಯಾವುದು?

ಉತ್ತರ:– **ಸಹಾಯಕ ಸೈನ್ಯ ಪದ್ಧತಿಗ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ರಾಜ್ಯ ಹೈದರಾಬಾದ್ ಸಂಸ್ಥಾನ.**

5) ಭಾರತದ ಭೂಸ್ವರೂಪಗಳಲ್ಲಿ ಅತಿದೊಡ್ಡದು ಯಾವುದು?

ಉತ್ತರ:– **ಪರ್ಯಾಯ ಪ್ರಸ್ಥಭೂಮಿ**

6) ಪ್ರಪಂಚದಲ್ಲಿಯೇ ಅತ್ಯುನ್ನತ ಶಿಖರವಾದ ಮೌಂಟ್ ಎವರೆಸ್ಟ್ ಹಿಮಾಲಯದ ಎಲ್ಲಿದೆ?

ಉತ್ತರ:– **ಮಹಾಹಿಮಾಲಯ ಹಿಮಾದ್ರಿ**

7) ದಯಾನಂದ ಸರಸ್ವತಿಯವರು ಭಾರತೀಯ ಸ್ವಾತಂತ್ರ್ಯ ಹೋರಾಟಗಾರರಿಗೆ ಯಾವ ರೀತಿ ಪ್ರೇರಣೆಯಾಗಿದ್ದರು?

ಉತ್ತರ:– ದಯಾನಂದ ಸರಸ್ವತಿಯವರ, ಸ್ವರಾಜ್ಯ ಮತ್ತು ಸ್ವಧರ್ಮ ಬೋಧನೆಗಳು ಭಾರತೀಯರು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆ ನೀಡಿದವು. ಮಹಾನ್ ದೇಶಭಕ್ತರಾದ ದಯಾನಂದ ಸರಸ್ವತಿಯವರು ದೇಶ ಮತ್ತು ಭಾರತೀಯ ಸಂಸ್ಕೃತಿಯ ಅಭಿಮಾನಿಗಳಾಗಿದ್ದರಿಂದ ಸ್ವಾಭಿಮಾನ ಮತ್ತು ಸ್ವಾವಲಂಬನೆಯನ್ನು ಜನರಲ್ಲಿ ಮೂಡಿಸಲು ಪ್ರಯತ್ನಿಸಿದರು ಹಾಗೂ "ಭಾರತೀಯರಿಗೇ ಭಾರತ" ಎಂಬ ಘೋಷಣೆಯನ್ನು ನೀಡಿದರು.

ಪ್ರಜಾವಾಣಿ ನೋಡಿಯ

ಹತ್ತನೇ ತರಗತಿಯ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪೂರಕ ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯ

ಪಿಯುಸಿ ಭೌತವಿಜ್ಞಾನ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪಿಯುಸಿ

ರಸಾಯನ ಶಾಸ್ತ್ರ

ಮಾದರಿ ಪ್ರಶ್ನೋತ್ತರ

52) ಮಿಥೆನೊಲ್ ಮತ್ತು ಈಥೆನೊಲ್ ಆಲ್ಕೋಹಾಲ್‌ಗಳಲ್ಲಿ ಎರಡು ಮುಖ್ಯವಾದ ವಾಣಿಜ್ಯಕ ಆಲ್ಕೋಹಾಲ್‌ಗಳಾಗಿವೆ. ಇವುಗಳ ಬಗ್ಗೆ ಬರೆಯಿರಿ

ಉತ್ತರ:– **ಮಿಥೆನೊಲ್** : CH_3OH ಕಟ್ಟಿಗೆಯ ಅಸವನ ಭಟ್ಟಿ ಇಳುಸಿವಿಕೆಯಿಂದ ಉತ್ಪತ್ತಿಯಾಗುವ ಮಿಥೆನೋಲ್‌ನ್ನು CH_3OH ವುಡ್‌ಸ್ಪಿರಿಟ್ ಎಂದು ಸಹ ಕರೆಯುತ್ತಾರೆ. ಈ ದಿನಗಳಲ್ಲಿ ಹೆಚ್ಚಿನ ಒತ್ತಡ ಮತ್ತು ಉಷ್ಣತೆಯಲ್ಲಿ ಮತ್ತು ಕ್ರಿಯಾವರ್ದಕಗಳಾದ $ZnO–CrO_3$ ಗಳ ಉಪಸ್ಥಿತಿಯಲ್ಲಿ ಇಂಗಾಲದ ಮೊನೋಕ್ಸ್ಯಾಡ್‌ನ ಕ್ರಿಯಾವರ್ಧಿತ ಹೈಡ್ರೋಜನೀಕರಣದಿಂದ ಹೆಚ್ಚಾಗಿ ಮಿಥೇನೊಲ್‌ಅನ್ನು ತಯಾರಿಸಲಾಗುತ್ತದೆ.

ಮಿಥೆನೊಲ್ ಒಂದು ವರ್ಣರಹಿತ ದ್ರವ ಮತ್ತು ಅದು 337K ಉಷ್ಣತೆಯಲ್ಲಿ ಕುದಿಯುತ್ತದೆ. ಇದು ಅತೀ ವಿಷಕಾರಿ ಸ್ವಭಾವ ಹೊಂದಿದೆ. ಮಿಥೆನೊಲಾನ ಕಡಿಮೆ ಪ್ರಮಾಣದ ಸೇವನೆಯೂ ಸಹ ಕುರುಡುತನವನ್ನು ಉಂಟುಮಾಡುತ್ತದೆ ಮತ್ತು ಹೆಚ್ಚಿನ ಪ್ರಮಾಣದ ಸೇವನೆಯು ಮಾರಣಾಂತಿಕವಾಗಿದೆ. ಮಿಥೇನೊಲ್‌ನ್ನು ಪೈಂಟ್‌ಗಳು, ಮೆರುಗೆಣ್ಣೆಗಳು ಮತ್ತು ಮುಖ್ಯವಾಗಿ ಪಾರಮಾಲ್ಡಿಹೈಡ್‌ಗಳನ್ನು ತಯಾರಿಸಲು ದ್ರಾವಕವಾಗಿ ಉಪಯೋಗಿಸಲಾಗುತ್ತದೆ.

ಈಥೆನೊಲ್ : ವಾಣಿಜ್ಯಕವಾಗಿ ಈಥೇನೊಲ್‌ನ್ನು ಕಿಣ್ವನ ಕ್ರಿಯೆಯಿಂದ ಪಡೆಯಲಾಗುತ್ತೆ. ಸಕ್ಕರೆಯಿಂದ ಪಡೆಯುವುದು ಅತ್ಯಂತ ಪ್ರಾಚೀನ ವಿಧಾನ ಕಾಕಂಬಿ, ಕಬ್ಬು, ದ್ರಾಕ್ಷಿ ಅಥವಾ ಮುಂತಾದ ಹಣ್ಣುಗಳಲ್ಲಿರುವ ಸಕ್ಕರೆಯೂ ಇನ್ವರ್ಟೇಸ್ ಕಿಣ್ವದ ಉಪಸ್ಥಿತಿಯಲ್ಲಿ ಗ್ಲೂಕೋಸ್ ಮತ್ತು ಪ್ರಕ್ಟೋಸ್ (ಎರಡೂ ಕೂಡ ಅಣುಸೂತ್ರ $C_6H_{12}O_6$ ಹೊಂದಿವೆ) ಆಗಿ ಪರಿವರ್ತನೆಯಾಗುತ್ತದೆ. ಯೀಸ್ಟ್‌ನಲ್ಲಿ ಕಂಡು ಬರುವ ಕಿಣ್ವವಾದ ಝೈಮೇಸ್ ಉಪಸ್ಥಿತಿಯಲ್ಲಿ ಗ್ಲೂಕೋಸ್ ಮತ್ತು ಪ್ರಕ್ಟೋಸ್ ಕಿಣ್ವನ ಕ್ರಿಯೆಗೆ ಒಳಪಡುತ್ತವೆ.

ದ್ರಾಕ್ಷಾರಸ(wine) ತಯಾರಿಕೆಯಲ್ಲಿ, ದ್ರಾಕ್ಷಿಯು, ಸಕ್ಕರೆ ಮತ್ತು ಯೀಸ್ಟನ್ ಆಕರವಾಗಿದೆ. ದ್ರಾಕ್ಷಿಯು ಮಾಗಿದಂತೆ ಸಕ್ಕರೆಯ ಪ್ರಮಾಣ ಹೆಚ್ಚುತ್ತದೆ ಮತ್ತು ಹೊರಗಿನ ಸಿಪ್ಪೆಯ ಮೇಲೆ ಯೀಸ್ಟ್ ಬೆಳೆಯುತ್ತದೆ. ದ್ರಾಕ್ಷಿಯನ್ನು ಜಜ್ಜಿದಾಗ ಸಕ್ಕರೆ ಮತ್ತು ಕಿಣ್ವಗಳು ಸಂಪರ್ಕಕ್ಕೆ ಬರುತ್ತವೆ ಮತ್ತು ಕಿಣ್ವನಕ್ರಿಯೆ ಆರಂಭವಾಗುತ್ತದೆ. ಕಿಣ್ವನ ಕ್ರಿಯೆಯು ಅವಾಯುವಿಕ ಸ್ಥಿತಿಯಲ್ಲಿ ಅಂದರೆ ಗಾಳಿಯ ಅನುಪಸ್ಥಿತಿಯಲ್ಲಿ ನಡೆಯುತ್ತದೆ. ಕಿಣ್ವನ ಕ್ರಿಯೆಯಲ್ಲಿ ಇಂಗಾಲದಡೈಆಕ್ಸೈಡ್ ಬಿಡುಗಡೆಯಾಗುತ್ತದೆ

ಒಮ್ಮೆ ಆಲ್ಕೋಹಾಲ್‌ನ ಉತ್ಪತ್ತಿಯ ಪ್ರಮಾಣವು ಶೇಕಡ 14ಗಿಂತ ಹೆಚ್ಚಿದಾಗ ಝೈಮೇಸ್‌ನ ವರ್ತನೆಯು ಪ್ರತಿಬಂಧಿಸಲ್ಪಡುತ್ತದೆ. ಗಾಳಿಯು ಕಿಣ್ವನ ಮಿಶ್ರಣವನ್ನು ಪ್ರವೇಶಿಸಿದರೆ ಆಗ ಗಾಳಿಯಲ್ಲಿರುವ ಆಮ್ಲಜನಕವು ಎಥೆನೋಲ್‌ನ್ನು ಎಥೆನೋಯಿಕ್ ಆಮ್ಲವಾಗಿ ಉತ್ಕರ್ಷಿಸಿ, ನಂತರ ಆಲ್ಕೋಹಾಲಿಕ್ ಘಾನೀಯಗಳ ರುಚಿಯನ್ನು ಕೆಡಿಸುತ್ತದೆ.

ಎಥೆನೋಲ್ ಒಂದು ವರ್ಣರಹಿತ ದ್ರವವಾಗಿದ್ದು, ಅದರ ಕುದಿಯುವ ಬಿಂದು 351K ಆಗಿದೆ. ಅದು ಪೈಂಟ್ ಕಾರ್ಖಾನೆ ಮತ್ತು ಅಸಂಖ್ಯಾತ ಇಂಗಾಲದ ಸಂಯುಕ್ತಗಳ ತಯಾರಿಕೆಯಲ್ಲಿ ದ್ರಾವಕವಾಗಿ ಉಪಯೋಗಿಸಲ್ಪಡುತ್ತದೆ. ತಾಮ್ರದ ಸಲ್ಫೇಟ್ (ಬಣ್ಣ ಕೊಡಲು) ಪಿರಿಡೀನ್ (ದುವಾರ್ಸನೆ ದ್ರವ)ಗಳನ್ನು ವಾಣಿಜ್ಯಕ ಆಲ್ಕೋಹಾಲಿಗೆ ಮಿಶ್ರಣ ಮಾಡಿ ಕುಡಿಯಲು ಯೋಗ್ಯವಾಗದಂತೆ ಮಾಡುತ್ತಾರೆ. ಇದನ್ನು ಆಲ್ಕೋಹಾಲ್‌ಗಳ ಗುಣನಾಶ (Denaturation) ಎಂದು ಕರೆಯುತ್ತಾರೆ.

ಇತ್ತಿಚಿನ ದಿನಗಳಲ್ಲಿ ಈಥೀನ್‌ನ ಜಲೀಕರಣದಿಂದ ಎಥೆನೊಲ್ ಅನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯುತ್ತಾರೆ.

53) **ಈಥರ್‌ಗಳ ತಯಾರಿಕೆ ಬಗ್ಗೆ ಬರೆಯಿರಿ**

ಉತ್ತರ:_ ಆಲ್ಕೋಹಾಲ್‌ಗಳು ಪ್ರೋಟಿಕ್ ಆಮ್ಲಗಳ (H_2SO_4 H_3PO_4) ಉಪಸ್ಥಿತಿಯಲ್ಲಿ ನಿರ್ಜಲೀಕರಣ ಕ್ರಿಯೆಗೆ ಒಳಪಡುತ್ತವೆ. ಕ್ರಿಯೆಯ ನಿಬಂಧನೆಗಳ ಅವಲಂಬಿಸಿ ಕ್ರಿಯೆತ್ಪನ್ನಗಳಾದ ಆಲ್ಕೀನ್ ಅಥವಾ ಈಥರ್‌ಗಳು ಉತ್ಪತ್ತಿಯಾಗುವವು.

ಆಲ್ಕೀನ್ ಅನ್ನು ಕೊಡುವ ಆಲ್ಕೋಹಾಲ್‌ಗಳ ಆಮ್ಲೀಯ ನಿರ್ಜಲೀಕರಣ ಕ್ರಿಯೆಯು ಕೂಡ ಈಥರ್‌ನ್ನು ಕೊಡುವ ಆದೇಶ ಕ್ರಿಯೆಯೊಂದಿಗೆ ಸಂಯೋಜಿತವಾಗಿದೆ. ಈ ವಿಧಾನ ಪ್ರಾಥಮಿಕ ಆಲ್ಕೈಲ್ ಗುಂಪುಗಳನ್ನು ಹೊಂದಿರುವ ಈಥರ್‌ಗಳನ್ನು ಮಾತ್ರ ತಯಾರಿಸಲು ಸೂಕ್ತವಾಗಿದೆ. ಆಲ್ಕೈಲ್ ಗುಂಪು ಪ್ರತಿಬಂದಿಸಲ್ಪಡಲೇಬಾರದು ಮತ್ತು ತಾಪವು ಕಡಿಮೆಯಾಗಿರಬೇಕು, ಹಾಗಾಗದಿದ್ದರೆ ಆಲ್ಕೀನ್‌ಗಳ ಉತ್ಪತ್ತಿಯನ್ನು ಉತ್ತೇಜಿಸುತ್ತದೆ. ಆಲ್ಕೋಹಾಲ್‌ಗಳು ದ್ವಿತೀಯಕ ಮತ್ತು ತೃತೀಯಕಗಳಾದಾಗ ಕ್ರಿಯೆಯು SN_1 ಫಥವನ್ನು ಪಾಲಿಸುತ್ತದೆ

ಭಾರತ್ ಜೋಡೊ ಉತ್ತರ ಪ್ರದೇಶ ಪ್ರವೇಶ: ಪ್ರಿಯಾಂಕಾ ಹೇಳಿಕೆ

‘ರಾಹುಲ್ ಯೋಧ, ಹೆದರಲ್ಲ’

ಗಾಜಿಯಾಬಾದ್ (ಪಿಟಿಐ): ‘ನನ್ನ ಅಣ್ಣ ರಾಹುಲ್ ಗಾಂಧಿ ‘ಯೋಧ’. ಆತನ ವರ್ಚಸ್ಸನ್ನು ಹಾಳು ಮಾಡಲು ಸಾವಿರಾರು ಕೋಟಿಗಳಷ್ಟು ಹಣ ಖರ್ಚು ಮಾಡುವ ಸರ್ಕಾರದ ಶಕ್ತಿಗೆ ಆತ ಹೆದರುವುದಿಲ್ಲ’ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಮಂಗಳವಾರ ಹೇಳಿದ್ದಾರೆ.

ರಾಹುಲ್ ಗಾಂಧಿ ನೇತೃತ್ವದ ‘ಭಾರತ್ ಜೋಡೊ’ ಯಾತ್ರೆಯು ದೆಹಲಿಯಿಂದ ಉತ್ತರ ಪ್ರದೇಶ ಪ್ರವೇಶಿಸುವ ಸಂದರ್ಭದಲ್ಲಿ ಲೋನಿ ಗಡಿಯಲ್ಲಿ ಸ್ವಾಗತಿಸಿದ ಪ್ರಿಯಾಂಕಾ, ‘ದೊಡ್ಡ ಕೈಗಾರಿಕೋದ್ಯಮಿಗಳಾದ ಅದಾನಿ ಮತ್ತು ಅಂಬಾನಿಯವರು ಹಲವು ರಾಜಕಾರಣಿಗಳನ್ನು, ಸರ್ಕಾರಿ ಸ್ವಾಮ್ಯದ ಉದ್ಯಮಗಳನ್ನು ಹಾಗೂ ಮಾಧ್ಯಮಗಳನ್ನು ಖರೀದಿಸಿರಬಹುದು. ಆದರೆ, ಅವರು ನನ್ನ ಸಹೋದರನನ್ನು ಎಂದಿಗೂ ಖರೀದಿಸಲು ಸಾಧ್ಯವಿಲ್ಲ’ ಎಂದಿದ್ದಾರೆ.

‘ಚಳಿಗಾಲದಲ್ಲೂ ರಾಹುಲ್‌ಗೆ ಏಕೆ ಚಳಿಯಾಗದು ಜನರು ಪ್ರಶ್ನಿಸುತ್ತಿದ್ದಾರೆ. ಏಕೆಂದರೆ ಆತ ಸತ್ಯದ ಗುರಾಣಿಯನ್ನು ಧರಿಸಿದ್ದಾನೆ. ಹಾಗಾಗಿ, ಚಳಿಯಾಗದು’ ಎಂದು ಪ್ರಿಯಾಂಕಾ ಉತ್ತರಿಸಿದ್ದಾರೆ.

‘ಕನ್ಯಾಕುಮಾರಿಯಿಂದ ಉತ್ತರಪ್ರದೇಶದ ತನಕ 3 ಸಾವಿರ ಕಿ.ಮೀ. ಹಾದು ಬಂದ ಯಾತ್ರೆಯನ್ನು ಸ್ವಾಗತಿಸಲು ನನಗೆ ಹೆಮ್ಮೆಯಾಗುತ್ತಿದೆ. ಅಷ್ಟೇ ಅಲ್ಲ, ನನ್ನ ಅಣ್ಣನ ಬಗ್ಗೆಯೂ ಹೆಮ್ಮೆಯಾಗುತ್ತದೆ. ಆತನ ವರ್ಚಸ್ಸನ್ನು ಹಾಳು ಮಾಡಲು ಸರ್ಕಾರ ಸಾವಿರಾರು ಕೋಟಿ ಹಣ ಖರ್ಚು ಮಾಡುತ್ತಿದ್ದರೂ, ಆತ ಮಣಿಯಲಿಲ್ಲ. ಸತ್ಯದ ಹಾದಿಯಿಂದ ಹಿಮ್ಮೆಟ್ಟಲಿಲ್ಲ. ಹಲವು ಏಜೆನ್ಸಿಗಳನ್ನು ಬಳಸಿಕೊಂಡು ಆತನ ವರ್ಚಸ್ಸಿಗೆ ಧಕ್ಕೆ ತರಲು ಯತ್ನಿಸಿದರೂ ಆತ ಯೋಧನಂತೆ ಎದುರಿಸಿದ, ಹೆದರಲಿಲ್ಲ’ ಎಂದೂ ಹೇಳಿದ್ದಾರೆ.

ಉತ್ತರಪ್ರದೇಶದ ಉಸ್ತುವಾರಿಯೂ ಆಗಿರುವ ಪ್ರಿಯಾಂಕಾ, ‘ದ್ವೇಷದ ಮಾರುಕಟ್ಟೆಯಲ್ಲಿ ಪ್ರೀತಿಯನ್ನು ಪಸರಿಸಲು ರಾಹುಲ್ ‘ಅಂಗಡಿ’ ತೆರೆದಿದ್ದಾನೆ. ಜನರನ್ನು ಒಗ್ಗೂಡಿಸಲು ಪಾದಯಾತ್ರೆ ಮಾಡುತ್ತಿದ್ದಾನೆ. ಉತ್ತರ ಪ್ರದೇಶದ ಪ್ರತಿಯೊಬ್ಬರಿಗೂ ಈ ಪ್ರೀತಿಯ ಅಂಗಡಿಯ (ಮೊಹಬ್ಬತ್ ಕಿ ದುಕಾನ್) ಫ್ರಾಂಚೈಸಿಯನ್ನು ತೆರೆಯುವಂತೆ ನಾನು ಒತ್ತಾಯಿಸುತ್ತೇನೆ’ ಎಂದರು.

ಅದ್ದೂರಿ ಸ್ವಾಗತ (ಗಾಜಿಯಾಬಾದ್ ವರದಿ): ಒಂಭತ್ತು ದಿನಗಳ ವಿರಾಮದ ಬಳಿಕ ದೆಹಲಿಯಲ್ಲಿ ಮಂಗಳವಾರ ಪುನರಾರಂಭಗೊಂಡ ಭಾರತ್ ಜೋಡೊ ಯಾತ್ರೆಯು ಉತ್ತರಪ್ರದೇಶ ತಲುಪಿದ್ದು, ಲೋನಿ ಗಡಿಯಲ್ಲಿ ರಾಹುಲ್ ಗಾಂಧಿ ಅವರಿಗೆ ಬೆಂಬಲಿಗರು ಅದ್ದೂರಿ ಸ್ವಾಗತ ಕೋರಿದರು.

ಕಾಂಗ್ರೆಸ್ ಕಾರ್ಯಕರ್ತರು ಮತ್ತು ಬೆಂಬಲಿಗರು ಅಪಾರ ಸಂಖ್ಯೆಯಲ್ಲಿ ನೊಯಿಡಾದಿಂದ ಗಾಜಿಯಾಬಾದ್‌ಗೆ ಬಂದಿದ್ದರು.

ನವದೆಹಲಿಯಲ್ಲಿ ಮಂಗಳವಾರ ಭಾರತ್ ಜೋಡೊ ಯಾತ್ರೆಯಲ್ಲಿ ರಾಹುಲ್ ಗಾಂಧಿ ಅವರ ಜತೆಗೆ ಅಪಾರ ಬೆಂಬಲಿಗರು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಸಿಯಾಚಿನ್‌ನಲ್ಲಿ ಮೊದಲ ಬಾರಿ ಮಹಿಳಾ ಅಧಿಕಾರಿ ನಿಯೋಜನೆ

ನವದೆಹಲಿ (ಪಿಟಿಐ): ಜಗತ್ತಿನ ಎತ್ತರದ ಯುದ್ಧಭೂಮಿ ಎಂದೇ ಕರೆಯಲಾಗುವ ಸಿಯಾಚಿನ್‌ನ ನೀರ್ಗಲ್ಲಿನಲ್ಲಿ ಇದೇ ಮೊದಲ ಬಾರಿಗೆ ಸೇನೆಯು ಮಹಿಳಾ ಅಧಿಕಾರಿಯನ್ನು ನಿಯೋಜನೆ ಮಾಡಿದೆ.

ಕಾರ್ಪ್ಸ್ ಆಫ್ ಎಂಜಿನಿಯರ್ಸ್‌ನ ಕ್ಯಾಪ್ಟನ್ ಶಿವಾ ಚೌಹಾನ್ ಅವರನ್ನು, 15,600 ಅಡಿ ಎತ್ತರದಲ್ಲಿರುವ ಕುಮಾರ್ ಪೋಸ್ಟ್‌ನಲ್ಲಿ ಸೋಮವಾರ ನಿಯೋಜನೆ ಮಾಡಲಾಗಿದೆ.

‘3 ತಿಂಗಳ ಕಠಿಣ ತರಬೇತಿ ನೀಡಿದ ನಂತರ ಅವರನ್ನು ಸಿಯಾಚಿನ್‌ನಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ

‘2ನೇ ಬೂಸ್ಟರ್ ಡೋಸ್ ಅನಗತ್ಯ’

ನವದೆಹಲಿ (ಪಿಟಿಐ): ಕೋವಿಡ್ ಎರಡನೇ ಬೂಸ್ಟರ್ ಡೋಸ್ ಲಸಿಕೆ ನೀಡುವುದು ಸರ್ಕಾರದ ಸದ್ಯದ ಆದ್ಯತೆ ಅಲ್ಲ ಎಂದು ಅಧಿಕೃತ ಮೂಲಗಳು ಮಂಗಳವಾರ ತಿಳಿಸಿವೆ.

ದೇಶದಲ್ಲಿ ಹಲವಾರು ಜನರು ಇನ್ನೂ ಮೂರನೇ ಡೋಸ್ ಲಸಿಕೆಯನ್ನೇ ಪಡೆದಿಲ್ಲ. ಹೀಗಿರುವಾಗ ನಾಲ್ಕನೇ ಡೋಸ್ (ಎರಡನೇ ಬೂಸ್ಟರ್ ಡೋಸ್) ಲಸಿಕೆ ಅನವಶ್ಯಕ. 2ನೇ ಬೂಸ್ಟರ್ ಡೋಸ್ ಉಪಯೋಗದ ಕುರಿತ ನಿಖರ ಅಂಕಿಅಂಶ ಸಹ ಲಭ್ಯವಾಗಿಲ್ಲ ಎಂದು ತಿಳಿಸಿದ್ದಾರೆ.

ಭಾರತದಲ್ಲಿ 2022ರ ಜನವರಿಯಿಂದ ಮುನ್ನೆಚ್ಚರಿಕಾ ಅಥವಾ ಬೂಸ್ಟರ್ ಡೋಸ್ ಕೋವಿಡ್ ಲಸಿಕೆ ನೀಡಲಾಗುತ್ತಿದ್ದು, ಈವರೆಗೆ ಶೇ 28ರಷ್ಟು ಅರ್ಹ ಜನತೆ ಲಸಿಕೆ ಪಡೆದಿದ್ದಾರೆ.

ಆರೋಗ್ಯ ಮತ್ತು ಮುಂಚೂಣಿ ಕಾರ್ಯಕರ್ತರಿಗೆ ನಾಲ್ಕನೇ ಡೋಸ್ ಲಸಿಕೆ ನೀಡುವಂತೆ ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಪ್ರತಿನಿಧಿಗಳು ಮತ್ತು ಹಿರಿಯ ವೈದ್ಯರು ಇತ್ತೀಚೆಗೆ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರನ್ನು ಒತ್ತಾಯಿಸಿದ್ದರು.

ಭಾರತದಲ್ಲಿ ಎಕ್ಸ್‌ಬಿಬಿ.1.5 ತಳಿ ಐದು ಪ್ರಕರಣ ಪತ್ತೆ

ನವದೆಹಲಿ (ಪಿಟಿಐ): ಕರ್ನಾಟಕದಲ್ಲಿ ಒಂದು ಪ್ರಕರಣ ಸೇರಿದಂತೆ, ಕೊರೊನಾ ವೈರಸ್‌ನ ಎಕ್ಸ್‌ಬಿಬಿ.1.5 ತಳಿ ಸೋಂಕಿನ ಒಟ್ಟು ಐದು ಪ್ರಕರಣಗಳು ದೇಶದಲ್ಲಿ ಪತ್ತೆಯಾಗಿವೆ.

ಉಳಿದಂತೆ, ಮೂರು ಪ್ರಕರಣಗಳು ಗುಜರಾತ್ ಹಾಗೂ ಒಂದು ಪ್ರಕರಣ ರಾಜಸ್ಥಾನದಲ್ಲಿ ಪತ್ತೆಯಾಗಿವೆ ಎಂದು ವೈರಾಣು ಸಂರಚನಾ ವಿಶ್ಲೇಷಣೆ ಸಂಸ್ಥೆ ಮಂಗಳವಾರ ಬಿಡುಗಡೆ ಮಾಡಿರುವ ದತ್ತಾಂಶಗಳಿಂದ ತಿಳಿದು ಬಂದಿದೆ.

ಅಮೆರಿಕದಲ್ಲಿ ಕೋವಿಡ್–19 ಪ್ರಕರಣಗಳ ಸಂಖ್ಯೆಯಲ್ಲಿನ ಹೆಚ್ಚಳಕ್ಕೆ ಎಕ್ಸ್‌ಬಿಬಿ.1.5 ತಳಿಯೇ ಕಾರಣವಾಗಿದೆ. ಅಲ್ಲಿ ಕಂಡುಬಂದಿರುವ ಒಟ್ಟು ಪ್ರಕರಣಗಳಲ್ಲಿ ಈ ತಳಿ ಸೋಂಕಿನ ಪ್ರಕರಣಗಳ ಪಾಲು ಶೇ 44ರಷ್ಟು.

‘ಎಕ್ಸ್‌ಬಿಬಿ.1.5’ ತಳಿಯು ‘ಓಮೈಕ್ರಾನ್ ಎಕ್ಸ್‌ಬಿಬಿ’ ತಳಿಗೆ ಸಂಬಂಧಿಸಿದ್ದು ಎಂದು ಹೇಳಲಾಗಿದೆ.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_TATA HITACHI HYDRAULIC EXCAVATOR
YOM – 2019
SI No – NRSP1314304
Min Reserve Price – 1864000

2) CB_SMM 810HS Hydraulic Rock Breaker
YOM – 2017
SI No – SLNOCH9632QY

3) CB_HYDRAULIC EXCAVATOR EX-200, YOM – 2019
SI No – 91C84866827
Min Reserve Price –2397000

4) CB_SANY MAKE EXCAVATOR MODEL SY 80C_9
YOM – 2019
SI No – 19SEY008080891
Min Reserve Price –1376000

5) CB_TATA HITACHI 210 EXCAVATOR
YOM – 2017
SI No – 91L84906862
Min Reserve Price –2375000

6) ASHOK LEYLAND LIMITED - CB_AMBULANCE
YOM – 2021
Reg No – KA51AG9325

7) CB_PRO_2114_CABIN_CHASSIS
YOM – 2022
Reg No – KA51AG9542

8) CB_PRO_2114_CABIN_CHASSIS
YOM – 2022
Reg No – KA51AG9539

9) CB_MARUTI SUPER CARRY
YOM – 2019
Reg No – KA41C9992

10) Piaggio Greaves - P_APE _MINI_GOODS
YOM – 2020
Reg No – KA51AG0594

11) Piaggio Greaves - P_ APE_MINI_GOODS
YOM – 2020
Reg No – KA51AG0587

12) ASHOK_LEY ALDOST
YOM – 2021
Reg No – KA41D2349

UNDER HYPOTHECATION WITH M/S KOTAK MAHINDRA BANK IS UNDER SALE IN ITS “AS IS WHERE IS CONDITION”

INTERESTED PARTIES CAN GIVE THEIR QUOTATIONS (ONLINE/ OFF LINE) WITHIN 15 DAYS FROM THIS PAPER PUBLICATION i.e. from 04.01.2023

(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD.,
22, MG ROAD, BANGALORE
KARNATAKA – 560001
OR
Contact: Pradeep. S
Kotak Mahindra Bank Ltd.
Contact / 080 - 61564249

ತಿರುಪತಿ: ಒಂದೇ ದಿನ ₹7.68 ಕೋಟಿ

ಹೈದರಾಬಾದ್: ವೈಕುಂಠ ಏಕಾದಶಿಯಂದು ತಿರುಪತಿ ತಿರುಮಲ ದೇವಸ್ಥಾನದ ಹುಂಡಿಯಲ್ಲಿ ದಾಖಲೆಯ ₹7.68 ಕೋಟಿ ಕಾಣಿಕೆ ಸಂಗ್ರಹವಾಗಿದೆ. ಕಳೆದ ವರ್ಷದ ಅಕ್ಟೋಬರ್ 23ರಂದು ₹6.31 ಕೋಟಿ ಸಂಗ್ರಹವಾಗಿತ್ತು.

ಚಿತ್ರಮಂದಿರ: ಸಿಜೆಐ ನೇತೃತ್ವದ ಸುಪ್ರೀಂಕೋರ್ಟ್‌ನ ನ್ಯಾಯಪೀಠ ತೀರ್ಪು

ಹೊರಗಿನ ಆಹಾರ–ಮಾಲೀಕನದೇ ನಿರ್ಧಾರ

ನವದೆಹಲಿ (ಪಿಟಿಐ): ಹೊರಗಿನಿಂದ ತಂದ ಆಹಾರ ಪದಾರ್ಥಗಳನ್ನು ಸಿನಿಮಾ ಮಂದಿರಗಳ ಆವರಣದಲ್ಲಿ ಸೇವಿಸಲು ಅನುಮತಿ ನೀಡುವ ಕುರಿತು ಚಿತ್ರಮಂದಿರಗಳ ಮಾಲೀಕರು ನಿರ್ಧಾರ ಕೈಗೊಳ್ಳಬಹುದು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಆವರಣದಲ್ಲಿ ಆಹಾರ ಮತ್ತು ಪಾನೀಯಗಳ ಮಾರಾಟಕ್ಕೆ ಸಂಬಂಧಿಸಿ ನಿರ್ಬಂಧಗಳನ್ನು ವಿಧಿಸುವ ಅಧಿಕಾರವನ್ನು ಚಿತ್ರಮಂದಿರಗಳ ಮಾಲೀಕರು ಹೊಂದಿರುತ್ತಾರೆ ಎಂದೂ ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ಚಿತ್ರಮಂದಿರಗಳೊಳಗೆ ಹೊರಗಿನಿಂದ ಪದಾರ್ಥಗಳನ್ನು ತರುವುದಕ್ಕೆ ನಿರ್ಬಂಧ ವಿಧಿಸದಂತೆ ಸೂಚಿಸಿ ಜಮ್ಮು–ಕಾಶ್ಮೀರ ಹೈಕೋರ್ಟ್ 2018ರ ಜುಲೈನಲ್ಲಿ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿಗಳನ್ನು ಸಲ್ಲಿಸಲಾಗಿತ್ತು.

‘ಚಿತ್ರಮಂದಿರವು ಖಾಸಗಿ ಸ್ವತ್ತು. ಸಾರ್ವಜನಿಕ ಹಿತಾಸಕ್ತಿ, ಸುರಕ್ಷತೆ ಹಾಗೂ ಕಲ್ಯಾಣದಂತಹ ಅಂಶಗಳಿಗೆ ವಿರುದ್ಧವಾಗಿರದ ರೀತಿಯಲ್ಲಿ ನಿಯಮ–ನಿರ್ಬಂಧಗಳನ್ನು ರೂಪಿಸುವ ಅಧಿಕಾರ ಚಿತ್ರಮಂದಿರದ ಮಾಲೀಕ ಹೊಂದಿರುತ್ತಾನೆ’ ಎಂದು ನ್ಯಾಯಪೀಠ ಹೇಳಿದೆ.

‘ಒಂದು ಚಲನಚಿತ್ರವನ್ನು ನೋಡಬೇಕೇ, ಬೇಡವೇ ಎಂಬುದು ಪ್ರೇಕ್ಷಕನ ಆಯ್ಕೆಯಾಗಿರುತ್ತದೆ. ಆದರೆ, ಯಾವಾಗ ಪ್ರೇಕ್ಷಕ ಚಿತ್ರಮಂದಿರ ಪ್ರವೇಶಿಸುತ್ತಾನೋ, ಆಗ ಆತ/ಆಕೆ ಅಲ್ಲಿನ ನಿಬಂಧನೆಗಳಂತೆ ನಡೆದುಕೊಳ್ಳಬೇಕು’ ಎಂದೂ ನ್ಯಾಯಪೀಠ ಸ್ಪಷ್ಟಪಡಿಸಿತು.

ಎಲ್ಲ ಮತಾಂತರಗಳು ಕಾನೂನು ಬಾಹಿರವಲ್ಲ: ಸುಪ್ರೀಂ ಕೋರ್ಟ್

ನವದೆಹಲಿ: ‘ಇತರ ಧರ್ಮಕ್ಕೆ ಮತಾಂತರಗೊಳ್ಳುವ ಮೊದಲು ಜಿಲ್ಲಾಧಿಕಾರಿಗೆ 60 ದಿನಗಳ ಮುಂಚಿತವಾಗಿ ನೋಟಿಸ್ ನೀಡದಿರುವ ವ್ಯಕ್ತಿಯ ವಿರುದ್ಧ ಬಲವಂತವಾಗಿ ಯಾವುದೇ ಕ್ರಮ ಕೈಗೊಳ್ಳದಂತೆ ರಾಜ್ಯ ಸರ್ಕಾರಕ್ಕೆ ನಿರ್ಬಂಧ ವಿಧಿಸಿರುವ ಮಧ್ಯಪ್ರದೇಶ ಹೈಕೋರ್ಟ್‌ನ ತೀರ್ಪಿಗೆ ತಡೆ ನೀಡಲು ಸುಪ್ರೀಂ ಕೋರ್ಟ್ ಮಂಗಳವಾರ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಸಿ.ಟಿ. ರವಿಕುಮಾರ್ ನೇತೃತ್ವದ ನ್ಯಾಯಪೀಠವು, ‘ಎಲ್ಲಾ ಮತಾಂತರಗಳನ್ನು ಕಾನೂನು ಬಾಹಿರ ಎಂದು ಕರೆಯಲಾಗುವುದಿಲ್ಲ’ ಎಂದೂ ಹೇಳಿದೆ.

ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ‘ಮದುವೆಯ ಪ್ರಕ್ರಿಯೆಯನ್ನು ಕಾನೂನುಬಾಹಿರ ಮತಾಂತರಕ್ಕೆ ಬಳಸಿಕೊಳ್ಳಲಾಗುತ್ತಿದೆ. ಈ ವಿಚಾರದಲ್ಲಿ ನಾವು ಕಣ್ಣುಮುಚ್ಚಿ ಕುಳಿತುಕೊಳ್ಳಲಾಗದು. ಮದುವೆ ಅಥವಾ ಮತಾಂತರಕ್ಕೆ ಯಾವುದೇ ನಿಷೇಧವಿಲ್ಲ. ಆದರೆ, ಈ ಕುರಿತು ಜಿಲ್ಲಾಧಿಕಾರಿಗೆ ತಿಳಿಸುವ ಅಗತ್ಯವಿದೆ’ ಎಂದು ಪ್ರತಿಪಾದಿಸಿ, ಹೈಕೋರ್ಟ್ ಆದೇಶಕ್ಕೆ ತಡೆ ಕೋರಿದರು. ಆದರೆ, ತಡೆ ನೀಡಲು ನ್ಯಾಯಪೀಠವು ನಿರಾಕರಿಸಿತು.

ವಂದೇ ಭಾರತ್ ರೈಲಿನ ಮೇಲೆ ಕಲ್ಲು ತೂರಾಟ

ಮಾಲ್ಡಾ, ಪಶ್ಚಿಮ ಬಂಗಾಳ (ಪಿಟಿಐ): ಇತ್ತೀಚೆಗಷ್ಟೇ ಉದ್ಘಾಟನೆಗೊಂಡಿದ್ದ ಹೌರಾ– ನ್ಯೂ ಜಲ್‌ಪೈಗುರಿ ಮಾರ್ಗದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಮೇಲೆ ಮಾಲ್ಡಾ ಜಿಲ್ಲೆಯಲ್ಲಿ ಸೋಮವಾರ ಸಂಜೆ 5.10ಕ್ಕೆ ಕಲ್ಲುತೂರಾಟ ನಡೆಸಲಾಗಿದೆ. ಈ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಆಯೋಗಕ್ಕೆ (ಎನ್‌ಐಎ) ವಹಿಸಬೇಕು ಎಂದು ಬಿಜೆಪಿ ಆಗ್ರಹಿಸಿದೆ.

ಕುಮಾರ್‌ಗಂಜ್ ರೈಲ್ವೆ ನಿಲ್ದಾಣದಲ್ಲಿ ಈ ಘಟನೆ ನಡೆದಿದೆ. ರೈಲಿನ ಸಿ13 ಬೋಗಿಯ ಗಾಜಿನ ಬಾಗಿಲಿಗೆ ಹಾನಿಯಾಗಿದೆ. ಘಟನೆಯಲ್ಲಿ ಯಾರೂ ಗಾಯಗೊಂಡಿಲ್ಲ. ಘಟನೆ ನಡೆದ ಸ್ಥಳದಲ್ಲಿ ರೈಲನ್ನು ನಿಲುಗಡೆ ಮಾಡದೇ, ನಿಲುಗಡೆ ಸ್ಥಳವಾದ ಮಾಲ್ಡಾ ರೈಲು ನಿಲ್ದಾಣದಲ್ಲೇ ಅದನ್ನು ನಿಲುಗಡೆ ಮಾಡಲಾಯಿತು ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ. ರೈಲ್ವೆ ಸುರಕ್ಷತಾ ಪಡೆ (ಆರ್‌ಪಿಎಫ್) ಈ ಪ್ರಕರಣದ ತನಿಖೆ ನಡೆಸುತ್ತಿದೆ ಎಂದು ಮಾಲ್ಡಾ ಪಟ್ಟಣ ರೈಲ್ವೆ ನಿಲ್ದಾಣದ ರೈಲ್ವೆ ಪೊಲೀಸ್ (ಜಿಆರ್‌ಪಿ) ಐ.ಸಿ. ಪ್ರಶಾಂತ್ ರೈ ತಿಳಿಸಿದ್ದಾರೆ

‘12 ಚೀತಾಗಳ 2ನೇ ತಂಡ ಭಾರತಕ್ಕೆ ಶೀಘ್ರ’

ನವದೆಹಲಿ (ಪಿಟಿಐ): 12 ಚೀತಾಗಳ ಎರಡನೇ ತಂಡ ದಕ್ಷಿಣ ಆಫ್ರಿಕಾದಿಂದ ಭಾರತದ ರಾಷ್ಟ್ರೀಯ ಉದ್ಯಾನಗಳಿಗೆ ಇದೇ ತಿಂಗಳು ಬರುವ ಸಾಧ್ಯತೆ ಇದೆ ಎಂದು ಕೇಂದ್ರ ಪರಿಸರ ಸಚಿವಾಲಯದ ಮೂಲಗಳು ಮಂಗಳವಾರ ತಿಳಿಸಿವೆ.

ಪೋಷಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ

ಮಡಿಕೇರಿಯ ಸರ್ಕಾರಿ ಬಾಲಕಿಯರ ಬಾಲಮಂದಿರದಲ್ಲಿ ಪ್ರಸ್ತುತ ಪೋಷಣೆ ಹಾಗೂ ರಕ್ಷಣೆ ಪಡೆಯುತ್ತಿರುವ ಕು॥ ಮಂಜುಳ ಎಸ್ ಎಂಬ ಮಗುವಿನ ಪೋಷಕರು ಇದುವರೆಗೂ ಪತ್ತೆಯಾಗಿರುವುದಿಲ್ಲ. ಈ ಮಗುವಿನ ಪೋಷಕರು ಅಥವಾ ಸಂಬಂಧಿಕರು ಯಾರಾದರೂ ಇದ್ದಲ್ಲಿ ಕೂಡಲೇ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಚೇರಿ, ಬ್ರಾಹ್ಮಣರ ಕಲ್ಯಾಣ ಮಂಟಪದ ಮುಂಭಾಗ, ದೇವಸ್ಥಾನ ರಸ್ತೆ, ಮಡಿಕೇರಿ ಹಾಗೂ ದೂರವಾಣಿ: 08272–228800, 295120, 228297, 220126ಗಳನ್ನು ಸಂಪರ್ಕಿಸಲು ತಿಳಿಯಪಡಿಸಲಾಗಿದೆ. ಮಗುವಿನ ಪೋಷಕರು ಯಾರೂ ಬಾರದಿದ್ದಲ್ಲಿ ಈ ಮಗುವನ್ನು ಕಾನೂನು ಪ್ರಕಾರ ದತ್ತು ನೀಡಲು ಕ್ರಮಕೈಗೊಳ್ಳಲಾಗುವುದು.



ಕು॥ ಮಂಜುಳ ಎಸ್
ವಯಸ್ಸು ಸಂಸ್ಥೆಗೆ ಬಂದಾಗ: 11 ವರ್ಷ ಪ್ರಸ್ತುತ ವಯಸ್ಸು: 17 ವರ್ಷ
ತಂದೆಯ ಹೆಸರು : ದಿ.ಚೆಲುವರಾಜು **ತಾಯಿಯ ಹೆಸರು**: ನೀಲಮ್ಮ
ದಿನಾಂಕ 23–02–2016ರಲ್ಲಿ ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕಿಯರ ಬಾಲಮಂದಿರಕ್ಕೆ ದಾಖಲಾಗಿರುತ್ತಾಳೆ.
ಮಾತನಾಡುವ ಭಾಷೆ: ಕನ್ನಡ ಮತ್ತು ತಮಿಳು
ಈ ಹಿಂದೆ ವಾಸವಿದ್ದ ವಿಳಾಸ: ಗದ್ದೆ ಹಳ್ಳ, ಸುಂಟಿಕೊಪ್ಪ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ. ಪ್ರಸ್ತುತ 17 ವರ್ಷದ ಕೋಲು ಮುಖ, ಗೋಧಿ ಮೈ ಬಣ್ಣದ ಹೆಣ್ಣು ಮಗುವಾಗಿರುತ್ತದೆ.

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಡಿಕೇರಿ, ಕೊಡಗು ಜಿಲ್ಲೆ

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಂಪನಿ ಕಛೇರಿ, ನವನಗರ, ಪಿ.ಬಿ.ರೋಡ, ಹುಬ್ಬಳ್ಳಿ–580 025.
Tel : 0836-2956611 E-mail : eehrd.hescom@gmail.com
Corporate Identity Number (CIN): U31401KA2002SGC030437
ಕ್ರ.ಸಂ: ಹೆಸ್ಕಾಂ/ಪ್ರ.ವ್ಯ(ಆ ಮತ್ತು ಮಾ.ಸಂ.ಅ)/ಕಾ.ನಿ.ಇ(ಮಾ.ಸಂ.ಅ & ಕೈ.ತ.ಕೇಂ)/2022–23/214 ದಿನಾಂಕ : 03.01.2023

ಪ್ರಕಟಣೆ

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತವು ಬಿ.ಇ ಪದವಿ ಹಾಗೂ ಡಿಪ್ಲೋಮಾ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವೃತ್ತಿಯಲ್ಲಿ ಪಾಸಾದ ಅಭ್ಯರ್ಥಿಗಳಿಂದ 2023ರ ಫೆಬ್ರುವರಿ/ಮಾರ್ಚನಿಂದ ಒಂದು ವರ್ಷದ ಶಿಶುಕ್ಷು ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮುಂದಿನ ಮಾಹಿತಿಗಾಗಿ https://hescom.karnataka.gov.in (Home Page>Documents>HRD & ITC Center) ಅನ್ನು ಭೇಟಿ ನೀಡಿ.

ಸಹಿ/– ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ)
ವಾಸಾಸಂಇ/ಧಾ/ಎಂಸಿಎ/931/2022–23 ನಿಗಮ ಕಛೇರಿ, ನವನಗರ, ಹುಬ್ಬಳ್ಳಿ

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ, ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಮೈಸೂರು ರಸ್ತೆ,
ಬೆಂಗಳೂರು–560059. ದೂರವಾಣಿ: 080–28484540/28484543
ಸಂಖ್ಯೆ: ಡಿಪಿಎಸ್ 46 ಸಿಸಿಎ /2022–23/1761 ದಿನಾಂಕ: 29–12–2022

ಪ್ರಕಟಣೆ

ಶ್ರೀ ಹೆಚ್.ಗಂಗಯ್ಯ, ನಿವೃತ್ತ ನಿರ್ದೇಶಕರು, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು, ಆದ ನೀವು ನಕಲಿ ದಾಖಲೆಗಳನ್ನು ಸೃಷ್ಟಿಸಿ ನಿಯಮ ಬಾಹಿರವಾಗಿ ರೂ.1.67 ಕೋಟಿ ಹಣವನ್ನು ಖಜಾನೆಯಿಂದ ಪಡೆದು ಸರ್ಕಾರಕ್ಕೆ ಮೋಸ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಾನ್ಯ ನಗರ ಸಿವಿಲ್ ನ್ಯಾಯಾಲಯದಲ್ಲಿ ದಾಖಲಾದ ಓ.ಎಸ್.ಸಂಖ್ಯೆ: 7956/2019ರಲ್ಲಿ ನಿಮಗೆ ಜಾರಿ ಮಾಡಲಾದ ನೋಟಿಸುಗಳು ಸ್ವೀಕೃತವಾಗದ ಕಾರಣ ದಿನಾಂಕ: **06–02–2023 ರಂದು ಬೆಳಿಗ್ಗೆ 11:00 ಘಂಟೆಗೆ ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು, XXXIX Addl (CCH-40), ಬೆಂಗಳೂರು**, ಇಲ್ಲಿಗೆ ಹಾಜರಾಗುವಂತೆ ತಿಳಿಸಲಾಗಿದೆ. ಇದಕ್ಕೆ ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ಮುಂದಿನ ಕ್ರಮವನ್ನು ನ್ಯಾಯಾಲಯ ಜರುಗಿಸುತ್ತದೆಂದು ಈ ಮೂಲಕ ತಮಗೆ ತಿಳಿಸಿದೆ.

ಸಹಿ/– ನಿರ್ದೇಶಕರು
ವಾಸಾಸಂಇ/ವಾ.ಪ್ರ/3842/ಎಂಎಎ/2022–23

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಕಾರ್ಯ ನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ನಂ.2ನೇ ವಿಭಾಗ
ಜಾವಾ ಫ್ಯಾಕ್ಟರಿ ರಸ್ತೆ, ಹೈವೇ ಸರ್ಕಲ್ ಹತ್ತಿರ, ಮೈಸೂರು–570001
ದೂರವಾಣಿ: 0821–2410999, ಇ–ಮೇಲ್: ksdb_mys2@yahoo.com
ವೆಬ್‌ಸೈಟ್: https://ksdb.karnataka.gov.in
ಸಂಖ್ಯೆ: ಕಕೊಅಮ/ಕಾನಿ.ಇಂ/ಮೈ–ವಿ–2/ಪ.ಜಾ./2022–23/599 ದಿನಾಂಕ: 30–12–2022

ಟೆಂಡರ್ ಆಹ್ವಾನ (ಐಎಫ್‌ಟಿ) – ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕಾರ್ಯನಿರ್ವಾಹಕ ಇಂಜಿನಿಯರ್ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ನಂ.2ನೇ ವಿಭಾಗ, ಮೈಸೂರು ಇವರು ಮಂಡಳಿಯ ಆಯುಕ್ತರು, ಕಕೊಅಮ, ಬೆಂಗಳೂರು ರವರ ಪರವಾಗಿ **ಮೈಸೂರು ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ವಿವಿಧ ಕೊಳಗೇರಿ ಪ್ರದೇಶಗಳಲ್ಲಿ 04 ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ** ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಕಾಮಗಾರಿಯ ಗರಿಷ್ಠ ಅಂದಾಜು ಮೊತ್ತ **ರೂ. 36,48,419/– ಮತ್ತು** ಕನಿಷ್ಠ ಅಂದಾಜು ಮೊತ್ತ **ರೂ. 12,65,105/– ಗರಿಷ್ಠ ಇ.ಎಂ.ಡಿ ರೂ. 73,000/–** ಮತ್ತು **ಕನಿಷ್ಠ ಇ.ಎಂ.ಡಿ. ರೂ 32,000/–**. ಟೆಂಡರ್ ಪ್ರಕಟಣೆ, ವೇಳಾಪಟ್ಟಿ ಹಾಗೂ ಇತರೆ ವಿವರಗಳು ವೆಬ್‌ಸೈಟ್: https://www.eproc.karnataka.gov.in ನಲ್ಲಿ ಲಭ್ಯವಿರುತ್ತದೆ.

1	ಟೆಂಡರ್ ವಿಚಾರಣೆಗೆ ಕೊನೆಯ ದಿನಾಂಕ ಮತ್ತು ಸಮಯ	07–01–2023ರ ಸಂಜೆ 4.00 ಗಂಟೆಯವರೆಗೆ.
2	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	09–01–2023ರ ಸಂಜೆ 4.00 ಗಂಟೆಯವರೆಗೆ.
3	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	11–01–2023ರ ಬೆಳಿಗ್ಗೆ 11.00 ಗಂಟೆಗೆ.
4	ಟೆಂಡರ್‌ಗಳನ್ನು ತೆರೆಯುವ ಹಾಗೂ ಪ್ರಿ–ಬಿಡ್ ಕಾನ್ಫರೆನ್ಸ್ ನಡೆಯುವ ಸ್ಥಳದ ವಿಳಾಸ	ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಕಕೊಅಮ, 2ನೇ ವಿಭಾಗ , ಹೈವೇ ಸರ್ಕಲ್ ಹತ್ತಿರ, ಜಾವಾ ಫ್ಯಾಕ್ಟರಿ ರಸ್ತೆ , ಮೈಸೂರು–570001

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಕಕೊಅಮ ನಂ. 2ನೇ ವಿಭಾಗ, ಮೈಸೂರು.
DIPR/CP/3861/Yakshi/2022-23

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ ಖನಿಜ ಭವನ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು– 560001.ಫೋನ್ ಸಂ. 080–22265383
ವೆಬ್‌ಸೈಟ್: www.kiadb.in ಇ–ಮೇಲ್: cdoce1@kiadb.in or jdtp@kiadb.in
ಸಂ.ಐಎಡಿಬಿ/ಇಎನ್‌ಜಿಜಿ/ಇಐಎ/ಇಸಿ/ಇಟಿಎನ್‌ಡಿ–ಇಸಿ–16/16907/2022–23 ದಿನಾಂಕ: 03–01–2023

ಪರಿಸರ ವಿಮೋಚನ ಪತ್ರ (ಇಸಿ) ಪಡೆಯಲು ಸಲಹಾ ಸೇವೆಗಳನ್ನು ಒದಗಿಸಲು ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು, ಮೇಟಿಕುರ್ಕಿ ಮತ್ತು ಕರಿಯೋಬೇನಹಳ್ಳಿ ಗ್ರಾಮಗಳು, ಮೇಟಿಕುರ್ಕಿ ಕೈಗಾರಿಕಾ ಪ್ರದೇಶದ ಒಟ್ಟು 1156ಎಕರೆ–12.5ಗುಂಟೆ ವಿಸ್ತೀರ್ಣದಲ್ಲಿ ಅಭಿವೃದ್ಧಿಪಡಿಸಲು ರಾಜ್ಯ ಪರಿಸರ ಪ್ರಭಾವ ಮೌಲ್ಯಮಾಪನ ಪ್ರಾಧಿಕಾರದಿಂದ (ಎಸ್.ಇ.ಐ.ಎ.ಎ) ಪರಿಸರ ವಿಮೋಚನಾ (ಎನ್‌ವಿರಾನ್‌ಮೆಂಟ್ ಕ್ಲಿಯರೆನ್ಸ್) ಪತ್ರವನ್ನು ಪಡೆಯಲು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯಿಂದ ಸ್ಥಾಪನ ಸಮ್ಮತಿ ಪತ್ರ (ಸಿ.ಎಫ್.ಇ) ಪಡೆಯಲು ಮತ್ತು ಅರ್ಧ ವಾರ್ಷಿಕ ಅನುಸರಣಾ ವರದಿಯನ್ನು ತಯಾರಿಸಿ 3 ವರ್ಷಗಳವರೆಗೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸುವುದು, ಇ.ಐ.ಎ. ವರದಿ, ಎಸ್‌ಐಎಸ್ ಅಧ್ಯಯನಗಳು ಮತ್ತು ಇತ್ಯಾದಿಯನ್ನು ಸಿದ್ಧಪಡಿಸಲು ಸಲಹಾ ಸೇವೆಗಳನ್ನು ಒದಗಿಸಲು ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಅಹ್ವಾನಿಸಿದೆ. ಪರಿಸರ ಮತ್ತು ಅರಣ್ಯ ಸಚಿವಾಲಯ, ನವದೆಹಲಿ ಇದರ ಮಾನ್ಯತೆ ಪಡೆದ ಪಟ್ಟಿಯಲ್ಲಿ ಮಾನ್ಯತೆ ಪಡೆದ ಸಲಹೆಗಾರರಾಗಿ ಹೆಸರು ಸೇರ್ಪಡೆಯಾಗಿರುವ ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಇ.ಎಂ.ಡಿ.ಮೊತ್ತ ರೂ.2.00 ಲಕ್ಷಗಳನ್ನು ಇ–ಪ್ರೊಕ್ಯುರ್‌ಮೆಂಟ್‌ನಲ್ಲಿ ಯಾವುದಾದರೂ ಈ ನಾಲ್ಕು ವಿಧದ ಇ–ಪಾವತಿ ಮೂಲಕ ಪಾವತಿಸಬೇಕು. i.e. Credit Card, Direct Debit, National Electronic Fund Transfer (NEFT), and Over the Counter (OTC).

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಟೆಂಡರ್ ದಿನಾಂಕಗಳು ಕೆಳಕಂಡಂತಿರುವುದು:

- ಬಿಡ್ ಪೂರ್ವ ವಿಚಾರಣೆಗಳನ್ನು ಸ್ವೀಕರಿಸಲು ಕಡೆಯ ದಿನಾಂಕ: **06–01–2023** ಸಂಜೆ 5.00 ಗಂಟೆಯವರೆಗೆ.
- ಬಿಡ್ ಪೂರ್ವ ಸಭೆ ನಡೆಯುವ ದಿನಾಂಕ: **07–01–2023** ಬೆಳಿಗ್ಗೆ 11.30 ಗಂಟೆಗೆ.
- ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: **12–01–2023** ಸಂಜೆ 4.00 ಗಂಟೆಯವರೆಗೆ.
- ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **13–01–2023** ಬೆಳಿಗ್ಗೆ 05.30 ಗಂಟೆಯ ನಂತರ.

ಸಹಿ/– ಮುಖ್ಯ ಅಭಿಯಂತರರು–1 ಕೆ.ಐ.ಎ.ಡಿ.ಬಿ, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/3858/ಆಕಾರ್/22–23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:KW- 4:ಟೆಂ:2022–23:3743 ದಿನಾಂಕ: 02–01–2023

ಅಲ್ಪಾವಧಿ ಟೆಂಡರ್ ಪ್ರಕಟಣೆ (3ನೇ ಕರೆ)

2022–23ನೇ ಸಾಲಿನ ಲೆಕ್ಕ ಶೀರ್ಷಿಕೆ: 5054 (ಯೋಜನೆ) ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ ಅಡಿಯಲ್ಲಿ ಮಂಜೂರಾದ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ **KW-4**ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in. ಮುಖಾಂತರ ಭಾಗವಹಿಸಬಹುದು. ಕಾಮಗಾರಿ ವರ್ಕ ಇಂಡೆಂಟ್ ಸಂಖ್ಯೆ: **153035/ Call-3 (ಒಟ್ಟು 01 ಕಾಮಗಾರಿ)** ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: **10–01–2023** ಸಮಯ 16.00 ಗಂಟೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **11–01–2023** ಸಮಯ 16.30 ಗಂಟೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **13–01–2023** ಸಮಯ 11.00 ಗಂಟೆ ಮತ್ತು **ಅಂದಾಜು ಮೊತ್ತ ರೂ. 130.00** ಲಕ್ಷಗಳು, ಇರುತ್ತದೆ. ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ., ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಡಿಕೊಳ್ಳುವುದು / ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು, ಲೋ.ಇ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/546/ಎಂಸಿಎ/2022–23

KMF ಧಾರವಾಡ, ಗದಗ ಮತ್ತು ಉತ್ತರ ಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,ಧಾರವಾಡ
ಲಕ್ಕಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಪಿ ಬಿ ರಸ್ತೆ, ವಿದ್ಯಾಗಿರಿ ಅಂಚೆ, ಧಾರವಾಡ – 580 004
ದೂ.ಸಂಖ್ಯೆ: 0836-2467603/2468380 E-mail-dharwarnin@gmail.com
ಸಂಖ್ಯೆ : DMU/ENGG/COAL-TRANS/2023/2565 ದಿನಾಂಕ: 02.01.2023

ಕಲ್ಲಿದ್ದಲು ಲೈಜನಿಂಗ್ & ಸಾಗಾಣಿಕೆಗೆ ಅಲ್ಪಾವಧಿ ಟೆಂಡರ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿಯಮಿತ., ಧಾರವಾಡ(ಧಾಮುಲ್) ವು ಮೆ॥ ಸಿಂಗರೇಣಿ ಕಾಲೊರೀಸ್ ಕಂ ಲಿ., (ಮೆ॥ ಎಸ್‌ಸಿಸಿಎಲ್) ಹೈದರಾಬಾದ್ ಇವರೊಂದಿಗೆ ಕನಿಷ್ಠ 10–15 ವರ್ಷ ಅನುಭವವುಳ್ಳ ಪ್ರತಿಷ್ಠಿತ ಕಲ್ಲಿದ್ದಲು ಲೈಜನಿಂಗ್ & ಸಾಗಾಣಿಕೆ ಗುತ್ತಿಗೆದಾರರಿಂದ ದ್ವೈವಾರ್ಷಿಕ ದರ ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲು ಟೆಂಡರ ಆಹ್ವಾನಿಸಲಾಗಿದೆ. ಮೆ॥ ಎಸ್‌ಸಿಸಿಎಲ್ ಇವರೊಂದಿಗೆ ಕಲ್ಲಿದ್ದಲು ಲೈಜನಿಂಗ್ ಜೊತೆಗೆ ಹಂಚಿಕೆ ಮಾಡಿದ “G7 Round” ಕಲ್ಲಿದ್ದಲನ್ನು (ಅಂದಾಜು 506ಎಂಟಿ ಪ್ರತಿ ತಿಂಗಳಿಗೆ ಅಥವಾ ಮೆ॥ ಎಸ್‌ಸಿಸಿಎಲ್ ಇವರಿಂದ ಗುತ್ತಿಗೆ ಅವಧಿಯಲ್ಲಿ ಹಂಚಿಕೆ ಮಾಡಿದ ಪ್ರಮಾಣ) ಕೊತ್ತಗುಡಂ ಪ್ರದೇಶದಲ್ಲಿ ಬರುವ ಗಣಿಗಳಿಂದ ಧಾಮುಲ್ ಧಾರವಾಡಕ್ಕೆ ಸಾಗಾಣಿಕೆ ಮಾಡುವುದಾಗಿದೆ. ಆಸಕ್ತಿಯುಳ್ಳ ಟೆಂಡರುದಾರರು ಕಲ್ಲಿದ್ದಲು ಲೈಜನಿಂಗ್ & ಸಾಗಾಣಿಕೆ ಕೆಲಸವನ್ನು ಮೆ॥ ಸಿಂಗರೇಣಿ ಕಾಲೊರೀಸ್ ಕಂ ಲಿ., ಹೈದರಾಬಾದ ಇವರ ಕೊತ್ತಗುಡಂ ಪ್ರದೇಶದಲ್ಲಿ G7 Round ಕಲ್ಲಿದ್ದಲು ಲಭ್ಯವಿರುವ ಗಣಿಗಳಿಂದ ಧಾಮುಲ್ ಧಾರವಾಡಕ್ಕೆ ನಿರ್ವಹಿಸಲು ಟೆಂಡರ ಸಲ್ಲಿಸಬಹುದಾಗಿದೆ. ಸಾಗಾಣಿಕೆಯು ರಸ್ತೆ ಮೂಲಕವೇ ವ್ಯವಸ್ಥೆ ಮಾಡುವುದಾಗಿರುತ್ತದೆ.

1	ಪ್ರೀ–ಬಿಡ್ ಮೀಟಿಂಗ್ (ಧಾಮುಲ್ ಆವರಣದಲ್ಲಿ)	ದಿ:–27.01.2023 ರ ಬೆಳಿಗ್ಗೆ 11 ಕ್ಕೆ
2	ಇ–ಟೆಂಡರ ಸಲ್ಲಿಸುವ ಕೊನೆಯ ದಿನಾಂಕ & ವೇಳೆ	ದಿ:–04.02.2023 ರ ಸಂಜೆ 4.00 ರವರೆಗೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ	ದಿ:–06.02.2023 ರ ಸಂಜೆ 4.30 ರ ನಂತರ
4	ವಾಣಿಜ್ಯ ಬಿಡ್ ತೆರೆಯುವ ದಿನಾಂಕ & ವೇಳೆ	ದಿ:–10.02.2023 ರ ಬೆಳಿಗ್ಗೆ 10.00 ರ ನಂತರ

ಆಸಕ್ತಿಯುಳ್ಳ ಮತ್ತು ಅರ್ಹ ಟೆಂಡರುದಾರರು ಟೆಂಡರ ಪ್ರಕ್ರಿಯೆ ಶುಲ್ಕ (ಮರುಪಾವತಿಯಾಗದ) & ಇಎಂಡಿ ಮೊತ್ತ ರೂ.2,00,000/– ವನ್ನು ಟೆಂಡರನಲ್ಲಿ ತಿಳಿಸಿದಂತೆ ಇ–ಪೋರ್ಟಲ್‌ನ ಯಾವುದಾದರೂ ಮೂಲದಿಂದ ಪಾವತಿಸಿ ಭಾಗವಹಿಸಬಹುದಾಗಿದೆ. ಭದ್ರತಾ ಠೇವಣಿ, ಟೆಂಡರನ ಕರಾರು ಮತ್ತು ಷರತ್ತುಗಳ ಟೆಂಡರ ದಾಖಲಾತಿಗಳನ್ನು ಪಡೆಯಲು ವೆಬ್‌ಸೈಟ್ http://eproc.karnataka.gov.in ನಲ್ಲಿ ಲಾಗ್‌ಇನ್ ಆಗಿ ಅಥವಾ ಸಹಾಯವಾಣಿ ಸಂಖ್ಯೆ:–080–46010000 / 68948777, Email:support@ihelpdsk.com ರ ಮೂಲಕ ಸಂಪರ್ಕಿಸಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ವೆಬ್‌ಸೈಟ್‌ನ ಯಾವುದೇ ತಾಂತ್ರಿಕ ಅಡಚಣೆಯಿಂದ, ಕೊನೆ ಘಳಿಗೆಯಲ್ಲಿ ಟೆಂಡರ ಸಲ್ಲಿಸುವಿಕೆಯಲ್ಲಿ ಅಥವಾ ಸ್ವೀಕರಿಸುವಲ್ಲಿ ಏನಾದರೂ ತೊಂದರೆ ಆದಲ್ಲಿ ಧಾಮುಲ್ ಯಾವುದೇ ರೀತಿ ಜವಾಬ್ದಾರರಲ್ಲ.

ಸಹಿ/–ಕಾರ್ಯನಿರ್ವಾಹಕ ನಿರ್ದೇಶಕರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, (ಪೂರ್ವ) ಕೆರೆಗಳ ವಿಭಾಗ, ಸಂಖ್ಯೆ:308, 3ನೇ ಮಹಡಿ, ಹೊಸ ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು–02.
ಸಂಖ್ಯೆ:ಕಾಪಾಅ–ಪೂರ್ವ/ಕೆರೆಗಳು/ಟೆಂಡರ್–05/2022–23 ದಿನಾಂಕ: 02.01.2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್ /ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹.ಗಳಲ್ಲಿ)
ಹಲಸೂರು ಕೆರೆಯಲ್ಲಿ ತಡೆಗೋಡೆ, ಥ್ರ್ಯಾಷ್ ಬ್ಯಾರಿಯರ್ಸ್ ಒದಗಿಸುವುದು ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು (4ನೇ ಕರೆ)	400.00	6,00,000/-

ಟೆಂಡರ್ ವೇಳಾಪಟ್ಟಿ: (1) ಬಿಡ್ ದಾಖಲೆಗಳು ದಿನಾಂಕ **03.01.2023**ರ ಮಧ್ಯಾಹ್ನ **12:00** ಗಂಟೆಯಿಂದ ಲಭ್ಯವಿರುತ್ತದೆ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **06.01.2023**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ **12.01.2023**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **13.01.2023**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್ ತೆರೆಯುವುದನ್ನು ನಂತರ ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು (ಪೂರ್ವ), ಕೆರೆಗಳು

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ

ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್: 41/2022–23 ದಿನಾಂಕ: 30.12.2022
(ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ ಶಿಕಾರಿಪುರ ಇವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 2000ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಕಾಮಗಾರಿಗಳಿಗೆ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲೂದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ KPWD Class-II ಮತ್ತು Class-III & above ದರ್ಜೆಯ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಸೊರಬ ತಾಲ್ಲೂಕಿನ ರಸ್ತೆಗಳ ಕಾಮಗಾರಿಗಳ ಟೆಂಡರಿಗಿಟ್ಟ ಮೊತ್ತ ರೂ. 299.95 ಲಕ್ಷಗಳಿಂದ ರೂ. 99.45 ಲಕ್ಷಗಳು & ಇ.ಎಂ.ಡಿ ಮೊತ್ತ ರೂ. 4.50 ಲಕ್ಷಗಳಿಂದ ರೂ.2.00 ಲಕ್ಷಗಳು

1) ಟೆಂಡರ್‌ನಲ್ಲಿ ಭಾಗವಹಿಸಬಹುದಾದ ದಿನಾಂಕ: 30.12.2022 ರಿಂದ 06.01.2023 ಸಂಜೆ 5.30 ರವರೆಗೆ (2) ಪ್ರೀಬಿಡ್ ಸಭೆಯ ದಿನಾಂಕ: 05.01.2023 ಬೆಳಿಗ್ಗೆ 11.00 ಗಂಟೆಗೆ (ಸ್ಥಳ: ಕಾರ್ಯಪಾಲಕ ಇಂಜನೀಯರರು, ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ. ಇವರ ಕಛೇರಿ (3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 09.01.2023 ಬೆಳಗ್ಗೆ 11.00 ಗಂಟೆಗೆ (4) ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ (www.eproc.karnataka.gov.in) ಅಥವಾ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸಂಪರ್ಕಿಸಬಹುದು.

ಸಹಿ/–
ಕಾರ್ಯಪಾಲಕ ಇಂಜನೀಯರರು,
ಕನೀನಿನಿ, ದಂಡಾವತಿ ಜಲಾಶಯ ಯೋಜನಾ ವಿಭಾಗ, ಶಿಕಾರಿಪುರ,
ವಾಸಾಸಂಇ/ಶಿ/ನಂ.01/ಝಂಕಾರ್/2022–23

ಕರ್ನಾಟಕ ಸರ್ಕಾರ
ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ
ಅಂಬೇಡ್ಕರ್ ಸರ್ಕಲ್ ಹತ್ತಿರ, ಹಂಪಿ ರಸ್ತೆ, ಕಮಲಾಪುರ, ಹೊಸಪೇಟೆ (ತಾ)
ವಿಜಯನಗರ ಜಿಲ್ಲೆ–583221 ದೂರವಾಣಿ: 08394–241661.
ಇ–ಮೇಲ್: hwhama@gmail.com, ವೆಬ್‌ಸೈಟ್ :hwhama.tpa.gov.in
ಸಂಖ್ಯೆ:ಹವಿಪಪ್ರನಿಪ್ರಾ/ಕ/SWM/2022–23 ದಿನಾಂಕ:02.01.2023

ಟೆಂಡರ್ ಪ್ರಕಟಣೆ

ವಿಜಯನಗರ ಜಿಲ್ಲೆ, ಹೊಸಪೇಟೆ ತಾಲ್ಲೂಕಿನ ಕಮಲಾಪುರದಲ್ಲಿ ಆಯುಕ್ತರು, ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯಲ್ಲಿ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ವಿವಿಧ ಅನುದಾನದಡಿ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್ ಮೂಲಕ ಇ–ಟೆಂಡರ್‌ನ್ನು Public Procurement Portal ಮೂಲಕ ಇ–ಟೆಂಡರ್‌ಅನ್ನು ಆಹ್ವಾನಿಸಿರುತ್ತಾರೆ.

ಕಾಮಗಾರಿಯ ಹೆಸರು: SUPPLY OF 10 NO'S 11 SEATER BOV (BUS MODEL) FOR HWHAMA UNDER BUYBACK WITH OLD BUGGIES (HWHAMA/kmplr/BOV/2022-23 Dt: /12/2022). **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)**: 80.00. **ಇ.ಎಂ.ಡಿ. ಮೊತ್ತ(ರೂ.ಗಳಲ್ಲಿ)**: 1,60,000/–. **ಕಾಮಗಾರಿ ಅವಧಿ**: 1 ವರ್ಷ

ಟೆಂಡರ್ ಘಟನಾವಳಿ: 1.Last Date & Time for Tender queries / clarification: **09-01-2023 at 17.00 Hrs.** 2.Last Date & Time for receipt of Tender: **10-01-2023 at 16.30 Hrs.** 3.Date & Time for Opening of Technical Bid: **11-01-2023 at 17.00 Hrs.** 4.Date & Time for Opening of Financial Bid: **12-01-2023 at 11.00 Hrs.** 5.Auto Extension of tender schedule: **3 Days**

ಮೇಲ್ಕಂಡ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಟೆಂಡರ್ ದಾಖಲಾತಿ ಮತ್ತು ಷರತ್ತುಗಳಿಗಾಗಿ **http://eproc.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿ, ಟೆಂಡರ್ ಭರ್ತಿ ಮಾಡುವುದು ಹೆಚ್ಚಿನ ವಿವರಗಳಿಗಾಗಿ **ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಹಂಪಿ ರೋಡ್, ಕಮಲಾಪುರ** ಇವರ ಕಛೇರಿಗೆ ಸಂಪರ್ಕಿಸಬಹುದಾಗಿದೆ.

ಸಹಿ/–ಆಯುಕ್ತರು, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಕಮಲಾಪುರ
ಡಿಐಪಿಆರ್/ವಿಜಯನಗರ/310/ಎಂಸಿಎ/2022–23

ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ.
(ಜಿಲ್ಲಾ ನಗರಾಭಿವೃದ್ಧಿ ಕೋಶ)
ದೂರವಾಣಿ ಸಂಖ್ಯೆ:08192–251168 e-mail:dudc_dvg@yahoo.co.in
ನಂ.ಜಿ.ನ.ಕೋ.ದಾ(2)/ಸಿಆರ್/32/2017–18 ದಿನಾಂಕ:26–12–2022

ಟೆಂಡರ್ ಪ್ರಕಟಣೆ

ದಾವಣಗೆರೆ ಜಿಲ್ಲೆಯಲ್ಲಿ ಬರುವ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಂದ (ದಾವಣಗೆರೆ ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ) ಈ ಕೆಳಗೆ ನಮೂದಿಸಿದ ಸರ್ಕಾರದ ಎಲ್ಲಾ ಯೋಜನೆಯಡಿಯಲ್ಲಿ (ಎಸ್.ಎಫ್.ಸಿ/ಎಸ್.ಎಫ್.ಸಿ ವಿಶೇಷ ಅನುದಾನ, 14 & 15ನೇ ಹಣಕಾಸು ಯೋಜನೆ,ಎಸ್.ಬಿಎಂ ಅನುದಾನ, ಶೇ.24.10, ಶೇ.7.25, ಶೇ.5 ಯೋಜನೆ ಹಾಗೂ ಸ್ಥಳೀಯ ಸಂಸ್ಥೆಯ ನಿಧಿಯಲ್ಲಿ) ನಿರ್ವಹಿಸಿರುವ ಕಾಮಗಾರಿಗಳನ್ನು ಹಾಗೂ ಸಾಮಾಗ್ರಿಗಳ ಖರೀದಿಗಳನ್ನು 3ನೇ ಪಾರ್ಟಿ ತಪಾಸಣೆಗೆ (Third Party Inspection) ಒಳಪಡಿಸುವ ಬಗ್ಗೆ ಅರ್ಹ ಕನ್ಸಲ್‌ಟೆನ್ಸಿ/ಏಜೆನ್ಸಿಗಳಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಅಹ್ವಾನಿಸಲಾಗಿದ್ದು, ವಿವರ ಈ ಕೆಳಕಂಡಂತೆ ಇರುತ್ತದೆ.

(1) ಇ–ಪ್ರಕೂರ್ ಮೆಂಟ್ ಇಂಡೆಂಟ್ ನಂಬರ್:– DUDC/CR/02/2022-23/ Call-2 (2) ಕಾಮಗಾರಿಯ ಹೆಸರು:– ದಾವಣಗೆರೆ ಜಿಲ್ಲೆಯಲ್ಲಿನ ನಗರ ಸ್ಥಳೀಯ ಸಂಸ್ಥೆಗಳಾದ ನಗರಸಭೆ– ಹರಿಹರ, ಪುರಸಭೆ–ಚನ್ನಗಿರಿ, ಹೊನ್ನಾಳಿ ಮತ್ತು ಮಲೆಬೆನ್ನೂರು ಹಾಗೂ ಪಟ್ಟಣ ಪಂಚಾಯಿತಿ–ಜಗಳೂರು ಮತ್ತು ನ್ಯಾಮತಿಯ ಸರ್ಕಾರದ ವಿವಿಧ ಯೋಜನೆಯಡಿಯಲ್ಲಿನ ಎಸ್.ಎಫ್.ಸಿ/ ಎಸ್.ಎಫ್.ಸಿ ವಿಶೇಷ ಅನುದಾನ, 14 & 15ನೇ ಹಣಕಾಸು ಯೋಜನೆ, ಎಸ್.ಬಿಎಂ ಅನುದಾನ, ಶೇ.24.10, ಶೇ.7.25, ಶೇ.5 ಯೋಜನೆ ಹಾಗೂ ಸ್ಥಳೀಯ ಸಂಸ್ಥೆ ನಿಧಿಯಲ್ಲಿನ ಕಾಮಗಾರಿಗಳು ಹಾಗೂ ಸಾಮಾಗ್ರಿಗಳ ಖರೀದಿಗಳ ಪರಿಶೀಲನೆ ಕುರಿತು ನಿಬಂಧನೆಗಳಂತೆ 3ನೇ ಪಾರ್ಟಿ ತಪಾಸಣೆ ನಡೆಸಿ ವರದಿ ನೀಡುವುದು. (2) ಇ.ಎಂ.ಡಿ. ಮೊತ್ತ (ರೂ):– 40,000/– (3) ಗುತ್ತಿಗೆ ಅವಧಿ:– ಒಂದು ವರ್ಷ ಅರ್ಹ ಏಜೆನ್ಸಿದಾರರು ವೆಬ್‌ಸೈಟ್ www.eproc.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ.

(1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ದಿನಾಂಕ :11–01–2023
(2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ :12–01–2023
(3) ತಾಂತ್ರಿಕ ಬಿಡನ್ನು ತೆರೆಯುವ ದಿನಾಂಕ ಮತ್ತು ವೇಳೆ: 13–01–2023
(4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ:16–01–2023

ಸಹಿ/–ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ದಾವಣಗೆರೆ ಜಿಲ್ಲೆ.
ವಾಸಾಇ/ದಾವಣಗೆರೆ/781/ಎಂಸಿಎ/2022–23

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ಪ್ರಾಮಾಣಿಕರಿಗೆ ಈ ಜಗತ್ತಿನಲ್ಲಿ ಜಾಗವಿಲ್ಲ ಎಂದು ಹೇಳುತ್ತಾ ನಾವು ಅಪ್ರಾಮಾಣಿಕರಾಗುತ್ತಿದ್ದೇವೆ. ಪ್ರಾಮಾಣಿಕರಿಗೆ ಈ ಜಗತ್ತಿನಲ್ಲಿ ಎಲ್ಲಾ ಇದೆ ಎಂದು ನಾವು ಸಾಧಿಸಿ ತೋರಿಸಬೇಕು.

–ಸಿದ್ಧೇಶ್ವರ ಸ್ವಾಮೀಜಿ

ನೋಟು ರದ್ದತಿ ಕುರಿತ ತೀರ್ಪು ಸೀಮಿತ ಪ್ರಶ್ನೆಗಷ್ಟೇ ಉತ್ತರ

₹ 500 ಮತ್ತು ₹ 1,000 ಮುಖಬೆಲೆಯ ನೋಟುಗಳನ್ನು ರದ್ದುಗೊಳಿಸಲು 2016ರಲ್ಲಿ ಕೇಂದ್ರ ಸರ್ಕಾರ ಕೈಗೊಂಡಿದ್ದ ನಿರ್ಧಾರವನ್ನು 4-1ರ ಬಹುಮತದ ತೀರ್ಪಿನಲ್ಲಿ ಎತ್ತಿ ಹಿಡಿದಿರುವ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠವು ಈ ವಿವಾದಿತ ತೀರ್ಮಾನದ ಒಂದು ಭಾಗವನ್ನು ಮಾತ್ರ ವಿಶ್ಲೇಷಿಸಿದೆ. ನೋಟುಗಳ ರದ್ದತಿಯ ತೀರ್ಮಾನವನ್ನು ಪ್ರಶ್ನಿಸಿದ್ದ ಅರ್ಜಿಗಳನ್ನು ಬಹುಮತದ ತೀರ್ಪಿನಲ್ಲಿ ನ್ಯಾಯಪೀಠವು ತಿರಸ್ಕರಿಸಿದೆ. ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಲೋಪಗಳಿಲ್ಲ ಎಂದಿರುವ ನ್ಯಾಯಾಲಯವು ನೋಟು ರದ್ದತಿ ಹೊರಡಿಸಿದ ಅಧಿಸೂಚನೆಯ ಸಿಂಧುತ್ವವನ್ನು ಎತ್ತಿಹಿಡಿದಿದೆ. ಕೋರ್ಟ್ ತನ್ನ ಈ ತೀರ್ಪಿಗೆ ಪೂರಕವಾಗಿ ನೀಡಿರುವ ವಿವರಣೆಗಳ ಸಮರ್ಪಕತೆ [illegible] ವಾದಗಳಿಗೆ [illegible]. ಆದರೆ, ಅರ್ಜಿದಾರರು ನ್ಯಾಯಾಲಯದ ಮುಂದಿಟ್ಟಿದ್ದ ಪ್ರಶ್ನೆಗಳಿಗೆ ಸೀಮಿತವಾಗಿ ಈ ತೀರ್ಪು ಸಿಂಧುವಾಗಿರುತ್ತದೆ. ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು ನೋಟು ರದ್ದತಿ ತೀರ್ಮಾನದ ವಿರುದ್ಧವಾಗಿ ನೀಡಿರುವ ತೀರ್ಪು, ಪ್ರಕ್ರಿಯೆಯು ಕಾನೂನಿಗೆ ಅನುಗುಣವಾಗಿ ಆಗಿರಲಿಲ್ಲ ಎಂದು ಹೇಳಿದೆ. ಇಂತಹ ಪ್ರಮುಖ ತೀರ್ಮಾನವೊಂದನ್ನು ಕೈಗೊಳ್ಳುವಾಗ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ಸರ್ಕಾರ ಮತ್ತು ಸಂಸತ್ತನ್ನು ಹೇಗೆ ಒಳಗೊಳ್ಳಬೇಕಿತ್ತೋ ಆ ರೀತಿಯಲ್ಲಿ ಒಳಗೊಂಡಿಲ್ಲ ಎಂದು ಭಿನ್ನಮತದ ತೀರ್ಪಿನಲ್ಲಿ ಹೇಳಲಾಗಿದೆ. ರಿಸರ್ವ್ ಬ್ಯಾಂಕ್‌ನ ಸಾಂಸ್ಥಿಕ ಸ್ವಾತಂತ್ರ್ಯದ ಕುರಿತೂ ನ್ಯಾಯಮೂರ್ತಿ ನಾಗರತ್ನ ಅವರು ಮಹತ್ವದ ಪ್ರಶ್ನೆಗಳನ್ನು ಎತ್ತಿದ್ದಾರೆ.

ನೋಟು ರದ್ದತಿಯ ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದ್ದರೂ, ನೋಟು ರದ್ದತಿಯ ಪರಿಣಾಮಗಳನ್ನು ಗ್ರಹಿಸಲು ಸಾಧ್ಯವಿದೆ

ನೋಟುಗಳನ್ನು ರದ್ದುಗೊಳಿಸುವ ಪ್ರಸ್ತಾವವು ಕೇಂದ್ರ ಸರ್ಕಾರದಿಂದಲೇ ಬಂದಿತ್ತು ಮತ್ತು ಅದನ್ನು ಆರ್‌ಬಿಐನಿಂದ ಅಭಿಪ್ರಾಯದ ರೂಪದಲ್ಲಿ ಪಡೆಯಲಾಗಿತ್ತು ಎಂಬುದನ್ನು ನ್ಯಾಯಮೂರ್ತಿ ನಾಗರತ್ನ ಅವರು ಗುರುತಿಸಿದ್ದಾರೆ. ಸರ್ಕಾರವು 'ಬಯಸಿದಂತೆ' ಹಾಗೂ 'ಶಿಫಾರಸು ಮಾಡಿದಂತೆ' ಎಂಬ ಪದಗಳು ಆರ್‌ಬಿಐನ ಅಭಿಪ್ರಾಯದಲ್ಲಿ ಉಲ್ಲೇಖವಾಗಿವೆ. ಇದು, ರಿಸರ್ವ್ ಬ್ಯಾಂಕ್ ಸ್ವತಂತ್ರವಾಗಿ ಯೋಚಿಸಿ, ನಿರ್ಧಾರ ಕೈಗೊಂಡಿರಲಿಲ್ಲ ಎಂಬುದನ್ನು ಸೂಚಿಸುತ್ತದೆ. ನೋಟು ರದ್ದತಿಯ ಇಡೀ ಪ್ರಕ್ರಿಯೆ 24 ಗಂಟೆಗಳಲ್ಲೇ ಮುಗಿದಿತ್ತು. ಆದರೆ, ಈ ತೀರ್ಮಾನಕ್ಕೆ ಪೂರಕವಾಗಿ ಆರು ತಿಂಗಳ ಕಾಲ ಸಮಾಲೋಚನೆ ನಡೆದಿತ್ತು ಎಂಬ ಉಲ್ಲೇಖವು ಬಹುಮತದ ತೀರ್ಪಿನಲ್ಲಿದೆ. ಅದು ನಿಜವೇ ಆಗಿದ್ದಲ್ಲಿ, ಈ ತೀರ್ಮಾನ ಸರಿಯಲ್ಲ ಎಂಬುದನ್ನು ಕೇಂದ್ರ ಸರ್ಕಾರಕ್ಕೆ ಮನವೊಲಿಕೆ ಮಾಡುವಲ್ಲಿ ಆರ್‌ಬಿಐ ಏಕೆ ವಿಫಲವಾಯಿತು ಎಂಬ ಪ್ರಶ್ನೆ ಉದ್ಭವಿಸುತ್ತದೆ. ನೋಟು ರದ್ದತಿಯ ಪ್ರಸ್ತಾವವನ್ನು ಸರ್ಕಾರದ ನಿರ್ಧಾರ ಹೊರಬೀಳುವ ಮೊದಲೇ ಆರ್‌ಬಿಐ ವಿರೋಧಿಸಿತ್ತು ಮತ್ತು ಸಂಸ್ಥೆಯ ಆಡಳಿತ ಮಂಡಳಿ ಸಭೆಯ ನಡಾವಳಿಯಲ್ಲೂ ಅಭಿಪ್ರಾಯ ದಾಖಲಿಸಿತ್ತು. ಆದರೆ ನಂತರ ಸರ್ಕಾರದ ಒತ್ತಡಕ್ಕೆ ಮಣಿಯಿತು. ಇದು ಸಂಸ್ಥೆಯ ವಿಶ್ವಾಸಾರ್ಹತೆ ಕುರಿತು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ ಮತ್ತು ವ್ಯವಸ್ಥೆಯಲ್ಲಿನ ಲೋಪಗಳನ್ನು ಗುರುತಿಸಿ, ಸರಿಪಡಿಸುವ ಅರ್ಹತೆಯನ್ನು ಹೊಂದಿರುವ ಬಗ್ಗೆಯೂ ಅನುಮಾನಗಳಿಗೆ ಕಾರಣವಾಗುತ್ತದೆ. ಆರ್‌ಬಿಐ ಒಂದು ಸ್ವತಂತ್ರ ಸಂಸ್ಥೆಯಾಗಿದ್ದು, ಸರ್ಕಾರಕ್ಕೆ ಸರಿಯಾದ ಸಲಹೆಯನ್ನು ನೀಡುವ ಹೊಣೆಗಾರಿಕೆಯನ್ನು ಹೊಂದಿದೆ. ಹಳೆಯ ನೋಟುಗಳ ವಿನಿಮಯಕ್ಕೆ 52 ದಿನಗಳ ಕಾಲಾವಕಾಶ ನೀಡಿದ್ದ ನಿರ್ಧಾರ ಸಮಂಜಸವಾಗಿತ್ತು ಮತ್ತು ಈ ತೀರ್ಮಾನ ತಾತ್ವಿಕವಾಗಿ ಸರಿ ಇದೆ ಎಂದು ಬಹುಮತದ ತೀರ್ಪಿನಲ್ಲಿ ನಾಲ್ವರು ನ್ಯಾಯಮೂರ್ತಿಗಳು ಹೇಳಿದ್ದಾರೆ. ಆದರೆ, ಈ ತೀರ್ಮಾನವು ಪ್ರಶ್ನಿಸಲು ಅರ್ಹವಾಗಿದ್ದು, ಒಪ್ಪಿತವಾಗುವಂತೆಯೂ ಇಲ್ಲ.

ನೋಟು ರದ್ದತಿಯ ಸಿಂಧುತ್ವ ಕುರಿತ ಪ್ರಶ್ನೆಗಳು ಅಕಾಡೆಮಿಕ್ ಮೌಲ್ಯವನ್ನಷ್ಟೇ ಹೊಂದಿವೆ, 2016ರಲ್ಲಿ ಕೇಂದ್ರ ಸರ್ಕಾರ ಕೈಗೊಂಡಿದ್ದ ತೀರ್ಮಾನವನ್ನು ಹಿಂಪಡೆಯಲು ಸಾಧ್ಯವಿಲ್ಲ ಎಂಬುದಾಗಿ ನ್ಯಾಯಾಲಯದಲ್ಲಿ ವಾದಿಸಲಾಗಿತ್ತು. ಈಗ ಅದೇ ವಾದದ ಆಧಾರದಲ್ಲಿ ಸರ್ಕಾರದ ನಿರ್ಧಾರವನ್ನು ಸಮರ್ಥಿಸಿಕೊಳ್ಳಲಾಗುತ್ತಿದೆ. ಆದರೆ, ನೀತಿಗಳನ್ನು ರೂಪಿಸುವುದು ಮತ್ತು ಆ ಪ್ರಕ್ರಿಯೆಯಲ್ಲಿ ಭಾಗಿಯಾಗುವ ಸಂಸ್ಥೆಗಳ ಅಧಿಕಾರದ ಅತಿಕ್ರಮಣದ ವಿಚಾರವನ್ನು ಈ ಪ್ರಕರಣವು ಒಳಗೊಂಡಿತ್ತು. ಆ ದೃಷ್ಟಿಯಿಂದ ನೋಟು ರದ್ದತಿಗೆ ಸಂಬಂಧಿಸಿದ ವಿಚಾರಗಳು ಅತ್ಯಂತ ಮಹತ್ವದ್ದಾಗಿವೆ. ನೋಟು ರದ್ದತಿಯ ತೀರ್ಮಾನವು ಉದ್ದೇಶಿತ ಗುರಿಗಳನ್ನು ಸಾಧಿಸುವಲ್ಲಿ ಫಲಪ್ರದವಾಗಿದೆಯೇ ಎಂಬುದರ ಕುರಿತು ಯಾವುದೇ ತೀರ್ಪು ನೀಡಲಾಗದು ಎಂಬ ನ್ಯಾಯಾಲಯದ ನಿರ್ಧಾರ ಸರಿಯಾಗಿಯೇ ಇದೆ. ಉದ್ದೇಶಿತ ಗುರಿಗಳು ಕಾಲದಿಂದ ಕಾಲಕ್ಕೆ ಬದಲಾಗಿವೆ. ನೋಟು ರದ್ದತಿಯು ಜನರಿಗೆ ನೀಡಿದ ನೋವು, ದೇಶದ ಆರ್ಥಿಕತೆಗೆ ಉಂಟುಮಾಡಿದ ಆಘಾತ ಮತ್ತು ಆ ಪ್ರಕ್ರಿಯೆಯು ಉದ್ದೇಶಿತ ಗುರಿಗಳನ್ನು ಸಾಧಿಸುವಲ್ಲಿ ವಿಫಲವಾಗಿರುವುದೆಲ್ಲವೂ ನಿಜ. ಹೀಗಾಗಿ ನೋಟು ರದ್ದತಿಯ ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದ್ದರೂ, ನೋಟು ರದ್ದತಿಯ ಪರಿಣಾಮಗಳನ್ನು ಗ್ರಹಿಸಲು ಸಾಧ್ಯವಿದೆ. ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು ನೀಡಿರುವ ಭಿನ್ನಮತದ ತೀರ್ಪು, ನೋಟು ರದ್ದತಿಯ ಇಡೀ ಪ್ರಕ್ರಿಯೆಯನ್ನು ವಿಶ್ಲೇಷಿಸಬೇಕಾದ ಸರಿಯಾದ ಕ್ರಮವೊಂದನ್ನು ಜನರ ಎದುರು ಇಟ್ಟಿದೆ. ಅದು ಭವಿಷ್ಯಕ್ಕೆ ಅತ್ಯುತ್ತಮ ದಿಕ್ಸೂಚಿಯಾಗಬೇಕಿದೆ.

ದಿನದ ಟ್ವೀಟ್

ನಮ್ಮಂತೆಯೇ ಅವರಲ್ಲವೆ?

ಒಂದು ದಿನ ರಜೆ ಆಚೆ-ಈಚೆ ಆದ್ರೆ ಬಾಸ್‌ಗಳನ್ನ ಬಯ್ಕೊತೀವಿ ನಾವು ಮತ್ತು ಹತಾಶರಾಗ್ತೀವಿ. ಮನೆಗೆಲಸದವರಿಗೂ ಹೀಗೇ ಆಗುವುದಿಲ್ಲವೇ... ಅವರಿಗೂ ವೈಯಕ್ತಿಕ ಬದುಕು ಎಂಬುದಿರುತ್ತದೆ ಅಲ್ವಾ... ನೀ ರಜೆ ಹಾಕಿದ್ರೆ ಕೆಲ್ಸ ಯಾರು ಮಾಡ್ತಾರೆ ಅನ್ನೋ ಜನರು ಮರುಚಿಂತಿಸಬೇಕು!

ಧರಣಿ ಮಧು ರೆಡ್ಡಿ

ಕಿಡಿನುಡಿ

ಸಿದ್ಧೇಶ್ವರ ಸ್ವಾಮಿಗಳ ಅಂತಿಮದರ್ಶನಕ್ಕೆ ತೆರಳಿದ ರಾಜಕಾರಣಿಗಳು ಶ್ರೀಗಳ ಸರಳ ಜೀವನದ ಒಂದು ಅಂಶವನ್ನಾದರೂ ಜೀವನದಲ್ಲಿ ಅಳವಡಿಸಿಕೊಳ್ಳುತ್ತೇವೆ ಎಂದು ಘೋಷಿಸುತ್ತಾರಾ? ಶ್ರೀಗಳ ಸರಳತೆಯನ್ನು ಕ್ಯಾಮೆರಾ ಮುಂದೆ ಹೊಗಳಿ ಯಾವ ಪ್ರಯೋಜನವಿಲ್ಲ. ಅವರ ಭಕ್ತರಿಗೆ ಅವರ ಸರಳತೆಯ ಪರಿಚಯವಿದೆ. ಘೋಷಿಸಲು ಸಾಧ್ಯವೇ?

ಪ್ರಕಾಶ್ ಎಸ್., ಜಂಟಿ ವಕ್ತಾರ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ — ಭಾನುವಾರ, 4-1-1998

• ಸರ್ಕಾರಿ ನೌಕರರ ಮುಷ್ಕರ ಬಗೆಹರಿಯದ ಕಗ್ಗಂಟು

ಬೆಂಗಳೂರು, ಜ. 3– ಕೇಂದ್ರ ಸರ್ಕಾರದ ಐದನೇ ವೇತನ ಆಯೋಗದ ಶಿಫಾರಸುಗಳನ್ನು ತಮಗೂ ಅನ್ವಯಿಸಬೇಕೆಂಬ ಬೇಡಿಕೆ ಮುಂದಿಟ್ಟು ರಾಜ್ಯ ಸರ್ಕಾರಿ ನೌಕರರು ನಡೆಸುತ್ತಿರುವ ಅನಿರ್ದಿಷ್ಟ ಅವಧಿಯ ಮುಷ್ಕರ ಎರಡನೇ ದಿನಕ್ಕೆ ಕಾಲಿಟ್ಟಿದ್ದು, ರಾಜ್ಯದ ಎಲ್ಲೆಡೆ ಇಂದೂ ಸರ್ಕಾರಿ ಕಚೇರಿಗಳು ಕಾರ್ಯ ನಿರ್ವಹಿಸಲಿಲ್ಲ.

ಈ ಮಧ್ಯೆ ಬೇಡಿಕೆಗಳ ಈಡೇರಿಕೆಗೆ ಸಂಬಂಧಿಸಿದಂತೆ ಸರ್ಕಾರ ಮತ್ತು ರಾಜ್ಯ ಸರ್ಕಾರಿ ನೌಕರರ ಸಂಘದ ನಡುವೆ ಇಂದು ನಡೆದ ಮಾತುಕತೆ ಮತ್ತೆ ಮುರಿದುಬಿದ್ದಿತು. ಇದರಿಂದಾಗಿ ಸೋಮವಾರವೂ ಮುಷ್ಕರ ಮುಂದುವರೆಯುವ ಸಾಧ್ಯತೆಯಿದೆ.

• ಪಂಪ ಸ್ಮಾರಕ ನಿರ್ಮಾಣಕ್ಕೆ ಪ್ರಶಸ್ತಿಯ ಹಣ

ಕಾರವಾರ, ಜ. 3– ಆದಿಕವಿ ಪಂಪನ ನಾಡಾದ ಬನವಾಸಿಯಲ್ಲಿ ಇಂದು 'ಪಂಪ ಪ್ರಶಸ್ತಿ' ಸ್ವೀಕರಿಸಿದ ಹಿರಿಯ ಸಾಹಿತಿ ಡಾ. ಎಂ.ಎಂ. ಕಲಬುರ್ಗಿ ಅವರು, ಸರ್ಕಾರವು ಪ್ರಶಸ್ತಿಪತ್ರದ ಜೊತೆಗೆ ತಮಗೆ ನೀಡಿದ 1 ಲಕ್ಷ ರೂಗಳ ಚೆಕ್ ಅನ್ನು ಮರಳಿ ಸರ್ಕಾರಕ್ಕೆ ಒಪ್ಪಿಸಿದ ಅಪರೂಪದ ಘಟನೆ ಇಂದು ನಡೆಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಪಂಪನ ಜನ್ಮಸ್ಥಳವಾದ ಧಾರವಾಡ ಜಿಲ್ಲೆಯ ಅಣ್ಣಿಗೇರಿಯಲ್ಲಿ ಪಂಪನ ಸ್ಮಾರಕ ನಿರ್ಮಾಣವಾಗಬೇಕು ಎಂಬುದು ತಮ್ಮ ಆಶಯವಾಗಿದೆ ಎಂದರು.

50 ವರ್ಷಗಳ ಹಿಂದೆ — ಗುರುವಾರ, 4-1-1973

• ಪ್ರಧಾನಿಗೆ ರಾಜ್ಯದ ಪತ್ರ: ಬರಗಾಲ ನಿವಾರಣೆಗೆ 150 ಕೋಟಿ ಮೊತ್ತದ ಬೃಹತ್ ಕಾರ್ಯಕ್ರಮ

ಬೆಂಗಳೂರು, ಜ. 3– ಬರಗಾಲದಿಂದ ತೀವ್ರ ತೊಂದರೆಗೊಳಗಾದ ಜನತೆಗೆ ಎಲ್ಲ ವಿಧದ ಸಹಾಯ ಮಾಡಲು ಸರ್ಕಾರ, ಈವರೆಗೆ ಕಂಡರಿಯದ ಭಾರೀ ಪ್ರಮಾಣದ ಪರಿಹಾರ ಕಾರ್ಯಕ್ರಮವನ್ನು ರೂಪಿಸಿ ಸಹಾಯಕ್ಕಾಗಿ ಪ್ರಧಾನಮಂತ್ರಿಯವರಿಗೆ ಕಳುಹಿಸಿದೆ.

ಸುಮಾರು 150 ಕೋಟಿ ರೂ ಮೊತ್ತದ ಕಾರ್ಯಕ್ರಮದ ವಿವರಗಳನ್ನು ಒಳಗೊಂಡ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು ಬರೆದಿರುವ ಪತ್ರವನ್ನು ಸಚಿವ ಸಂಪುಟದ ಸಭೆಯ ನಂತರ ದೆಹಲಿಗೆ ರವಾನಿಸಲಾಯಿತು.

• ಲೆ.ಜ. ಬೇವೂರ್: ನೂತನ ಪ್ರಧಾನ ದಂಡನಾಯಕರು

ನವದೆಹಲಿ, ಜ. 3– ಲೆ.ಜ. ಗೋಪಾಲ ಗುರುನಾಥ ಬೇವೂರ್ ಅವರನ್ನು ಭಾರತ ಸೈನ್ಯದ ನೂತನ ಪ್ರಧಾನ ದಂಡನಾಯಕರನ್ನಾಗಿ ನೇಮಿಸಲಾಗಿದೆ.

ಜನರಲ್ ಪದವಿ ಸಹಿತ ಅವರು ಜನವರಿ 15ರಂದು ಫೀಲ್ಡ್ ಮಾರ್ಷಲ್ ಸ್ಯಾಂ ಮಾಣೆಕ್ ಷಾ ಅವರಿಂದ ಅಧಿಕಾರ ಸ್ವೀಕರಿಸುವರೆಂದು ರಕ್ಷಣಾ ಸಚಿವ ಶಾಖೆ ಇಂದು ಪ್ರಕಟಿಸಿದೆ.

ಮುಖ್ಯಮಂತ್ರಿಗೆ ಸಭಿಕರ ಸಾಲಿನಲ್ಲಿ ಕುಳಿತು ಉನ್ನತ ಸಂಪ್ರದಾಯ ಆರಂಭಿಸುವ ಅವಕಾಶ!

ಸಾಹಿತ್ಯ ಪರಿಷತ್ತು ಎಷ್ಟು ಪ್ರಾತಿನಿಧಿಕ?

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಹಾವೇರಿಯಲ್ಲಿ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ತನ್ನ ಪರಂಪರೆಗೆ ತಕ್ಕ ಹಾಗೆಯೇ ಕೆಲವು ಮೂಲಭೂತ ವರ್ತನೆಗಳನ್ನು ವಿವಾದಕ್ಕೆ ಒಡ್ಡುವ ಮೂಲಕ ಕನ್ನಡ ಸಾಂಸ್ಕೃತಿಕ ವಲಯವನ್ನು ಮತ್ತೊಮ್ಮೆ ಜಾಗೃತಗೊಳಿಸಿದೆ. ಈ ಹಿಂದೆ 1979ರಲ್ಲಿ ಧರ್ಮಸ್ಥಳದಲ್ಲಿ ನಡೆದ 51ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುನ್ನೆಲೆಗೆ ಬಂದ ದಲಿತರ ಪ್ರಾತಿನಿಧ್ಯದ ಪ್ರಶ್ನೆಯು ಬಂಡಾಯ ಸಾಹಿತ್ಯ ಸಂಘಟನೆಯ ಉಗಮಕ್ಕೆ ಕಾರಣವಾಗಿತ್ತು. ಆನಂತರ ಬಂಡಾಯದ ಬಹುತೇಕ ದನಿಗಳು ಪರಿಷತ್ತಿನಲ್ಲಿ ಲೀನವಾದ ವಿಪರ್ಯಾಸವನ್ನೂ ನಾಡು ಕಂಡಿದೆ. ಇದೀಗ ಸಮ್ಮೇಳನದಲ್ಲಿ ಮುಸ್ಲಿಂ ಸಮುದಾಯದ ಲೇಖಕರ ಪ್ರಾತಿನಿಧ್ಯದ ಪ್ರಶ್ನೆ ಚರ್ಚೆಯ ಕೇಂದ್ರ ಪ್ರವೇಶಿಸಿದೆ.

ಪರಿಷತ್ತಿಗೆ ಪರ್ಯಾಯ ಕಟ್ಟುವ, ಪ್ರತಿರೋಧ ಒಡ್ಡುವ, ಪ್ರತಿಭಟನೆ ದಾಖಲಿಸುವ, ಪ್ರಾತಿನಿಧ್ಯ ಗಿಟ್ಟಿಸುವ, ಬಹಿಷ್ಕಾರ ಹಾಕುವ, ಭಾಗವಹಿಸಿ ಖಂಡಿಸುವ...ನಾನಾ ಮಾತುಗಳು ಕೇಳಿಬರುತ್ತಿವೆ. ತಕ್ಷಣದ ಪ್ರತಿಕ್ರಿಯೆಯಾಗಿ ಇಂತಹ ಹೇಳಿಕೆಗಳು ಹೊಮ್ಮುವುದು ಸಹಜ. ಪರಿಷತ್ತಿನ ನಿಲುವು ಸಮರ್ಥಿಸುವ ಮತ್ತು ವಿಮರ್ಶಿಸುವ ಇಬ್ಬರ ವಾದಸರಣಿಯಲ್ಲೂ ಕನ್ನಡ ಸಾಹಿತ್ಯ ಪರಿಷತ್ತು 'ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ' ಎಂಬ ಅಂಶ ಕಾಣಿಸುತ್ತಿರುವುದು ವಿಶೇಷವಾಗಿದೆ. ಹಾಗಾದರೆ ಕನ್ನಡ ಸಾಹಿತ್ಯ ಪರಿಷತ್ತು ವಾಸ್ತವಿಕ ನೆಲೆಯಲ್ಲಿ, ನಿಜ ಅರ್ಥದಲ್ಲಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಆಗಿದೆಯೇ ಅಥವಾ ಆಗಿತ್ತೇ? ಈ ಪ್ರಶ್ನೆಯ ಕೂಲಂಕಷ ಪರಿಶೀಲನೆಯಲ್ಲಿ ದೊರಕಬಹುದಾದ ಉತ್ತರ ಪ್ರಚಲಿತ ಚರ್ಚೆಯ ದಿಕ್ಕನ್ನೇ ಬದಲಿಸಲು ಸಾಧ್ಯ.

1915ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಚಾಲನೆಗೊಂಡ 'ಕರ್ನಾಟಕ ಸಾಹಿತ್ಯ ಪರಿಷತ್ತು' 1938ರಲ್ಲಿ 'ಕನ್ನಡ ಸಾಹಿತ್ಯ ಪರಿಷತ್ತು' ಎಂದು ಬದಲಾಯಿತು. ಸಂಸ್ಥೆಯ ಆರಂಭದ ಕಾಲಘಟ್ಟವು ಸಾಹಿತ್ಯದ ಪ್ರೀತಿ, ಸೇವಾಭಾವ, ದೂರದೃಷ್ಟಿ, ಆದರ್ಶ ಮತ್ತು ಭಾಷೆ ಬಗೆಗಿನ ಭಾವನಾತ್ಮಕ ಬೆಸುಗೆಯಿಂದ ತುಂಬಿದ್ದನ್ನು ಗುರುತಿಸಬಹುದು. ಅಲ್ಲಲ್ಲಿ ಜಾತೀಯತೆಯ ಸೋಂಕು ತಗುಲಿದ್ದರೂ ಒಟ್ಟಾರೆ ಸ್ವಾತಂತ್ರ್ಯೋತ್ತರ ಕಾಲದ ಆದರ್ಶಮಯ ವಾತಾವರಣ ಅದನ್ನೆಲ್ಲಾ ಒಡಲೊಳಗೆ ಹಾಕಿಕೊಂಡಿತ್ತು.

ಈವರೆಗಿನ ಪರಿಷತ್ ಅಧ್ಯಕ್ಷರ ಪಟ್ಟಿಯನ್ನೊಮ್ಮೆ ಅವಲೋಕಿಸಿದರೆ ಕೆಲವೇ ಜಾತಿಗಳ ಪ್ರಾಬಲ್ಯ ಎದ್ದು ಕಾಣುತ್ತದೆ. ಮತ್ತೊಂದು ಆಘಾತಕಾರಿ ಸಂಗತಿಯೆಂದರೆ, ಪರಿಷತ್ತಿನ ನೂರಾಏಳು ವರ್ಷಗಳ ಇತಿಹಾಸದಲ್ಲಿ ಈವರೆಗೆ ಒಬ್ಬ ಮಹಿಳೆಯೂ ಅಧ್ಯಕ್ಷರಾಗಿ ಆಯ್ಕೆಯಾಗಿಲ್ಲ ಎಂಬುದು! ಸಮ್ಮೇಳನದ ಅಧ್ಯಕ್ಷರ ಆಯ್ಕೆಯಲ್ಲಿ ಸಹ ಸಾಮಾಜಿಕ ನ್ಯಾಯ ಪಾಲನೆಗೆ ತುಸು ಆಸ್ಪದ ಸಿಗುತ್ತಿರುವುದು ತೀರಾ ಇತ್ತೀಚೆಗೆ.

ಬಲಾಢ್ಯ ಜಾತಿಗಳ ಸೌಮ್ಯ ಹಿತಾಸಕ್ತಿಗಳ ಮುಂದುವರಿದ ಭಾಗವಾಗಿ ಉಗ್ರ ಗುಂಪುಗಾರಿಕೆ, ಪ್ರಾದೇಶಿಕತೆ, ವಶೀಲಿಬಾಜಿ, ಹಣಕಾಸಿನ ವಹಿವಾಟು ಸೇರಿಕೊಂಡಿದ್ದು ಅವನತಿಯ ಒಂದು ಹಂತ. ಇತ್ತೀಚೆಗೆ ಸಾಹಿತ್ಯಿಕವಾಗಿ ಗಂಭೀರ ಪರಿಗಣನೆಯ ಅರ್ಹತೆಯನ್ನೇ ಕಳೆದುಕೊಂಡಿರುವ ಈ ಐತಿಹಾಸಿಕ ಸಂಸ್ಥೆಗೆ ಸದಸ್ಯಬಲ ಮತ್ತು ಸರ್ಕಾರದ ಹಣವೇ ಬಂಡವಾಳ. ಇದೀಗ ಜಾತೀಯತೆ ಜೊತೆಗೆ ಪಕ್ಷರಾಜಕಾರಣ ಮತ್ತು ಕೋಮುವಾದದ ಕೊಂಬು ಕೂಡ ಮೂಡಿರುವುದು ಮತ್ತೊಂದು ಬೆಳವಣಿಗೆ.

ಕಳೆದ ವರ್ಷ ನಡೆದ ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಯ ವೈಖರಿಯಲ್ಲಿಯೇ ಈಗಿನ ಅಧ್ಯಕ್ಷರ ವರ್ತನೆ, ನೀತಿ, ನಿಲುವುಗಳ ಬೇರುಗಳಿವೆ. ಚುನಾವಣೆಯಲ್ಲಿ ಜಾತೀಯತೆ ಜೊತೆಗೆ ಕೋಮು ವಿಚಾರಗಳೂ ಪರಿಗಣನೆಗೆ ಬಂದು, ಸಾಹಿತ್ಯ ಸಂಸ್ಥೆಯ ರಾಜ್ಯ ಅಧ್ಯಕ್ಷರು, ಜಿಲ್ಲಾ ಘಟಕಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಆಯ್ಕೆಯಲ್ಲಿ ರಾಜಕೀಯ ಪಕ್ಷಗಳು ಪ್ರವೇಶ ಪಡೆಯುವಂತಾಯಿತು. ಕೊನೆಗೆ ಬಿಜೆಪಿ ಮತ್ತು ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಮೇಲುಗೈ ಪಡೆದು ಈಗ ಕನ್ನಡ ರಥವನ್ನು ತಮಗೆ ಸರಿಕಂಡ ದಾರಿಯಲ್ಲಿ ಎಳೆಯುತ್ತಿದ್ದಾರೆ. ವಸ್ತುಸ್ಥಿತಿ ಹೀಗಿರುವಾಗ ಸಮ್ಮೇಳನದ ಗೋಷ್ಠಿಗಳಲ್ಲಿನ ಪ್ರಾತಿನಿಧ್ಯ ಮತ್ತು ಸನ್ಮಾನಗಳಲ್ಲಿ ಅವಕಾಶಗಳಂತಹ ತಕ್ಷಣದ ಸೀಮಿತ ವಿಷಯಗಳನ್ನು ಎತ್ತಿಕೊಂಡು ರೂಪಿಸುವ ಪರ್ಯಾಯವಾಗಲೀ ಪ್ರತಿರೋಧವಾಗಲೀ ತಲಸ್ಪರ್ಶಿಯಾದ ದೀರ್ಘಕಾಲೀನ ಪರಿಹಾರಕ್ಕೆ ಕಾರಣವಾಗಲಿಕ್ಕಿಲ್ಲ.

ಕಸಾಪ ಸಮ್ಮೇಳನದಲ್ಲಿ ಮುಸ್ಲಿಮರಿಗೆ ತಮ್ಮ ನಿರೀಕ್ಷೆಯಷ್ಟು ಪ್ರಾತಿನಿಧ್ಯ ದೊರೆತಿದ್ದರೆ ಜನಸಾಹಿತ್ಯ ಸಮ್ಮೇಳನ ರೂವಾರಿಗಳ ನಿಲುವು ಏನಾಗಿರುತ್ತಿತ್ತು? ಪರಿಷತ್ತು ನಿರಂತರ ಪ್ರತಿನಿಧಿಸುವ ಯಜಮಾನ ಸಂಸ್ಕೃತಿಯ ಮೌಲ್ಯಗಳೆಲ್ಲಾ ಸ್ವೀಕಾರಾರ್ಹತೆ ಪಡೆಯುತ್ತಿದ್ದವೇ? ಇವೆಲ್ಲಾ ಕನ್ನಡದ ಅಸ್ಮಿತೆಯ ಪ್ರತೀಕಗಳಾಗಿ ಕಾಣುತ್ತಿದ್ದವೇ? ಹಾವೇರಿ ಸಮ್ಮೇಳನದಲ್ಲಿ ಮಹಿಳೆಯರ ಪೂರ್ಣಕುಂಭ ಸ್ವಾಗತ, ಸಮ್ಮೇಳನಾಧ್ಯಕ್ಷರ ರಥಯಾತ್ರೆ, ಒಡಿ ಪ್ರತಿನಿಧಿಗಳ ಜಾತ್ರೆ, ಅಧಿಕಾರಿಗಳ ಆರ್ಭಟ, ರಾಜಕಾರಣಿಗಳ ತೆವಲಿನ ಭಾಷಣ, ಶಿಫಾರಸು ಕವಿಗಳ ವಾಚನ ಅನುಭವಿಸುತ್ತಾ ಸಂಭ್ರಮಿಸುತ್ತಿದ್ದರೇ?

ಹಾಗಾದರೆ ಕನ್ನಡದ ಪ್ರಾತಿನಿಧಿಕ ಸಂಸ್ಥೆ ಎನ್ನಿಸಿಕೊಳ್ಳಲು ವಿಫಲವಾಗಿರುವ ಕಸಾಪ ವರ್ತನೆ ಮತ್ತು ಕಾರ್ಯಕ್ರಮಗಳನ್ನು ಒಟ್ಟಾರೆ ನಿರ್ಲಕ್ಷಿಸಬೇಕೇ? ಖಂಡಿತಾ ಇಲ್ಲ. ಸರ್ಕಾರದ ಅನುದಾನ ಅವಲಂಬಿಸಿದ ಕಸಾಪದಂತಹ ಸಂಸ್ಥೆಯನ್ನು ಪ್ರಶ್ನಿಸುವ, ಕಟಕಟೆಯಲ್ಲಿ ನಿಲ್ಲಿಸುವ ಎಲ್ಲಾ ಅವಕಾಶಗಳು, ಹಕ್ಕುಗಳು ಜವಾಬ್ದಾರಿಯುತ ಪ್ರಜೆಗಳಿಗಿವೆ. ಜೊತೆಗೆ ಹೊಸ ಮಾದರಿಯ ಸಂಘಟನೆ, ಪ್ರತಿಭಟನೆ, ನಾಯಕತ್ವ ಹುಟ್ಟುಹಾಕುವ ಹೊಣೆಗಾರಿಕೆಯನ್ನೂ ಹೊತ್ತುಕೊಳ್ಳಬೇಕಾಗುತ್ತದೆ. ಅದಾಗದೆ ವೇದಿಕೆ ಮೇಲೆ ಹೇಳುವವರು ಅವರೇ, ಕೆಳಗೆ ಕುಳಿತು ಕೇಳುವವರು ಇವರೇ, ಹೇಳುವ-ಕೇಳುವ ವಿಷಯವೂ ಅದೇ ಎಂದಾದರೆ ಪ್ರಯೋಜನವೇನು?

ಈಗ ಹಿಂದಿನಂತೆ ಪ್ರಗತಿಪರ ಆಲೋಚನೆ ಮತ್ತು ಸಾಹಿತ್ಯ ರಚನೆಯ ಕ್ರಿಯೆ ಕೆಲವೇ ಕೆಲವು ವೃತ್ತಿಗಳ, ವಯಸ್ಸಿನ, ಸಾಮಾಜಿಕ ಹಿನ್ನೆಲೆಯ ಜನರಿಗೆ ಸೀಮಿತವಾಗಿಲ್ಲ; ನಿಜವಾದ ಅರ್ಥದಲ್ಲಿ ಬಹುತ್ವ ಮೇಳೈಸುತ್ತಿದೆ. ಜಾಗತಿಕ ಆಗುಹೋಗುಗಳಿಗೆ ತೆರೆದುಕೊಂಡಿರುವ ಹೊಸ ಪೀಳಿಗೆಯ ಮನಸ್ಸುಗಳು ವೈಶಾಲ್ಯ, ವೈವಿಧ್ಯ ಪಡೆದು ನಾವೀನ್ಯದಿಂದ ಪುಟಿಯುತ್ತಿವೆ. ದೀರ್ಘಕಾಲೀನ ಬಳಕೆಯಲ್ಲಿ ಬಹಳಷ್ಟು ಸವೆದಿರುವ, ದಣಿದಿರುವ ಹಳೆಯ ಮುಖಗಳು, ಕಾರ್ಯಶೈಲಿಗಳು, ನುಡಿಗಟ್ಟುಗಳು ವಿರಮಿಸಿದರೆ... ಬದಲಾದ ಕಾಲಘಟ್ಟದ ಬೇಡಿಕೆಗೆ ತಕ್ಕಂತೆ ಹೊಸ ತಲೆಮಾರಿನ ತಾಜಾತನ ಹೆಚ್ಚಿನದ್ದನ್ನು ಸಾಧಿಸಲು ಸಾಧ್ಯ. ಎಲ್ಲರೂ ಒಪ್ಪುವ ಈ ತರ್ಕವನ್ನು ಎಲ್ಲಿಂದ, ಯಾರು ಆರಂಭಿಸುವುದು?

ಐವತ್ತು ವರ್ಷ ದಾಟಿದ ಎಲ್ಲ ಹಿರಿಯರೂ ಕನಿಷ್ಠ ಒಂದು ವರ್ಷ ಕಾಲ ಸಾಹಿತ್ಯಕ ಕಾರ್ಯಕ್ರಮಗಳ ವೇದಿಕೆಗಳನ್ನು ಸಂಪೂರ್ಣವಾಗಿ ಯುವ ಪೀಳಿಗೆಗೆ ಬಿಟ್ಟುಕೊಡುವ ತ್ಯಾಗಕ್ಕೆ ಸಿದ್ಧರಾದರೆ ಸಾಕು, ಹೊಸ ಹರಿವಿಗೆ ದಾರಿ ತೆರೆಯುತ್ತದೆ. ಹಾಗೆಯೇ ಈ ಹಿರಿಯರು ಒಂದು ವರ್ಷ ಯಾವುದೇ ಪ್ರಶಸ್ತಿ, ಪುರಸ್ಕಾರ, ಸನ್ಮಾನ ಸ್ವೀಕರಿಸದಿರುವ ನಿರ್ಧಾರ ಘೋಷಿಸಿದರಂತೂ ಇಡೀ ಸಾಹಿತ್ಯಕ ವಾತಾವರಣದಲ್ಲಿ ಬುಡಮೇಲು ಬದಲಾವಣೆ ಘಟಿಸೀತು!

ಇನ್ನು, ನೆರೆಯ ಮಹಾರಾಷ್ಟ್ರದಲ್ಲಿ ನಡೆಯುವ ಮರಾಠಿ ಸಾಹಿತ್ಯ ಸಮ್ಮೇಳನಗಳಲ್ಲಿ ಅಳವಡಿಸಿಕೊಂಡಿರುವ ಆದರ್ಶವೊಂದನ್ನು ಕನ್ನಡಿಗರು ಅನುಸರಿಸಲು ಸಾಧ್ಯವಾದರೆ ಬಹುದೊಡ್ಡ ವ್ಯತ್ಯಾಸ ಸಾಧ್ಯ. ಅಲ್ಲಿನ ಸಮ್ಮೇಳನಗಳ ವೇದಿಕೆಯಲ್ಲಿ ರಾಜಕಾರಣಿಗಳಿಗೆ ಅವಕಾಶವಿಲ್ಲ. ಅವರು ಸಾಮಾನ್ಯ ಜನರಂತೆ ಸಭಿಕರ ಸಾಲಿನಲ್ಲಿ ಕುಳಿತು ಸಾಹಿತಿಗಳ ಮಾತನ್ನು ಆಲಿಸುತ್ತಾರೆ. ತಮ್ಮ ತವರಿನಲ್ಲಿ ನಡೆಯುತ್ತಿರುವ ಈ ಬಾರಿಯ ಸಾಹಿತ್ಯ ಸಮ್ಮೇಳನದಲ್ಲಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಸಹ ರಾಜಕಾರಣಿಗಳೊಂದಿಗೆ ವೇದಿಕೆ ಏರದೆ ಸಭಿಕರಾಗಿ ಕುಳಿತುಕೊಳ್ಳುವ ಮೂಲಕ ಉನ್ನತ ಸಂಪ್ರದಾಯಕ್ಕೆ ನಾಂದಿ ಹಾಡುವ ಅವಕಾಶ ಪಡೆದಿದ್ದಾರೆ. ಅವರಿಂದ ಇಂಥ ಐತಿಹಾಸಿಕ ಹೆಜ್ಜೆಯನ್ನು ನಿರೀಕ್ಷಿಸಬಹುದೇ...?

ಚುರುಮುರಿ

ಅಯ್ಯೋ ನಂದಿನಿ!

• ಮಣ್ಣೆ ರಾಜು

'ಗುಜರಾತಿ ಅಮುಲ್ ಜೊತೆ ಕನ್ನಡತಿ ನಂದಿನಿಯ ಸಂಬಂಧ ಬೆಳೆಸಲು ಅಮಿತ್ ಶಾ ಆಸೆಪಟ್ಟಿದ್ದಾರೆ ಕಣ್ರೀ...' ಅಂದಳು ಸುಮಿ.

'ನಂದಿನಿ ವೆಡ್ಸ್ ಅಮುಲ್ ಅನ್ನುವಂಥಾ ಸಂಬಂಧವಂತಾ?...'

'ಗೊತ್ತಿಲ್ಲ. ಹಾಯದ, ಒದೆಯದ ಅಚ್ಚಗನ್ನಡತಿ ನಂದಿನಿಗೆ ಉತ್ತರ ಭಾರತದ ಭಾಷೆ, ಬದುಕು ಕಷ್ಟ ಆಗೋದಿಲ್ವೆ? ಬಡ ರೈತನ ಮನೆ ಮಗಳು ನಂದಿನಿ, ಅಲ್ಲಿನ ಹಣವಂತರ ಜೊತೆ ಹೆಣಗುವುದು ಕಷ್ಟವೇ ಆಗುತ್ತದೆ...'

'ನಂದಿನಿ ಹಾಲಿಗೆ ಗುಜರಾತಿ ಹುಳಿ ಹಿಂಡುವ ಪ್ರಯತ್ನ ಎಂಬುದು ವಿರೋಧಿಗಳ ಅಂಬೋಣ. ಅಂಥದ್ದೇನೂ ಇಲ್ಲ ಎಂಬುದು ಆಳುವವರ ಸಮರ್ಥನೆ...'

'ಸಂಬಂಧ ಕೂಡಿಬಂದರೆ... ಲೋಕಲ್ ಇಂಡಿ ತಿನ್ನುವ ನಂದಿನಿಗೆ ಹೆಲ್ದಿ ತಿಂಡಿ ತಿನ್ನಿಸಿ ಹಾಲು ಹಿಂಡಿ ಕ್ಷೀರಕ್ರಾಂತಿ ಮಾಡ್ತಾರಂತೆ. ಹೈನುಗಾರಿಕೆಯನ್ನು ಅಧಿಕ ಲಾಭ ತರುವ ಗೆಯ್ಮೆಗಾರಿಕೆ ಮಾಡ್ತಾರಂತೆ...'

'ಗುಡಿ ಕೈಗಾರಿಕೆಯಂತೆ ಬಡವರ ಕುಟುಂಬ ಕಾಪಾಡುತ್ತಿರುವ ಹೈನುಗಾರಿಕೆಯನ್ನು ದೊಡ್ಡ ಕೈಗಾರಿಕೆ ಮಾಡಿ ನಂದಿನಿಯನ್ನು ಹಾಲು ಹಿಂಡುವ ಯಂತ್ರ ಮಾಡಿಬಿಡುತ್ತಾರೆ. ನಂದಿನಿ ನಂಬಿ ಬದುಕು ಕಟ್ಟಿಕೊಂಡಿರುವ ಬಡವರು, ತಮ್ಮ ಮಕ್ಕಳ ಹಾಲಿಗೂ ಅಮುಲ್ ಎದುರು ಕೈಕಟ್ಟಿ ನಿಲ್ಲುವಂಥ ಸ್ಥಿತಿ ಬೇಡ...'

'ಒಂದು ದೇಶ, ಒಂದು ಬದುಕು ಇದ್ದರೆ ದೇಶ ಸದೃಢವಾಗುವುದಂತೆ. ಪ್ರಾದೇಶಿಕ ಕಲೆ, ಕಸುಬು, ಭಾಷೆ, ಭಾವನೆಗಳನ್ನು ಒಂದುಗೂಡಿಸಿ ಏಕದೇಶಿಕ ಮಾಡಿದರೆ ಭಾವೈಕ್ಯದ ಭಾರತ ನಿರ್ಮಾಣ ಮಾಡಬಹುದಂತೇರೀ...' ಅಂದಳು ಸುಮಿ.

'ಹೀಗೇ ಹೇಳಿ ಲೋಕಲ್ ಬ್ಯಾಂಕ್‌ಗಳನ್ನು ದೊಡ್ಡ ಬ್ಯಾಂಕ್‌ಗಳ ಜೊತೆ ವಿಲೀನಗೊಳಿಸಿ ಅವು ಹೇಳ ಹೆಸರಿಲ್ಲದಂತಾಗಿವೆ. ಏಕತೆ, ಸಮಗ್ರತೆಯ ಕಳಕಳಿ ಇದ್ದರೆ ಮೊದಲು ಗಂಗಾ ನದಿಯನ್ನು ಕೃಷ್ಣೆ, ಕಾವೇರಿಯಲ್ಲಿ ವಿಲೀನಗೊಳಿಸಲಿ...' ಎಂದ ಶಂಕ್ರಿ.

ಸಂಗತ

ಸಂಕಲ್ಪಿಸುವ ಮನಸ್ಸು ದೃಢವಾಗಿರಲಿ

ಸರಳ ಬದುಕನ್ನು ರೂಢಿಸಿಕೊಳ್ಳುವುದು ಹೊಸ ವರ್ಷದ ಈ ಸಂದರ್ಭದಲ್ಲಿ ನಾವು ಮಾಡಬೇಕಾದ ಅತ್ಯಂತ ಅಗತ್ಯದ ಸಂಕಲ್ಪವಾಗಿದೆ

• ರಾಜಕುಮಾರ ಕುಲಕರ್ಣಿ

ಹೊಸ ವರ್ಷದ ಅಂಗವಾಗಿ ಸಾರ್ವಜನಿಕರು ಅನೇಕ ಸಂಕಲ್ಪಗಳನ್ನು ತೊಡುತ್ತಾರೆ. ಕೆಟ್ಟ ಹವ್ಯಾಸಗಳನ್ನು ತ್ಯಜಿಸುವ, ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳುವ, ವರ್ತನೆಯನ್ನು ತಿದ್ದಿಕೊಳ್ಳುವ, ಹೊಸ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ತರಹೇವಾರಿ ಸಂಕಲ್ಪಗಳನ್ನು ಮಾಡುತ್ತಾರೆ. ಆದರೆ ಜನರು ತಮ್ಮ ಈ ನಿರ್ಧಾರಗಳನ್ನು ಎಷ್ಟರಮಟ್ಟಿಗೆ ಕಾರ್ಯಗತಗೊಳಿಸುವರು ಎನ್ನುವುದು ಅವರವರ ಮನಸ್ಸಿನ ದೃಢತೆಯನ್ನು ಅವಲಂಬಿಸಿದೆ. ಹೆಚ್ಚಿನ ನಿರ್ಣಯಗಳು ಕೆಲವು ದಿನಗಳ ಕಾಲ ಕಾಟಾಚಾರಕ್ಕೆ ರೂಢಿಯಲ್ಲಿದ್ದು ಆನಂತರ ಮರೆತುಹೋಗುವುದು ಸಾಮಾನ್ಯ ಸಂಗತಿಯಾಗಿದೆ.

ಇತ್ತೀಚೆಗೆ ನನ್ನ ಮಿತ್ರರೊಬ್ಬರು ಮಗಳ ಮದುವೆಯನ್ನು ಅತ್ಯಂತ ಸರಳವಾಗಿ ನೆರವೇರಿಸಿದರು. ಮದುವೆ ಕಾರ್ಯಕ್ರಮ ಕೆಲವೇ ಗಂಟೆಗಳಲ್ಲಿ ಕೊನೆಗೊಂಡಿತು. ವಧು-ವರರ ಕುಟುಂಬ ಸದಸ್ಯರಷ್ಟೇ ಪಾಲ್ಗೊಂಡಿದ್ದ ಸಮಾರಂಭದಲ್ಲಿ ಆಹಾರ ಕೂಡ ಮಿತವಾಗಿ ಬಳಕೆಯಾಗಿತ್ತು. 'ಜಗತ್ತಿನಲ್ಲಿ ಆಹಾರ ಕೊರತೆಯ ಸಮಸ್ಯೆ ಉಲ್ಬಣಿಸುತ್ತಿರುವಾಗ ಅದ್ದೂರಿ ಮದುವೆ ಸಮಾರಂಭವನ್ನು ಏರ್ಪಡಿಸುವುದಕ್ಕೆ ಮನಸ್ಸು ಒಪ್ಪಲಿಲ್ಲ. ಇನ್ನುಮುಂದೆ ಕುಟುಂಬದ ಎಲ್ಲ ಕಾರ್ಯಕ್ರಮಗಳನ್ನು ಸರಳವಾಗಿ ಆಚರಿಸಬೇಕೆಂದು ಸಂಕಲ್ಪ ಮಾಡಿದ್ದೇನೆ. ಅದರ ಮೊದಲ ಹೆಜ್ಜೆಯಾಗಿ ಮಗಳ ಮದುವೆಯನ್ನು ಸರಳವಾಗಿ ನೆರವೇರಿಸಿದ್ದು ತೃಪ್ತಿ ನೀಡಿದೆ' ಎಂದು ನುಡಿದ ಮಿತ್ರರ ಮಾತಿನಲ್ಲಿ ಹೆಮ್ಮೆ ಇತ್ತು.

ದೇಶದ ಆಹಾರ ಕೊರತೆಯನ್ನು ನೀಗಿಸಲು ಪ್ರತಿಯೊಬ್ಬ ಪ್ರಜೆ ವಾರಕ್ಕೊಮ್ಮೆ ಉಪವಾಸವಿರುವಂತೆ ಲಾಲ್‌ಬಹದ್ದೂರ್ ಶಾಸ್ತ್ರಿ ಅವರು ಪ್ರಧಾನ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಕರೆ ನೀಡಿದ್ದರು. ಈ ಸಂಕಲ್ಪವನ್ನು ಸ್ವತಃ ಶಾಸ್ತ್ರಿ ಅವರು ರೂಢಿಗೆ ತರುವುದರ ಮೂಲಕ ಜನರಿಗೆ ಆದರ್ಶವೂ ಮಾದರಿಯೂ ಆಗಿ ಉಳಿದರು.

ಆಹಾರ ಕೊರತೆಯ ಸಮಸ್ಯೆಯನ್ನು ಪರಿಹರಿಸುವ ದಿಸೆಯಲ್ಲಿ ಅದ್ದೂರಿ, ಆಡಂಬರವನ್ನು ತ್ಯಜಿಸಿ ಸರಳ ಬದುಕನ್ನು ರೂಢಿಸಿಕೊಳ್ಳುವುದು ನಾವು ಮಾಡಬೇಕಾದ ಅತ್ಯಂತ ಅಗತ್ಯದ ಸಂಕಲ್ಪವಾಗಿದೆ. ವೈಯಕ್ತಿಕ ಮತ್ತು ಕೌಟುಂಬಿಕ ಸಮಾರಂಭಗಳು ಸಮಾಜದಲ್ಲಿ ಸಾರ್ವಜನಿಕ ಸಮಾರಂಭಗಳಂತೆ ಆಚರಿಸಲ್ಪಡುತ್ತಿವೆ. ಸಾವಿರಾರು ಜನರನ್ನು ಆಮಂತ್ರಿಸಿ ಭೂರಿ ಭೋಜನ ಉಣಬಡಿಸುವ ಖಯಾಲಿ ಸೋಂಕಿನಂತೆ ಆವರಿಸಿಕೊಂಡಿದೆ. ಹಿತಮಿತವಾಗಿ ಬಳಕೆಯಾಗಬೇಕಾದ ಆಹಾರವು ಸಮಾರಂಭಗಳಲ್ಲಿ ಹಳಸಿ ಹಾಳಾಗಿ ತಿಪ್ಪೆಗುಂಡಿಗಳನ್ನು ಸೇರುತ್ತಿದೆ. ಆಹಾರದ ಜೊತೆಗೆ ನೀರು ಮತ್ತು ವಿದ್ಯುತ್ ಕೂಡ ದುರ್ಬಳಕೆಯಾಗುತ್ತಿವೆ.

ವರ್ಷದಿಂದ ವರ್ಷಕ್ಕೆ ಕೃಷಿಭೂಮಿ ಕ್ಷೀಣಿಸುತ್ತಿರುವುದು ಮುಂದೊಂದು ದಿನ ತೀವ್ರ ಆಹಾರ ಕ್ಷಾಮವನ್ನು ಸೃಷ್ಟಿಸಲಿದೆ ಎಂದು ತಜ್ಞರು ಈಗಾಗಲೇ ಎಚ್ಚರಿಕೆ ನೀಡಿದ್ದಾರೆ. ತಮ್ಮ ನಂತರದ ಪೀಳಿಗೆಗೆ ಸಕಲ ಐಶ್ವರ್ಯಗಳನ್ನೂ ಕೊಟ್ಟು ಹೋಗುವ ಧಾವಂತದಲ್ಲಿ ಮನುಷ್ಯರು ಬದುಕಿಗೆ ಮೂಲಸೆಲೆಯಾದ ಆಹಾರದಂಥ ಅತಿಮುಖ್ಯವಾದ ಅವಶ್ಯಕತೆಯನ್ನೇ ಮರೆತಿದ್ದಾರೆ. ಶಿವರಾಮ ಕಾರಂತರು ತಮ್ಮ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕೃತಿಯ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ: 'ನಾವು ಭೂಮಿಗೆ ಬಂದ ದಿನ ನಮ್ಮ ಸುತ್ತಣ ಬದುಕು ಇದ್ದುದಕ್ಕಿಂತ ಒಂದಿಷ್ಟು ಹೆಚ್ಚು ಚಂದವಾಗುವಂತೆ ಮಾಡಿ ಇಲ್ಲಿಂದ ಹೊರಡಬೇಕು ಎಂಬ ಭಾವನೆ ನನ್ನದು. ಜಾತ್ರೆಗೆ ಬಂದವರು ಜಾತ್ರೆ ಮುಗಿಸಿ ಹೊರಡುವಾಗ ತಾವು ನಲಿದು ಉಂಡು ಹೋದ ನೆಲದ ಮೇಲೆ ಎಲ್ಲೆಲ್ಲೂ ತಮ್ಮ ಉಚ್ಚಿಷ್ಟವನ್ನು ಚೆಲ್ಲಿ ಹೋದರೆ ಹೇಗಾದೀತು? ಅಲ್ಲಿಗೆ ನಾವು ತಿರುಗಿ ಬಾರದಿದ್ದರೇನಾಯಿತು? ಅಲ್ಲಿಗೆ ಬರುವ ನಮ್ಮ ಮಕ್ಕಳು ಏನೆಂದುಕೊಂಡಾರು? ಅಷ್ಟನ್ನಾದರೂ ಯೋಚಿಸುವ ಬುದ್ಧಿ ಈ ದೇಶವನ್ನು ನಡೆಸುವ ಹಿರಿಯರಿಗೆ ಇಲ್ಲದೇ ಹೋದರೆ ಹೇಗೆ?'

ತನ್ನ ಹಕ್ಕುಗಳನ್ನು ಪ್ರತಿಪಾದಿಸುತ್ತಿರುವ ಮನುಷ್ಯ ತಾನು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಮರೆಯುತ್ತಿದ್ದಾನೆ. ಆಹಾರ, ನೀರು, ವಿದ್ಯುತ್ ಇವುಗಳನ್ನು ರಾಷ್ಟ್ರೀಯ ಸಂಪತ್ತು ಎಂದು ಪರಿಗಣಿಸಲಾಗಿದೆ. ಖರೀದಿಸುವ ಸಾಮರ್ಥ್ಯವಿದೆ ಎಂದ ಮಾತ್ರಕ್ಕೆ ರಾಷ್ಟ್ರೀಯ ಸಂಪತ್ತನ್ನು ದುರ್ಬಳಕೆ ಮಾಡುವ ಅಧಿಕಾರ ಮನುಷ್ಯನಿಗಿಲ್ಲ.

ಎಚ್.ಎಸ್.ವೆಂಕಟೇಶಮೂರ್ತಿ ತಮ್ಮ 'ಇರಬೇಕು ಇರುವಂತೆ' ಕವಿತೆಯಲ್ಲಿ, ಮನುಷ್ಯ ಕೂಡ ಪ್ರಕೃತಿಯಂತೆ ಬಾಳಬೇಕು ಎನ್ನುವ ಸದಾಶಯವನ್ನು ವ್ಯಕ್ತಪಡಿಸುತ್ತಾರೆ. ಕವಿತೆಯ ಒಂದು ಸಾಲು ಹೀಗಿದೆ- 'ತಾನು ಬಿಸಿಲಲಿ ನಿಂತು/ತನ್ನ ಬಳಿ ಬರುವವಗೆ/ತಣ್ಣಗಿನ ಆಸರೆಯ ನೆರಳ ಕೊಟ್ಟು/ ಹೇಗೆ ಗೆಲುವಾಗುವುದೊ/ ಹಸಿರೆಲೆಯ ಹೊಂಗೆಮರ/ ಹಾಗೆ ಬಾಳಿಸು ಗುರುವೇ ಪ್ರೀತಿಯಿಟ್ಟು'.

ಬದುಕನ್ನು ಸರಳತೆಯ ನೆಲೆಯಲ್ಲಿ ಜೀವಿಸುವ ಮನುಷ್ಯನನ್ನು ಸಮಾಜ ಗುರುತಿಸಿ ಗೌರವಿಸುತ್ತಿದೆಯೇ ಎನ್ನುವ ಪ್ರಶ್ನೆ ಎದುರಾಗುತ್ತದೆ. ಸಮಾಜಕ್ಕೆ ಉಪಯುಕ್ತವಾದ ಗುಣಗಳನ್ನು ಮೈಗೂಡಿಸಿಕೊಂಡು ಬದುಕುತ್ತಿರುವವರಿಗೆ ಇದೇ ಸಮಾಜ ಶತಮೂರ್ಖ ಎನ್ನುವ ಹಣೆಪಟ್ಟಿ ಕಟ್ಟುತ್ತದೆ. ಬದುಕುವ ಕಲೆ ಗೊತ್ತಿಲ್ಲದವರೆಂದು ಹೀಯಾಳಿಸುತ್ತದೆ. ನಿಂದನೆಯ ಮಾತುಗಳಿಗೆ ಹೆದರಿ ಸಮಾಜೋಪಯೋಗಿ ಗುಣಗಳನ್ನು ತ್ಯಜಿಸಿ ಬದುಕುವುದು ತಪ್ಪು ನಡೆಯಾಗುತ್ತದೆ. ಕೆಲವೊಮ್ಮೆ ಮನುಷ್ಯನು ನಿಂದನೆ, ಅವಮಾನಗಳನ್ನು ಮೀರಿ ಅಂತರಂಗದ ದನಿಗೆ ಆದ್ಯತೆ ನೀಡಬೇಕು. ಸಂಕಲ್ಪಿಸುವ ಮನಸ್ಸು ದೃಢವಾಗಿದ್ದರೆ ಯಾವ ಅವಮಾನ, ನಿಂದನೆಗಳೂ ನಮ್ಮ ಧೃತಿಗೆಡಿಸಲಾರವು.

ವಾಚಕರ ವಾಣಿ

ಸಿದ್ಧೇಶ್ವರ ಶ್ರೀಗಳು ಕಟ್ಟಿದ ಗ್ರಂಥಾಲಯ

ವಿಜಯಪುರದ ಜ್ಞಾನ ಯೋಗಾಶ್ರಮದ ಸಿದ್ಧೇಶ್ವರ ಶ್ರೀಗಳು ಗುಡಿ ಕಟ್ಟಿಲ್ಲ, ಮಠ ಕಟ್ಟಿಲ್ಲ, ಪೀಠ ಸ್ಥಾಪಿಸಿ ಜಗದ್ಗುರುವಾಗಿ ಪಟ್ಟ ಕಟ್ಟಿಕೊಳ್ಳಲಿಲ್ಲ. ಆದರೆ ಅವರು ಒಂದು ಸುಂದರವಾದ, ಭವ್ಯವಾದ ಗ್ರಂಥಾಲಯ ಕಟ್ಟಿದ್ದಾರೆ. ಅಲ್ಲಿ ಕನ್ನಡ, ಇಂಗ್ಲಿಷ್, ಹಿಂದಿ, ಮರಾಠಿ ಭಾಷೆಯ ಸುಮಾರು ಹದಿನೈದು ಸಾವಿರ ಗ್ರಂಥಗಳಿವೆ. ಇವು ಜಗತ್ತಿನ ಶ್ರೇಷ್ಠ ಚಿಂತಕರು, ತತ್ವಜ್ಞಾನಿಗಳು, ವಿಜ್ಞಾನಿಗಳು, ಸಮಾಜ ವಿಜ್ಞಾನಿಗಳು, ರಾಜಕೀಯ ವಿಶ್ಲೇಷಕರು, ನೊಬೆಲ್ ಪ್ರಶಸ್ತಿ ಪುರಸ್ಕೃತರು ಬರೆದ ಅತ್ಯಂತ ಮಹತ್ವದ ಪುಸ್ತಕಗಳಾಗಿವೆ.

ದೇಶ–ವಿದೇಶಗಳ ಗಣ್ಯರು ತಮ್ಮ ಗ್ರಂಥಗಳನ್ನು ಶ್ರೀಗಳಿಗೆ ಕಳಿಸುತ್ತಿದ್ದರು. ಶ್ರೀಗಳು ಕೂಡ ತಮಗೆ ಇಷ್ಟವಾದ ಕೃತಿಗಳನ್ನು ತರಿಸಿಕೊಳ್ಳುತ್ತಿದ್ದರು. ಐದು ದಶಕಗಳ ಅವಧಿಯಲ್ಲಿ ಬಂದ ಪುಸ್ತಕಗಳನ್ನೆಲ್ಲ ಶ್ರೀಗಳು ವ್ಯವಸ್ಥಿತವಾಗಿ ವಾಚನಾಲಯದಲ್ಲಿ ಸಂಗ್ರಹಿಸಿ ಇಟ್ಟಿದ್ದಾರೆ. ಸಾರ್ವಜನಿಕರು ಈ ಗ್ರಂಥಾಲಯದ ಪ್ರಯೋಜನ ಪಡೆಯಲು ಸೂಕ್ತ ವ್ಯವಸ್ಥೆ ಮಾಡಿದ್ದಾರೆ. ಪುಸ್ತಕವನ್ನು ಪ್ರೀತಿಸುವವರು ಮನುಷ್ಯರನ್ನೂ ಪ್ರೀತಿಸುತ್ತಾರೆ ಎನ್ನುವ ಮಾತೊಂದು ಇದೆ. ಸಿದ್ಧೇಶ್ವರ ಶ್ರೀಗಳು ಇದಕ್ಕೆ ರೂಪಕದಂತಿದ್ದರು. ನಿತ್ಯ ನಾಲ್ಕು– ಐದು ಗಂಟೆ ಅಧ್ಯಯನ ಮಾಡುತ್ತಿದ್ದರು. ಧಾರ್ಮಿಕ ವಿಚಾರ ಅಷ್ಟೇ ಅಲ್ಲ, ಕಲೆ, ವಿಜ್ಞಾನ, ತತ್ವಶಾಸ್ತ್ರ, ಕೃಷಿ, ಸಮಾಜಸೇವೆ... ಹೀಗೆ ಬೇರೆ ಬೇರೆ ವಿಷಯಗಳ ಬಗ್ಗೆ ಆಸಕ್ತಿ ಹೊಂದಿದ್ದರು. ತಮಗೆ ಸ್ಪಷ್ಟವಾಗದ ಯಾವ ವಿಚಾರವನ್ನೂ ಅವರು ಮಾತನಾಡುತ್ತಿರಲಿಲ್ಲ. ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಮೇಲೆ ಪ್ರಭುತ್ವ ಹೊಂದಿದ್ದರು. ಅವರು ಇಂಗ್ಲಿಷ್‌ನಲ್ಲಿ ರಚಿಸಿದ 'ಸಾಂಗ್ಸ್ ಆಫ್ ಸೈಲೆನ್ಸ್' ಕವನ ಸಂಕಲನ ಬಹಳ ಪ್ರಸಿದ್ಧಿ ಪಡೆದಿದೆ.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಪ್ರವಾಸಿಗರಿಗೆ ಬೇಕು ಮೂಲ ಸೌಕರ್ಯ

ರಾಜ್ಯದ ಪ್ರಸಿದ್ಧ ತಾಣವಾದ ಬೇಲೂರು ಚೆನ್ನಕೇಶವ ದೇವಸ್ಥಾನಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದೆ. ಒಬ್ಬರು ವಯಸ್ಸಾದ ಪ್ರವಾಸಿಗರು ಬಂದು, ಗಾಲಿ ಕುರ್ಚಿಯನ್ನು ಒದಗಿಸುವಂತೆ ಅಲ್ಲಿದ್ದ ಸಿಬ್ಬಂದಿಯನ್ನು ಕೋರಿದರು. 'ಗಾಲಿ ಕುರ್ಚಿಗಳೇನೋ ಇವೆ, ಆದರೆ ಸುಸ್ಥಿತಿಯಲ್ಲಿ ಇಲ್ಲ. ಉಪಯೋಗಿಸಲು ಆಗುವುದಿಲ್ಲ' ಎಂದು ಸಿಬ್ಬಂದಿ ಅವರನ್ನು ಮುರಿದ ಗಾಲಿ ಕುರ್ಚಿಗಳಿರುವ ಕಡೆ ಕರೆದುಕೊಂಡು ಹೋಗಿ ತೋರಿಸಿ ಅಸಹಾಯಕತೆ ವ್ಯಕ್ತಪಡಿಸಿದರು.

ರಾಜ್ಯದ ಪ್ರವಾಸಿ ತಾಣಗಳಿಗೆ ಪ್ರವಾಸಿಗರನ್ನು ಸೆಳೆಯುವಂತೆ ಮಾಡಿದರಷ್ಟೇ ಸಾಲದು, ಪ್ರವಾಸಿಗರಿಗೆ ಬೇಕಾದ ಮೂಲ ಸೌಕರ್ಯಗಳನ್ನು ಒದಗಿಸುವ ಕಡೆ ಹೆಚ್ಚಿನ ಗಮನಹರಿಸುವುದು ಅತ್ಯಂತ ಅವಶ್ಯಕ.

ಕೆ.ಪ್ರಭಾಕರ, ಬೆಂಗಳೂರು

ಮಹಾತ್ಮರ ನೆನಪಿಸುವ ವಿಚಾರಧಾರೆ

ಜ್ಞಾನ ಯೋಗಾಶ್ರಮದ ಸಿದ್ಧೇಶ್ವರ ಸ್ವಾಮಿಗಳ ಸರಳ ಜೀವನದ ಬದುಕು, ವಿಚಾರಧಾರೆಗಳು ರಾಮಕೃಷ್ಣ ಪರಮಹಂಸ, ಶಾರದಾ ಮಾತೆ, ಸ್ವಾಮಿ ವಿವೇಕಾನಂದ, ಯೋಗಿ ನಾರಾಯಣಗುರು, ಸಂತ ಕಬೀರದಾಸ ಅವರಂತಹ ಮಹಾತ್ಮರನ್ನು ನೆನಪಿಸುತ್ತವೆ. ಅವರೆಲ್ಲರ ಬಗ್ಗೆ ಕೇಳಿರುತ್ತೇವೆ. ಬಹುಶಃ ಅಂತಹವರ ಸಾಲಿಗೆ ಸೇರಬಹುದಾದ ಮಹಾನ್ ಚೇತನ ಸಿದ್ಧೇಶ್ವರ ಸ್ವಾಮೀಜಿ.

ಶಾರೀರಿಕವಾಗಿ ಲೌಕಿಕ ಪ್ರಪಂಚದಿಂದ ಅವರು ದೂರವಾಗಿದ್ದರೂ ನಡೆ– ನುಡಿ ಒಂದಾಗಿದ್ದ ಅವರ ಜ್ಞಾನಸುಧೆಯಿಂದ ಮತ್ತು ಅವರ ಜೀವನಶೈಲಿಯಿಂದ ಕೋಟ್ಯಂತರ ಜನರ ಮನಃಪರಿವರ್ತನೆಗೆ ಕಾರಣರಾಗಿ, ಜನಮಾನಸದಲ್ಲಿ ಸದಾ ಜೀವಂತವಾಗಿ ಉಳಿದಿರುತ್ತಾರೆ.

ಡಿ.ಪ್ರಸನ್ನಕುಮಾರ್, ಬೆಂಗಳೂರು

ನಾಟಕ ಪ್ರಯೋಗ: ಯಾರೂ ಟೀಕಾತೀತರಲ್ಲ

ಮೈಸೂರಿನ ರಂಗಾಯಣದಲ್ಲಿ ಇತ್ತೀಚೆಗೆ ನಡೆದ ಚಂದ್ರಶೇಖರ ಕಂಬಾರ ಅವರ ಕೃತಿ 'ಸಾಂಬಶಿವ ಪ್ರಹಸನ' ನಾಟಕ ಪ್ರದರ್ಶನದಲ್ಲಿ ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ಅವರನ್ನು ಅವಹೇಳನ ಮಾಡಲಾಗಿದೆ ಎಂದು ಆರೋಪಿಸಿ ಪ್ರೇಕ್ಷಕರೊಬ್ಬರು ರಂಗ ಕಾರ್ಯಾಗಾರದ ಶಿಬಿರಾರ್ಥಿಗಳ ವಿರುದ್ಧ ದೂರು ದಾಖಲಿಸಿರುವುದು ವರದಿಯಾಗಿದೆ. ನಾಟಕ ಪ್ರಯೋಗದಲ್ಲಿ ಯಾವ ವ್ಯಕ್ತಿಯೂ ಟೀಕಾತೀತನಲ್ಲ. ಅಲ್ಲಿ ಎಲ್ಲವೂ ಸಾಂದರ್ಭಿಕ ಚರ್ಚೆಗೆ ಒಳಪಡುತ್ತವೆ. ರಂಗದ ಮೇಲೆ ಟೀಕೆಗೆ ಒಳಪಡುವವ ಮತ್ತೊಮ್ಮೆ ಪ್ರಶಂಸೆಗೂ ಭಾಜನನಾಗಬಲ್ಲ.

ಮೂಲ ಕೃತಿಯಲ್ಲಿ ನಾಟಕಕಾರ ಏನೇ ಬರೆದಿದ್ದರೂ, ಅದು ರಂಗದ ಮೇಲೆ ಬರುವ ಹೊತ್ತಿಗೆ ಬೇರೆ ಆಯಾಮ ಪಡೆಯುತ್ತದೆ. ಅದೇ ಸೃಜನಾತ್ಮಕತೆ. ಹಾಗಾಗಿ ಯಾವುದೇ ರಂಗ ಪ್ರಯೋಗವನ್ನು ಅವಹೇಳನ ಎನ್ನಲಾಗದು. ಪ್ರತೀ ಬಾರಿಯ ರಂಗ ಪ್ರಯೋಗ ಬೇರೆ ಆಗಿರುತ್ತದೆ. ಒಂದೊಮ್ಮೆ ಅವರು ಟೀಕೆಗೆ ಒಳಪಟ್ಟಿದ್ದರೂ ಅದು ಕೂಡ ಅವರ ಶಕ್ತಿಯೇ ಆಗಿರುತ್ತದೆ ಎಂಬುದನ್ನು ದೂರುದಾರರು ಅರಿಯಬೇಕು.

ಆರ್. ವೆಂಕಟರಾಜು, ಬೆಂಗಳೂರು

ತಕ್ಕ ದಂಡನೆ ಆಗಬೇಕು

'ನಾಟಕ ತಿರುಚಿ ಪ್ರದರ್ಶನ: ಕ್ರಮಕ್ಕೆ ಆಗ್ರಹ' ಶೀರ್ಷಿಕೆಯ ಸುದ್ದಿ (ಪ್ರ.ವಾ., ಜ. 3) ಓದಿ ಮನಸ್ಸಿಗೆ ಕಸಿವಿಸಿಯಾಯಿತು. 'ಸಾಂಬಶಿವ ಪ್ರಹಸನ' ಎಂಬ ತಮ್ಮ ನಾಟಕವನ್ನು ಅಸಹ್ಯಕರವಾಗಿ ತಿರುಚಿ ಪ್ರದರ್ಶಿಸಲಾಗಿದೆ. ಜತೆಗೆ ಅನುಮತಿ ಕೂಡ ಪಡೆದಿಲ್ಲ. ಹಾಗಾಗಿ ಸಂಬಂಧಪಟ್ಟ ಎಲ್ಲರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಡಾ. ಚಂದ್ರಶೇಖರ ಕಂಬಾರ ಅವರೇ ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ಪತ್ರ ಬರೆದು ಆಗ್ರಹಿಸಿರುವುದು ಉತ್ತಮ ನಡೆ.

ರಂಗಾಯಣ ಕಲಾದೇಗುಲ. ಇಲ್ಲಿ ನಿರ್ದೇಶಕರು, ನಟರು ಮತ್ತು ಕಲೆಗೆ ಅವಿನಾಭಾವ ಸಂಬಂಧ ಇರುತ್ತದೆ ಮತ್ತು ಇರಲೇಬೇಕು. ಆದರೆ ಇಲ್ಲಿ ಇರಬೇಕಾದದ್ದು ಇರದೆ, ಆಗಬೇಕಾದದ್ದು ಆಗದೆ ಏನೇನೋ ಆಗಿ ರಾಜಕೀಯ ಪ್ರಭಾವವೇ ಜಾಸ್ತಿಯಾದಂತಿದೆ. ಯಾವುದೇ ಕಲಾವೇದಿಕೆಗೆ ಇಂಥವುಗಳು ಒಪ್ಪುವುದಿಲ್ಲ. ತಪ್ಪಿನ ಅರಿವು ಆಗಬೇಕಾದರೆ ಇದಕ್ಕೆ ಕಾರಣರಾದವರಿಗೆ ಸಣ್ಣ ಮಟ್ಟದ ತಕ್ಕ ದಂಡನೆ ಆಗಬೇಕು.

ಡಾ. ಗಿರೀಶ್ ಮೂಗ್ತಿಹಳ್ಳಿ, ಚಿಕ್ಕಮಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಈ ವರ್ಷ 10 ವಿಧಾನಸಭೆಗಳಿಗೆ ಚುನಾವಣೆ

2024ರ ಲೋಕಸಭೆ ಚುನಾವಣೆಗೆ 2023ರಲ್ಲೇ ತಾಲೀಮು

2024ರ ಲೋಕಸಭಾ ಚುನಾವಣೆಗೂ ಮುನ್ನ ಒಂಬತ್ತು ಅಥವಾ 10 ರಾಜ್ಯ/ಕೇಂದ್ರಾಡಳಿತ ಪ್ರದೇಶ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿದೆ. ಹೀಗಾಗಿ, 2024ರ ಲೋಕಸಭಾ ಚುನಾವಣೆಗೆ 2023ರಲ್ಲಿಯೇ ತಾಲೀಮು ಆಗಲಿದೆ. 2024ರ ಚುನಾವಣೆಗೆ 2023ರಲ್ಲಿ ಭೂಮಿಕೆ ಸಿದ್ಧವಾಗಲಿದೆ. ಕರ್ನಾಟಕ, ಮಧ್ಯಪ್ರದೇಶ, ರಾಜಸ್ಥಾನ, ತೆಲಂಗಾಣ, ಛತ್ತೀಸಗಢ, ತ್ರಿಪುರಾ, ಮೇಘಾಲಯ, ನಾಗಾಲ್ಯಾಂಡ್, ಮಿಜೋರಾಂ ರಾಜ್ಯಗಳಲ್ಲಿ ಚುನಾವಣಾ ಕಾವು ಇದೆ. ಇವುಗಳ ಜೊತೆಗೆ ಜಮ್ಮು-ಕಾಶ್ಮೀರ ವಿಧಾನಸಭೆಗೆ ಚುನಾವಣೆ ನಡೆಯುವ ಸಾಧ್ಯತೆಯಿದೆ. ವಿಶೇಷ ಸ್ಥಾನ ರದ್ದತಿ ಬಳಿಕ ಇಲ್ಲಿ ಚುನಾವಣೆ ನಡೆದಿಲ್ಲ. ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ಮಾತ್ರ ಕಾಂಗ್ರೆಸ್ ಆಡಳಿತ ಇದೆ. ಹಿಮಾಚಲ ಪ್ರದೇಶ ಚುನಾವಣೆಯ ಗೆಲುವು ಹಾಗೂ 'ಭಾರತ್ ಜೋಡೊ' ಯಾತ್ರೆಯು ಪಕ್ಷಕ್ಕೆ ಹೊಸ ಚೈತನ್ಯ ತುಂಬಲಿದೆ ಎಂದು ಕಾಂಗ್ರೆಸ್ ನಿರೀಕ್ಷೆ ಇಟ್ಟುಕೊಂಡಿದೆ. ಬಿಜೆಪಿ ಈಗಾಗಲೇ ಚುನಾವಣಾ ರಣತಂತ್ರದಲ್ಲಿ ತೊಡಗಿದೆ

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಟಿ20 ಕ್ರಿಕೆಟ್ ನಾಯಕತ್ವ ವಹಿಸಿಕೊಂಡಿರುವ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ತಮ್ಮ ಜವಾಬ್ದಾರಿ ನಿರ್ವಹಿಸುವಲ್ಲಿ ಯಶಸ್ವಿ ಆಗುವರೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ರಾಜಸ್ಥಾನ (ಕ್ಷೇತ್ರ: 200)

ಆಡಳಿತ ಪಕ್ಷ: ಕಾಂಗ್ರೆಸ್
ಚುನಾವಣೆ: ಡಿಸೆಂಬರ್

ಅಶೋಕ್ ಗೆಹಲೋತ್

2018ರ ಚುನಾವಣೆಯಲ್ಲಿ ಬಿಜೆಪಿಯ ವಸುಂಧರ ರಾಜೇ ಅವರಿಂದ ಅಧಿಕಾರ ಕಸಿದುಕೊಂಡ ಕಾಂಗ್ರೆಸ್, 200 ಸದಸ್ಯ ಬಲದ ವಿಧಾನಸಭೆಯಲ್ಲಿ 100 ಕ್ಷೇತ್ರಗಳಲ್ಲಿ ಗೆದ್ದು ಅಧಿಕಾರಕ್ಕೆ ಬಂದಿತ್ತು. 2013ರಲ್ಲಿ 163 ಕಡೆಗಳಲ್ಲಿ ಭರ್ಜರಿ ಗೆಲುವು ಕಂಡಿದ್ದ ಬಿಜೆಪಿ ಸಾಧನೆಯು 73 ಕ್ಷೇತ್ರಗಳಿಗೆ ಸೀಮಿತಗೊಂಡಿತ್ತು. ಈಗ ರಾಜೇ ಅವರು ಪಕ್ಷದ ಮುಂಚೂಣಿಯಲ್ಲಿ ಕಾಣಿಸುತ್ತಿಲ್ಲ. ಅವರ ನಾಯಕತ್ವದ ಬಗ್ಗೆ ಬಿಜೆಪಿ ವರಿಷ್ಠರಿಗೆ ಅಷ್ಟಾಗಿ ಒಲವು ಇದ್ದಂತಿಲ್ಲ. ಯಾರ ನೇತೃತ್ವದಲ್ಲಿ ಚುನಾವಣೆ ನಡೆಯುತ್ತದೆ ಎಂಬುದರ ಮೇಲೆ ಪಕ್ಷದ ಗೆಲುವು ನಿರ್ಧಾರವಾಗಲಿದೆ. ಆದರೆ, ರಾಜ್ಯ ಕಾಂಗ್ರೆಸ್‌ನ ಒಳಜಗಳ ಆ ಪಕ್ಷಕ್ಕೆ ಮುಳುವಾಗುವ ಎಲ್ಲ ಸಾಧ್ಯತೆಗಳಿವೆ. ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಹಾಗೂ ಉಪಮುಖ್ಯಮಂತ್ರಿ ಸಚಿನ್ ಪೈಲಟ್ ಅವರ ಬಣ ಜಗಳವು ಕಳೆದ ಚುನಾವಣಾ ಫಲಿತಾಂಶದ ದಿನದಿಂದಲೇ ಶುರುವಾಗಿತ್ತು. ಅದು ತಣ್ಣಗಾಗುವ ಬದಲು ದಿನೇ ದಿನೇ ಕಾವು ಪಡೆದು ಆಗಾಗ್ಗೆ ಭುಗಿಲೇಳುತ್ತಲೇ ಇದೆ. ರಾಜ್ಯದ ಚುಕ್ಕಾಣಿ ಬಿಡಲೊಪ್ಪದ ಗೆಹಲೋತ್, ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶವನ್ನೇ ಕೈಬಿಟ್ಟರು. ರಾಜ್ಯದಲ್ಲಿ ಪೈಲಟ್ ಮೇಲುಗೈ ಸಾಧಿಸುವುದು ಅವರಿಗೆ ಇಷ್ಟವಿಲ್ಲ ಎಂಬುದು ಬಹಿರಂಗ ಸತ್ಯ. ಪೈಲಟ್ ತಮ್ಮ ಬೆಂಬಲಿಗ ಶಾಸಕರ ಜೊತೆ ಬಂಡಾಯ ಸಾರಿದ ಪ್ರಹಸನವೂ ನಡೆಯಿತು. ಒಗ್ಗಟ್ಟೇ ಇಲ್ಲದ ರಾಜ್ಯ ಕಾಂಗ್ರೆಸ್‌ನ ಸ್ಥಿತಿಯನ್ನು ಅವಕಾಶವಾಗಿ ಬಳಸಿಕೊಂಡರೆ ಬಿಜೆಪಿಗೆ ಲಾಭ.

ಮಧ್ಯ ಪ್ರದೇಶ

ಕ್ಷೇತ್ರಗಳು: 230
ಚುನಾವಣೆ: ಅಕ್ಟೋಬರ್-ನವೆಂಬರ್
ಆಡಳಿತ ಪಕ್ಷ: ಬಿಜೆಪಿ

ಶಿವರಾಜ್ ಸಿಂಗ್

ರಾಜಕಾರಣದಲ್ಲಿ ಆಸಕ್ತಿ ಇರುವ ಎಲ್ಲರೂ ಅತ್ಯಂತ ಕುತೂಹಲದಿಂದ ನಿಗಾ ಇರಿಸಿರುವ ರಾಜ್ಯಗಳಲ್ಲಿ ಮಧ್ಯಪ್ರದೇಶವೂ ಒಂದು. ಸತತ 14 ವರ್ಷ ಬಿಜೆಪಿ ಆಳ್ವಿಕೆಯ ಬಳಿಕ 2018ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಬಹುಮತ ಬರಲಿಲ್ಲ. 114 ಕ್ಷೇತ್ರಗಳಲ್ಲಿ ಗೆದ್ದು ಅತಿ ದೊಡ್ಡ ಪಕ್ಷವಾಗಿ ಕಾಂಗ್ರೆಸ್ ಹೊರಹೊಮ್ಮಿತ್ತು. ಎಸ್‌ಪಿಯ ಒಬ್ಬ, ಬಿಎಸ್‌ಪಿಯ ಇಬ್ಬರು ಮತ್ತು ನಾಲ್ವರು ಪಕ್ಷೇತರ ಶಾಸಕರ ಬೆಂಬಲದಲ್ಲಿ ಕಾಂಗ್ರೆಸ್ ಪಕ್ಷವು ಸರ್ಕಾರ ರಚಿಸಿತು. ಆದರೆ, ಈ ಸರ್ಕಾರ ಬಹುಕಾಲ ಬಾಳಲಿಲ್ಲ. ಕಾಂಗ್ರೆಸ್‌ನಲ್ಲಿದ್ದ ಜ್ಯೋತಿರಾದಿತ್ಯ ಸಿಂಧಿಯಾ ಅವರಿಗೆ ನಿಷ್ಠರಾಗಿದ್ದ 22 ಶಾಸಕರು ಶಾಸಕ ಸ್ಥಾನಕ್ಕೆ ಮತ್ತು ಪಕ್ಷಕ್ಕೆ ರಾಜೀನಾಮೆ ನೀಡಿ ಸರ್ಕಾರವು ಅಲ್ಪಮತಕ್ಕೆ ಕುಸಿಯುವಂತೆ ಮಾಡಿದರು. 2020ರ ಮಾರ್ಚ್‌ನಲ್ಲಿ ಕಮಲನಾಥ್ ನೇತೃತ್ವದ ಸರ್ಕಾರ ಪತನವಾಯಿತು. ಬಿಜೆಪಿಯ ಶಿವರಾಜ್ ಸಿಂಗ್ ಚೌಹಾಣ್ ಹೊಸ ಸರ್ಕಾರ ರಚಿಸಿದರು.

ಈ ಎಲ್ಲ ಪ್ರಹಸನಗಳಿಂದಾಗಿಯೇ, ಮುಂದಿನ ವರ್ಷ ನಡೆಯಲಿರುವ ಚುನಾವಣೆಯು ಕುತೂಹಲ ಕೆರಳಿಸಿದೆ. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬ ಸ್ಥಿತಿಯಲ್ಲಿರುವ ಕಾಂಗ್ರೆಸ್, ಗೆಲುವಿಗಾಗಿ ಎಲ್ಲ ಪ್ರಯತ್ನ ನಡೆಸಲಿದೆ. ಆದರೆ, ಈ ಹಿಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಇದ್ದ ಸಿಂಧಿಯಾ ಬಲ ಈ ಬಾರಿ ಬಿಜೆಪಿಗೆ ನೆರವಾಗಲಿದೆ. ಸಿಂಧಿಯಾ ಅವರಿಂದಾಗಿ ಸಿಕ್ಕ ಮುನ್ನಡೆಯನ್ನು ಉಳಿಸಿಕೊಳ್ಳಲು ಬಿಜೆಪಿ ಯತ್ನಿಸಲಿದೆ. ಯಾವುದೇ ಪಕ್ಷವು ಭರ್ಜರಿ ಗೆಲುವು ದಾಖಲಿಸುವುದು ಕಷ್ಟ ಎಂಬ ಪರಿಸ್ಥಿತಿ ಇದೆ. ಜಿದ್ದಾಜಿದ್ದಿಯ ಹೋರಾಟ ಮಾತ್ರ ಖಚಿತ.

ಮೇಘಾಲಯ (ಕ್ಷೇತ್ರಗಳು: 60)

ಆಡಳಿತ ಮೈತ್ರಿಕೂಟ: ಎನ್‌ಪಿಪಿ ಮೈತ್ರಿಕೂಟ
ಚುನಾವಣೆ : ಫೆಬ್ರುವರಿ- ಮಾರ್ಚ್

2003ರಿಂದ ಮೇಘಾಲಯದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷವನ್ನು 2018ರ ಚುನಾವಣೆಯಲ್ಲಿ ಕೆಳಗಿಳಿಸಿದ್ದು ನ್ಯಾಷನಲ್ ಪೀಪಲ್ಸ್ ಪಕ್ಷದ (ಎನ್‌ಪಿಪಿ) ಮುಖ್ಯಸ್ಥ ಕಾನ್ರಾಡ್ ಸಂಗ್ಮಾ. 21 ಕ್ಷೇತ್ರಗಳಲ್ಲಿ ಗೆದ್ದಿದ್ದ ಎನ್‌ಪಿಪಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಸರ್ಕಾರ ರಚನೆಗಾಗಿ ಅವರು, ಐದು ಪಕ್ಷಗಳ ಮೈತ್ರಿಕೂಟ ಕಟ್ಟಿದರು. ಈಶಾನ್ಯ ರಾಜ್ಯಗಳಲ್ಲಿ ಪಕ್ಷದ ನೆಲೆಯನ್ನು ವಿಸ್ತರಿಸುವ ಮಹತ್ವಾಕಾಂಕ್ಷೆ ಹೊಂದಿದ್ದ ಸಂಗ್ಮಾ ಅವರು ಐದು ವರ್ಷಗಳ ಅವಧಿಯಲ್ಲಿ ಏಳುಬೀಳು ಕಂಡಿದ್ದಾರೆ. ಗಡಿಯಲ್ಲಿ ಸಂಘರ್ಷ, ಹಿಂಸಾಚಾರ, ಭ್ರಷ್ಟಾಚಾರ ಹಾಗೂ ಮಿತ್ರಪಕ್ಷಗಳ ಜೊತೆಗಿನ ಸಂಘರ್ಷದ ಸಮಯದಲ್ಲೇ ಮತ್ತೊಂದು ಚುನಾವಣೆ ಎದುರಾಗಿದೆ. ಆದರೆ ಈ ಬಾರಿ ಏಕಾಂಗಿಯಾಗಿ ಸ್ಪರ್ಧಿಸುವ ಹಾಗೂ ಅಧಿಕಾರ ಹಿಡಿಯುವ ಘೋಷಣೆ ಮಾಡಿದ್ದಾರೆ. 60 ಕ್ಷೇತ್ರಗಳಲ್ಲೂ ಪಕ್ಷ ಅಭ್ಯರ್ಥಿಗಳನ್ನು ಹಾಕಲು ಮುಂದಾಗಿದೆ. ಚುನಾವಣೆಗೆ ಕೆಲವೇ ವಾರಗಳು ಬಾಕಿಯಿದ್ದಾಗ ಪಕ್ಷಾಂತರಗಳು ನಡೆದಿವೆ. ಎನ್‌ಪಿಪಿಯ ಇಬ್ಬರು ಶಾಸಕರು ಬಿಜೆಪಿಗೆ ಜಿಗಿದಿರುವುದು ಸಂಗ್ಮಾ ಅವರ ಬಲವನ್ನು ಕುಗ್ಗಿಸಿದೆ. ಆದರೆ, ಕಾಂಗ್ರೆಸ್‌ನ ಇಬ್ಬರು ಶಾಸಕರು ಇತ್ತೀಚೆಗೆ ಎನ್‌ಪಿಪಿ ಸೇರ್ಪಡೆಯಾಗಿದ್ದಾರೆ. ಮೈತ್ರಿಕೂಟದ ಕಿರಿಯ ಪಾಲುದಾರ ಪಕ್ಷ ಬಿಜೆಪಿ, ಈ ಬಾರಿ ಅಧಿಕಾರ ಹಿಡಿಯುವ ಮಾತಾಡುತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಬಲ ಕುಗ್ಗಿದ್ದು, ಸಂಗ್ಮಾ ಅವರು ಮೈತ್ರಿಕೂಟದ ಪಕ್ಷಗಳ ವಿರುದ್ಧವೇ ಈ ಬಾರಿ ಸೆಣಸಬೇಕಿದೆ. ಇನ್ನರ್‌ಲೈನ್ ಪರ್ಮಿಟ್, ಪೌರತ್ವ ತಿದ್ದುಪಡಿ ಕಾಯ್ದೆ ವಿಚಾರಗಳು ಈ ಬಾರಿಯೂ ಚುನಾವಣೆಯಲ್ಲಿ ಮಹತ್ವ ಪಡೆಯಲಿವೆ.

ಕಾನ್ರಾಡ್ ಸಂಗ್ಮಾ



ನಾಗಾಲ್ಯಾಂಡ್ (ಕ್ಷೇತ್ರಗಳು: 60)

ಆಡಳಿತ ಪಕ್ಷ: ಪೀಪಲ್ಸ್ ಡೆಮಾಕ್ರಟಿಕ್ ಅಲಯನ್ಸ್
ಚುನಾವಣೆ : ಫೆಬ್ರುವರಿ

ಅತ್ಯಂತ ಪ್ರಕ್ಷುಬ್ಧವಾಗಿರುವ ರಾಜ್ಯಗಳಲ್ಲಿ ನಾಗಾಲ್ಯಾಂಡ್ ಕೂಡ ಒಂದು. ನಾಗಾ ಜನರ ಒಗ್ಗಟ್ಟು, ಪ್ರತ್ಯೇಕ ಧ್ವಜ, ಪ್ರತ್ಯೇಕ ಸಂವಿಧಾನ ಬೇಕು ಎಂಬ ಇಲ್ಲಿನ ಹೋರಾಟ ಹಿಂಸಾತ್ಮಕ ರೂಪ ತಾಳಿತ್ತು. ಹಲವು ಬಂಡುಕೋರ ಗುಂಪುಗಳು ವಿವಿಧ ಬೇಡಿಕೆಗಳಿಗಾಗಿ ಹೋರಾಟ ನಡೆಸುತ್ತಿವೆ. ನಾಗಾ ಹೋರಾಟದ ಪ್ರಮುಖ ಗುಂಪಾಗಿರುವ ಎನ್‌ಎಸ್‌ಸಿಎನ್-ಐಎಂ ತನ್ನ ಬೇಡಿಕೆಗಳ ಪರ ದೃಢವಾಗಿ ನಿಂತಿದೆ. 2018ರ ಚುನಾವಣೆಗೂ ಮುನ್ನ, ಚುನಾವಣೆ ಬಹಿಷ್ಕರಿಸಲು ಹಲವು ಗುಂಪುಗಳು ಕರೆ ಕೊಟ್ಟಿದ್ದವು. 'ಪರಿಹಾರ ಇಲ್ಲದಿದ್ದರೆ ಚುನಾವಣೆ ಇಲ್ಲ' ಎಂಬುದು ಈ ಗುಂಪುಗಳು ಘೋಷಣೆಯಾಗಿತ್ತು. 'ಪರಿಹಾರಕ್ಕಾಗಿ ಚುನಾವಣೆ' ಎಂಬುದು ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ಘೋಷಣೆಯಾಗಿತ್ತು. ಆ ಚುನಾವಣೆಯಲ್ಲಿ ನಾಗಾ ಪೀಪಲ್ಸ್ ಫ್ರಂಟ್ 26, ನ್ಯಾಷನಲ್ ಡೆಮಾಕ್ರಟಿಕ್ ಪ್ರೋಗ್ರೆಸ್ಸಿವ್ ಪಾರ್ಟಿ (ಎನ್‌ಡಿಪಿಪಿ) 18, ಬಿಜೆಪಿ 12 ಮತ್ತು ಇತರರು ನಾಲ್ಕು ಕ್ಷೇತ್ರಗಳಲ್ಲಿ ಗೆದ್ದಿದ್ದರು. ಎನ್‌ಡಿಪಿಪಿ ಮತ್ತು ಬಿಜೆಪಿಯು ಪೀಪಲ್ಸ್ ಡೆಮಾಕ್ರಟಿಕ್ ಅಲಯನ್ಸ್ ಎಂಬ ಮೈತ್ರಿಕೂಟ ರಚಿಸಿಕೊಂಡಿದ್ದು, ಈ ಮೈತ್ರಿಕೂಟದ ಸರ್ಕಾರ ಅಸ್ತಿತ್ವದಲ್ಲಿದೆ.

ನಾಗಾ ಜನರ ಬೇಡಿಕೆಗಳು ಕಳೆದ ಐದು ವರ್ಷಗಳಲ್ಲಿ ಈಡೇರಿಲ್ಲ. ಹಾಗಾಗಿ, ಈ ಬಾರಿಯ ಚುನಾವಣೆಗೂ ಮುನ್ನ ಬಹಿಷ್ಕಾರ, ಪ್ರತಿಭಟನೆಗಳನ್ನು ನಿರೀಕ್ಷಿಸಬಹುದು.

ತ್ರಿಪುರಾ (ಕ್ಷೇತ್ರಗಳು: 60)

ಆಡಳಿತ ಮೈತ್ರಿಕೂಟ: ಎನ್‌ಡಿಎ
ಚುನಾವಣೆ: ಫೆಬ್ರುವರಿ- ಮಾರ್ಚ್

ಈಶಾನ್ಯ ರಾಜ್ಯ ತ್ರಿಪುರಾದಲ್ಲಿ ಸತತ 25 ವರ್ಷಗಳಿಂದ ಅಧಿಕಾರದಲ್ಲಿದ್ದ ಎಡಪಕ್ಷಗಳನ್ನು ಹೊರಗಟ್ಟುವಲ್ಲಿ 2018ರ ಚುನಾವಣೆಯಲ್ಲಿ ಬಿಜೆಪಿ ಸಫಲವಾಗಿತ್ತು. 60 ಕ್ಷೇತ್ರಗಳ ಪೈಕಿ ಬಿಜೆಪಿ 35 ಕಡೆ ಗೆಲುವು ಸಾಧಿಸಿತ್ತು. ಬಿಜೆಪಿಯ ಪ್ರಾದೇಶಿಕ ಮಿತ್ರಪಕ್ಷ ಹಾಗೂ ಬುಡಕಟ್ಟು ಪ್ರದೇಶಗಳ ಮೇಲೆ ಹಿಡಿತ ಹೊಂದಿರುವ 'ಇಂಡಿಜಿನಸ್ ಪೀಪಲ್ಸ್ ಫ್ರಂಟ್ ಆಫ್ ತ್ರಿಪುರಾ' (ಐಪಿಎಫ್‌ಟಿ) 8 ಕಡೆ ಗೆದ್ದು ಸರ್ಕಾರ ರಚನೆಗೆ ನೆರವಾಗಿತ್ತು. ಕಾಂಗ್ರೆಸ್‌ಗೆ ಒಂದೂ ಸ್ಥಾನ ಗೆಲ್ಲಲು ಸಾಧ್ಯವಾಗಿರಲಿಲ್ಲ. ಈ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಹಲವು ಬದಲಾವಣೆಗಳಾಗಿವೆ. ಈ ಬಾರಿಯ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಪಕ್ಷ (ಟಿಎಂಸಿ) ಪ್ರವರ್ಧಮಾನಕ್ಕೆ ಬಂದಿದೆ. ರಾಜ್ಯ ಸರ್ಕಾರದ ವಿರುದ್ಧ ಹೆಚ್ಚಿನ ಪ್ರತಿಭಟನೆಗಳನ್ನು ಸಂಘಟಿಸಿದ್ದು ಟಿಎಂಸಿ ಎಂಬುದು ವಿಶೇಷ. ಕಾಂಗ್ರೆಸ್ ಪಕ್ಷದ ಆರು ಮುಖಂಡರು ಇತ್ತೀಚೆಗೆ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಇದು ರಾಜ್ಯದಲ್ಲಿ ಟಿಎಂಸಿ ನೆಲೆಯನ್ನು ಬಲಗೊಳಿಸಲಿದೆ ಎಂದು ನಿರೀಕ್ಷಿಸಲಾಗಿದೆ. ಆಡಳಿತ ಪಕ್ಷದಲ್ಲೂ ದೊಡ್ಡ ಬದಲಾವಣೆಗಳಾಗಿವೆ. ಬಿಜೆಪಿ ವರಿಷ್ಠರ ಒಲವು ಕಳೆದುಕೊಂಡ ವಿಪ್ಲವ್ ದೇವ್ ಅವರು ಕಳೆದ ವರ್ಷ ರಾಜೀನಾಮೆ ನೀಡಿದ್ದರು. ಅವರ ಸ್ಥಾನಕ್ಕೆ ಮಾಣಿಕ್ ಸಾಹ ಬಂದಿದ್ದಾರೆ. ಐಪಿಎಫ್‌ಟಿ ಮೈತ್ರಿ ಈ ಬಾರಿಯೂ ಮುಂದುವರಿಯಲಿದೆ. ಐಪಿಎಫ್‌ಟಿಗೆ ಪ್ರತಿಸ್ಪರ್ಧಿಯಾಗಿ 'ಇಂಡಿಜಿನಸ್ ಪ್ರೋಗ್ರೆಸ್ಸಿವ್ ರೀಜನಲ್ ಅಲಯನ್ಸ್' ಅಥವಾ ತಿಪ್ರ ಮೊಥಾ ಎಂಬ ಪಕ್ಷ 2019ರಲ್ಲಿ ಹುಟ್ಟಿಕೊಂಡಿದೆ. ಐಪಿಎಫ್‌ಟಿ ಪಕ್ಷದ ಇಬ್ಬರು ಶಾಸಕರು ಬುಡಕಟ್ಟು ಪ್ರದೇಶಗಳ ಮೇಲೆ ಹಿಡಿತವಿರುವ ತಿಪ್ರ ಮೊಥಾ ಪಕ್ಷಕ್ಕೆ ಸೇರಿದ್ದಾರೆ. ಬಿಜೆಪಿಯನ್ನು ಕೆಳಗಿಳಿಸಲು ಜಂಟಿ ಹೋರಾಟಕ್ಕೆ ಮುಂದಾಗಿರುವ ಸಿಪಿಎಂ ಹಾಗೂ ಕಾಂಗ್ರೆಸ್ ಭಾರಿ ಸಿದ್ಧತೆ ನಡೆಸಿವೆ ಎನ್ನಲಾಗಿದೆ. ಹೀಗಾಗಿ ತ್ರಿಪುರಾದ ರಣಕಣ ರಂಗೇರಿದೆ.

ಮಾಣಿಕ್ ಸಾಹ

ಕರ್ನಾಟಕ (ಕ್ಷೇತ್ರಗಳು: 224)

ಆಡಳಿತ ಪಕ್ಷ: ಬಿಜೆಪಿ; ಚುನಾವಣೆ: ಏಪ್ರಿಲ್-ಮೇ

ಬಸವರಾಜ ಬೊಮ್ಮಾಯಿ

ವಿಧಾನಸಭೆಗೆ 2018ರಲ್ಲಿ ನಡೆದ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಸರಳ ಬಹುಮತ ದೊರಕಲಿಲ್ಲ. ಅತಿ ದೊಡ್ಡ ಪಕ್ಷವಾಗಿ ಬಿಜೆಪಿ ಮೂಡಿ ಬಂದಿತ್ತು. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. ಆದರೆ, ಬಹುಮತ ಸಾಬೀತು ಮಾಡಲು ಸಾಧ್ಯವಾಗದೇ ಅವರು ರಾಜೀನಾಮೆ ಕೊಡಬೇಕಾಯಿತು.

ಬಳಿಕ, ಕಾಂಗ್ರೆಸ್-ಜೆಡಿಎಸ್ ಮೈತ್ರಿಕೂಟದ ಸರ್ಕಾರವು ಅಧಿಕಾರಕ್ಕೆ ಬಂತು. ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾದರು. ಆದರೆ, 14 ತಿಂಗಳ ಬಳಿಕ, ಕಾಂಗ್ರೆಸ್ ಮತ್ತು ಜೆಡಿಎಸ್‌ನ 17 ಶಾಸಕರು ಶಾಸಕ ಸ್ಥಾನಕ್ಕೆ ಮತ್ತು ಪಕ್ಷಕ್ಕೆ ರಾಜೀನಾಮೆ ಕೊಟ್ಟರು. ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದ ಇಬ್ಬರು ಪಕ್ಷೇತರರು ಬಿಜೆಪಿ ತೆಕ್ಕೆ ಸೇರಿಕೊಂಡರು. ಸರ್ಕಾರವು ಅಲ್ಪಮತಕ್ಕೆ ಕುಸಿಯಿತು. ಕುಮಾರಸ್ವಾಮಿ ಅವರು ಅನಿವಾರ್ಯವಾಗಿ ರಾಜೀನಾಮೆ ಕೊಡಬೇಕಾಯಿತು. 17 ಶಾಸಕರ ರಾಜೀನಾಮೆಯಿಂದಾಗಿ ವಿಧಾನಸಭೆಯ ಸದಸ್ಯ ಬಲವೇ ಕುಸಿಯಿತು. ಹೀಗಾಗಿ, ಬಿಜೆಪಿಗೆ ಸರಳ ಬಹುಮತ ದೊರಕಿತು. ಯಡಿಯೂರಪ್ಪ ಅವರು 2019ರ ಜುಲೈ 26ರಂದು ಮುಖ್ಯಮಂತ್ರಿಯಾಗಿ ಮತ್ತೆ ಅಧಿಕಾರಕ್ಕೆ ಏರಿದರು. ರಾಜ್ಯದಲ್ಲಿ ಯಡಿಯೂರಪ್ಪ ಅವರೇ ಬಿಜೆಪಿಯ ಅತ್ಯಂತ ಪ್ರಭಾವಿ ಮತ್ತು ಜನಪ್ರಿಯ ನಾಯಕ ಆಗಿದ್ದರೂ ಅವರನ್ನು ಮುಖ್ಯಮಂತ್ರಿಯಾಗಿ ಮುಂದುವರಿಸಲು ವರಿಷ್ಠರಿಗೆ ಒಲವು ಇರಲಿಲ್ಲ. ಯಡಿಯೂರಪ್ಪ ಮತ್ತು ವರಿಷ್ಠರ ನಡುವೆ ಸುದೀರ್ಘವಾದ ಹಗ್ಗಜಗ್ಗಾಟ ನಡೆದು 2021ರ ಜುಲೈ 27ರಂದು ಅವರು ಸ್ಥಾನ ತ್ಯಜಿಸಿದರು. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾದರು.

ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರದಲ್ಲಿರುವ ಮತ್ತು ತಳಮಟ್ಟದಲ್ಲಿ ಗಟ್ಟಿ ಸಂಘಟನೆ ಹೊಂದಿರುವ ಏಕೈಕ ರಾಜ್ಯ ಕರ್ನಾಟಕ. ಹೀಗಾಗಿ, ಇಲ್ಲಿನ ಅಧಿಕಾರವನ್ನು ಕಳೆದುಕೊಳ್ಳಲು ಬಿಜೆಪಿ ಸಿದ್ಧವಿಲ್ಲ. ಕಾಂಗ್ರೆಸ್‌ಗೆ ಗೆಲುವಿನ ಸಾಧ್ಯತೆ ಇರುವ ಕೆಲವೇ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಸಿದ್ದರಾಮಯ್ಯ ಹುಟ್ಟುಹಬ್ಬದ ಕಾರಣಕ್ಕೆ ದಾವಣಗೆರೆಯಲ್ಲಿ ನಡೆದ ಸಮಾರಂಭಕ್ಕೆ ಹರಿದು ಬಂದ ಜನಸಾಗರ, 'ಭಾರತ್ ಜೋಡೊ' ಯಾತ್ರೆಗೆ ಸಿಕ್ಕ ಬೆಂಬಲದಿಂದಾಗಿ ಆ ಪಕ್ಷದ ಹುಮ್ಮಸ್ಸು ಹೆಚ್ಚಿದೆ. ಗೆದ್ದೇ ತೀರುತ್ತೇವೆ ಎಂಬ ಉತ್ಸಾಹದಲ್ಲಿ ಕಾಂಗ್ರೆಸ್ ನಾಯಕರು ಇದ್ದಾರೆ.

ತೆಲಂಗಾಣ (ಕ್ಷೇತ್ರಗಳು: 119)

ಆಡಳಿತ ಪಕ್ಷ: ಟಿಆರ್‌ಎಸ್ (ಬಿಆರ್‌ಎಸ್)
ಚುನಾವಣೆ: ಡಿಸೆಂಬರ್- ಜನವರಿ

ರಾಜ್ಯ ರಚನೆಯಾದ ಬಳಿಕ ಮೂರನೇ ವಿಧಾನಸಭಾ ಚುನಾವಣೆಗೆ ತೆಲಂಗಾಣ ಸಜ್ಜಾಗಿದೆ. 2014ರಲ್ಲಿ ನಡೆದ ಮೊದಲ ಚುನಾವಣೆಯಲ್ಲಿ ಕೆ. ಚಂದ್ರಶೇಖರ ರಾವ್ (ಕೆಸಿಆರ್) ನೇತೃತ್ವದ ತೆಲಂಗಾಣ ರಾಷ್ಟ್ರ ಸಮಿತಿ (ಈಗ ಭಾರತ ರಾಷ್ಟ್ರ ಸಮಿತಿ–ಬಿಆರ್‌ಎಸ್) ಪಕ್ಷ ಅಧಿಕಾರಕ್ಕೆ ಬಂದಿತ್ತು. ಪ್ರತ್ಯೇಕ ತೆಲಂಗಾಣ ರಾಜ್ಯ ರಚನೆಗಾಗಿ ಹೋರಾಟ ನಡೆಸಿದ್ದ ಕೆಸಿಆರ್ ಅವರ ಗೆಲುವು ಖಚಿತವಾಗಿತ್ತು. ಅವಧಿಗಿಂತ ಮೊದಲೇ ವಿಧಾನಸಭೆ ವಿಸರ್ಜಿಸಿದ ಅವರಿಗೆ, 2018ರಲ್ಲಿ ಎರಡನೇ ಅವಧಿಗೂ ಸರಾಗವಾಗಿ ಅಧಿಕಾರ ಸಿಕ್ಕಿತು. 2014ರಲ್ಲಿ 63 ಕಡೆ ಗೆದ್ದಿದ್ದ ಪಕ್ಷವು 2018ರಲ್ಲಿ ತನ್ನ ನೆಲೆಯನ್ನು 89 ಕ್ಷೇತ್ರಗಳಿಗೆ ವಿಸ್ತರಿಸಿತು. ರಾಜ್ಯದಲ್ಲಿ ಕಾಂಗ್ರೆಸ್ ಸ್ಥಿತಿ ಅಷ್ಟೇನೂ ಉತ್ತಮವಾಗಿಲ್ಲ. ಮೊದಲ ಚುನಾವಣೆಯಲ್ಲಿ 21 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದಿತ್ತು. ಅದು 2018ರಲ್ಲಿ ಚುನಾವಣೆಯಲ್ಲಿ 19ಕ್ಕೆ ಕುಸಿಯಿತು. ಆದರೆ, ಪಕ್ಷದ ಮತ ಪ್ರಮಾಣ ಶೇ 28.7ರಷ್ಟಿದೆ ಎಂಬುದು ಗಮನಾರ್ಹ. ಮೊದಲ ಚುನಾವಣೆಯಲ್ಲಿ ಶೇ 7ರಷ್ಟು ಮತಗಳೊಂದಿಗೆ 5 ಕ್ಷೇತ್ರಗಳನ್ನು ಗೆದ್ದಿದ್ದ ಬಿಜೆಪಿ ಶಾಸಕರ ಸಂಖ್ಯೆ 2018ರಲ್ಲಿ 1ಕ್ಕೆ ಕುಸಿಯಿತು. ತೆಲಂಗಾಣದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವ ಮಹತ್ವಾಕಾಂಕ್ಷೆಯನ್ನು ಬಿಜೆಪಿ ಇಟ್ಟುಕೊಂಡಿದೆ. ಈ ಬಾರಿ ತ್ರಿಕೋನ ಸ್ಪರ್ಧೆ ಏರ್ಪಡುವ ಸಾಧ್ಯತೆಯಿದ್ದು, ಕೆಸಿಆರ್ ಅವರು ತಮ್ಮ ಪಕ್ಷವನ್ನು ರಾಷ್ಟ್ರ ಮಟ್ಟಕ್ಕೆ ವಿಸ್ತರಿಸುವ ಆಲೋಚನೆಯೂ ಇಲ್ಲಿ ಪರೀಕ್ಷೆಗೆ ಒಳಪಡಲಿದೆ.

ಕೆಸಿಆರ್

ಛತ್ತೀಸಗಡ (ಕ್ಷೇತ್ರಗಳು: 90)

ಆಡಳಿತ ಪಕ್ಷ: ಕಾಂಗ್ರೆಸ್
ಚುನಾವಣೆ: ಡಿಸೆಂಬರ್-ಜನವರಿ

ಭೂಪೇಶ್ ಬಘೇಲ್

2000ನೇ ಇಸ್ವಿಯಲ್ಲಿ ಛತ್ತೀಸಗಢ ರಾಜ್ಯ ಉದಯವಾದಾಗ ಅಂದಿನ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಅಜಿತ್ ಜೋಗಿ ಅವರನ್ನು ಮೊದಲ ಮುಖ್ಯಮಂತ್ರಿಯಾಗಿ ನೇಮಿಸಿದ್ದರು. ಅದಾದ ಬಳಿಕ ಕಾಂಗ್ರೆಸ್‌ಗೆ ರಾಜ್ಯದಲ್ಲಿ ಅಧಿಕಾರ ಸಿಕ್ಕಿದ್ದು 2018ರ ಚುನಾವಣೆಯಲ್ಲಿ ಮಾತ್ರ. 2003ರಲ್ಲಿ ನಡೆದ ರಾಜ್ಯದ ಎರಡನೇ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾದ ಬಿಜೆಪಿ, 2018ರವರೆಗೂ ಸತತವಾಗಿ ಗೆಲುವು ದಾಖಲಿಸಿತ್ತು. ರಮಣ್ ಸಿಂಗ್ ಅವರು ರಾಜ್ಯದಲ್ಲಿ 15 ವರ್ಷ ಚುಕ್ಕಾಣಿ ಹಿಡಿದಿದ್ದರು. 90 ಸದಸ್ಯಬಲದ ವಿಧಾನಸಭೆಯಲ್ಲಿ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ 68 ಸ್ಥಾನಗಳಲ್ಲಿ ಗೆದ್ದು ಬೀಗಿತ್ತು. ಬಿಜೆಪಿ ಕ್ಷೇತ್ರಗಳು ಕೇವಲ 15ಕ್ಕೆ ಸೀಮಿತಗೊಂಡಿದ್ದವು. ರಾಜ್ಯದಲ್ಲಿ ಕಾಂಗ್ರೆಸ್ ನೆಲೆ ಬಲಪಡಿಸಿರುವ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ಎರಡನೇ ಅವಧಿಗೆ ಅಧಿಕಾರ ಹಿಡಿಯುವ ಸಿದ್ಧತೆಯಲ್ಲಿದ್ದಾರೆ. 'ಭಾರತ್ ಜೋಡೊ ಯಾತ್ರೆ'ಯೂ ಅವರ ಆಕಾಂಕ್ಷೆಗೆ ಬಲ ತುಂಬುವ ಸಾಧ್ಯತೆಯಿದೆ. ಕಳೆದುಕೊಂಡ ರಾಜ್ಯವನ್ನು ಮರಳಿ ಪಡೆಯುವ ಉತ್ಸಾಹದಲ್ಲಿ ಬಿಜೆಪಿ ಇದೆ.

ಮಿಜೋರಾಂ (ಕ್ಷೇತ್ರಗಳು: 40)

ಆಡಳಿತ ಪಕ್ಷ: ಎಂಎನ್‌ಎಫ್
ಚುನಾವಣೆ: ಡಿಸೆಂಬರ್

ಜೊರಾಮ್‌ಥಾಂಗ್

ಮಾಜಿ ಬಂಡುಕೋರ ಹಾಗೂ ಮಿಜೊ ನ್ಯಾಷನಲ್ ಫ್ರಂಟ್ (ಎಂಎನ್‌ಎಫ್) ಮುಖ್ಯಸ್ಥ ಜೊರಾಮ್‌ಥಾಂಗ್ ಅವರು 2018ರ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಗಳಿಸಿ ಅಧಿಕಾರಕ್ಕೆ ಬಂದಿದ್ದರು. ಅವರು ಮುಖ್ಯಮಂತ್ರಿ ಹುದ್ದೆಗೆ ಏರಿದ್ದು ಅದು ಮೂರನೇ ಬಾರಿ. ರಾಜ್ಯದ ಮೂರು ಸ್ವಾಯತ್ತ ಜಿಲ್ಲಾ ಮಂಡಳಿಗಳ ಪೈಕಿ ಮಾರಾ ಸ್ವಾಯತ್ತ ಜಿಲ್ಲಾ ಮಂಡಳಿಗೆ ನಡೆದ ಚುನಾವಣೆಯಲ್ಲಿ 25ರ ಪೈಕಿ ಬಿಜೆಪಿ 12 ಸ್ಥಾನಗಳನ್ನು ಗೆದ್ದು, ಅತಿದೊಡ್ಡ ಪಕ್ಷ ಎನಿಸಿಕೊಂಡಿತ್ತು. ಆದರೆ ಬಿಜೆಪಿಗೆ ಅಧಿಕಾರ ನೀಡದ ಎಂಎನ್‌ಎಫ್, ರಾಜ್ಯದ ಪ್ರತಿಪಕ್ಷ ಕಾಂಗ್ರೆಸ್ ಜೊತೆ ಮೈತ್ರಿ ಮಾಡಿಕೊಂಡು ಅಲ್ಲಿ ಅಧಿಕಾರ ಹಿಡಿಯಿತು. ಈವರೆಗೆ ಮಿಜೋರಾಂನಲ್ಲಿ ಆಡಳಿತ ನಡೆಸಲು ಬಿಜೆಪಿಗೆ ಸಾಧ್ಯವಾಗಿಲ್ಲ. ಆದರೆ ಸ್ವಾಯತ್ತ ಮಂಡಳಿ ಚುನಾವಣೆಯಲ್ಲಿ ಬಿಜೆಪಿ ಗೆಲುವು, ವಿಧಾನಸಭೆಯಲ್ಲಿ ಅಧಿಕಾರ ಹಿಡಿಯುವ ಆಸೆ ಮೂಡಿಸಿದೆ. ಬಿಜೆಪಿ ಹೊರತುಪಡಿಸಿ ಸರ್ಕಾರ ರಚನೆ ಸಾಧ್ಯವಿಲ್ಲ ಎಂದು ಮುಖಂಡರು ಹೇಳುತ್ತಾರೆ. ಕ್ರೈಸ್ತ ಸಮುದಾಯದ ಪ್ರಾಬಲ್ಯವಿರುವ ರಾಜ್ಯದಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆಗೆ ಭಾರಿ ವಿರೋಧವಿದೆ. 25 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ನಿರ್ಧರಿಸಿರುವ ಎಎಪಿ, ರಾಜ್ಯದಲ್ಲಿ ನೆಲೆ ಕಾಣಲು ಹವಣಿಸುತ್ತಿದೆ.

ಜಮ್ಮು-ಕಾಶ್ಮೀರ (ಕ್ಷೇತ್ರಗಳು: 114)

ಚುನಾವಣೆ: ಮೇ?

ಜಮ್ಮು-ಕಾಶ್ಮೀರ ರಾಜ್ಯವನ್ನು 2019ರಲ್ಲಿ ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಂಗಡಿಸಲಾಯಿತು. ಅವೆಂದರೆ, ಜಮ್ಮು-ಕಾಶ್ಮೀರ ಮತ್ತು ಲಡಾಖ್. ಜಮ್ಮು-ಕಾಶ್ಮೀರವು ವಿಧಾನಸಭೆಯನ್ನು ಹೊಂದಿರುವ ಕೇಂದ್ರಾಡಳಿತ ಪ್ರದೇಶ ಎಂದು ನಿರ್ಧರಿಸಲಾಗಿದೆ. ಹಾಗಾಗಿ, ಇಲ್ಲಿನ ವಿಧಾನಸಭೆಗೆ ಚುನಾವಣೆ ನಡೆಯಬೇಕಿದೆ. ಕ್ಷೇತ್ರ ಪುನರ್‌ವಿಂಗಡಣೆ, ಭದ್ರತಾ ಸ್ಥಿತಿ, ಮತದಾರರ ಪಟ್ಟಿ ಪರಿಷ್ಕರಣೆ ಮುಂತಾದ ವಿಚಾರಗಳಿಂದಾಗಿ ಈವರೆಗೆ ಚುನಾವಣೆ ನಡೆದಿಲ್ಲ.

ಮತದಾರರ ಪಟ್ಟಿಯನ್ನು ಕಳೆದ ನವೆಂಬರ್‌ನಲ್ಲಿ ಪ್ರಕಟಿಸಲಾಗಿದೆ. ಕ್ಷೇತ್ರ ವಿಂಗಡಣೆ ಕಾರ್ಯವೂ ಪೂರ್ಣಗೊಂಡಿದೆ. 114 ಕ್ಷೇತ್ರಗಳ ಪೈಕಿ ಪಾಕಿಸ್ತಾನ ಆಕ್ರಮಿತ ಕಾಶ್ಮೀರಕ್ಕೆ 24, ಕಾಶ್ಮೀರಕ್ಕೆ 47 ಮತ್ತು ಜಮ್ಮುವಿಗೆ 43 ಕ್ಷೇತ್ರಗಳು ಹಂಚಿಕೆಯಾಗಿವೆ.

2023ರ ಮೇಯಲ್ಲಿ ವಿಧಾನಸಭೆಗೆ ಚುನಾವಣೆ ನಡೆಯಲಿದೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್ ಅವರು ಕಳೆದ ಡಿಸೆಂಬರ್‌ನಲ್ಲಿ ಹೇಳಿದ್ದರು. ಆದರೆ, ಸರ್ಕಾರವು ಚುನಾವಣೆ ನಡೆಸಲು ಹಿಂದೇಟು ಹಾಕಬಹುದು. ಇದರ ಹಿಂದೆ ರಾಜಕೀಯ ಕಾರಣ ಇದೆ ಎಂದು ಬಿಜೆಪಿಯೇತರ ಪಕ್ಷಗಳ ಮುಖಂಡರು ಹೇಳಿದ್ದಾರೆ.

ನ್ಯಾಷನಲ್ ಕಾನ್ಫರೆನ್ಸ್, ಪಿಡಿಪಿ, ಕಾಂಗ್ರೆಸ್ ಮತ್ತು ಬಿಜೆಪಿ ಇಲ್ಲಿನ ಪ್ರಮುಖ ಪ್ರತಿಸ್ಪರ್ಧಿಗಳು. ರಾಜ್ಯದ ವಿಶೇಷ ಸ್ಥಾನಮಾನ ರದ್ದಾಗುವ ಮೊದಲು ಅಲ್ಲಿ ಪಿಡಿಪಿ ಮತ್ತು ಬಿಜೆಪಿ ಮೈತ್ರಿಕೂಟದ ಸರ್ಕಾರ ಇತ್ತು. ಆದರೆ, ವಿಶೇಷ ಸ್ಥಾನಮಾನ ರದ್ದತಿ ಬಳಿಕ ಬಿಜೆಪಿಯೇತರ ಪಕ್ಷಗಳೆಲ್ಲ ಸೇರಿಕೊಂಡು 'ಗುಪ್ಕಾರ್' ಮೈತ್ರಿಕೂಟ ರಚಿಸಿಕೊಂಡಿವೆ.

ಕಾಂಗ್ರೆಸ್‌ನಿಂದ ಹೊರ ಹೋಗಿರುವ ಗುಲಾಂ ನಬಿ ಆಜಾದ್ ಅವರು ಹೊಸ ಪಕ್ಷ ಕಟ್ಟಿದ್ದಾರೆ. ಗುಪ್ಕಾರ್ ಮೈತ್ರಿಕೂಟವು ಚುನಾವಣೆಯನ್ನು ಒಟ್ಟಾಗಿ ಎದುರಿಸುವ ಸಾಧ್ಯತೆ ಕಡಿಮೆ. ಸ್ಥಳೀಯ ಮುಖಂಡರನ್ನು ಪಕ್ಷಕ್ಕೆ ಸೇರಿಸಿಕೊಂಡಿರುವ ಬಿಜೆಪಿಯ ಬಲ ಹೆಚ್ಚಿದೆ. ಹಾಗಾಗಿ, ಈ ಬಾರಿ ಅಲ್ಲಿ ಬಹುಕೋನ ಸ್ಪರ್ಧೆ ನಿರೀಕ್ಷಿಸಬಹುದು. ಯಾವ ಪಕ್ಷಕ್ಕೂ ಸರಳ ಬಹುಮತ ಸಿಗದಿರುವ ಸಾಧ್ಯತೆಯೇ ಹೆಚ್ಚು.

ಆಧಾರ: ಪಿಟಿಐ, ಭಾರತೀಯ ಚುನಾವಣಾ ಆಯೋಗದ ಜಾಲತಾಣ

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಜನವರಿ 4, 2023

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ತ್ರಯೋದಶಿ ಗಂ. 24-01 ನಕ್ಷತ್ರ: ರೋಹಿಣಿ ಗಂ. 18-49 ಯೋಗ: ಶುಭ ಗಂ. 07-06, ಕರಣ: ಕೌಲವ ಗಂ. 11-00, ಧನುರ್ ಮಾಸದ 19 ನೇ ದಿನ.
ರಾಹುಕಾಲ : ಮಧ್ಯಾಹ್ನ 12-00 -01-30
ಸೂರ್ಯೋದಯ : 06-58 ಸೂರ್ಯಾಸ್ತ : 06-13
ಮುಸ್ಲಿಂ ದಿನಾಂಕ : 11 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 3, 11

ಮೇಷ: ಇಂದಿನ ನ್ಯಾಯಾಲಯ ಅಥವಾ ಸರ್ಕಾರಿ ಕಚೇರಿಗಳ ಅಲೆದಾಟವೂ ವ್ಯರ್ಥವಾಗುವುದು. ಗೌರವಾನ್ವಿತ ಹುದ್ದೆಯಲ್ಲಿರುವವರಿಗೆ ಅನುಯಾಯಿಗಳ ಸಂಖ್ಯೆ ಹೆಚ್ಚಾಗಲಿದೆ. ಸ್ನೇಹಿತರು ಮಾರ್ಗದರ್ಶನ ಅಪೇಕ್ಷಿಸುವರು.

ವೃಷಭ: ಪಶುಸಂಗೋಪನೆ ಮಾಡುವವರಿಗೆ,, ಜೇನು ಕೃಷಿ ಮಾಡುವವರಿಗೆ ಮತ್ತು ಪಾನೀಯ ಮಾರಾಟಗಾರರಿಗೆ ಮಹಾಲಕ್ಷ್ಮಿಯ ಅನುಗ್ರಹ ಸಿಗಲಿದೆ. ಮನೆಯಲ್ಲಿ ಶಾಂತ ವಾತಾವರಣವಿದ್ದು, ಮನಸ್ಸಿಗೆ ತುಸು ನೆಮ್ಮದಿ ಬರುವುದು.

ಮಿಥುನ: ಸಮಸ್ಯೆಯಿಂದ ಹೊರಬರಲು ಸಂದರ್ಭಕ್ಕನುಗುಣವಾಗಿ ವರ್ತಿಸುವ ತೀರ್ಮಾನ ಕೈಗೊಳ್ಳುವಿರಿ. ಮೃದು ಧೋರಣೆ ಸಿಬ್ಬಂದಿ ವರ್ಗಕ್ಕೆ ಆಶ್ಚರ್ಯವೆನಿಸುವುದು. ಅತಿಯಾದ ತಿರುಗಾಟದಿಂದಾಗಿ ವಿಶ್ರಾಂತಿ ಬಯಸುವಿರಿ.

ಕರ್ಕಾಟಕ: ವೈದ್ಯಕೀಯ ವಿದ್ಯಾರ್ಥಿಗಳಿಗೆ ವಿದೇಶ ಅಧ್ಯಯನದ ಯೋಗ ಸಿಗಲಿದೆ. ಕುಟುಂಬದ ಸಮಸ್ಯೆಯನ್ನು ಸಮಾಧಾನವಾಗಿ ಯೋಚಿಸಿ, ತೀರ್ಮಾನಿಸುವುದರಿಂದ ಸಂಬಂಧಗಳಿಗೆ ಧಕ್ಕೆ ಉಂಟಾಗುವುದಿಲ್ಲ.

ಸಿಂಹ: ಹೆಚ್ಚಿನ ಆತ್ಮವಿಶ್ವಾಸದಿಂದ ಈ ದಿನವನ್ನು ಆರಂಭಿಸಿ. ಸಂಕಲ್ಪಿತ ಯೋಜನೆಗಳಿಗೆ ನಿರ್ದಿಷ್ಟ ರೂಪ ದೊರೆತು ಸಂತೋಷವಾಗುವುದು. ಮಕ್ಕಳ ಆರೋಗ್ಯದಲ್ಲಿ ಸಾಂಕ್ರಾಮಿಕ ರೋಗ ಹರಡದಂತೆ ಹೆಚ್ಚಿನ ಕಾಳಜಿ ವಹಿಸಿ.

ಕನ್ಯಾ: ಸೂಕ್ಷ್ಮ ವಿಚಾರಗಳನ್ನು ಅರ್ಥ ಮಾಡಿಕೊಂಡು ಹಿರಿಯರ ಮಾರ್ಗದರ್ಶನದಂತೆ ನಡೆದರೆ ಉತ್ತಮ. ಎಲೆಕ್ಟ್ರಾನಿಕ್ ಮತ್ತು ಹಾರ್ಡ್‌ವೇರ್ ವಸ್ತುಗಳಿಂದ ಅಧಿಕ ಲಾಭ ಪಡೆಯಲಿದ್ದೀರಿ.

ತುಲಾ: ಅವಶ್ಯಕತೆ ಇರುವ ಸುತ್ತಮುತ್ತಲಿನ ವಿದ್ಯಮಾನಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿ. ಅನಗತ್ಯ ಅಲೆದಾಟಗಳು ತಪ್ಪಲಿದೆ. ದುರ್ಜನರ ಸಹವಾಸದಿಂದ ಗೌರವ ಮತ್ತು ಹಣ ಕಳೆದುಕೊಳ್ಳುವಂತೆ ಆಗುವುದು.

ವೃಶ್ಚಿಕ: ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಆರ್ಥಿಕತೆಗೆ ಸಂಬಂಧಿಸಿದಂತೆ ಅಪವಾದ ಎದುರಾಗುವ ಸಾಧ್ಯತೆ ಇದೆ. ಲೇವಾದೇವಿ ವ್ಯವಹಾರ ಮಾಡುವವರು ನಷ್ಟವನ್ನು ಅನುಭವಿಸುವಂತಾಗಬಹುದು.

ಧನು: ಲೇಖನ ವೃತ್ತಿಯಲ್ಲಿ ಪ್ರಗತಿಯನ್ನು ಕಾಣುವಿರಿ. ಯಂತ್ರೋಪಕರಣಗಳ ವ್ಯಾಪಾರ ಮೂಲಕ ಲಾಭ ಪಡೆಯಬಹುದು. ಸಿಹಿತಿನಿಸು ಮಾರಾಟಗಾರರಿಗೆ ಬೇಡಿಕೆ ಹೆಚ್ಚಾಗುತ್ತದೆ/ ಸ್ನೇಹಿತರೊಬ್ಬರ ನೆರವಿಗೆ ನಿಲ್ಲಬೇಕಾಗಬಹುದು.

ಮಕರ: ಮಗಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡು ಬರಲಿದೆ. ಸಿನಿಮಾ ರಂಗದವರಿಗೆ ಹೆಚ್ಚಿನ ಅವಕಾಶ ಲಭಿಸುವುದು. ನಿಮ್ಮ ಒಡನಾಡಿಗಳ ಪ್ರೀತಿ ವಿಶ್ವಾಸ ಸಹಕಾರದಿಂದ ಈ ದಿನದಲ್ಲಿ ಕೆಲಸ ಕಾರ್ಯಗಳನ್ನು ಸಾಧಿಸುವಿರಿ.

ಕುಂಭ: ನಿಮ್ಮ ಉಪವೃತ್ತಿಗೆ ಅಡ್ಡಿ ಆತಂಕಗಳು ಎದುರಾಗಬಹುದು. ರಕ್ತ ಸಂಬಂಧೀ ಕಾಯಿಲೆಯನ್ನು ಹೊಂದಿದವರು, ರಕ್ತ ಪರೀಕ್ಷೆ ಮಾಡಿಸುವುದು ಒಳ್ಳೆಯದು. ಮಹಾಗಣಪತಿ ಆರಾಧಿಸುವುದರಿಂದ ಶುಭಫಲ ಪ್ರಾಪ್ತಿ.

ಮೀನ: ಭಾವನೆಗಳಿಗೆ ಉತ್ತಮವಾಗಿ ಹೇಗೆ ಪ್ರತಿಕ್ರಿಯಿಸಬೇಕೆಂಬುದು ಚೆನ್ನಾಗಿ ತಿಳಿದಿದೆ. ಕೆಲಸಗಳು ಎಷ್ಟು ಕಷ್ಟವಾದರೂ ಹಿಂತಿರುಗುವ ಯೋಚನೆ ಮಾಡಬೇಡಿ. ಇಂಧನ ಮಾರಾಟಗಾರರಿಗೆ ಅನುಕೂಲಕರ ದಿನವಾಗುವುದು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಪ್ರಾರ್ಥನೆ

ಆಶೆಗಳ ಕೆಣಕದಿರು, ಪಾಶಗಳ ಬಿಗಿಯದಿರು |
ಕ್ಲೇಶದ ಪರೀಕ್ಷೆಗಳಿಗೆನ್ನ ಕರೆಯದಿರು ||
ಬೇಸರದ ಪಾತಕಸ್ಮೃತಿಯ ಚುಚ್ಚದಿರ್: ಎನ್ನು|
ತೀಶನನು ಬೇಡುತಿರೊ - ಮಂಕುತಿಮ್ಮ ||792

ಪದ-ಅರ್ಥ: ಕ್ಲೇಶದ = ಕಷ್ಟಗಳ, ಪರೀಕ್ಷೆಗಳಿಗೆನ್ನ = ಪರೀಕ್ಷೆಗಳಿಗೆ + ಎನ್ನ, ಪಾತಕಸ್ಮೃತಿಯ = ಪಾಪದ ನೆನಪುಗಳ, ಎನ್ನುತೀಶನನು = ಎನ್ನುತ + ಈಶನನು

ವಾಚ್ಯಾರ್ಥ: ನನಗೆ ಆಸೆಗಳನ್ನು ತೋರಿಸಿ ಮನಸ್ಸನ್ನು ಕೆಣಕದಿರು, ಅವುಗಳ ಪಾಶ ನನ್ನನ್ನು ಬಿಗಿಯದಿರಲಿ, ಕಷ್ಟದ ಪರೀಕ್ಷೆಗಳಿಗೆ ನನ್ನನ್ನು ಎಳೆಯದಿರು, ಬೇಸರ ತರುವ, ಹಿಂದೆ ಮಾಡಿದ ಪಾತಕಗಳ ನೆನಪುಗಳಿಂದ ಚುಚ್ಚದಿರು ಎಂದು ಈಶ್ವರನನ್ನು ಬೇಡುತ್ತಿರು.

ವಿವರಣೆ: ಮನುಷ್ಯನಿಗೆ ಅನೇಕ ಭೌತಿಕ, ಮಾನಸಿಕ ಮತ್ತು ಅಧ್ಯಾತ್ಮಿಕ ಕೊರತೆಗಳಿರುತ್ತವೆ. ಕೊರತೆಗಳನ್ನು ತುಂಬಿಕೊಳ್ಳಲು ಮನುಷ್ಯನ ಬಯಕೆಗಳು ಪ್ರಾರ್ಥನೆಯ ರೂಪದಲ್ಲಿ ಪ್ರಕಟವಾಗುತ್ತವೆ. ಭಗವದ್ ಸಹಾಯವನ್ನು ಬಯಸುವುದೆ ಪ್ರಾರ್ಥನೆ. ಆಗ ಹೃದಯಾಂತರಾಳದಿಂದ ಕೂಗು ಹೊರಹೊಮ್ಮುತ್ತದೆ. ದಿವ್ಯ ಸಹಾಯಕ್ಕಾಗಿ ಹೃದಯ ಕೂಗಿ ಕರೆಯುತ್ತದೆ. ಈ ಹೃದಯ ಸ್ಪಂದನವೇ, ದಿವ್ಯ ಆರ್ತನಾದವೇ ಪ್ರಾರ್ಥನೆ. ಈ ಪ್ರಾರ್ಥನೆಯಲ್ಲಿ ಏನಿರಬೇಕು ಎಂಬುದನ್ನು ಕಗ್ಗ ಹೇಳುತ್ತದೆ. ಭಗವಂತನನ್ನು ಬೇಡುವುದೇ ಆದರೆ, ಮೊದಲು ಆಸೆಗಳ ನಿಗ್ರಹವನ್ನೇ ಕೇಳಬೇಕು. ಆಸೆಗಳೇ ಮನುಷ್ಯನನ್ನು ದಿಕ್ಕು ದಿಕ್ಕಿಗೆ ಸೆಳೆಯುವುವು. ಪ್ರತಿಯೊಂದು ಆಸೆಯೂ ಒಂದು ಹಗ್ಗವಿದ್ದಂತೆ. ಆಸೆಗಳು ಹೆಚ್ಚಾದಂತೆ ಹಗ್ಗಗಳೂ ಹೆಚ್ಚು. ಈ ವಿಪರೀತವಾದ ಹಗ್ಗಗಳು ನಮ್ಮನ್ನು ಸುತ್ತಿ, ಕಟ್ಟಿಹಾಕುತ್ತವೆ, ಉಸಿರುಕಟ್ಟಿಸುತ್ತವೆ. ಹಾಗೆ ಆಗದಿರಬೇಕಾದರೆ ಆಸೆಗಳು ಕಡಿಮೆಯಾಗಬೇಕು. ಪ್ರಪಂಚದ ವೈಭವದ ಮೆರಗು ಹೊಸ ಹೊಸ ಆಕರ್ಷಣೆಗಳನ್ನು ಹುಟ್ಟು ಹಾಕಿ ಆಸೆಗಳನ್ನು ವೃದ್ಧಿಸುವುದರಿಂದ ಆ ಆಸೆಗಳನ್ನು ಕಡಿಮೆ ಮಾಡಲು ಭಗವಂತನನ್ನೇ ಪ್ರಾರ್ಥಿಸಬೇಕು. ಮತ್ತೊಂದು ಬಿನ್ನಹವೆಂದರೆ ನಮ್ಮನ್ನು ಕಷ್ಟದ ಪರೀಕ್ಷೆಗಳಿಗೆ ದಯವಿಟ್ಟು ಸಿಲುಕಿಸಬೇಡ ಎಂಬುದು. ಕೆಲವು ಪರೀಕ್ಷೆಗಳು ಅನಪೇಕ್ಷಿತವಾಗಿ, ಅನಿವಾರ್ಯವಾಗಿ ಬರುತ್ತವೆ. ಅವುಗಳಲ್ಲಿ ನಮ್ಮ ಪಾತ್ರವೇನೂ ಇಲ್ಲದಿದ್ದರೂ ನಮಗೆ ಉರುಳಾಗಿ ಕಾಡುತ್ತವೆ. ದ್ರೌಪದಿಯ ವಸ್ತ್ರಾಪಹರಣ ಪರೀಕ್ಷೆ, ಸೀತೆಯ ಅಗ್ನಿಪರೀಕ್ಷೆ, ಹರಿಶ್ಚಂದ್ರನ ಸತ್ಯ ಪರೀಕ್ಷೆ, ಅಂಬರೀಷನ ಸತ್ವ ಪರೀಕ್ಷೆ ಇವೆಲ್ಲ ಕೆಲವು ಉದಾಹರಣೆಗಳು. ಅವರೆಲ್ಲ ಸಾತ್ವಿಕರು, ಆದರೆ ಪರೀಕ್ಷೆಯಲ್ಲಿ ಒದ್ದಾಡಿದವರು. ಅಂಥ ಪರೀಕ್ಷೆಗಳನ್ನು ನೀಡದಿರು ಎಂದು ಈಶ್ವರನನ್ನು ಬೇಡಬೇಕು. ಪ್ರಪಂಚದಲ್ಲಿ ಬದುಕಿದಾಗ ಯಾವು ಯಾವುದೋ ಆಕರ್ಷಣೆಗೆ ಸಿಕ್ಕು ತಪ್ಪು ಮಾಡುವ ಸಂದರ್ಭಗಳು ಬರುತ್ತವೆ. ಕೆಲವು ತಿಳಿದೋ, ಕೆಲವನ್ನು ತಿಳಿಯದೆಯೋ ತಪ್ಪು ಮಾಡುತ್ತೇವೆ. ಆ ಪಾಪಪ್ರಜ್ಞೆ ಬದುಕಿನುದ್ದಕ್ಕೂ ನಮ್ಮನ್ನು ಚುಚ್ಚುತ್ತಲೇ ಇರುತ್ತದೆ. ಆ ಪಾಪಪ್ರಜ್ಞೆಯ ಮುಳ್ಳು ಸದಾಕಾಲ ಚುಚ್ಚದಂತೆ ಮಾಡು ಎಂಬುದೊಂದು ಪ್ರಾರ್ಥನೆ. ಹಾಗೆಂದರೆ ಪಾಪಪ್ರಜ್ಞೆ ಬೇಡವೇ? ಅದಕ್ಕಾಗಿ ಪ್ರಾಯಶ್ಚಿತ್ತ ಬೇಕು, ಮತ್ತೊಮ್ಮೆ ಅಂತಹ ಪಾಪ ಮಾಡದಿರುವಂತೆ ಮನಸ್ಸನ್ನು ಧೃಡಪಡಿಸಿಕೊಳ್ಳಬೇಕು. ಅದಕ್ಕೆ ಈಶ್ವರನ ಸತತ ಸ್ಮರಣೆ ಸಾಧನವಾದೀತು. ಆದ್ದರಿಂದ ಆ ಶಾಶ್ವತವಾದ ಸ್ಮರಣೆಯನ್ನು ಕೊಡು ಎಂದು ಈಶ್ವರನನ್ನು ಬೇಡುವುದೇ ನಮ್ಮ ಪ್ರಾರ್ಥನೆಯಾಗಬೇಕು.

ಪದಬಂಧ 5189

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಗುಗ್ಗುರಿ ತಿನ್ನುವತ್ತಲೇ ಲಕ್ಷ್ಯ (2)
3.ಒಪ್ಪವಾಗಿ ಮೂಡಿರುವ ಪ್ರೀತಿ (4)
5.ಈತ ಲಂಕಾಧಿಪತಿ (3)
6.ತಾಯಿಯ ಮನೆ ಕಿಟಕಿ (4)
8.ಗುಡಿಸಲ ಹತ್ತಿರವಿರುವ ಜಲಪಾತ (4)
12.ಮಂದಿಯ ಒಳಿತು (4)
14.ಇದು ಬೇರೆಯವರ ದುಡ್ಡು (4)
15.ನಗರದಲ್ಲಿ ಕೇಳಿಸಿದ ಚರ್ಮ ವಾದ್ಯ (3)
16.ಹಣ್ಣಿನಿಂದ ಮಾಡಿರುವ ಖಾದ್ಯ (4)
17.ಹುಲ್ಲು ಮೊದಲಾದವುಗಳ ಕಟ್ಟು (2)

ಮೇಲಿಂದ ಕೆಳಕ್ಕೆ

1.ಬೇರೆಯವರನ್ನು ಆಶ್ರಯಿಸಿರುವವನು (5)
2.ಒಳ್ಳೆಯ ಸ್ವಭಾವದವನು (4)
3.ತೊಂದರೆಯ ನಿವಾರಣೆಗಾಗಿ ಮಾಡುವ ಪ್ರಾರ್ಥನೆ (4)
4.ಗಮನವಿಡಿ! ಇದು ಸುಲಭವಲ್ಲದುದು! (3)
7.ದೇವತೆಗಳಲ್ಲಿ ಒಂದು ವರ್ಗ (2)
9.ದನವಿರುವ ಆಲಯ (3)
10.ಅಧಿಕವಾದ ಬಡತನ (5)
11.ತಲೆಕೂದಲನ್ನು ತೆಗೆಯುವುದು (2)
12.ಮಂದಿಯ ಮನಸ್ಸು (4)
13.ಮಗ್ನತೆಯನ್ನು ಹೀಗೆನ್ನಿ (4)
14.ಉತ್ತರದವರ ವೇತನ (3)



5188ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಾತ್ಮಿದಾರ 3.ಪರಿಚ್ಛೇದ
5.ರವ 6.ಹಣವಂತ
8.ತಭೂ 9.ಲೋಪ
10.ಮಿತವ್ಯಯ 13.ನಾರಿ
15.ಕಡುಕೋಪ 16.ಮಕರಂದ

ಮೇಲಿಂದ ಕೆಳಕ್ಕೆ:
1.ಬಾಷ್ಪ 2.ದಾನವ
3.ಪರಿಮಾಣ 4.ದಳ್ಳುರಿ
5.ರಣಭೂಮಿ 6.ಹರೆಯ
7.ತಲೋದರಿ 11.ವ್ಯರ್ಥಾಲಾಪ
12.ದಶಕ 13.ನಾಸಿಕ
14.ವಾದ

ಸುಡೊಕು 5575

4		7		8			2	
								8
6		5		9		4		
	2		6				3	5
5		3	2		1	8		9
	1				9		4	2
	6			2				
		8	9					7
	5			3	4		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5574 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	18197
ಇಂದಿನ ಅಂತ್ಯ	18232
	35
ದಿನದ ಕನಿಷ್ಠ	18251

ವಿನಿಮಯ ದರ

$ ಡಾಲರ್	83
£ ಪೌಂಡ್	98.79
€ ಯುರೊ	87.41
¥ ಯೆನ್ (100ಕ್ಕೆ)	63.51

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹567

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620(1620)
ಸೋಯಾ (ರಿಫೈನ್ಡ್)	₹1290(1285)
ಸೂರ್ಯಕಾಂತಿ (ರಿಫೈನ್ಡ್)	₹1335(1335)
ಪಾಮೋಲಿನ್	₹965(960)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1400-1600
ಮಧ್ಯಮ	₹1000-1200
ಸಣ್ಣ	₹500-800

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹135
ಆರ್‌ಎಸ್‌ಎಸ್-5	₹127
ಲಾಟ್	₹121

ಆಕಸ್ಮಿಕ ಲಾಭ ತೆರಿಗೆ ಹೆಚ್ಚಿಸಿದ ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ದೇಶದಲ್ಲಿ ಉತ್ಪಾದನೆಯಾಗುವ ಕಚ್ಚಾ ತೈಲ ಹಾಗೂ ಡೀಸೆಲ್ ಮತ್ತು ವಿಮಾನ ಇಂಧನದ (ಎಟಿಎಫ್) ರಫ್ತಿನ ಮೇಲೆ ವಿಧಿಸುವ ಆಕಸ್ಮಿಕ ಲಾಭ ತೆರಿಗೆಯನ್ನು ಕೇಂದ್ರ ಸರ್ಕಾರ ಹೆಚ್ಚಿಸಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಹೆಚ್ಚಾಗುತ್ತಿರುವ ಕಾರಣ ತೆರಿಗೆ ಜಾಸ್ತಿ ಮಾಡಲಾಗಿದೆ.

ಒಎನ್‌ಜಿಸಿ ಮತ್ತು ಇತರ ಕಂಪನಿಗಳು ಉತ್ಪಾದಿಸುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನುಪ್ರತಿಟನ್‌ಗೆ₹2,100ಕ್ಕೆಹೆಚ್ಚಿಸಲಾಗಿದೆ. ಅದು ಈವರೆಗೆ ₹ 1,700 ಆಗಿತ್ತು. ಡೀಸೆಲ್ ರಫ್ತಿನ ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ಪ್ರತಿ ಲೀಟರ್‌ಗೆ ₹ 6.5ಕ್ಕೆ ಹೆಚ್ಚಿಸಲಾಗಿದೆ. ಅದು ಲೀಟರ್‌ಗೆ ₹5 ಆಗಿತ್ತು. ಎಟಿಎಫ್ ಮೇಲಿನ ಆಕಸ್ಮಿಕ ಲಾಭ ತೆರಿಗೆಯು ಲೀಟರ್‌ಗೆ ₹4.5ಕ್ಕೆ ಹೆಚ್ಚಳವಾಗಿದೆ. ತೆರಿಗೆ ಹೆಚ್ಚಳವು ಮಂಗಳವಾರದಿಂದ ಜಾರಿಗೆ ಬಂದಿದೆ.

ಕಚ್ಚಾ ತೈಲದ ಬೆಲೆಯು ಕಡಿಮೆ ಆಗಿದ್ದ ಕಾರಣ ಡಿಸೆಂಬರ್ 16ರಂದು ಆಕಸ್ಮಿಕ ಲಾಭ ತೆರಿಗೆಯನ್ನು ತಗ್ಗಿಸಲಾಗಿತ್ತು. ಅದಾದ ನಂತರದಲ್ಲಿ ಕಚ್ಚಾ ತೈಲ ಬೆಲೆಯು ಹೆಚ್ಚಳ ಕಂಡಿದೆ.

2021–22ನೇ ಸಾಲಿನ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳ ಸಮೀಕ್ಷೆ ಹೇಳಿಕೆ

ಸರ್ಕಾರಿ ಕಂಪನಿಗಳ ಲಾಭ ಶೇ 50 ಜಿಗಿತ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಕಂಪನಿಗಳ ನಿವ್ವಳ ಲಾಭದ ಪ್ರಮಾಣವು 2021–22ರಲ್ಲಿ ಶೇಕಡ 50.87ರಷ್ಟು ಹೆಚ್ಚಳವಾಗಿದ್ದು, ₹ 2.49 ಲಕ್ಷ ಕೋಟಿಗೆ ತಲುಪಿದೆ. ಒಎನ್‌ಜಿಸಿ, ಇಂಡಿಯನ್ ಆಯಿಲ್ ಕಾರ್ಪೊರೇಷನ್, ಪವರ್ ಗ್ರಿಡ್, ಎನ್‌ಟಿಪಿಸಿ ಮತ್ತು ಎಸ್‌ಎಐಎಲ್ ಲಾಭ ಗಳಿಕೆಯ ವಿಚಾರದಲ್ಲಿ ಮೊದಲ ಐದು ಸ್ಥಾನಗಳಲ್ಲಿವೆ.

ಹಿಂದಿನ ಹಣಕಾಸು ವರ್ಷದಲ್ಲಿ ಸರ್ಕಾರಿ ಸ್ವಾಮ್ಯದ ಕಂಪನಿಗಳ ನಿವ್ವಳ ಲಾಭವು ₹ 1.65 ಲಕ್ಷ ಕೋಟಿ ಆಗಿತ್ತು ಎಂದು 2021–22ನೇ ಸಾಲಿನ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳ ಸಮೀಕ್ಷೆಯು ಹೇಳಿದೆ.

ನಷ್ಟದಲ್ಲಿರುವ ಸರ್ಕಾರಿ ಸ್ವಾಮ್ಯದ ಕಂಪನಿಗಳ ನಿವ್ವಳ ನಷ್ಟವು 2021–22ರಲ್ಲಿ ₹ 15 ಸಾವಿರ ಕೋಟಿಗೆ ಇಳಿಕೆಯಾಗಿದೆ. ಅದು ಹಿಂದಿನ ಹಣಕಾಸು ವರ್ಷದಲ್ಲಿ ₹ 23 ಸಾವಿರ ಕೋಟಿ ಆಗಿತ್ತು.

ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ (ಬಿಎಸ್‌ಎನ್‌ಎಲ್), ಮಹಾನಗರ್ ಟೆಲಿಕಾಂ ನಿಗಮ್ ಲಿಮಿಟೆಡ್ (ಎಂಟಿಎನ್‌ಎಲ್), ಏರ್ ಇಂಡಿಯಾ ಅಸೆಟ್ ಹೋಲ್ಡಿಂಗ್ ಲಿ, ಈಸ್ಟರ್ನ್ ಕೋಲ್‌ಫೀಲ್ಡ್ಸ್ ಲಿಮಿಟೆಡ್ ಮತ್ತು ಅಲಯನ್ಸ್ ಏರ್ ಏವಿಯೇಷನ್ ಲಿಮಿಟೆಡ್ ನಷ್ಟದಲ್ಲಿರುವ ಕಂಪನಿಗಳ ಪೈಕಿ ಪ್ರಮುಖವಾದವು.

'ಕೇಂದ್ರ ಸರ್ಕಾರದ ಉದ್ದಿಮೆಗಳ ಕಾರ್ಯಾಚರಣೆ ವರಮಾನವು 2021–22ರಲ್ಲಿ ₹ 31.95 ಲಕ್ಷ ಕೋಟಿಗೆ ತಲುಪಿದೆ. ಹಿಂದಿನ ವರ್ಷದಲ್ಲಿ ಇದು ₹ 24.08 ಲಕ್ಷ ಕೋಟಿ ಆಗಿತ್ತು. ಅಂದರೆ ಕಾರ್ಯಾಚರಣೆ ವರಮಾನದಲ್ಲಿ ಶೇ 32.65ರಷ್ಟು ಹೆಚ್ಚಳವಾಗಿದೆ' ಎಂದು ಸಮೀಕ್ಷೆಯಲ್ಲಿ ಹೇಳಲಾಗಿದೆ.

ಕೇಂದ್ರ ಸರ್ಕಾರದ ಉದ್ಯಮಗಳು 2021–22ರಲ್ಲಿ ಘೋಷಿಸಿರುವ ಲಾಭಾಂಶದ (ಡಿವಿಡೆಂಡ್) ಮೊತ್ತ ₹ 1.15 ಲಕ್ಷ ಕೋಟಿ.

ಪೆಟ್ರೋಲಿಯಂ (ಸಂಸ್ಕರಣೆ ಮತ್ತು ಮಾರಾಟ), ಕಚ್ಚಾ ತೈಲ ಮತ್ತು ಸಾರಿಗೆ, ಸರಕು ಸಾಗಣೆ ವಲಯಗಳಲ್ಲಿ ಉತ್ತಮ ವಹಿವಾಟು ಕಂಡುಬಂದ ಕಾರಣದಿಂದಾಗಿ ಕಾರ್ಯಾಚರಣೆ ವರಮಾನ ಹೆಚ್ಚಾಗಿದೆ ಎಂದು ಸಮೀಕ್ಷೆ ಹೇಳಿದೆ.

ಕೇಂದ್ರ ಸರ್ಕಾರದ ಉದ್ದಿಮೆಗಳು ಕೇಂದ್ರದ ಬೊಕ್ಕಸಕ್ಕೆ ಎಕ್ಸೈಸ್ ಸುಂಕ, ಕಸ್ಟಮ್ಸ್ ಸುಂಕ, ಜಿಎಸ್‌ಟಿ, ಕಾರ್ಪೊರೇಟ್ ತೆರಿಗೆ, ಕೇಂದ್ರದಿಂದ ಪಡೆದ ಸಾಲಕ್ಕೆ ಬಡ್ಡಿ, ಡಿವಿಡೆಂಡ್ ಮತ್ತು ಇತರ ಸುಂಕಗಳ ಮೂಲಕ ಪಾವತಿಸುವ ಮೊತ್ತವು 2021–22ರಲ್ಲಿ ₹ 5.07 ಲಕ್ಷ ಕೋಟಿ ಆಗಿದೆ. ಇದು ಹಿಂದಿನ ವರ್ಷದಲ್ಲಿ ₹ 4.97 ಲಕ್ಷ ಕೋಟಿ ಆಗಿತ್ತು.

ಕೇಂದ್ರದ ಬೊಕ್ಕಸಕ್ಕೆ ಹೆಚ್ಚು ಆದಾಯ ಕೊಡುವ ಕಂಪನಿಗಳು

ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್, ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್, ಭಾರತ್ ಒಮಾನ್ ರಿಫೈನರೀಸ್, ಚೆನ್ನೈ ಪೆಟ್ರೋಲಿಯಂ ಕಾರ್ಪೊರೇಷನ್.

ಸಿಎಸ್‌ಆರ್ ಅಡಿ ಅತಿಹೆಚ್ಚು ಕೊಡುಗೆ: ಒಎನ್‌ಜಿಸಿ, ಎನ್‌ಟಿಪಿಸಿ, ಇಂಡಿಯನ್ ಆಯಿಲ್, ಎನ್‌ಎಂಡಿಸಿ, ಪವರ್ ಗ್ರಿಡ್.

ಚಿನ್ನ ಧಾರಣೆ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು ಪ್ರತಿ ಗ್ರಾಂಗೆ ₹ 506ರಷ್ಟು ಹೆಚ್ಚಾಗಿ ₹ 55,940ಕ್ಕೆ ತಲುಪಿದೆ. ಜಾಗತಿಕ ಮಾರುಕಟ್ಟೆಗಳಲ್ಲಿಯೂ ಚಿನ್ನದ ಧಾರಣೆ ಹೆಚ್ಚಾಗಿದೆ.

ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹ 1,374 ರಷ್ಟು ಜಾಸ್ತಿಯಾಗಿದ್ದು, ₹ 71,224ಕ್ಕೆ ತಲುಪಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ.

ಮುಂಬೈ ಧಾರಣೆ

ಶೇಂಗಾ

3–01-2023

ಜಾವಾ 70/80(ಹೊಸ)	12150-12200
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	11600-11700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630(1630)
ಒಂದು ವಾರದ ಡೆಲಿವರಿ	1625(1625)
ಸೋಯಾ ಕಚ್ಚಾ	-(-)
ಪಾಮ್ ವಾರದ ಡೆಲಿವರಿ	963(958)
ಸೂರ್ಯಕಾಂತಿ ಎಣ್ಣೆ ಕಚ್ಚಾ	1230(-)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
55350(54950)
ಬೆಳ್ಳಿ ಕೆ.ಜಿ 69200(68350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹ 222-666
ದ್ವಿತಳಿ (ಬಿ.ವಿ) ₹339-836

ಕೊಬ್ಬರಿ ಧಾರಣೆ

ಅರಸೀಕೆರೆ	₹11100-11625
ಕೆ.ಆರ್.ಪೇಟೆ (ಇತರ)	₹7200-8250
ತುರುವೇಕೆರೆ	₹11600-11650

'ಪ್ರಯಾಣಿಕರಿಗೆ ನಿರ್ಬಂಧ ತಾರತಮ್ಯ ಕ್ರಮ'

ಬೀಜಿಂಗ್ (ಪಿಟಿಐ): ಕೋವಿಡ್ ಹಿನ್ನೆಲೆಯಲ್ಲಿ ಚೀನಾದಿಂದ ಬರುವ ಪ್ರಯಾಣಿಕರಿಗೆ ಅನ್ವಯಿಸಿ ವಿವಿಧ ದೇಶಗಳಲ್ಲಿ ನಿರ್ಬಂಧ ಹೇರಿರುವುದು ತಾರತಮ್ಯದ ಕ್ರಮವಾಗಿದೆ ಎಂದು ಚೀನಾ ಆರೋಪಿಸಿದೆ.

ಚೀನಾದ ಪ್ರಯಾಣಿಕರಿಗೆ ಚೀನಾದ ಆಧಾರದಲ್ಲಿ ನಿರ್ಬಂಧ ಹೇರಲಾಗಿದೆ ಎಂದು ಅನ್ನಿಸುತ್ತಿಲ್ಲ. ಕೆಲ ನಿರ್ಬಂಧಗಳು ಸ್ವೀಕಾರಾರ್ಹವಲ್ಲ. ಸೂಕ್ತ ರೀತಿಯಲ್ಲಿ ವಿರೋಧವನ್ನು ದಾಖಲಿಸಲಾಗುವುದು ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಮಾವೊ ನಿಂಗ್ ಹೇಳಿದ್ದಾರೆ.

ಭಾರತ, ಅಮೆರಿಕ, ಆಸ್ಟ್ರೇಲಿಯ, ಕತಾರ್ ಸೇರಿದಂತೆ ಹಲವು ದೇಶಗಳು ಚೀನಾದಿಂದ ಬರುವ ಪ್ರಯಾಣಿಕರ ಮೇಲೆ ನಿರ್ಬಂಧ ಹೇರಿದ್ದರೆ, ಕೆಲವು ರಾಷ್ಟ್ರಗಳು ಚೀನಾ ಪ್ರಯಾಣಿಕರ ಭೇಟಿಯನ್ನೇ ನಿಷೇಧಿಸಿವೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಪ್ರಕಾಶ್ ಮಲ್ಕಿಒಡೆಯರ್, ಹೂವಿನಹಡಗಲಿ

ಪ್ರಶ್ನೆ: ನಾನೊಬ್ಬ ನಿವೃತ್ತ ಬ್ಯಾಂಕ್ ನೌಕರ. 2018ರಲ್ಲಿ ನಿವೃತ್ತಿ ಹೊಂದಿರುವೆ. ಆಗ ಐ.ಟಿ. ವಿವರ ಸಲ್ಲಿಸಿರುತ್ತೇನೆ. ಈಗ ನನಗೆ ಪಿಂಚಣಿ ಹೊರತು ಯಾವುದೇ ಆದಾಯ ಇಲ್ಲ. ತಿಂಗಳ ಪಿಂಚಣಿ ₹ 33,000. ಅದರಲ್ಲಿ ₹ 9,000 ಗೃಹ ಬಳಕೆಯ ಸಾಲಕ್ಕೆ ಜಮಾ ಆಗುತ್ತದೆ. ಉಳಿದಂತೆ ₹ 22,000 ನನ್ನ ಬಳಿ ಉಳಿಯುತ್ತದೆ. ನನ್ನ ಹೆಸರಿನಲ್ಲಿ ಯಾವುದೇ ಠೇವಣಿ ಇರುವುದಿಲ್ಲ. ಉಳಿತಾಯ ಖಾತೆಯಲ್ಲೂ ಹೆಚ್ಚಿನ ಹಣ ಇಲ್ಲ. ಆದಾಯ ತೆರಿಗೆ ಇಲಾಖೆಯಿಂದ ಐ.ಟಿ. ವಿವರ ಸಲ್ಲಿಸಲು ಸೂಚನೆ ಬಂದಿದೆ. ನಾನು ಮಾಹಿತಿ ಸಲ್ಲಿಸಲೇಬೇಕೇ?

ಉತ್ತರ: ಆದಾಯ ತೆರಿಗೆ ಇಲಾಖೆ ತನ್ನಲ್ಲಿರುವ ಮಾಹಿತಿ ಹಾಗೂ ತಂತ್ರಜ್ಞಾನದ ನೆರವಿನಿಂದ ತೆರಿಗೆದಾರರಿಗೆ ಕಾಲಕಾಲಕ್ಕೆ ಎಚ್ಚರಿಕೆಯ ಸೂಚನೆಗಳನ್ನು ಕಳಿಸುತ್ತಿರುತ್ತದೆ. ಆದಾಯವಿದ್ದೂ ತೆರಿಗೆ ವಿವರ ಸಲ್ಲಿಸಲು ಮರೆತಿದ್ದರೆ ಅಥವಾ ಯಾವುದಾದರೂ ತೆರಿಗೆ ಕಡಿತವಾಗಿದ್ದು ನೀವು ವಿವರ ಸಲ್ಲಿಸದಿದ್ದರೂ ಮುನ್ಸೂಚನಾ ಮಾಹಿತಿಯಾಗಿ ಇಲಾಖೆಯು ಸಂದೇಶ ಕಳಿಸುವ ಮೂಲಕ ತೆರಿಗೆದಾರರನ್ನು ಎಚ್ಚರಿಸುತ್ತಿರುತ್ತದೆ. ಇದರ ಅರ್ಥ ತೆರಿಗೆದಾರರು ಕಡ್ಡಾಯವಾಗಿ ವಿವರ ಸಲ್ಲಿಸಬೇಕೆಂದಲ್ಲ. ಕಾನೂನಿನ ಅಡಿ ಯಾವುದೇ ಲೋಪ ಇಲ್ಲ ಎಂಬುದನ್ನು ಖಾತ್ರಿಪಡಿಸಿಕೊಂಡು, ಸಂದೇಶಗಳಿಗೆ ಸ್ಪಂದಿಸದಿದ್ದರೆ ಪರವಾಗಿಲ್ಲ. ಆದರೆ, ನಿರ್ದಿಷ್ಟ ಮಾಹಿತಿಯೊಂದಿಗೆ ನೋಟಿಸ್ ರವಾನಿಸಿದ್ದರೆ ಅದಕ್ಕೆ ಸೂಕ್ತ ಉತ್ತರ ಅಥವಾ ಪರಿಹಾರ ಹುಡುಕಿಕೊಳ್ಳಬೇಕು.

ನೀವು ನಿವೃತ್ತಿಯ ನಂತರ ಪಿಂಚಣಿ ಆದಾಯ ಮಾತ್ರ ಹೊಂದಿದ್ದೀರಿ. ನಿಮ್ಮ ವಾರ್ಷಿಕ ಪಿಂಚಣಿ ಆದಾಯ ₹ 3.96 ಲಕ್ಷ. ನೀವು ಹಿರಿಯ ನಾಗರೀಕರಾಗಿದ್ದರೆ ತೆರಿಗೆ ವಿನಾಯಿತಿ ಆದಾಯ ಮಿತಿ ₹ 3 ಲಕ್ಷ. ನೀವು ವಾರ್ಷಿಕ ₹ 5 ಲಕ್ಷಕ್ಕಿಂತ ಅಧಿಕ ತೆರಿಗೆಗೊಳಪಡುವ ಆದಾಯ ಹೊಂದಿರದ ಕಾರಣ ಆದಾಯ ತೆರಿಗೆಯ ಸೆಕ್ಷನ್ 87ಎ ಅಡಿ ₹ 12,500ರತನಕ ಆದಾಯ ತೆರಿಗೆ ವಿನಾಯಿತಿಗೆ ಅರ್ಹರು. ಆದರೆ, ನಿಮ್ಮ ಆದಾಯ ₹ 3 ಲಕ್ಷಕ್ಕಿಂತ ಅಧಿಕವಿರುವುದರಿಂದ ತೆರಿಗೆ ವಿವರ ಸಲ್ಲಿಸಿ ರಿಯಾಯಿತಿ ಪಡೆಯಬೇಕು. ಯಾವುದೇ ಸಂದರ್ಭದಲ್ಲಿ ತೆರಿಗೆ ವಿವರ ಸಲ್ಲಿಸುವಲ್ಲಿ ಲೋಪವಾದರೆ ದಂಡ ಪಾವತಿಸಬೇಕಾಗುತ್ತದೆ.

ಸಾಮಾನ್ಯವಾಗಿ ಆರ್ಥಿಕ ವರ್ಷ ಮುಗಿದ ನಂತರ ಜುಲೈ 31ರೊಳಗೆ ವೈಯಕ್ತಿಕ ತೆರಿಗೆದಾರರು ವಿವರ ಸಲ್ಲಿಸಬೇಕು. ತಡವಾಗಿ ದಂಡದೊಂದಿಗೆ ಇದನ್ನು ಡಿಸೆಂಬರ್ 31ರೊಳಗೂ ಸಲ್ಲಿಸಬಹುದು. ತದನಂತರ ನಿರ್ದಿಷ್ಟ ವರ್ಷಕ್ಕೆ ಸಂಬಂಧಿಸಿ ವಿವರ ಸಲ್ಲಿಸಬೇಕಾದರೆ, ಆದಾಯ ತೆರಿಗೆ ಇಲಾಖೆಯಿಂದ ನೋಟಿಸ್ ಜಾರಿ ಮಾಡಿದ ನಂತರವಷ್ಟೇ ಅದಕ್ಕೆ ಪ್ರತ್ಯುತ್ತರವಾಗಿ ವಿವರ ಸಲ್ಲಿಸಲು ಸಾಧ್ಯ.

ಊರು ಬೇಡ , ಹೆಸರು ಬೇಡ

ಪ್ರಶ್ನೆ: ನಾನು ಹಿರಿಯ ನಾಗರಿಕ, ಒಂದು ಫ್ಲ್ಯಾಟ್ ಖರೀದಿಸಿ ಒಂದೇ ವರ್ಷದಲ್ಲಿ ಮಾರಾಟ ಮಾಡಿದೆ. ಇದಕ್ಕೆ ಸಂಬಂಧಿಸಿ ಟಿಡಿಎಸ್ ಕಟ್ಟಿದೆ. ಲಾಭಾಂಶದ ಮೇಲೆ ಬಂಡವಾಳ ವೃದ್ಧಿ ತೆರಿಗೆ ಕಟ್ಟಬೇಕಾಗಿದೆ. ತೆರಿಗೆ ಉಳಿಸುವ ಉದ್ದೇಶದಿಂದ ನಿವೇಶನ ಖರೀದಿಸಬೇಕು ಎಂದುಕೊಂಡಿದ್ದೇನೆ.

ಪಡೆದಿರುವ ಲಾಭಕ್ಕೆ ತೆರಿಗೆ ಉಳಿತಾಯ ಮಾಡುವ ಉದ್ದೇಶದಿಂದ ಬಿಲ್ಡರ್ ನಮೂದಿಸುವ ಖರ್ಚಿನ ಹೊರತಾಗಿ ಇತರ ಯಾವ್ಯಾವ ಖರ್ಚುಗಳನ್ನು ಸೇರಿಸಬಹುದು? ನಾನು ಖರೀದಿಸಿದ್ದ ಫ್ಲ್ಯಾಟ್ ನನ್ನ ಮನೆಯಿಂದ ಸುಮಾರು 350 ಕಿ.ಮೀ ದೂರವಿದ್ದು ಮಾರಾಟದ ಸಲುವಾಗಿ 8-10 ಸಲ ಖಾಸಗಿ ವಾಹನದಲ್ಲಿ ಪ್ರಯಾಣಿಸಿದ್ದೇನೆ. ಈ ಖರ್ಚನ್ನು ಸೇರಿಸಬಹುದೇ? ಈ ವ್ಯವಹಾರವನ್ನು ಆದಾಯ ತೆರಿಗೆ ವಿವರ ಸಲ್ಲಿಸುವಾಗ ಘೋಷಿಸಬೇಕೇ?

ಉತ್ತರ: ಯಾವುದೇ ಆಸ್ತಿ ಮಾರಾಟ ಮಾಡಿದಾಗ ಅದಕ್ಕೆ ಸಂಬಂಧಿಸಿದ ಲಾಭ-ನಷ್ಟ ಲೆಕ್ಕ ಹಾಕುವ ಮೊದಲು, ಆ ವ್ಯವಹಾರಕ್ಕೆ ಸಂಬಂಧಿಸಿದ ಅತ್ಯಗತ್ಯ ಖರ್ಚುಗಳನ್ನು ಮಾರಾಟದ ಮೌಲ್ಯದಿಂದ ಕಳೆಯಬಹುದು. ಇಲ್ಲಿ ಪರೋಕ್ಷ ಖರ್ಚನ್ನು ಕಳೆಯಲು ಆಸ್ಪದವಿಲ್ಲ. ಉದಾಹರಣೆಗೆ, ಓರ್ವ ದಲ್ಲಾಳಿಯ ಮುಖಾಂತರ ನಿಮ್ಮ ಆಸ್ತಿ ಮಾರಾಟವಾಗಿದ್ದರೆ, ಅವರಿಗೆ ಪಾವತಿಸಿದ ದಲ್ಲಾಳಿ ಶುಲ್ಕ, ಆಸ್ತಿ ವರ್ಗಾವಣೆಗಾಗಿ ಮಾಲೀಕರ ಪ್ರಯಾಣದ ಖರ್ಚು, ಕಾನೂನು ಸಲಹಾ ವೆಚ್ಚ ಹೀಗೆ ಕೆಲವು ಖರ್ಚುಗಳನ್ನು ಮಾರಾಟದ ಮೊತ್ತದಿಂದ ಕಳೆಯಬಹುದು. ಆದರೆ, ಇದು ವರ್ಗಾವಣೆಗೆ ಸಂಬಂಧಪಟ್ಟ ನೇರ ವೆಚ್ಚವಾಗಿರಬೇಕೇ ವಿನಾ ಇತರ ಖರ್ಚುಗಳಾಗಿರಬಾರದು. ನೀವು ಹಲವು ಬಾರಿ ಭೇಟಿ ನೀಡುವ ಸಂದರ್ಭದಲ್ಲಿ ಹಲವಾರು ಖರೀದಿ ಆಕಾಂಕ್ಷಿಗಳಿಗೆ ನಿಮ್ಮ ಸ್ಥಳ ತೋರಿಸಲು ಖರ್ಚು ಮಾಡಿರಬಹುದು. ಇಲ್ಲಿ ಎಲ್ಲ ಬಾರಿಯೂ ಆದ ಖರ್ಚುಗಳನ್ನು ಕಳೆಯಲು ಆಸ್ಪದವಿಲ್ಲ. ಕೊನೆಯ ಹಂತದ ವರ್ಗಾವಣೆಗೆ ಸಂಬಂಧಿಸಿ ಮಾಡಿರುವ ಪ್ರಯಾಣ ವೆಚ್ಚಕ್ಕೆ ಅಗತ್ಯ ಮಾಹಿತಿಯೊಂದಿಗೆ ವಿನಾಯಿತಿ ಪಡೆಯಬಹುದು. ತೆರಿಗೆ ಇಲಾಖೆ ಈ ಬಗ್ಗೆ ಸಂದೇಹ ವ್ಯಕ್ತಪಡಿಸಿದರೆ ಕೆಲವೊಮ್ಮೆ ಅದೂ ಪ್ರಶ್ನೆಗೊಳಪಡಬಹುದು. ಆದರೆ, ಇದು ಸಣ್ಣ ಮೊತ್ತವಾಗಿರಬಹುದಾದ್ದರಿಂದ ನಿಮ್ಮ ಒಟ್ಟಾರೆ ಮಾರಾಟ ಮೊತ್ತದ ಮೇಲೆ, ತೆರಿಗೆ ಮೇಲೆ ದೊಡ್ಡ ಪ್ರಮಾಣದ ಲಾಭವಾಗಲಾರದು.

ನಿಮ್ಮ ಆಸ್ತಿಯನ್ನು ಒಂದು ವರ್ಷದ ಅವಧಿಯಲ್ಲೇ ಮಾರಾಟ ಮಾಡಿರುತ್ತೀರಿ. ಹೀಗಾಗಿ, ನಿಮ್ಮ ಲಾಭ ಅಲ್ಪಾವಧಿಯ ಬಂಡವಾಳ ಲಾಭ ಆಗಿದ್ದು, ನಿಮ್ಮ ಇತರ ಆದಾಯದೊಂದಿಗೆ ಆಸ್ತಿ ಮಾರಾಟದಿಂದ ಬಂದ ಲಾಭವನ್ನೂ ಸೇರಿಸಿ, ನಿಮಗೆ ಅನ್ವಯವಾಗುವ ವೈಯಕ್ತಿಕ ತೆರಿಗೆ ದರದಂತೆ ತೆರಿಗೆ ಲೆಕ್ಕ ಹಾಕಲಾಗುತ್ತದೆ. ನೀವು ಅಲ್ಪಾವಧಿಯಲ್ಲಿ (24 ತಿಂಗಳೊಳಗೆ) ಆಸ್ತಿ ಮಾರಾಟ ಮಾಡಿರುವುದರಿಂದ, ನಿಮಗೆ ಹೊಸ ಆಸ್ತಿಯಲ್ಲಿ ಹೂಡಿಕೆ ಮಾಡಿದಾಗ ಸಿಗಬಹುದಾದ ವಿಶೇಷ ವಿನಾಯಿತಿಗಳು ಸಿಗುವುದಿಲ್ಲ. ಆದರೆ ನೀವು ಹಿರಿಯ ನಾಗರೀಕರಾಗಿರುವುದರಿಂದ, ಗರಿಷ್ಠ ತೆರಿಗೆ ವಿನಾಯಿತಿ ಆದಾಯ ಮಿತಿ ₹ 3 ಲಕ್ಷಕ್ಕೆ ವಿನಾಯಿತಿ ಸಿಗಲಿದೆ ಹಾಗೂ ₹ 1.50 ಲಕ್ಷದ ತೆರಿಗೆ ಉಳಿತಾಯದ (ಸೆಕ್ಷನ್ 80 ಸಿ ಅಡಿ) ಸಾಂಪ್ರದಾಯಿಕ ಯೋಜನೆಗಳಲ್ಲಿ ಹೂಡಿಕೆ ಮಾಡಬಹುದು.

ನೀವು ಫ್ಲ್ಯಾಟ್ ಮಾರಾಟಕ್ಕೆ ಸಂಬಂಧಿಸಿ ಟಿಡಿಎಸ್ ಮಾಡಿದ್ದರೆ ಒಳ್ಳೆಯದೆ. ಕೊನೆಯ ಹಂತದ ತೆರಿಗೆ ಭಾರ ಒಂದಷ್ಟು ತಗ್ಗಿದಂತಾಗುತ್ತದೆ. ನಿಮ್ಮ ಒಟ್ಟಾರೆ ತೆರಿಗೆಯನ್ನು ವರ್ಷದ ಕೊನೆಗೆ ಲೆಕ್ಕ ಹಾಕುವಾಗ ಈಗಾಗಲೇ ಕಟ್ಟಿರುವ ತೆರಿಗೆಯನ್ನು ವಜಾ ಮಾಡಿ ಉಳಿದ ತೆರಿಗೆಯನ್ನಷ್ಟೇ ಕಟ್ಟಬಹುದು. ಮಾರಾಟದ ಮೊತ್ತವನ್ನು ತೆರಿಗೆ ಸಂಬಂಧಿಸಿ ಘೋಷಿಸುವುದು ಕಾನೂನಿನ ಅಡಿ ಅಗತ್ಯ. ಇದಕ್ಕೆ ಸಂಬಂಧಪಟ್ಟಂತೆ ಸೂಕ್ತ ಮಾಹಿತಿಯೊಂದಿಗೆ ನಿಮ್ಮ ವೈಯಕ್ತಿಕ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ರಾಕೆಟ್ ದಾಳಿ: ರಷ್ಯಾದ 63 ಯೋಧರು ಸಾವು

ಕೀವ್ (ಎ.ಪಿ): ಇರಾನ್ ನಿರ್ಮಿತ ಸ್ಫೋಟಕ ಡ್ರೋನ್ ಬಳಸಿ ಉಕ್ರೇನ್ ಮೇಲೆ ದಾಳಿ ತೀವ್ರಗೊಳಿಸಲು ರಷ್ಯಾ ಸಿದ್ಧತೆ ನಡೆಸಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಆರೋಪಿಸಿದ್ದಾರೆ.

ಉಕ್ರೇನ್ ಸೇನೆ ನಡೆಸಿದ ದಾಳಿಯಲ್ಲಿ ರಷ್ಯಾದ 63 ಯೋಧರು ಸತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಒತ್ತಡ ಕ್ರಮದ ಭಾಗವಾಗಿ ರಷ್ಯಾ ಡ್ರೋನ್ ದಾಳಿಗೆ ಸಿದ್ಧತೆ ನಡೆಸಿರುವ ಬಗ್ಗೆ ಮಾಹಿತಿ ಇದೆ ಎಂದು ಹೇಳಿದ್ದಾರೆ.

ಉಕ್ರೇನ್‌ನ ಪಡೆಗಳು ಡೊನೆಟ್‌ಸ್ಕ ವಲಯದಲ್ಲಿ ರಷ್ಯಾದ ಯೋಧರಿದ್ದ ನೆಲೆಯ ಮೇಲೆ ರಾಕೆಟ್ ದಾಳಿ ನಡೆಸಿದ್ದು 63 ಜನರು ಮೃತಪಟ್ಟಿದ್ದಾರೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಹೇಳಿದೆ.

ಅನಧಿಕೃತ ಮೂಲಗಳ ಪ್ರಕಾರ, ಹೆಚ್ಚಿನ ಸಂಖ್ಯೆಯ ಯೋಧರು ಮೃತಪಟ್ಟಿದ್ದಾರೆ. ಯುದ್ಧ ಆರಂಭವಾದ ನಂತರ ಕಳೆದ 10 ತಿಂಗಳಲ್ಲಿ ರಷ್ಯಾ ಸೇನೆ ಗುರಿಯಾಗಿಸಿ ನಡೆದಿರುವ ಅತಿದೊಡ್ಡ ದಾಳಿ ಇದಾಗಿದೆ. ಆದರೆ, ಉಕ್ರೇನ್ ಸೇನೆ ರಾಕೆಟ್ ದಾಳಿ ನಡೆದ ತಾಣದಲ್ಲಿ ರಷ್ಯಾದ 400ಕ್ಕೂ ಹೆಚ್ಚು ಯೋಧರಿದ್ದರು. ಸುಮಾರು 300 ಮಂದಿ ಗಾಯಗೊಂಡಿದ್ದಾರೆ ಎಂದಿದೆ. ರಾಕೆಟ್ ದಾಳಿಯಿಂದ ಕಟ್ಟಡವೊಂದು ಬಹುತೇಕ ನಾಶಗೊಂಡಿರುವುದು ಉಪಗ್ರಹ ಚಿತ್ರದಲ್ಲಿಯೂ ದಾಖಲಾಗಿದೆ.

ಗಡಿ ಒಪ್ಪಂದ ಪಾಲಿಸದ ಚೀನಾ: ಜೈಶಂಕರ್ ಟೀಕೆ

ವಿಯೆನ್ನಾ (ಪಿಟಿಐ): ಗಡಿ ವಿಷಯಕ್ಕೆ ಸಂಬಂಧಿಸಿದ ಒಪ್ಪಂದಗಳನ್ನು ಚೀನಾ ಗಮನಿಸುತ್ತಿಲ್ಲ. ಗಡಿಯಲ್ಲಿನ ವಾಸ್ತವ ಸ್ಥಿತಿಯನ್ನು ಬದಲಿಸಲು ಯತ್ನಿಸುತ್ತಿದೆ. ಅದೇ ಕಾರಣಕ್ಕಾಗಿ ಗಡಿಯಲ್ಲಿ ಬಿಗುವಿನ ಪರಿಸ್ಥಿತಿಯು ನಿರ್ಮಾಣವಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಇಲ್ಲಿ ಹೇಳಿದರು.

ಗಡಿಯಲ್ಲಿ ಈಗಿರುವ ಸ್ಥಿತಿ ಬದಲಿಸಬಾರದು ಎಂಬ ಬಗ್ಗೆಯೂ ಒಪ್ಪಂದವಾಗಿದೆ. ಆದರೆ, ಇದನ್ನು ಚೀನಾ ಪಾಲಿಸುತ್ತಿಲ್ಲ ಎಂದು ಆಸ್ಟ್ರೀಯಾದ ರಾಷ್ಟ್ರೀಯ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದರು. ಪ್ರತಿಯಾಗಿ ಚೀನಾ ಕೂಡಾ ಇದೇ ರೀತಿ ಆರೋಪ ಮಾಡಿದರೆ ಎಂಬ ಪ್ರಶ್ನೆಗೆ, ಹಾಗೇ ಹೇಳಲಾಗದು. ಈಗ ಸ್ಯಾಟಲೈಟ್ ಚಿತ್ರಗಳಲ್ಲಿ ಹೆಚ್ಚಿನ ಸ್ಪಷ್ಟತೆಯಿದೆ. ಯಾರು ಮೊದಲಿಗೆ ಗಡಿಯನ್ನು ದಾಟಿದ್ದಾರೆ ಎಂಬ ಬಗ್ಗೆ ಹೆಚ್ಚು ಖಚಿತತೆ ಇದೆ ಎಂದು ಪ್ರತಿಪಾದಿಸಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480- 500
ರಾಶಿ ಉತ್ತಮ	550-600
ಜರಡಿ	700 - 750
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,250-1,350
ಕಾಳು ಮೆಣಸು -	490
ಅಡಿಕೆ	
ಬಂಟ್ವಾಳ	
ಹಳತು	48,000-54,500
ಕೋಕ	12,500-25,000
ಭದ್ರಾವತಿ	
ರಾಶಿ	43,799-46,099
ಚನ್ನಗಿರಿ	
ರಾಶಿ	44,401-46,399
ಕಾರ್ಕಳ	
ಹೊಸತು	30,000-37,500
ಹಳತು	40,000-54,500
ಪುತ್ತೂರು	
ಹೊಸತು	32,500-38,500
ಸಾಗರ	
ಬಿಳಿಗೋಟು	27,189-29,869
ಚಾಲಿ	37,899-38,199
ರಾಶಿ	40,890-45,209
ಸಿಪ್ಪೆಗೋಟು	19,632-21,429
ಶಿವಮೊಗ್ಗ	
ಬೆಟ್ಟೆ	44,599-52,800
ಗೊರಬಲು	17,001-34,809
ರಾಶಿ	38,069-46,299
ಸರಕು	45,169-82,005
ಸಿದ್ದಾಪುರ	
ಬಿಳಿಗೋಟು	28,899-33,299
ಚಾಲಿ	37,409-41,599
ಕೋಕ	26,699-31,919
ಹೊಸಚಾಲಿ	26,699-33,099
ಕೆಂಪುಗೋಟು	27,699-32,089
ರಾಶಿ	44,319-45,519
ತಟ್ಟಿಬೆಟ್ಟೆ	39,109-42,699
ಶಿರಸಿ	
ಬೆಟ್ಟೆ	28,009-42,119
ಬಿಳಿಗೋಟು	22,199-35,200
ಚಾಲಿ	34,399-42,451
ಕೆಂಪುಗೋಟು	23,111-34,699
ರಾಶಿ	39,369-45,999
ಯಲ್ಲಾಪುರ	
ಆಪಿ	50,799-52,279
ಬಿಳಿಗೋಟು	24,899-35,769
ಕೋಕ	15,699-29,212
ಹಳೆಚಾಲಿ	36,363-41,933
ಹೊಸಚಾಲಿ	31,299-35,099
ಕೆಂಪುಗೋಟು	26,899-33,799
ರಾಶಿ	44,019-50,100
ತಟ್ಟಿಬೆಟ್ಟೆ	36,090-43,499

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ
ಎಪಿ	13,650	13,700	13,600
ಎಸಿ	6,720	6,800	6,000
ಆರ್‌ಪಿ	8,000	8,100	7,900
ಆರ್‌ಸಿ	4,550	158/kg	4,175

ಉದ್ಯಮಿ ರೀನಾಗೆ 'ಪ್ರವಾಸಿ ಭಾರತೀಯ ಸಮ್ಮಾನ್'

ಜೆರುಸಲೇಂ (ಪಿಟಿಐ): ಪ್ರಸಕ್ತ ಸಾಲಿನ 'ಪ್ರವಾಸಿ ಭಾರತೀಯ ಸಮ್ಮಾನ' ಪ್ರಶಸ್ತಿಗೆ ಇಲ್ಲಿನ ಹೆಸರಾಂತ ಹೋಟೆಲ್ ಉದ್ಯಮಿ ರೀನಾ ವಿನೋದ್ ಪುಷ್ಕರ್ಣ ಅವರು ಆಯ್ಕೆಯಾಗಿದ್ದಾರೆ.

ರೀನಾ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಅವರ ಕುಟುಂಬದ ಆತ್ಮೀಯರು ಹೌದು. ಮಧ್ಯಪ್ರದೇಶದ ಇಂದೋರ್‌ನಲ್ಲಿ ಜ.8 ರಿಂದ ನಡೆಯುವ 'ಪ್ರವಾಸಿ ಭಾರತೀಯ ದಿವಸ್' ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Walk-in

WANTED
B.Sc/ M.Sc. in Geology
B.Sc /M.Sc. in Agriculture / BSW /MSW /BA /MA in Social Science
BA /MA /SSLC /PUC/ Diploma /Data Entry
Interested Can Send Your CV and Marks card Convocation Certificate and photo to the below e-mail ID : mahatmagandhitrust@gmail.com
Place of work : Devanahalli, Nelamangala, Hosakote, Bangalore for 3 years Central GOVT. Project.
Interview held on : 4th to 10th Jan. 2023 @ 3:00 pm to 5:00 pm
Mahathma Gandhi Trust (R)
0821-2420374
93438 28203
99454 25447
www.mahatmagandhitrust.com

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ಅಕ್ಕಿಅಂಗಡಿಗೆ ಸಿಬ್ಬಂದಿ (ಯುವಕ/ ಯುವತಿ) ಬೇಕಾಗಿದ್ದಾರೆ. ಕಂಪ್ಯೂಟರ್ ಅನುಭವ ಇರಬೇಕು. ವಿಳಾಸ: ಎಪಿಎಂಸಿ, ಯಶವಂತಪುರ. ಕೂಡಲೇ ಸಂಪರ್ಕಿಸಿ: 9972375009

Hospital & Medical Jobs

ಬೇಕಾಗಿದ್ದಾರೆ ಪುರುಷರು, ಮಹಿಳೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣ ಸಂಪರ್ಕಿಸಿ ಸಂಬಳ 13000– 23000 (ಸರ್ಕಾರಿ ನೋಂದಾಯಿತ ಸಂಸ್ಥೆ) 9742270055.

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್ ಇದೆ) 8904715353, 8904725353.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/ 9611225344

Drivers

ಪ್ರತಿಷ್ಠಿತ ಕಂಪನಿಗೆ ಡ್ರೈವರ್‌ಗಳು ಬೇಕಾಗಿದ್ದಾರೆ. ಎಚ್.ಎಸ್.ಆರ್. ಲೇಔಟ್ ಸುತ್ತಮುತ್ತಲು ಇರುವವರಿಗೆ ಆದ್ಯತೆ. ಕರೆ ಮಾಡಿ: 8431 881007

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಲಿಮಿಟೆಡ್ ಕಂಪನಿಗಳಿಗೆ ಹಾಗು ಆಫೀಸ್‌ಗಳಿಗೆ ಬಿಲ್ಲಿಂಗ್, ಪ್ರೊಡಕ್ಷನ್, ಮ್ಯಾನೇಜ್ಮೆಂಟ್ ಡಿಪಾರ್ಟ್ಮೆಂಟ್ಗಳಿಗೆ ವಿದ್ಯಾರ್ಹತೆಯಿರುವ, ವಿದ್ಯಾರ್ಹತೆಯಿಲ್ಲದಿರುವ ಯುವಕರು/ಯುವತಿಯರು ಬೇಕಾಗಿದ್ದಾರೆ. ಊಟ,ವಸತಿಯೊಂದಿಗೆ 17,000- 28,000/- 8884611125, 8884611126.

Part-Time Jobs

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿವುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

Wanted

GREAT OPPORTUNITY
for Telecom Vendors to get sub contracting work around Karnataka. Should have a team to carry out Jio activity, Nokia Jio, Nokia VIL, Samsung, Ericson, Microwave.
Send your details to: hr@sunbioit.com
Please Contact: 9686822266

ಬೇಕಾಗಿದ್ದಾರೆ: ವೃದ್ಧರನ್ನು, ರೋಗಿಗಳನ್ನು ಮತ್ತು ಮಗುವನ್ನು ನೋಡಿಕೊಳ್ಳಲು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಮತ್ತು ತರಬೇತಿ ನೀಡಲಾಗುವುದು. ಸಂಬಳ: 15,000/- ರಿಂದ 20,000/-.ಆಸಕ್ತರು ಸಂಪರ್ಕಿಸಿ: 9620985000, 9620557000, 080-41115200. ಮೆರಿಟ್ಟಾ ಕೇರ್, ದೊಡ್ಡ ಬಾಣಸವಾಡಿ, ಬೆಂಗಳೂರು-43.

EDUCATION CORNER

GRACE IAS
Vijayanagar, Bengaluru - 40
Admission Open for
IAS | KAS | PSI
SSC | RRB | Banking
Call : 7899678279

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ವ್ಯಾಪಾರ

Business Offers

Dealers And Stockists

ಗ್ರಾಮ /ನಗರ ಮಟ್ಟದಲ್ಲಿ ROINET ಡಿಜಿಟಲ್ ಬ್ಯಾಂಕಿಂಗ್ ಗ್ರಾಹಕ ಸೇವಾ ಕೇಂದ್ರ ತೆರೆಯಲು ಡೀಲರ್ಸ್ ಬೇಕಾಗಿದ್ದಾರೆ. ಸೇವೆಗಳು: Mini ATM, Money Transfer, Adhar Banking, Railway Ticket, Pan Card, Bus Booking, Flight Ticket. ಜಿಲ್ಲೆಗಳು: ಶಿವಮೊಗ್ಗ ಕಾರವಾರ ಚಿತ್ರದುರ್ಗ ಹಾಸನ, ಚಿಕ್ಕಮಂಗಳೂರು. ಸಂಪರ್ಕಿಸಿ: 9008062377, 9164277549

ವೈಯಕ್ತಿಕ

Announcements

I ANOOP KP S/O K Padmanabhan have sworn in front of the honorable court of the chief metropolitan magistrate Bengaluru by affidavit on 02/01/2023 that the date of birth of my daughter Indulekha Anoop is 26/12/2006 as per her birth record. The same to be updated in her CBSE mark list.

ಪ್ರವಾಸ

Travel

ಶಿವರಾತ್ರಿ, ಪ್ರಯುಕ್ತ ಜನವರಿ ಫೆಬ್ರವರಿ ತಿಂಗಳಲ್ಲಿ 8 ದಿನಗಳ ಕಾಶಿ,ಗಯಾ,ಅಯೋಧ್ಯ ಮಾರ್ಚ್ ಏಪ್ರಿಲ್ ಮೇ ತಿಂಗಳಲ್ಲಿ 12 ದಿನಗಳ ಮುಕ್ತಿನಾಥ ನೇಪಾಳ ನೈಮಿಶಾರಣ್ಯ 14 ದಿನಗಳ ದೆಹಲಿ ಅಮೃತ್‌ಸರ್ ವೈಷ್ಣೋದೇವಿ ಕುಲು ಮನಾಲಿ,ಸಿಮ್ಲಾ 14/21/26 ದಿನಗಳ ಕಾಶಿ,ಗಯಾ ಪ್ರಯಾಗ ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯಮುನೋತ್ರಿ ದೆಹಲಿ 16 ದಿನಗಳ ಪಂಚದ್ವಾರಕ ಮಾತೃಗಯಾ ಉಜ್ಜಯಿನಿ ಓಂಕಾರೇಶ್ವರ ಅಹಮದಾಬಾದ್ 21.01.2023 ಒಳಗಾಗಿ ಪೂರ್ಣ ಪ್ರಯಾಣ ದರವನ್ನು ಪಾವತಿಸಿದವರಿಗೆ ಬಸ್ ದರದಲ್ಲಿ 10% ರಿಯಾಯಿತಿ ಕೊಡಲಾಗುವುದು ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289 9019301300 9448119290

ದೆಹಲಿ ಯಮುನೋತ್ರಿ, ಗಂಗೋತ್ರಿ ಬದರಿನಾಥ್ ಕೇದಾರನಾಥ್ 27.04.2023 03.05.2023 08.05.2023 12.05.2023 ರಿಂದ 14/18 ದಿನಗಳು. ಪುರಿ ಕೊನಾರ್ಕ್ ಭುವನೇಶ್ವರ್ ಕಾಶಿ,ಗಯಾ,ಪ್ರಯಾಗ,ಹರಿದ್ವಾರ್ ದೆಹಲಿ 01.04.2023 07.04.2023 14.04.2023 22.04.2023 ರಿಂದ 14/10 ದಿನಗಳು. ಸೋಮನಾಥ್ ದ್ವಾರಕಾ ಮಾತೃಗಯಾ ಉಜ್ಜಯಿನಿ ಓಂಕಾರೇಶ್ವರ್ 02.02.2023 ರಿಂದ 15/10 ದಿನಗಳು. ವಿಜಯವಾಡ ಭದ್ರಾಚಲಂ ವಿಶಾಖಪಟ್ಟಣಂ ಪಂಚರಾಮ ಮಂದಿರಗಳು 03.02.2023 ರಿಂದ 10 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್, ಚಾಮರಾಜಪೇಟೆ ಬೆಂಗಳೂರು18

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ (ಆರ್)8/2/23 ಕಾಶಿ, ಗಯಾ, ಅಯೋಧ್ಯೆ.11/2/23 ಪೂರಿ, ಕೊನಾರ್ಕ್, ಭುವನೇಶ್ವರ.28/01/23 ರಾಮೇಶ್ವರಂ, ಕನ್ಯಾಕುಮಾರಿ.26/01/23 ಗುರುವಾಯೂರ್, ಕೊಚ್ಚಿನ್, ಟ್ರೀವಂಡ್ರಮ್.9591017782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
*conditions apply
WWW.DHCLASSIFIEDS.COM
For more information Contact: 9731810277 9901641752
9845114560 9886213331 | 080 - 45557163 / 164
Email: dhclassifieds@deccanherald.co.in

ಭಾರತೀಯ ವಿಜ್ಞಾನ ಕಾಂಗ್ರೆಸ್‌ನಲ್ಲಿ 25 ವರ್ಷಗಳ ಮುನ್ನೋಟ ಹಂಚಿಕೊಂಡ ಪ್ರಧಾನಿ ಮೋದಿ

‘ಸಂಶೋಧನೆಗಳು ಸಮಾಜ ತಲುಪಬೇಕು’

ನಾಗ್ಪುರ (ಪಿಟಿಐ): ವಿಜ್ಞಾನಿಗಳು, ಸಂಶೋಧಕರು ಭಾರತವನ್ನು ವಿಜ್ಞಾನ ಕ್ಷೇತ್ರದಲ್ಲಿ ಸ್ವಾವಲಂಬಿಯಾಗಿಸಲು ಪ್ರಯತ್ನಿಸಬೇಕು ಎಂದು ಕರೆ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು, ವಿಜ್ಞಾನಿಗಳು ತಮ್ಮ ಜ್ಞಾನದ ಮೂಲಕ ಜನರ ದೈನಂದಿನ ಜೀವನದಲ್ಲಿ ಬದಲಾವಣೆಗಳನ್ನು ತರಲು ಶ್ರಮಿಸಬೇಕು ಎಂದು ಸೂಚಿಸಿದರು.

ರಾಷ್ಟ್ರಸಂತ ತುಕಡೋಜಿ ಮಹಾರಾಜ್ ನಾಗ್ಪುರ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಐದು ದಿನಗಳ 108ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ ಅನ್ನು ಮಂಗಳವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿದ ಪ್ರಧಾನಿ, ವಿಜ್ಞಾನ ಕ್ಷೇತ್ರದಲ್ಲಿ ಮುಂದಿನ 25 ವರ್ಷಗಳ ಮುನ್ನೋಟದ ಕುರಿತು ವಿವರಿಸಿದರು.

‘ಕ್ವಾಂಟಮ್’ ತಂತ್ರಜ್ಞಾನ, ದತ್ತಾಂಶ ವಿಜ್ಞಾನ, ಹೊಸ ಲಸಿಕೆಗಳ ಅಭಿವೃದ್ಧಿಯತ್ತ ಗಮನ ಕೇಂದ್ರೀಕರಿಸುವುದು, ಹೊಸ ರೋಗಗಳ ಮೇಲೆ ಕಣ್ಗಾವಲಿಡುವುದು ಹಾಗೂ ಸಂಶೋಧನೆ ಕೈಗೊಳ್ಳಲು ಯುವ ಸಮುದಾಯವನ್ನು ಪ್ರೋತ್ಸಾಹಿಸುವುದಕ್ಕೆ ಒತ್ತು ನೀಡಬೇಕು’ ಎಂದು ಪ್ರಧಾನಿ ಸೂಚಿಸಿದರು.

‘ವಿಜ್ಞಾನ ಕ್ಷೇತ್ರದ ಸಾಧನೆಗಳು ಪ್ರಯೋಗಾಲಯದಿಂದ ಹೊರಬಂದು, ಸಮಾಜವನ್ನು ತಲುಪಬೇಕು. ಆಗ ಅದರ ಪರಿಣಾಮವು ಜಾಗತಿಕ ಮಟ್ಟದಿಂದ ತಳಮಟ್ಟದವರೆಗೂ ವ್ಯಾಪಿಸುತ್ತದೆ. ಸಂಶೋಧನೆಗಳು ಜರ್ನಲ್‌ಗಳಿಗೆ ಸೀಮಿತವಾಗದೆ, ಜನರ ದೈನಂದಿನ ಜೀವನದಲ್ಲಿ ಬದಲಾವಣೆ, ಸುಧಾರಣೆಗಳನ್ನು ತರುವಂತಾಗಬೇಕು’ ಎಂದು ಹೇಳಿದರು.

ಯುವ ಸಮುದಾಯವನ್ನು ವಿಜ್ಞಾನದತ್ತ ಆಕರ್ಷಿಸಲು ಪ್ರತಿಭಾನ್ವೇಷಣೆ ಮತ್ತು ಹ್ಯಾಕಥಾನ್‌ಗಳನ್ನು ನಡೆಸಬೇಕು. ಈ ಮೂಲಕ ಗುರು–ಶಿಷ್ಯ ವ್ಯವಸ್ಥೆಯನ್ನು ರೂಪಿಸಬೇಕು ಎಂದು ಪ್ರಧಾನಿ ಮೋದಿ ಅವರು ಕರೆ ನೀಡಿದರು.

ಸಂಶೋಧನಾ ಪ್ರಯೋಗಾಲಯಗಳು ಮತ್ತು ಶೈಕ್ಷಣಿಕ ಸಂಸ್ಥೆಗಳೊಂದಿಗೆ ಸಂಬಂಧ ಹೊಂದಲು ಖಾಸಗಿ ಕಂಪನಿಗಳು ಮತ್ತು ಸ್ಟಾರ್ಟ್‌ಅಪ್‌ಗಳಿಗೆ ಅವಕಾಶಗಳನ್ನು ಒದಗಿಸಬೇಕು ಎಂದು ಪ್ರಧಾನಿ ತಿಳಿಸಿದರು.

ಮಹಾರಾಷ್ಟ್ರದ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ, ಕೇಂದ್ರ ಸಚಿವರಾದ ನಿತಿನ್ ಗಡ್ಕರಿ ಮತ್ತು ಜಿತೇಂದ್ರ ಸಿಂಗ್, ಮುಖ್ಯಮಂತ್ರಿ ಏಕನಾಥ್ ಶಿಂದೆ ಮತ್ತು ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಉಪಸ್ಥಿತರಿದ್ದರು.

108ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ ಅನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ಮಂಗಳವಾರ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಮಾತನಾಡಿದರು —ಪಿಟಿಐ ಚಿತ್ರ

ಪಿಎಸ್‌ಯುನಿಂದ ಅಣುಸ್ಥಾವರ: ಕೇಂದ್ರ ಚಿಂತನೆ

ಅಣು ವಿದ್ಯುತ್ ಸ್ಥಾವರಗಳ ನಿರ್ಮಾಣದಲ್ಲಿ ಸಾರ್ವಜನಿಕ ಉದ್ದಿಮೆಗಳ ವಲಯ ಕೂಡಾ ಪಾಲ್ಗೊಳ್ಳುವಂತೆ ಮಾಡಲು ಭಾರತ ಸನ್ನದ್ಧವಾಗಿದೆ. 2070ರ ವೇಳೆಗೆ ಇಂಗಾಲ ಸೂಸುವಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸುವ ಗುರಿ ಸಾಧಿಸುವ ನಿಟ್ಟಿನಲ್ಲಿ ಈ ಯೋಜನೆ ಕೈಗೊಳ್ಳಲಾಗಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ಅವರು ಮಂಗಳವಾರ ಹೇಳಿದ್ದಾರೆ.

ನಾಗ್ಪುರದಲ್ಲಿ ಆಯೋಜನೆ ಆಗಿರುವ 108ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ ವೇಳೆ ಸುದ್ದಿಗಾರರ ಎದುರು ಮಾತನಾಡಿದ ಅವರು, ಅಣು ವಿದ್ಯುತ್ ಸ್ಥಾವರಗಳನ್ನು ನಿರ್ಮಿಸುವ ನಿಟ್ಟಿನಲ್ಲಿ ಪರಮಾಣು ವಲಯಕ್ಕೆ ಸಾರ್ವಜನಿಕ ಉದ್ದಿಮೆಗಳ ವಲಯದ ಜೊತೆ ಜಂಟಿಯಾಗಿ ಕಾರ್ಯನಿರ್ವಹಿಸಲು ಅನುವು ಮಾಡಲಾಗುವುದು. ಪರಮಾಣು ಶಕ್ತಿ ಕಾಯ್ದೆಗೆ 2015ರಲ್ಲಿ ತಿದ್ದುಪಡಿ ತಂದಿದ್ದ ಕೇಂದ್ರ ಸರ್ಕಾರವು ಭಾರತೀಯ ಪರಮಾಣು ಶಕ್ತಿ ನಿಗಮ ನಿಯಮಿತ (ಎನ್‌ಪಿಸಿಐಎಲ್) ಮತ್ತು ಸಾರ್ವಜನಿಕ ಉದ್ದಿಮೆಗಳಿಗೆ ಜಂಟಿಯಾಗಿ ಅಣು ವಿದ್ಯುತ್ ಸ್ಥಾವರ ನಿರ್ಮಿಸಲು ಅವಕಾಶ ನೀಡಿತ್ತು ಎಂದು ಹೇಳಿದರು.

‘ವೈಜ್ಞಾನಿಕ ಸಂಶೋಧನೆ ಆರ್ಥಿಕ ಪ್ರಗತಿಗೆ ಪೂರಕವಾಗಿರಲಿ’

‘ವೈಜ್ಞಾನಿಕ ಸಂಶೋಧನೆಗಳು ಆರ್ಥಿಕ ಪ್ರಗತಿಗೆ ಪೂರಕವಾಗಿರಬೇಕು. ಇದು ಮುಂದಿನ 25 ವರ್ಷಗಳ ಅವಧಿಗೆ ಭಾರತದ ವಿಜ್ಞಾನ ಕ್ಷೇತ್ರದ ಕಾರ್ಯಸೂಚಿಯೂ ಆಗಿರಬೇಕು’ ಎಂಬ ಆಶಯವನ್ನು ಪ್ರಧಾನಿ ನರೇಂದ್ರ ಮೋದಿ ವ್ಯಕ್ತಪಡಿಸಿದರು.

ಆದರೆ, ಪ್ರಧಾನಿಯ ಆಶಯಕ್ಕೆ ಹಿರಿಯ ವಿಜ್ಞಾನಿಗಳು ಪ್ರತಿಕ್ರಿಯಿಸಿದ್ದು, ‘ದೀರ್ಘ ಕಾಲೀನ ಗುರಿ ಕೇಂದ್ರಿತ ಸಂಶೋಧನೆಗೆ ಸರ್ಕಾರ ಒತ್ತು ನೀಡಬೇಕು’ ಎಂದಿದ್ದಾರೆ.

‘ವೈಜ್ಞಾನಿಕ ಸಂಶೋಧನೆಗೆ ಸಂಬಂಧಿಸಿದ ಹೂಡಿಕೆ ಕೂಡ ದೀರ್ಘಾವಧಿ, ಮಧ್ಯಮಾವಧಿ ಹಾಗೂ ಅಲ್ಪಾವಧಿ ಗುರಿಯನ್ನು ಹೊಂದಿರಬೇಕು. ಇಂಥ ಹೂಡಿಕೆಗೆ ಅಗತ್ಯವಿರುವ ಸಂಪನ್ಮೂಲಗಳನ್ನು ಕ್ರೋಡೀಕರಿಸಬೇಕು’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಹಿರಿಯ ವಿಜ್ಞಾನಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಚಿನ್ನದ ಶಾಯಿಯ ಕುರಾನ್ ಪ್ರದರ್ಶನ

ವಿಜ್ಞಾನ ಕಾಂಗ್ರೆಸ್‌ನಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಸಂರಕ್ಷಿಸಿರುವ 16ನೇ ಶತಮಾನದ, ಚಿನ್ನದ ಶಾಯಿಯಲ್ಲಿ ಬರೆದಿರುವ ಪವಿತ್ರ ಕುರಾನ್ ಪ್ರತಿಯನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

ವಸ್ತುಪ್ರದರ್ಶನದಲ್ಲಿ ನಾಗ್ಪುರ ಮೂಲದ ಪ್ರತಿಷ್ಠಾನವೊಂದರ ಮಳಿಗೆಯಲ್ಲಿ ಕುರಾನ್ ಮತ್ತು ಶತಮಾನಗಳ ಹಳೆಯ ಅಪರೂಪದ ಕೈಬರಹಗಳ ಪ್ರತಿಗಳನ್ನು ಇಡಲಾಗಿತ್ತು.

ಇಡೀ ಜಗತ್ತಿನಲ್ಲಿ ಇಂಥ ಪವಿತ್ರ ಪುಸ್ತಕದ ನಾಲ್ಕೇ ನಾಲ್ಕು ಪ್ರತಿಗಳಿವೆ ಎಂದು ಸಂಘಟನೆಯ ಅಧಿಕಾರಿಗಳು ತಿಳಿಸಿದರು.

‘ಕ್ವಾಂಟಮ್’ನತ್ತ ಗಮನ: ‘ಕ್ವಾಂಟಮ್ ಕಂಪ್ಯೂಟಿಂಗ್’ ಕ್ಷೇತ್ರದ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸುವ ಅಗತ್ಯವಿದೆ ಎಂದು ಸಂಶೋಧಕರಿಗೆ ತಿಳಿಸಿದ ಅವರು, ಈ ಮೂಲಕ ವಿಶ್ವದ ನಾಯಕರಾಗಿ ಹೊರಹೊಮ್ಮಲು ಅವಕಾಶಗಳಿವೆ ಎಂದರು.

ಭಾರತವು ‘ಕ್ವಾಂಟಮ್’ ಕಂಪ್ಯೂಟರ್‌ಗಳು, ರಸಾಯನ ವಿಜ್ಞಾನ, ಸಂವಹನ, ಸೆನ್ಸಾರ್, ‘ಕ್ರಿಪ್ಟೋಗ್ರಫಿ’ ಕ್ಷೇತ್ರಗಳಲ್ಲಿ ವೇಗವಾಗಿ ಬೆಳೆಯುತ್ತಿದೆ. ಯುವ ಸಂಶೋಧಕರು ಮತ್ತು ವಿಜ್ಞಾನಿಗಳು ‘ಕ್ವಾಂಟಮ್’ ಕ್ಷೇತ್ರದಲ್ಲಿ ಪರಿಣತಿ ಹೊಂದುವಂತೆ ಅವರು ತಿಳಿಸಿದರು.

ಕೃತಕ ಬುದ್ಧಿಮತ್ತೆ, ವರ್ಚುವಲ್ ರಿಯಾಲಿಟಿ ಸೇರಿದಂತೆ ವಿವಿಧ ವಿಷಯಗಳನ್ನು ತಮ್ಮ ಆದ್ಯತೆ ಪಟ್ಟಿಯಲ್ಲಿ ಸೇರಿಸಿಕೊಳ್ಳುವಂತೆ ಕರೆ ನೀಡಿದ ಪ್ರಧಾನಿ, ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ಕೈಗೊಳ್ಳುವಂತೆ ಸೂಚಿಸಿದರು.

ಒಡಿಶಾದಲ್ಲಿ ಮತ್ತೊಬ್ಬ ರಷ್ಯಾ ವ್ಯಕ್ತಿ ನಿಗೂಢ ಸಾವು

ಪಾರಾದೀಪ್, ಒಡಿಶಾ (ಪಿಟಿಐ): ರಷ್ಯಾದ ಮತ್ತೊಬ್ಬ ವ್ಯಕ್ತಿಯ ಮೃತದೇಹವು ಒಡಿಶಾದಲ್ಲಿ ಮಂಗಳವಾರ ಪತ್ತೆಯಾಗಿದೆ. ಕಳೆದ 15 ದಿನಗಳಲ್ಲಿ ಈ ರೀತಿಯ ಮೂರನೇ ಪ್ರಕರಣ ಇದಾಗಿದೆ.

ಮೃತವ್ಯಕ್ತಿಯನ್ನು ಮಿಲ್ಯೆಯಾಕೊವ್ ಸರ್ಗೈ(51) ಎಂದು ಗುರುತಿಸಲಾಗಿದೆ. ಜಗತ್‌ಸಿಂಗ್‌ಪುರದ ಪಾರಾದೀಪ್ ಬಂದರಿನಲ್ಲಿ ಲಂಗರು ಹಾಕಿದ್ದ ಹಡಗಿನಲ್ಲಿ ಅವರ ಮೃತದೇಹ ಬೆಳಿಗ್ಗೆ 4.30ಕ್ಕೆ ಪತ್ತೆಯಾಗಿದೆ. ಬಾಂಗ್ಲಾದೇಶದ ಚಿತ್ತಗಾಂಗ್ ಬಂದರಿನಿಂದ ಹೊರಟಿದ್ದ ಈ ಹಡಗು ಪಾರಾದೀಪ ಮೂಲಕ ಮುಂಬೈಗೆ ತೆರಳುತ್ತಿತ್ತು. ಅವರು ಆ ಹಡಗಿನ ಮುಖ್ಯ ಎಂಜಿನಿಯರ್ ಆಗಿದ್ದರು ಎನ್ನಲಾಗಿದೆ.

ಅವರ ಸಾವಿನ ಕಾರಣ ಸದ್ಯ ತಿಳಿದುಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಡಿಸೆಂಬರ್ ತಿಂಗಳ ಕೊನೆಯಲ್ಲಿ ರಷ್ಯಾ ಶಾಸಕ ಪಾವೆಲ್ ಆ್ಯಂಟೊವ್(65) ಒಡಿಶಾದ ರಾಯಗಡ ಪಟ್ಟಣದ ಹೋಟೆಲ್ ಒಂದರ ಮೂರನೇ ಅಂತಸ್ತಿನಿಂದ ಬಿದ್ದು ಮೃತಪಟ್ಟಿದ್ದರು. ಅವರ ಸ್ನೇಹಿತ ವ್ಲಾದಿಮಿರ್ ಬಿಡೆನೋವ್ (61) ಡಿಸೆಂಬರ್ 22ರಂದು ಹೋಟೆಲ್ ಕೋಣೆಯಲ್ಲಿ ಮೃತಪಟ್ಟಿದ್ದರು. ಈ ಎರಡೂ ಪ್ರಕರಣಗಳ ತನಿಖೆಯನ್ನು ಒಡಿಶಾ ಪೊಲೀಸರು ನಡೆಸುತ್ತಿದ್ದಾರೆ.

‘ಮಹದಾಯಿ: ಗೋವಾದಿಂದ ಸಹಿ ಸಂಗ್ರಹ ಅಭಿಯಾನ’

ಪಣಜಿ: ಮಹದಾಯಿ ಯೋಜನೆಯ ವಿಸ್ತೃತಯೋಜನಾ ವರದಿಗೆ (ಡಿಪಿಆರ್) ಕೇಂದ್ರ ಜಲ ಆಯೋಗವು (ಸಿಡಬ್ಲ್ಯುಸಿ) ಒಪ್ಪಿಗೆ ನೀಡಿದ ಬೆನ್ನಲ್ಲೇ, ಗೋವಾದ ಬಿಜೆಪಿ ಸರ್ಕಾರವು ಯೋಜನೆಯ ವಿರುದ್ಧ ರಾಜ್ಯದಾದ್ಯಂತ ಸಹಿ ಸಂಗ್ರಹ ಅಭಿಯಾನ ಪ್ರಾರಂಭಿಸಲು ಮುಂದಾಗಿದೆ.

ಈ ಕುರಿತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸದಾನಂದ ಶೇಟ್ ತಾನಾವಡೆ ಅವರು ಮಂಗಳವಾರ ಘೋಷಣೆ ಮಾಡಿದರು. ‘ಈ ಅಭಿಯಾನದ ಮುಖ್ಯ ಉದ್ದೇಶ ಗೋವಾದ ಹಿತಾಸಕ್ತಿಯನ್ನು ಕಾಪಾಡುವುದು’ ಎಂದರು.

‘ಮಹದಾಯಿಯನ್ನು ರಕ್ಷಿಸುವ ಸಲುವಾಗಿ ಸಹಿ ಸಂಗ್ರಹ ಅಭಿಯಾನ ಮಾಡಲಾಗುವುದು. ಡಿಪಿಆರ್‌ಗೆ ಒಪ್ಪಿಗೆ ಸಿಕ್ಕಿರುವ ಬಗ್ಗೆ ರಾಜ್ಯದ ಜನರು ಆಕ್ರೋಶಗೊಂಡಿದ್ದಾರೆ. ಇದು ಒಂದು ಏಕಪಕ್ಷೀಯ ನಿರ್ಧಾರವಾಗಿದೆ’ ಎಂದರು.

> **ಗೋವಾಕ್ಕೆ ನ್ಯಾಯ ದೊರಕಿಸಿಕೊಡುವಂತೆ ಪ್ರಧಾನಿ ಮೋದಿ ಅವರಿಗೆ ಪ್ರತಿಯೊಬ್ಬ ಗೋವಾ ವಾಸಿಯು ಪತ್ರ ಬರೆಯಬೇಕು**
> **ಸದಾನಂದ ಶೇಟ್ ತಾನಾವಡೆ**
> ಬಿಜೆಪಿ ಗೋವಾ ರಾಜ್ಯ ಘಟಕದ ಅಧ್ಯಕ್ಷ

‘ಮಹದಾಯಿ ಕುರಿತು ಹಲವು ಅರ್ಜಿಗಳು ಸುಪ್ರೀಂಕೋರ್ಟ್‌ ಮುಂದಿದೆ. ಈ ಕುರಿತು ನ್ಯಾಯಾಲಯವು ಆದೇಶ ಹೊರಡಿಸುವ ವರೆಗೂ ಕೇಂದ್ರವು ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ರಾಜ್ಯ ನಾಯಕತ್ವದ ನಿರ್ಧಾರವಾಗಿದೆ’ ಎಂದರು.

‘ಯೋಜನೆಗೆ ನೀಡಿರುವ ಒಪ್ಪಿಗೆಯನ್ನು ಹಿಂಪಡೆಯಬೇಕು ಎಂದು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ಅವರಿಗೆ ನಿರ್ಣಯ ಕಳುಹಿಸಿಕೊಡಲಾಗುವುದು’ ಎಂದರು.

‘ಲೈಂಗಿಕ ದೌರ್ಜನ್ಯ ನಡೆದಿರುವುದಕ್ಕೆ ಕುರುಹು ಸಿಕ್ಕಿಲ್ಲ’

ಕಾರಿನಡಿ ಸಿಲುಕಿದ್ದ ಯುವತಿ ಮೃತದೇಹ ಎಳೆದೊಯ್ದಿದ್ದ ಪ್ರಕರಣ: ಮರಣೋತ್ತರ ಪರೀಕ್ಷೆ ಪೂರ್ಣ

ನವದೆಹಲಿ (ಪಿಟಿಐ): ‘ಯುವತಿಯ ಮೃತದೇಹದ ಮರಣೋತ್ತರ ಪರೀಕ್ಷೆಯ ಪ್ರಾಥಮಿಕ ವರದಿ ಕೈಸೇರಿದೆ. ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎನ್ನಲು ಯಾವ ಕುರುಹೂ ಸಿಕ್ಕಿಲ್ಲ. ಆಕೆಯ ಗುಪ್ತಾಂಗದಲ್ಲೂ ಗಾಯಗಳಾಗಿಲ್ಲ’ ಎಂದು ದೆಹಲಿ ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ದೆಹಲಿ ಹೊರಭಾಗದ ಸುಲ್ತಾನ್ ಪುರಿಯಲ್ಲಿ ಸ್ಕೂಟಿಗೆ ಕಾರು ಡಿಕ್ಕಿ ಹೊಡೆದಿದ್ದರಿಂದಾಗಿ 20 ವರ್ಷದ ಅಂಜಲಿ ಸಿಂಗ್ ಭಾನುವಾರ ಮೃತಪಟ್ಟಿದ್ದರು. ಕಾರಿನಡಿ ಸಿಲುಕಿದ್ದ ಆಕೆಯ ಮೃತದೇಹವನ್ನು ಸುಮಾರು 12 ಕಿ.ಮೀ. ವರೆಗೂ ಎಳೆದೊಯ್ಯಲಾಗಿತ್ತು.

ಮೌಲಾನ ಆಜಾದ್ ವೈದ್ಯಕೀಯ ಕಾಲೇಜಿನಲ್ಲಿ (ಎಂಎಎಂಸಿ) ಸೋಮವಾರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಗಿತ್ತು. ಇದರ ವರದಿಯನ್ನು ವೈದ್ಯರು ಮಂಗಳವಾರ ಪೊಲೀಸರಿಗೆ ಒಪ್ಪಿಸಿದ್ದಾರೆ.

‘ಯುವತಿಯನ್ನು ಎಳೆದೊಯ್ದಿರುವುದರಿಂದ ಆಕೆಯ ತಲೆ, ಬೆನ್ನುಮೂಳೆ ಮತ್ತು ಮೊಣಕಾಲುಗಳಿಗೆ ಗಂಭೀರ ಗಾಯಗಳಾಗಿವೆ. ಅಧಿಕ ರಕ್ತಸ್ರಾವ ಹಾಗೂ ಆಘಾತಕ್ಕೊಳಗಾಗಿ ಆಕೆ ಮೃತಪಟ್ಟಿರುವ ಸಾಧ್ಯತೆ ಇದೆ’ ಎಂದು ವೈದ್ಯರು ಹೇಳಿದ್ದಾರೆ.

‘ರಾಸಾಯನಿಕ ವಿಶ್ಲೇಷಣೆ ಹಾಗೂ ಜೈವಿಕ ಮಾದರಿಯ ವರದಿಗಳು ಕೈಸೇರಿದ ಬಳಿಕವೇ ಆಕೆಯ ಸಾವಿಗೆ ನೈಜ ಕಾರಣ ಏನೆಂಬುದು ಗೊತ್ತಾಗಲಿದೆ’ ಎಂದು ತಿಳಿಸಿದ್ದಾರೆ.

‘ಯುವತಿ ಹಾಗೂ ಆಕೆಯ ಸ್ನೇಹಿತೆ ಹೋಟೆಲ್‌ನಲ್ಲಿ ಪಾರ್ಟಿ ಮಾಡುತ್ತಿದ್ದರು. ಅವರ ಜೊತೆ ಇನ್ನೂ 4–5 ಮಂದಿ ಇದ್ದರು’ ಎಂದು ಮೂಲಗಳು ತಿಳಿಸಿವೆ.

‘ಕಾರಿಗೆ ಅಂಟಿದ್ದ ರಕ್ತದ ಮಾದರಿಯನ್ನು ವಿಧಿ ವಿಜ್ಞಾನ ತಂಡವು ಸಂಗ್ರಹಿಸಿದೆ. ಯುವತಿಯ ಮೃತದೇಹ ದೊರೆತ ಸ್ಥಳದಲ್ಲಿ ಕಲೆಹಾಕಲಾಗಿದ್ದ ರಕ್ತದ ಮಾದರಿ ಜೊತೆ ಅದನ್ನು ಹೋಲಿಕೆ ಮಾಡಲಿದೆ’ ಎಂದೂ ಹೇಳಿವೆ.

ಘಟನೆ ಖಂಡಿಸಿ ದೆಹಲಿಯ ವಿವಿಧೆಡೆ ವ್ಯಾಪಕ ಪ್ರತಿಭಟನೆಗಳು ನಡೆಯುತ್ತಿದ್ದು, ಸಂತ್ರಸ್ತೆಯ ಮನೆಯ ಹೊರಭಾಗದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ.

ಶಾಸಕರ ನಿಯೋಗದಿಂದ ಕಮಿಷನರ್ ಭೇಟಿ: ದೆಹಲಿಯ ಆಮ್ ಆದ್ಮಿ ಪಕ್ಷದ ಶಾಸಕರ ನಿಯೋಗವು ಮಂಗಳವಾರ ದೆಹಲಿ ಪೊಲೀಸ್ ಕಮಿಷನರ್ ಸಂಜಯ್ ಅರೋರಾ ಅವರನ್ನು ಭೇಟಿಯಾಗಿದ್ದು, ಆರೋಪಿಗಳನ್ನು ಕಠಿಣ ಶಿಕ್ಷೆಗೆ ಗುರಿಪಡಿಸುವಂತೆ ಆಗ್ರಹಿಸಿದೆ.

‘ಡಿಸಿಪಿ ಹರೇಂದ್ರ ಸಿಂಗ್ ಅವರು ಆರೋಪಿಗಳನ್ನು ರಕ್ಷಿಸುತ್ತಿದ್ದು, ಅವರನ್ನು ಕೂಡಲೇ ಅಮಾನತುಗೊಳಿಸಬೇಕು. ಆರೋಪಿಗಳು ಪ್ರಭಾವಿಗಳಾಗಿದ್ದು, ಯಾರ ಒತ್ತಡಕ್ಕೂ ಮಣಿಯದೆ ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕು’ ಎಂದೂ ಒತ್ತಾಯಿಸಿದೆ.

ಅಂತ್ಯ ಸಂಸ್ಕಾರ: ಕುಟುಂಬದ ಸದಸ್ಯರು ಹಾಗೂ ಬಂಧುಗಳ ಸಮ್ಮುಖದಲ್ಲಿ ಅಂಜಲಿ ಸಿಂಗ್ ಅವರ ಅಂತ್ಯಸಂಸ್ಕಾರವನ್ನು ಅಮನ್ ವಿಹಾರದಲ್ಲಿ ಮಂಗಳವಾರ ಸಂಜೆ ನೆರವೇರಿಸಲಾಗಿದೆ.

ಕುಟುಂಬದವರ ಸಮ್ಮುಖದಲ್ಲಿ ಮಂಗಳವಾರ ಸಂಜೆ ಅಂಜಲಿ ಸಿಂಗ್ ಅವರ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು —ಪಿಟಿಐ ಚಿತ್ರ

ಸ್ನೇಹಿತೆಯ ಹೇಳಿಕೆ ದಾಖಲು

‘ಘಟನೆ ವೇಳೆ ಯುವತಿಯ ಜೊತೆ ಆಕೆಯ ಸ್ನೇಹಿತೆ ಇದ್ದಳು. ಸ್ಕೂಟಿಯ ಹಿಂಬದಿ ಆಸನದಲ್ಲಿ ಕುಳಿತಿದ್ದ ಆಕೆ, ಅಪಘಾತ ನಡೆದ ಕೂಡಲೇ ಭಯಭೀತಳಾಗಿ ಸ್ಥಳದಿಂದ ಪರಾರಿಯಾಗಿದ್ದಳು’ ಎಂದು ಪೊಲೀಸರು ಹೇಳಿದ್ದಾರೆ.

‘ಯುವತಿಯ ಸ್ನೇಹಿತೆಯು ಘಟನೆ ಕುರಿತು ಯಾರ ಜೊತೆಯೂ ಮಾತನಾಡಿಲ್ಲ. ಆಕೆ ವಿಚಾರಣೆಗೆ ಸಹಕರಿಸುತ್ತಿದ್ದಾಳೆ. ಸಿಆರ್‌ಪಿಸಿಯ ಸೆಕ್ಷನ್ 164ರ ಅಡಿಯಲ್ಲಿ ಆಕೆಯ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ. ಇದನ್ನು ಪ್ರಕರಣದ ಮಹತ್ವದ ಸಾಕ್ಷ್ಯವೆಂದು ಪರಿಗಣಿಸಲಾಗುತ್ತದೆ’ ಎಂದು ದೆಹಲಿಯ ವಿಶೇಷ ಪೊಲೀಸ್ ಆಯುಕ್ತ (ಕಾನೂನು ಮತ್ತು ಸುವ್ಯವಸ್ಥೆ) ಸಾಗರ್ ಪ್ರೀತ್ ಹೂಡಾ ಹೇಳಿದ್ದಾರೆ.

‘ಹೊಸ ವರ್ಷದ ಪಾರ್ಟಿ ಬಳಿಕ ಅಂಜಲಿ ಭಾನುವಾರ ರಾತ್ರಿ 1.45ರ ಸುಮಾರಿಗೆ ಹೋಟೆಲ್‌ನಿಂದ ತೆರಳುತ್ತಿದ್ದ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ. ಆಕೆ ಗುಲಾಬಿ ವರ್ಣದ ಟಿ–ಶರ್ಟ್ ಧರಿಸಿದ್ದರೆ, ಸ್ನೇಹಿತೆ ಕೆಂಪು ಬಣ್ಣದ ಉಡುಪು ತೊಟ್ಟಿದ್ದಳು’ ಎಂದೂ ಮಾಹಿತಿ ನೀಡಿದ್ದಾರೆ.

ಯುವತಿಯು ಹೋಟೆಲ್ ಹೊರಭಾಗದಲ್ಲಿ ಮಹಿಳೆಯೊಬ್ಬರ ಜೊತೆ ಗಲಾಟೆ ಮಾಡುತ್ತಿರುವ ದೃಶ್ಯವೂ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

₹10 ಲಕ್ಷ ಪರಿಹಾರ

ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಮೃತ ಯುವತಿಯ ಕುಟುಂಬಕ್ಕೆ ₹10 ಲಕ್ಷ ಪರಿಹಾರ ಘೋಷಿಸಿದ್ದಾರೆ.

ಯುವತಿಯ ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದು, ಅವರ ಚಿಕಿತ್ಸೆಯ ಸಂಪೂರ್ಣ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂದಿದ್ದಾರೆ.

ಬಿಜೆಪಿ ತೊರೆದ ನಟಿ ಗಾಯತ್ರಿ

ಚೆನ್ನೈ (ಪಿಟಿಐ): ಕಳೆದ ವರ್ಷ ನವೆಂಬರ್‌ನಲ್ಲಿ ಬಿಜೆಪಿಯಿಂದ ಅಮಾನತುಗೊಂಡಿದ್ದ ನಟಿ ಗಾಯತ್ರಿ ರಘುರಾಮ್ ಮಂಗಳವಾರ ಪಕ್ಷಕ್ಕೆ ರಾಜೀನಾಮೆ ಸಲ್ಲಿಸುವುದಾಗಿ ಘೋಷಿಸಿದ್ದು, ‘ತಮಿಳುನಾಡಿನ ಬಿಜೆಪಿ ಘಟಕದಲ್ಲಿ ಮಹಿಳೆಯರು ಸುರಕ್ಷಿತವಾಗಿಲ್ಲ. ಅಲ್ಲಿ ನಿಜವಾದ ಕಾರ್ಯಕರ್ತರಿಗೆ ಬೆಲೆ ಇಲ್ಲ’ ಎಂದೂ ಆರೋಪಿಸಿದ್ದಾರೆ.

ಪಕ್ಷ ತೊರೆಯುವ ತಮ್ಮ ನಿರ್ಧಾರಕ್ಕೆ ತಮಿಳುನಾಡು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಅವರನ್ನು ಗಾಯತ್ರಿ ದೂರಿದ್ದಾರೆ. ಗಾಯತ್ರಿ ಅವರ ಆರೋಪಗಳನ್ನು ನಿರಾಕರಿಸಿರುವ ಪಕ್ಷದ ಹಿರಿಯ ನಾಯಕರೊಬ್ಬರು, ಆಕೆಯಿಂದ ಪಕ್ಷಕ್ಕೆ ನಷ್ಟವಿಲ್ಲ. ಆಕೆಯ ಮಾತುಗಳಿಗೆ ಪ್ರಾಮುಖ್ಯತೆ ನೀಡಬೇಕಾಗಿಲ್ಲ ಎಂದಿದ್ದಾರೆ.

‘ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ’ ಎನ್ನುವ ಕಾರಣಕ್ಕೆ ಅಣ್ಣಾಮಲೈ ಅವರು ಗಾಯತ್ರಿ ಅವರನ್ನು ಕಳೆದ ನ.23ರಂದು ಪಕ್ಷದಿಂದ 6 ತಿಂಗಳ ಕಾಲ ಅಮಾನತು ಮಾಡಿದ್ದರು.

ಕೇರಳ: ಸಾಜಿ ಚೆರಿಯನ್ ಮರುನೇಮಕಕ್ಕೆ ರಾಜ್ಯಪಾಲರ ಅನುಮೋದನೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ (ಪಿಟಿಐ): ಸಿಪಿಐ(ಎಂ) ನಾಯಕ ಸಾಜಿ ಚೆರಿಯನ್ ಅವರನ್ನು ಮತ್ತೆ ಸಚಿವರನ್ನಾಗಿ ನೇಮಿಸುವ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಶಿಫಾರಸನ್ನು ಅನುಮೋದಿಸಿರುವುದಾಗಿ ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಮಂಗಳವಾರ ತಿಳಿಸಿದ್ದಾರೆ.

ಚೆರಿಯನ್ ಅವರ ಪದಗ್ರಹಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಗೆ ಏನು ಹೇಳಬೇಕೋ ಅದನ್ನು ಹೇಳಲಾಗಿದೆ. ಅಂತಿಮವಾಗಿ, ನಾನು ಸಿಎಂ ಶಿಫಾರಸನ್ನು ಒಪ್ಪಿಕೊಂಡಿದ್ದೇನೆ ಮತ್ತು ಬುಧವಾರ ಸಂಜೆ 4 ಗಂಟೆಗೆ ಪ್ರಮಾಣ ವಚನ ನಡೆಯಲಿದೆ ಎಂದು ಖಾನ್ ಸುದ್ದಿಗಾರರಿಗೆ ತಿಳಿಸಿದರು.

ಸಾಜಿ ಚೆರಿಯನ್

ಸಿಪಿಎಂನ ಈ ನಿರ್ಧಾರವನ್ನು ಕಾಂಗ್ರೆಸ್ ಮತ್ತು ಬಿಜೆಪಿ ಟೀಕಿಸಿದ್ದವು ಮತ್ತು ಈ ಕ್ರಮವು ಸ್ವೀಕಾರಾರ್ಹವಲ್ಲ ಮತ್ತು ಸಂವಿಧಾನ ವಿರೋಧಿ ಎಂದು ಬಣ್ಣಿಸಿವೆ. ಜನವರಿ 4ನ್ನು ‘ಕಪ್ಪು ದಿನ’ವನ್ನಾಗಿ ಆಚರಿಸುವುದಾಗಿ ಕಾಂಗ್ರೆಸ್ ಹೇಳಿದೆ.

ಹಿನ್ನೆಲೆ: ಪತ್ತನಂತಿಟ್ಟ ಜಿಲ್ಲೆಯಲ್ಲಿ ಭಾಷಣ ಮಾಡುವಾಗ ಸಂವಿಧಾನದ ವಿರುದ್ಧ ಹೇಳಿಕೆ ನೀಡಿರುವ ಮತ್ತು ಆ ಸಂಬಂಧ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿದ್ದ ಕಾರಣ ಚೆರಿಯನ್ ಅವರು ಕಳೆದ ವರ್ಷ ಜುಲೈನಲ್ಲಿ ರಾಜ್ಯ ಸಚಿವ ಸಂಪುಟಕ್ಕೆ ರಾಜೀನಾಮೆ ನೀಡಿದ್ದರು.

ಸಂಕ್ಷಿಪ್ತ ಸುದ್ದಿ

‘ಬಿಹಾರದಲ್ಲಿ ಜಂಗಲ್ ರಾಜ್ ಮರುಕಳಿಸಿದೆ’

ಪಟ್ನಾ (ಪಿಟಿಐ): ಬಿಹಾರದಲ್ಲಿ ‘ಜಂಗಲ್ ರಾಜ್’ ಮತ್ತೆ ಮರುಕಳಿಸಿದೆ ಎಂದು ಬಿಜೆಪಿ ರಾಷ್ಟ್ರೀಯ ಘಟಕದ ಅಧ್ಯಕ್ಷ ಜೆ.ಪಿ. ನಡ್ಡಾ ಅವರು, ‘ಮಹಾಘಟಬಂಧನ್’ ಅನ್ನು ಉಲ್ಲೇಖಿಸಿ ಮಂಗಳವಾರ ಆರೋಪ ಮಾಡಿದ್ದಾರೆ.

ಜೆ.ಪಿ. ನಡ್ಡಾ

ವೈಶಾಲಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೊಳಪಡುವ ಮುಜಾಫರ್‌ಪುರ ಜಿಲ್ಲೆಯ ಪಾರುದಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಪಕ್ಷವು, ಕಾಂಗ್ರೆಸ್ ಮತ್ತು ಆರ್‌ಜೆಡಿಯೊಂದಿಗೆ ಸರ್ಕಾರ ರಚಿಸಿದ ನಂತರ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಎಂದು ದೂರಿದ್ದಾರೆ.

ಬಿಹಾರದಲ್ಲಿ ‘ಮಹಾಘಟಬಂಧನ್’ ಸರ್ಕಾರವು ರಚನೆಯಾದ ಬಳಿಕ, ಕೊಲೆ, ಲೂಟಿ, ಅಪಹರಣ, ಅತ್ಯಾಚಾರ ಮತ್ತು ಇತರ ಅಪರಾಧಗಳ ಬಗ್ಗೆ ಕೇಳದ ದಿನವಿಲ್ಲ. ರಾಜ್ಯದಲ್ಲಿ ‘ಜಂಗಲ್ ರಾಜ್’ ಮರಳಿದ್ದು, ಕಾನೂನು ಮತ್ತು ಸುವ್ಯವಸ್ಥೆಯು ಸಂಪೂರ್ಣವಾಗಿ ಹದಗೆಟ್ಟಿದೆ’ ಎಂದಿದ್ದಾರೆ.

‘ನಿತೀಶ್ ಕುಮಾರ್ ಅವರು ಬಿಹಾರದ ಜನತೆಗೆ ದ್ರೋಹ ಬಗೆದಿದ್ದಾರೆ. ಆರ್‌ಜೆಡಿ ಮತ್ತು ಇತರ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಅವರ ನಿರ್ಧಾರವು ಜನಾದೇಶಕ್ಕೆ ವಿರುದ್ಧವಾಗಿದೆ’ ಎಂದೂ ಹೇಳಿದ್ದಾರೆ.

ಜ.16ರಿಂದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ

ನವದೆಹಲಿ (ಪಿಟಿಐ): ಬಿಜೆಪಿಯ 2 ದಿನಗಳ ರಾಷ್ಟ್ರೀಯ ಕಾರ್ಯಕಾರಿಣಿ ಇದೇ 16 ಮತ್ತು 17ರಂದು ಇಲ್ಲಿ ನಡೆಯಲಿದ್ದು, ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಗೆ ತನ್ನ ಕಾರ್ಯತಂತ್ರವನ್ನು ಚರ್ಚಿಸಲಾಗುವುದು ಎಂದು ಪಕ್ಷದ ಮೂಲ ಮಂಗಳವಾರ ತಿಳಿಸಿದೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಮೂರು ವರ್ಷಗಳ ಅವಧಿ ಈ ತಿಂಗಳ ಕೊನೆಯಲ್ಲಿ ಕೊನೆಗೊಳ್ಳಲಿದೆ. ಮುಂಬರುವ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಅವರ ಅಧಿಕಾರಾವಧಿಯನ್ನು ವಿಸ್ತರಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

‘ಗಡಿಯಲ್ಲಿ ಎದುರಾಗುವ ಸವಾಲು ಎದುರಿಸಲು ಸಮರ್ಥ’

ಬೋಲೆಂಗ್, ಅರುಣಾಚಲ ಪ್ರದೇಶ (ಪಿಟಿಐ): ‘ಗಡಿಯಲ್ಲಿ ಎದುರಾಗುವ ಎಲ್ಲಾ ಸವಾಲುಗಳನ್ನು ಎದುರಿಸಲು ಭಾರತ ಸೇನೆ ಸಮರ್ಥವಾಗಿದೆ’ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಮಂಗಳವಾರ ಹೇಳಿದರು.

ಇಲ್ಲಿ ನಿರ್ಮಾಣವಾಗಿರುವ ಗಡಿ ರಸ್ತೆ ಸಂಸ್ಥೆಯ (ಬಿಆರ್‌ಒ) ಸೇತುವೆ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು. ‘ಭಾರತ ಎಂದೂ ಯುದ್ಧವನ್ನು ಪ್ರೋತ್ಸಾಹಿಸುವುದಿಲ್ಲ. ನೆರೆಯ ದೇಶಗಳ ಜೊತೆ ಉತ್ತಮ ಬಾಂಧವ್ಯ ಹೊಂದಲು ಬಯಸುತ್ತದೆ. ಈ ತತ್ವವನ್ನು ನಾವು ಶ್ರೀ ರಾಮ ಮತ್ತು ಬುದ್ಧನ ಬೋಧನೆಯಿಂದ ಅಳವಡಿಸಿಕೊಂಡಿದ್ದೇವೆ. ಆದರೆ ಪ್ರಚೋದನೆ ನೀಡಿದರೆ ಯಾವುದೇ ರೀತಿಯ ಸಂದರ್ಭ ಎದುರಿಸಲೂ ದೇಶ ಸಾಮರ್ಥ್ಯ ಹೊಂದಿದೆ’ ಎಂದರು.

ಗಡಿಗಳನ್ನು ಭದ್ರಪಡಿಸುವ ನಿಟ್ಟಿನಲ್ಲಿ ಮೂಲಭೂತ ಸೌಕರ್ಯ ವೃದ್ಧಿಸುವುದು ಕೇಂದ್ರ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಹೊಸ ಸೇತುವೆಯು ಸ್ಥಳೀಯರ ಓಡಾಟಕ್ಕೆ ಮಾತ್ರ ಅನುಕೂಲ ಮಾಡಿಕೊಡುವುದಿಲ್ಲ. ಬದಲಾಗಿ, ತ್ವರಿತಗತಿಯಲ್ಲಿ ಸೇನಾ ನೆಲೆಗಳಿಗೆ ಸೇನಾ ತುಕಡಿಗಳು, ಮತ್ತು ಭಾರಿ ಸೇನಾ ವಾಹನಗಳನ್ನು ನಿಯೋಜಿಸಲೂ ಅನುಕೂಲ ಮಾಡಿಕೊಡಲಿದೆ ಎಂದರು.

ರಾಜ್ಯದ ಪೂರ್ವ ಸಿಯಾಂಗ್ ಮತ್ತು ಊಪರಿ ಸಿಯಾಂಗ್ ಜಿಲ್ಲೆಗಳ ನಡುವೆ ಆಲೊ– ಯಿಂಗ್‌ಕಿಯಾಂಗ್ ರಸ್ತೆಗೆ 100 ಮೀಟರ್ ಉದ್ದದ ‘ಕ್ಲಾಸ್ 70’ ಉಕ್ಕಿನ ಸೇತುವೆ ನಿರ್ಮಿಸಲಾಗಿದೆ. ಇದು ಬಿಆರ್‌ಒದ 28ನೇ ಯೋಜನೆಯಾಗಿದೆ. ಉಳಿದ 27 ಯೋಜನೆಗಳಿಗೂ ರಾಜನಾಥ ಅವರು ವರ್ಚುವಲ್ ಆಗಿ ಉದ್ಘಾಟನೆ ನೆರವೇರಿಸಿದರು.

ನುಸುಳುಕೋರನ ಹತ್ಯೆ

ನವದೆಹಲಿ/ಚಂಡೀಗಢ (ಪಿಟಿಐ): ಪಂಜಾಬ್‌ನ ಭಾರತ– ಪಾಕಿಸ್ತಾನ ಅಂತರರಾಷ್ಟ್ರೀಯ ಗಡಿಯಲ್ಲಿ ಶಸ್ತ್ರಧಾರಿಯಾಗಿ ದೇಶದೊಳಕ್ಕೆ ಪ್ರವೇಶಿಸಲು ಪ್ರಯತ್ನಿಸುತ್ತಿದ್ದ ಪಾಕಿಸ್ತಾನದ ನುಸುಳುಕೋರನೊಬ್ಬನನ್ನು ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಸಿಬ್ಬಂದಿ ಹತ್ಯೆ ಮಾಡಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

‘ಮಂಗಳವಾರ ಬೆಳಿಗ್ಗೆ 8.30ರ ಸುಮಾರಿಗೆ ಗುರುದಾಸ್‌ಪುರದ ಅಜ್ನಲಾ ಸೆಕ್ಟರ್‌ನ ಚನ್ನಾ ಗಡಿ ಪೋಸ್ಟ್‌ನ ಬಿಎಸ್‌ಎಫ್ ಯೋಧರು ಗಡಿಯ ಬಳಿ ಶಂಕಾಸ್ಪದ ಚಲನವಲನಗಳನ್ನು ಗಮನಿಸಿದ ಬಳಿಕ ಒಳನುಸುಳುಕೋರನನ್ನು ಹತ್ಯೆ ಮಾಡಲಾಗಿದೆ’ ಎಂದು ಬಿಎಸ್‌ಎಫ್‌ನ ವಕ್ತಾರ ಹೇಳಿದ್ದಾರೆ.

‘ಮೃತದೇಹದ ಬಳಿ ಒಂದು ಬಂದೂಕು ಪತ್ತೆಯಾಗಿದೆ. ಘಟನಾ ಸ್ಥಳದಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದೆ’ ಎಂದೂ ಅವರು ತಿಳಿಸಿದ್ದಾರೆ. ಇದಕ್ಕೆ ಮೊದಲು ಇಬ್ಬರು ಪಾಕ್ ನುಸುಳುಕೋರರ ಹತ್ಯೆ ನಡೆದಿತ್ತು ಎಂದು ವರದಿಯಾಗಿತ್ತು. ಆದರೆ ಬಿಎಸ್‌ಎಫ್ ಬಳಿಕ ಹೇಳಿಕೆ ನೀಡಿ, ಒಬ್ಬನ ಹತ್ಯೆಯನ್ನಷ್ಟೇ ದೃಢಪಡಿಸಿದೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜೀನಿಯರರು,
ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ–2/.ಟೆಂಡರ್.ಅಧಿಸೂಚನೆ/2022–23/7514 ದಿನಾಂಕ: 03–01–2023

ಅಲ್ಪಾವಧಿ ಟೆಂಡರ್ ಅವಧಿ ವಿಸ್ತರ್ಣೆ ಅಧಿಸೂಚನೆ

ವಿಷಯ: ಟೆಂಡರ ದಿನಾಂಕ ತಿದ್ದುಪಡಿ/ಪ್ರಕಟಣೆ ಅಧಿಸೂಚನೆ–ಬಗ್ಗೆ
ಉಲ್ಲೇಖ: ಈ ಕಚೇರಿ ಟೆಂಡರ ಪ್ರಕಟಣೆ ಸಂ: ಕಾನಿಅ/ಲೋಇ/ಕವಿ/ತಾಶಾ–2/ ಟೆಂಡರ್.ಅಧಿಸೂಚನೆ ಸಂ. 6992 ದಿನಾಂಕ 17.12.2022.

ಈ ಕಚೇರಿಯ ಉಲ್ಲೇಖಿತ ಅಧಿಸೂಚನೆಯಲ್ಲಿ ಕರೆಯಲಾದ ಟೆಂಡರ ಇಂಡೆಂಟ ಸಂ: (162410, 162413, 162408, 162409,162411 162412), ಕಾಮಗಾರಿಗಳ ಕಾರಣಾಂತರಗಳಿಂದ ಈ ಕೆಳಗಿನ ವೇಳಾ ಪಟ್ಟಿಯಂತೆ ಮುಂದುಡಲಾಗಿದೆ.

1) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: **10.01.2023 (17.30 ಗಂಟೆ)**, 2) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **11.01.2023 (16.00 ಗಂಟೆ)**, 3) ತಾಂತ್ರಿಕ ಬಿಡ ತೆರೆಯುವ ದಿನಾಂಕ: **12.01.2023 (16.30 ಗಂಟೆ)**, 4) ಆರ್ಥಿಕ ಬಿಡ ತೆರೆಯುವ ದಿನಾಂಕ: **16.01.2023 (11.30 ಗಂಟೆ)**

ಉಳಿದಂತೆ ಯಾವುದೇ ಷರತ್ತುಗಳಲ್ಲಿ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜೀನಿಯರರು,
ಲೋಕೋಪಯೋಗಿ ಇಲಾಖೆ .ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1058/ಎಂ.ಸಿ&ಎ/2022–23

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ನಂ: ಇಇ/ಎಂಐಡಿ/ಬೀದರ/ತಾ.ಶಾ–1/ಟೆಂಡರ್/2022–23/ 1601 ದಿನಾಂಕ: 31/12/2022

ಇ–ಪ್ರೋಕ್ಯೂರಮೆಂಟ ಟೆಂಡರ್ ಪ್ರಕಟಣೆ

1) ಕಾಮಗಾರಿಗಳ ವಿವರ. : e-Portal ನಲ್ಲಿ ನಮೂದಿಸಿದಂತೆ. 2) ಕಾಮಗಾರಿಗಳ ಅಂದಾಜು ಮೊತ್ತ. : e-Portalನಲ್ಲಿ ನಮೂದಿಸಿದಂತೆ. 3) ಗುತ್ತಿಗೆದಾರರ ಅರ್ಹತೆ ವಿವರ. : e-Portal ನಲ್ಲಿ ನಮೂದಿಸಿದಂತೆ. 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ. : e-Portalನಲ್ಲಿ ನಮೂದಿಸಿದಂತೆ. 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ. : e-Portalನಲ್ಲಿ ನಮೂದಿಸಿದಂತೆ. 6) ಟೆಂಡರ್ ಕ್ಲಾರಿಫೀಕೆಶನ ಕೋನೆಯ ದಿನಾಂಕ KW-4 : 30–01–2023 ಸಮಯ 17–00 ಗಂಟೆವರೆಗೆ. 7) ಟೆಂಡರ ಸಲ್ಲಿಸಲು ಅಂತಿಮ ದಿನಾಂಕ KW-4 : 05–02–2023 ಸಮಯ 16–00 ಗಂಟೆವರೆಗೆ. 8) ಟೆಂಡರ ತಾಂತ್ರಿಕ ಬಿಡ ತೆರೆಯುವ ದಿನಾಂಕ. KW-4 : 07–02–2023 ಸಮಯ 11.00 ಗಂಟೆಗೆ ಸಾಧ್ಯವಾದಲ್ಲಿ. 9) ಟೆಂಡರ ಆರ್ಥಿಕ ಬಿಡ ತೆರೆಯುವ ದಿನಾಂಕ KW-4: 13–02–2023 ಸಮಯ 11–00 ಗಂಟೆಗೆ ಸಾಧ್ಯವಾದಲ್ಲಿ. 10) ಪ್ರೀಬಿಡ್ಡ್ ಮಿಟಿಂಗ ಸ್ಥಳ ದಿನಾಂಕ ಮತ್ತು ಸಮಯ. KW-4 : ಕಾರ್ಯನಿರ್ವಾಹಕ ಇಂಜಿನೀಯರರು,, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಪ್ರತಾಪನಗರ ನೌಬಾದ, ಬೀದರ. 20–01–2023 ರಂದು 11.00 ಗಂಟೆಗೆ. 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ. : ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080 12) ಅಂತರ್ಜಾಲ ತಾಣದ ವಿಳಾಸ. : e-procurement portal www.eproc.karnataka.gov.in

ಸಹಿ/– ಕಾರ್ಯ ನಿರ್ವಾಹಕ ಅಭಿಯಂತರರು,
ವಾ.ಸಾ.ಸಂ.ಇ/ಬೀದರ/404/ಎಂಸಿ&ಎ/2022–23 ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ., ಬೆಣ್ಣೆತೊರಾ ಯೋಜನಾ ವಿಭಾಗ, ಹೆಬ್ಬಾಳ

ಸಂಖ್ಯೆ:ಕಾ.ನಿಅ/ಕ.ನೀ.ನಿ.ನಿ/ಬೆ.ತೊ.ಯೋ/ವಿಭಾಗ/ಹೆಬ್ಬಾಳ/ಪಿ.ಬಿ–4 /2022–23/1275 ದಿ.31.12.2022

ಟೆಂಡರ ಅಧಿಸೂಚನೆ
(ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ಬೆಣ್ಣೇತೋರಾ ಯೋಜನೆ ವಿಭಾಗ ನಂ–04 ಹೆಬ್ಬಾಳ ಕಲಬುರಗಿ, ಕರ್ನಾಟಕ ಇವರು ಆಧಾರದ ಟೆಂಡರ್ ಆಧಾರದ ಮೇಲೆ ಇ–ಪ್ರೋಕ್ಯೂರಮೆಂಟ ಪೋರ್ಟಾಲ್ ಮುಖಾಂತರ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗೆ ನಮೂದಿಸಿದ ಕಾಮಗಾರಿಗೆ ಕೆಟಿಪಿಪಿ ಕಾಯ್ದೆಯ ರೂಲ್ 28ರನ್ವಯ Two Cover System (ದ್ವಿ–ಲಕೋಟೆ) ಪದ್ಧತಿಯಲ್ಲಿ ಟೆಂಡರನ್ನು ಅಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ತಮ್ಮ ಟೆಂಡರಗಳನ್ನು ಕೆಳಗೆ ತಿಳಿಸಿರುವ ದಿನಾಂಕದವರೆಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ ಪೋರ್ಟಲ್ (www.eproc.karnataka.gov.in) ಮುಖಾಂತರ ಅರ್ಹ ಗುತ್ತಿಗೆದಾರರು ಟೆಂಡರಗಳನ್ನು ಸಲ್ಲಿಸಬಹುದಾಗಿದೆ. ಕಾಮಗಾರಿಯ ವಿವರಗಳು ಕೆಳಗಿನಂತಿವೆ.

ಕಾಮಗಾರಿಯ ಹೆಸರು: Providing Irrigation facility for Drought Affected areas in Sedam Assembly Constituency, Kalaburgi District by lifting water from Kagina River "Yeddalli Lift irrigation Scheme" and Providing Irrigation facility for Drought Affected areas in Sedam Assembly Constituency, Kalaburgi District by lifting water from Kagina River "Ternalli Lift irrigation Scheme" **(Indent No-34113) (Call-3).**

1) ಇ–ಪ್ರೊಕ್ಯೂರಮೆಂಟ ಇಂಡೆಂಟ ಸಂಖ್ಯೆ : ದ್ವಿ–ಲಕೋಟೆ, 2) ಇಂಡೆಂಟ್ ನಂ: 34113, 3) ಖಾಲಿ ಟೆಂಡರ್ ಪುಸ್ತಕಗಳು ಪಡೆಯುವ ದಿನಾಂಕ : **04.01.2023 ರ ಬೆಳಗ್ಗೆ 11.30 ಘಂಟೆಗೆ,** 4) ಪೂರ್ವ ಬಿಡ್ ಸಭೆ ದಿನಾಂಕ: **09.01.2023 ರ ಬೆಳಗ್ಗೆ 11.30 ಘಂಟೆಗೆ,** 5) ಭರ್ತಿ ಮಾಡಿದ ಟೆಂಡರಗಳನ್ನು ಇ–ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ & ಸಮಯ: **16.01.2023 ರ ಸಂಜೆ 5:00 ಘಂಟೆಯವರೆಗೆ,** 6) ತಾಂತ್ರಿಕ ಬಿಡ್‌ನ್ನು (ಲಕೋಟೆ–1) ತೆರೆಯುವ ದಿನಾಂಕ : **17.01.2023 ರ ಸಂಜೆ 5:30 ಘಂಟೆಯ ನಂತರ.** 7) ತಾಂತ್ರಿಕ ಬಿಡ್‌ನಲ್ಲಿ (ಲಕೋಟೆ–1) ಪೂರ್ವಾಹತೆ ಹೊಂದಿದ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು (ಲಕೋಟೆ–2) ತೆರೆಯುವ ದಿನಾಂಕ ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ.

ಗುತ್ತಿಗೆದಾರರು ಅರ್ಹತೆ/ಟೆಂಡರ್ ನಿಯಮಗಳು/ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಅಂಗೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ಅಥವಾ ಎಲ್ಲ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ., ಬೆಣ್ಣೆತೊರಾ ಯೋಜನೆ ವಿಭಾಗ ನಂ.4, ಹೆಬ್ಬಾಳ.
ವಾ.ಸಾ.ಸಂ.ಇ/ಕಲಬುರಗಿ/1060/ಎಂ.ಸಿ.&ಎ/2022–23

ಕ್ರಿಕೆಟ್: ಅಕ್ಷರ್ ಆಲ್‌ರೌಂಡ್ ಆಟ, ಮಾವಿಗೆ 4 ವಿಕೆಟ್; ಹೂಡಾ ಮಿಂಚು

ಭಾರತಕ್ಕೆ ರೋಚಕ ಜಯ

ಪಂದ್ಯ ಗೆದ್ದ ಬಳಿಕ ಸಂಭ್ರಮಿಸಿದ ಭಾರತದ ಆಟಗಾರರು– ಎಎಫ್‌ಪಿ ಚಿತ್ರ

ಮುಂಬೈ (ಪಿಟಿಐ): ಅಕ್ಷರ್ ಪಟೇಲ್ ಆಲ್‌ರೌಂಡ್ ಆಟ ಹಾಗೂ ಶಿವಂ ಮಾವಿ ಅಮೋಘ ಬೌಲಿಂಗ್‌ನಿಂದ ಭಾರತ ತಂಡವು ಶ್ರೀಲಂಕಾ ಎದುರಿನ ಮೊದಲ ಟಿ20 ಪಂದ್ಯದಲ್ಲಿ ರೋಚಕ ಜಯ ಸಾಧಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯವು ಕೊನೆಯ ಎಸೆತದವರೆಗೂ ಕುತೂಹಲ ಕೆರಳಿಸಿತ್ತು. 162 ರನ್‌ಗಳ ಗುರಿ ಬೆನ್ನಟ್ಟಿದ್ದ ಶ್ರೀಲಂಕಾ ತಂಡಕ್ಕೆ ಪಂದ್ಯದ ಕೊನೆಯ ಓವರ್‌ನಲ್ಲಿ ಶ್ರೀಲಂಕಾ ತಂಡಕ್ಕೆ ಗೆಲ್ಲಲು 13 ರನ್‌ಗಳ ಅವಶ್ಯಕತೆ ಇತ್ತು. ಈ ಓವರ್ ಬೌಲಿಂಗ್ ಮಾಡಿದ ಎಡಗೈ ಸ್ಪಿನ್ನರ್ ಅಕ್ಷರ್ ಕೇವಲ 11 ರನ್ ನೀಡಿದರು. ಇದರಿಂದಾಗಿ ಭಾರತ ತಂಡವು 2 ರನ್‌ಗಳಿಂದ ಜಯಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಆತಿಥೇಯ ತಂಡವು ಹೋರಾಟದ ಮೊತ್ತ ಗಳಿಸಲು ಕೂಡ ಅಕ್ಷರ್ ಬ್ಯಾಟಿಂಗ್ ಕಾರಣವಾಗಿತ್ತು. ಅಕ್ಷರ್ (ಅಜೇಯ 31; 20ಎ, 4X3, 6X1) ಮತ್ತು ದೀಪಕ್ ಹೂಡಾ (ಅಜೇಯ 41; 23ಎ, 4X1, 6X4) ಇನಿಂಗ್ಸ್‌ನ ಕೊನೆಯ 35 ಎಸೆತಗಳಲ್ಲಿ 68 ರನ್‌ಗಳನ್ನು ಸೂರೆ ಮಾಡಿದರು.

ಲಂಕಾ ಸ್ಪಿನ್ನರ್‌ಗಳ ದಾಳಿಯ ಮುಂದೆ 94 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿದ್ದ ಆತಿಥೇಯ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 162 ರನ್ ಗಳಿಸಿತು.

ಆರಂಭಿಕ ಬ್ಯಾಟರ್ ಇಶಾನ್ ಕಿಶನ್ (37; 29ಎ) ಉತ್ತಮ ಆರಂಭ ನೀಡುವ ಪ್ರಯತ್ನ ಮಾಡಿದರು. ಆದರೆ, ಪದಾರ್ಪಣೆ ಪಂದ್ಯವಾಡಿದ ಶುಭಮನ್ ಗಿಲ್, ಸ್ಫೋಟಕ ಬ್ಯಾಟರ್ ಸೂರ್ಯಕುಮಾರ್ ಯಾದವ್ ಮತ್ತು ಸಂಜು ಸ್ಯಾಮ್ಸನ್ ಒಂದಂಕಿ ಗಳಿಸಿ ನಿರ್ಗಮಿಸಿದರು. ಇದರಿಂದಾಗಿ ತಂಡದ ರನ್ ಗಳಿಕೆ ವೇಗ ಕುಂಠಿತವಾಯಿತು.

ಇಶಾನ್ ಜೊತೆಗೂಡಿದ ನಾಯಕ ಹಾರ್ದಿಕ್ ಪಾಂಡ್ಯ (29; 27ಎ, 4X4) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 31 ರನ್ ಸೇರಿಸಿದರು. ಇಶಾನ್ ಎರಡು ಸಿಕ್ಸರ್ ಹಾಗೂ ಮೂರು ಬೌಂಡರಿ ಬಾರಿಸಿದರು. ಒಂದು ಬಾರಿ ಜೀವದಾನ ಪಡೆದ ಹಾರ್ದಿಕ್ ನಾಲ್ಕು ಬಾರಿ ಚೆಂಡನ್ನು ಬೌಂಡರಿಗೆರೆ ದಾಟಿಸಿದರು. ವಣಿಂದು ಹಸರಂಗಾ ಎಸೆತದಲ್ಲಿ ಇಶಾನ್ ಔಟಾಗುವುದರೊಂದಿಗೆ ಜೊತೆಯಾಟ ಮುರಿದುಬಿತ್ತು.

ಶಿವಂ ಮಾವಿಗೆ ನಾಲ್ಕು ವಿಕೆಟ್: ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಮಧ್ಯಮವೇಗಿ ಶಿವಂ ಮಾವಿ (22ಕ್ಕೆ4) ಮಿಂಚಿದರು. ತಮ್ಮ ಮೊದಲ ಓವರ್‌ನಲ್ಲಿಯೇ ಪಥುಮ್ ನಿಸಾಂಕಾ ಅವರ ವಿಕೆಟ್ ಕಬಳಿಸಿದರು. ಕುಶಾಲ ಮೆಂಡಿಸ್, ಧನಂಜಯ್ ಡಿಸಿಲ್ವಾ ಮತ್ತು ವಣಿಂದು ಹಸರಂಗಾ ವಿಕೆಟ್‌ಗಳನ್ನೂ ಅವರು ಕಬಳಿಸಿದರು. ಇದರಿಂದಾಗಿ ಲಂಕಾ ತಂಡದ ಗೆಲುವಿನ ಅಂತರ ಹೆಚ್ಚಿತ್ತು.

ಹರ್ಷಲ್ ಪಟೇಲ್ ಹಾಕಿದ 19ನೇ ಓವರ್‌ನಲ್ಲಿ 16 ರನ್‌ಗಳನ್ನು ಕೊಟ್ಟಿದ್ದರಿಂದ ಕೊನೆಯ ಓವರ್‌ನಲ್ಲಿ ಗೆಲ್ಲುವ ಅವಕಾಶ ಶ್ರೀಲಂಕಾ ಪಾಲಿಗಿತ್ತು. ಆದರೆ ಅಕ್ಷರ್ ಪಟೇಲ್ ಚಾಣಾಕ್ಷತೆಯಿಂದ ಈ ಆತಂಕ ದೂರ ಮಾಡಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 162 (ಇಶಾನ್ ಕಿಶನ್ 37, ಹಾರ್ದಿಕ್ ಪಾಂಡ್ಯ 29, ದೀಪಕ್ ಹೂಡಾ ಔಟಾಗದೆ 41, ಅಕ್ಷರ್ ಪಟೇಲ್ ಔಟಾಗದೆ 31, ದಿಲ್ಶಾನ್ ಮಧುಶಂಕಾ 35ಕ್ಕೆ1, ತೀಕ್ಷಣ 29ಕ್ಕೆ1, ಚಾಮಿಕಾ ಕರುಣಾರತ್ನೆ 22ಕ್ಕೆ1, ಧನಂಜಯ್ ಡಿಸಿಲ್ವಾ 6ಕ್ಕೆ1, ಹಸರಂಗಾ 22ಕ್ಕೆ1) . **ಶ್ರೀಲಂಕಾ:** 20 ಓವರ್‌ಗಳಲ್ಲಿ 160 (ದಸುನ್ ಶನಕ 45, ವನಿಂದು ಹಸರಂಗ ಡಿಸಿಲ್ವಾ 21, ಚಾಮಿಕಾ ಕರುಣಾರತ್ನೆ 23; ಶಿವಂ ಮಾವಿ 22ಕ್ಕೆ 4, ಉಮ್ರನ್ ಮಲಿಕ್ 27ಕ್ಕೆ 2, ಹರ್ಷಲ್ ಪಟೇಲ್ 41ಕ್ಕೆ 2). ಫಲಿತಾಂಶ: ಭಾರತಕ್ಕೆ ಎರಡು ರನ್‌ಗಳ ಜಯ. ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ

ತಂಡಕ್ಕೆ ಮರಳಿದ ಜಸ್‌ಪ್ರೀತ್

ಮುಂಬೈ (ಪಿಟಿಐ): ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರನ್ನು ಶ್ರೀಲಂಕಾ ಎದುರಿನ ಸರಣಿಯಲ್ಲಿ ಆಡಲಿರುವ ಭಾರತ ತಂಡಕ್ಕೆ ಸೇರ್ಪಡೆ ಮಾಡಲಾಗಿದೆ.

ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ)ಯಲ್ಲಿ ಅವರು ಫಿಟ್‌ನೆಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ಅವರಿಗೆ ತಂಡ ಸೇರುವ ಅವಕಾಶ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಹೋದ ವರ್ಷದ ಸೆಪ್ಟೆಂಬರ್‌ನಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಸಂದರ್ಭದಲ್ಲಿ ಅವರು ಬೆನ್ನುಹುರಿಯ ಗಾಯದಿಂದ ಹೊರಗುಳಿದಿದ್ದರು. ಅಲ್ಲಿಂದ ಅವರು ಚಿಕಿತ್ಸೆ ಮತ್ತು ಆರೈಕೆಯಲ್ಲಿದ್ದರು.

‘ಭಾರತ ಕ್ರಿಕೆಟ್ ತಂಡದ ಆಯ್ಕೆ ಸಮಿತಿಯು ಬೂಮ್ರಾ ಅವರನ್ನು ತಂಡಕ್ಕೆ ಆಯ್ಕೆ ಮಾಡಿದೆ. ಎನ್‌ಸಿಎನಲ್ಲಿ ಫಿಟ್‌ನೆಸ್ ಟೆಸ್ಟ್ ನೀಡಿರುವ ಬೂಮ್ರಾ ಅರ್ಹತೆ ಗಳಿಸಿದ್ದಾರೆ’ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಲಂಕಾ ಎದುರಿನ ಏಕದಿನ ಸರಣಿಯಲ್ಲಿ ಮೂರು ಪಂದ್ಯಗಳು ನಡೆಯಲಿವೆ. ಗುವಾಹಟಿ (ಜ.10), ಕೋಲ್ಕತ್ತ (ಜ.12) ಮತ್ತು ತಿರುವನಂತಪುರಂ (ಜ.15) ಆತಿಥ್ಯ ವಹಿಸಲಿವೆ.

ಇದೇ ವರ್ಷ ಭಾರತದಲ್ಲಿಯೇ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯು ನಡೆಯಲಿದೆ. ಅದರಿಂದಾಗಿ ಈ ಸರಣಿಯು ಮಹತ್ವ ಪಡೆದುಕೊಂಡಿದೆ.

ಜಸ್‌ಪ್ರೀತ್ ಬೂಮ್ರಾ

ಸ್ಯಾಂಟೊಸ್ ನಗರದಲ್ಲಿ ಪೆಲೆ ಅವರ ಪಾರ್ಥಿವ ಶರೀರದ ಅಂತಿಮ ಯಾತ್ರೆ ಸಾಗಿತು–ಎಎಫ್‌ಪಿ ಚಿತ್ರ

ಫುಟ್‌ಬಾಲ್ ದಿಗ್ಗಜನ ಅಂತ್ಯಕ್ರಿಯೆಯಲ್ಲಿ ಜನಸ್ತೋಮ

ಪೆಲೆಗೆ ಭಾವುಕ ವಿದಾಯ

ಸ್ಯಾಂಟೊಸ್, ಬ್ರೆಜಿಲ್ (ರಾಯಿಟರ್ಸ್/ಎಎಫ್‌ಪಿ): ಫುಟ್‌ಬಾಲ್ ದಿಗ್ಗಜ ಪೆಲೆ ಅವರಿಗೆ ಇಲ್ಲಿನ ವಿಲಾ ಬೆಲ್ಮಿರೊ ಕ್ರೀಡಾಂಗಣದಲ್ಲಿ ಬ್ರೆಜಿಲ್ ಅಧ್ಯಕ್ಷ ಲುಲಾ ಡ ಸಿಲ್ವಾ ಸೇರಿದಂತೆ ಅಪಾರ ಜನರು ಅಂತಿಮ ನಮನ ಸಲ್ಲಿಸಿದರು.

ಸಕಲ ಸರ್ಕಾರಿ ಗೌರವಗಳೊಂದಿಗೆ, ಕ್ಯಾಥೊಲಿಕ್ ಸಂಪ್ರದಾಯದಂತೆ ಪೆಲೆ ಅವರ ಅಂತ್ಯಕ್ರಿಯೆಯು ಖಾಸಗಿ ಸ್ಮಾರಕ ಸ್ಮಶಾನದಲ್ಲಿ ಮಂಗಳವಾರ ನೆರವೇರಿತು.

ಸಾಂಬಾ ಗೀತೆಗಳು, ಬ್ಯಾಂಡ್‌ಗಳ ಮೂಲಕ ಸ್ಯಾಂಟೊಸ್ ರಸ್ತೆಗಳಲ್ಲಿ ಅಭಿಮಾನಿಗಳು ದಿಗ್ಗಜ ಆಟಗಾರನಿಗೆ ಗೌರವ ಸಲ್ಲಿಸಿದರು.

‘ಕಿಂಗ್‌ಗೆ ವಿದಾಯ. ಪೆಲೆ ಅವರ ಆತ್ಮಕ್ಕೆ ಶಾಂತಿ ಸಿಗಲಿ’ ಎಂದು ಲುಲಾ ಡ ಸಿಲ್ವಾ ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ.

ಸೋಮವಾರದಿಂದ 24 ಗಂಟೆಗಳ ಅವಧಿಯಲ್ಲಿ 2.30 ಲಕ್ಷ ಜನರು ಪೆಲೆ ಅವರ ಅಂತಿಮ ದರ್ಶನ ಪಡೆದರು ಎಂದು ಸ್ಯಾಂಟೊಸ್ ಫುಟ್‌ಬಾಲ್ ಕ್ಲಬ್‌ನ ವಕ್ತಾರರು ತಿಳಿಸಿದ್ದಾರೆ.

ಪೆಲೆ ತಮ್ಮ ಜೀವನದ ಬಹುಪಾಲು ಅವಧಿಯನ್ನು ಸಾವೊ ಪೌಲೊದಿಂದ 75 ಕಿ.ಮೀ. ದೂರದಲ್ಲಿರುವ ಸ್ಯಾಂಟೊಸ್ ನಗರದಲ್ಲಿ ಕಳೆದಿದ್ದರು. ಬ್ರೆಜಿಲ್ ತಂಡವು ಮೂರು ವಿಶ್ವಕಪ್ ಟೂರ್ನಿಗಳಲ್ಲಿ ಜಯ ಸಾಧಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದ, ಪೆಲೆ ಎಂದೇ ಜನಪ್ರಿಯರಾಗಿರುವ ಎಡ್ಸನ್ ಅರಾಂಟೆಸ್ ಡು ನಸಿಮೆಂಟೊ ಡಿಸೆಂಬರ್ 29ರಂದು ಕ್ಯಾನ್ಸರ್‌ನಿಂದಾಗಿ ನಿಧನರಾಗಿದ್ದರು.

ಪೆರುವಿನ 738 ಮಕ್ಕಳಿಗೆ ಪೆಲೆ ಹೆಸರು: ಫುಟ್‌ಬಾಲ್ ದಿಗ್ಗಜ ಪೆಲೆ ನಿಧನ ಹೊಂದಿರಬಹುದು. ಆದರೆ ಪೆರುವಿನ 738 ಮಕ್ಕಳ ಮೂಲಕ ಅವರು ಅಮರರಾಗಿದ್ದಾರೆ. ಆ ದೇಶದಲ್ಲಿ ಕಳೆದ ವರ್ಷ ಜನಿಸಿದ 738 ಮಕ್ಕಳ ಹೆಸರನ್ನು ಪೆಲೆ, ಕಿಂಗ್ ಪೆಲೆ ಅಥವಾ ಅವರ ಪೂರ್ಣ ಹೆಸರು ಎಡ್ಸನ್ ಅರಾಂಟೆಸ್ ಡು ನಸಿಮೆಂಟೊ ಎಂದು ನೋಂದಣಿ ಮಾಡಲಾಗಿದೆ ಎಂದು ರಾಷ್ಟ್ರೀಯ ನೋಂದಣಿ ಸಂಸ್ಥೆ ತಿಳಿಸಿದೆ.

ಇತ್ತೀಚೆಗೆ ನಿಧನರಾದ ಬ್ರಿಟನ್ ರಾಣಿ ಎರಡನೇ ಎಲಿಜಬೆತ್ ಹೆಸರನ್ನು ಪೆರುವಿನ 551 ಹೆಣ್ಣುಮಕ್ಕಳಿಗೆ ಇಡಲಾಗಿದೆ. ಪೋರ್ಚುಗಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ ಹೆಸರನ್ನು 31,583 ಮಂದಿಗೆ ಇಡಲಾಗಿದೆ. ಫುಟ್‌ಬಾಲ್ ಒಲವು ಹೆಚ್ಚಾಗಿರುವ ಪೆರುವಿನಲ್ಲಿ ಅರ್ಜೆಂಟೀನಾ ತಾರೆ ಮೆಸ್ಸಿ ಹೆಸರನ್ನು 371 ಮಕ್ಕಳಿಗೆ ಫ್ರಾನ್ಸ್‌ನ ಕಿಲಿಯನ್ ಎಂಬಾಪೆ ಹೆಸರನ್ನು 229 ಮಕ್ಕಳಿಗೆ ಇಡಲಾಗಿದೆ.

ಕರ್ನಾಟಕಕ್ಕೆ ದುಬಾರಿಯಾದ ಕೈಬಿಟ್ಟ ಕ್ಯಾಚ್; ವಿದ್ವತ್‌ಗೆ 3 ವಿಕೆಟ್; ಛತ್ತೀಸಗಢ ಉತ್ತಮ ಮೊತ್ತ

ಆಶುತೋಷ್–ಖರೆ ‘ದ್ವಿಶತಕ’ದ ಜೊತೆಯಾಟ

• ಗಿರೀಶ ದೊಡ್ಡಮನಿ

ಛತ್ತೀಸಗಢದ ಅಮನದೀಪ್ ಖರೆ (ಎಡ) ಮತ್ತು ಆಶುತೋಷ್ ಸಿಂಗ್ ಜೊತೆಯಾಟದ ಓಟ –ಪ್ರಜಾವಾಣಿ ಚಿತ್ರ/ವಿ. ಪುಷ್ಕರ್

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ಛತ್ತೀಸಗಢದ ಆಶುತೋಷ್ ಸಿಂಗ್ ಅವರ ಕ್ಯಾಚ್ ಕೈಚೆಲ್ಲಿದ್ದು ಆತಿಥೇಯ ಕರ್ನಾಟಕಕ್ಕೆ ದುಬಾರಿಯಾಯಿತು.

ಇಲ್ಲಿ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ಕೇವಲ ಒಂದು ರನ್ ಗಳಿಸಿದ್ದ ಆಶುತೋಷ್ ಅವರಿಗೆ ವಿಶಾಲ್ ಒಣತ್ ಕ್ಯಾಚ್ ಬಿಟ್ಟು ಜೀವದಾನ ನೀಡಿದರು. ಇದನ್ನು ಸಮರ್ಥವಾಗಿ ಬಳಸಿಕೊಂಡ ಆಶುತೋಷ್ (ಬ್ಯಾಟಿಂಗ್ 118; 273 ಎಸೆತ) ಅವರು ಅಮನದೀಪ್ ಖರೆ (93; 191ಎ, 4X13) ಜೊತೆಗೆ ನಾಲ್ಕನೇ ವಿಕೆಟ್ ಪಾಲುದಾರಿಕೆಯಲ್ಲಿ 210 ರನ್ ಸೇರಿಸಿದರು. ಇದರಿಂದಾಗಿ ತಂಡವು ದಿನದಾಟದ ಮುಕ್ತಾಯಕ್ಕೆ ತಂಡವು 90 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 267 ರನ್ ಗಳಿಸಿತು.

ಊಟಕ್ಕೂ ಮುನ್ನ ಮತ್ತು ಚಹಾದ ನಂತರ ಹೊಸ ಚೆಂಡಿನಲ್ಲಿ ಕರ್ನಾಟಕದ ಬೌಲರ್‌ಗಳಿಗೆ ವಿಕೆಟ್ ಒಲಿದವು. ಉಳಿದಂತೆ ಇಡೀ ದಿನ ಆಶುತೋಷ್ ಮತ್ತು ಅಮನದೀಪ್ ಆಟವೇ ಮೇಲುಗೈ ಸಾಧಿಸಿತು. ಆರು ಗಂಟೆ 53 ನಿಮಿಷ ನಡೆದ ದಿನದಾಟದಲ್ಲಿ 4 ಗಂಟೆ 40 ನಿಮಿಷ ಇವರ ಜೊತೆಯಾಟವಿತ್ತು.

ಟಾಸ್ ಗೆದ್ದ ಆತಿಥೇಯ ತಂಡದ ನಾಯಕ ಮಯಂಕ್ ಅಗರವಾಲ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ರೋನಿತ್ ಬದಲು ಜಾಗ ಪಡೆದ ಮಧ್ಯಮವೇಗಿ ವಾಸುಕಿ ಕೌಶಿಕ್ ತಮ್ಮ ಮೊದಲ ಓವರ್‌ನಲ್ಲಿಯೇ ಅನುಜ್ ತಿವಾರಿ ವಿಕೆಟ್ ಗಳಿಸಿದರು. ವಿಕೆಟ್‌ಕೀಪರ್ ಬಿ.ಆರ್. ಶರತ್ ಚೆಂದದ ಕ್ಯಾಚ್ ಪಡೆದರು. ತಂಡದ ಖಾತೆಯಲ್ಲಿ ಒಂದೂ ರನ್ ಇರಲಿಲ್ಲ. ಆಗ ಆಶುತೋಷ್ ಕ್ರೀಸ್‌ಗೆ ಬಂದರು.

ನಂತರದ ಓವರ್‌ನಲ್ಲಿ ವಿದ್ವತ್ ಕಾವೇರಪ್ಪ ಮಿಂಚಿದರು. ಅವರ ಎಸೆತದಲ್ಲಿ ಶರತ್ ಪಡೆದ ಕ್ಯಾಚ್‌ಗೆ ಅವಿನಾಶ್ ಸಿಂಗ್ ಕೂಡ ಖಾತೆ ತೆರೆಯದೇ ನಿರ್ಗಮಿಸಿದರು. ಈ ಋತುವಿನಲ್ಲಿ ಉತ್ತಮ ಬ್ಯಾಟಿಂಗ್ ಮಾಡುತ್ತಿರುವ ನಾಯಕ ಹರಪ್ರೀತ್ ಸಿಂಗ್ (34; 55ಎ) ಮತ್ತು ಆಶುತೋಷ್ ಇನಿಂಗ್ಸ್‌ಗೆ ಚೇತರಿಕೆ ನೀಡುವ ಪ್ರಯತ್ನ ಮಾಡಿದರು.

3ನೇ ವಿಕೆಟ್ ಜೊತೆಯಾಟದಲ್ಲಿ 42 ರನ್ ಗಳಿಸಿದ್ದ ಈ ಜೋಡಿಯನ್ನು ವೈಶಾಖ ವಿಜಯ ಕುಮಾರ್ ಬೇರ್ಪಡಿಸಿದರು. ಹರಪ್ರೀತ್ ಕೂಡ ಶರತ್‌ಗೆ ಕ್ಯಾಚಿತ್ತು ನಿರ್ಗಮಿಸಿದರು, ಆಗ ತಂಡದ ಸ್ಕೋರ್ 3ಕ್ಕೆ43 ಆಗಿತ್ತು.

ಈ ಹಂತದಲ್ಲಿ ಆಶುತೋಷ್ ಜೊತೆಗೂಡಿದ ಅಮನದೀಪ್ ಇನಿಂಗ್ಸ್‌ಗೆ ಬಲ ತುಂಬಿದರು. ಇಬ್ಬರ ತಾಳ್ಮೆಯ ಆಟದ ಮುಂದೆ ಕರ್ನಾಟಕದ ಬೌಲರ್‌ಗಳ ಆಟ ನಡೆಯಲಿಲ್ಲ. ಭೋಜನ ವಿರಾಮಕ್ಕೆ 84 ರನ್ ಮಾತ್ರ ಛತ್ತೀಸಗಢದ ಖಾತೆಯಲ್ಲಿದ್ದವು. ನಂತರದ ಅವಧಿಯಲ್ಲಿ ಚೆಂಡಿನ ಹೊಳಪು ಕುಂದಿದ ಮೇಲೆ ವೇಗಿಗಳ ಎಸೆತಗಳಲ್ಲಿ ಹೆಚ್ಚು ಮೊನಚು ಇರಲಿಲ್ಲ. ಸ್ಪಿನ್ ಜೋಡಿ ಶ್ರೇಯಸ್ ಗೋಪಾಲ್ ಮತ್ತು ಕೃಷ್ಣಪ್ಪ ಗೌತಮ್ ಕೂಡ ದುಬಾರಿಯಾದರು. ಇಬ್ಬರೂ ಹಾಕಿದ ಒಟ್ಟು 32 ಓವರ್‌ಗಳಲ್ಲಿ 129 ರನ್ ಬಿಟ್ಟುಕೊಟ್ಟರು. ಬೌಲರ್‌ಗಳನ್ನು ಪದೇ ಪದೇ ಬದಲಾಯಿಸಿದ ಮಯಂಕ್ ಪ್ರಯೋಗಕ್ಕೂ ಫಲ ಸಿಗಲಿಲ್ಲ.

ಇವರ ಜೊತೆಯಾಟವು ಚಹಾ ವಿರಾಮದ ನಂತರವೂ ಮುಂದುವರೆಯಿತು. ಶತಕದತ್ತ ಸಾಗಿದ್ದ ಅಮನದೀಪ್ ಅವರಿಗೆ ಹೊಸ ಚೆಂಡಿನ ಹೊಳಪು ಕಣ್ಣು ಕುಕ್ಕಿತು!

86ನೇ ಓವರ್‌ನಲ್ಲಿ ವಿದ್ವತ್ ಹಾಕಿದ ಎಸೆತದಲ್ಲಿ ಅಮನದೀಪ್ ವಿಕೆಟ್‌ಕೀಪರ್ ಶರತ್‌ಗೆ ಕ್ಯಾಚಿತ್ತರು. ಜೊತೆಯಾಟ ಮುರಿಯಿತು. ಅದೇ ಓವರ್‌ನಲ್ಲಿ ಸುಮಿತ್ ರುಯ್ಕರ್ ಅವರನ್ನೂ ಕ್ಲೀನ್‌ಬೌಲ್ಡ್ ಮಾಡಿದ ವಿದ್ವತ್ ಕೇಕೆ ಹಾಕಿದರು. ಇದರಿಂದಾಗಿ ಬುಧವಾರ ಬೆಳಿಗ್ಗೆ ಮತ್ತೆ ವಿಕೆಟ್ ಬೇಟೆಯಾಡುವ ಆಸೆ ಆತಿಥೇಯ ಬಳಗದಲ್ಲಿ ಮೂಡಿದೆ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಛತ್ತೀಸಗಢ: 5ಕ್ಕೆ267 (90 ಓವರ್‌ಗಳಲ್ಲಿ)

ಅವಿನಾಶ್‌ಸಿಂಗ್ ಸಿ ಶರತ್ ಬಿ ವಿದ್ವತ್ 0 (9ಎ), ತಿವಾರಿ ಸಿ ಶರತ್ ಬಿ ಕೌಶಿಕ್ 0 (4ಎ), ಆಶುತೋಷ್‌ಸಿಂಗ್ ಬ್ಯಾಟಿಂಗ್ 118 (273ಎ, 4X18, 6X1), ಹರಪ್ರೀತ್ ಸಿಂಗ್ ಸಿ ಶರತ್ ಬಿ ವೈಶಾಖ 34 (55ಎ, 4X6), ಅಮನದೀಪ್ ಸಿ ಶರತ್ ಬಿ ವಿದ್ವತ್ 93 (191ಎ, 4X13), ಸುಮಿತ್ ಬಿ ವಿದ್ವತ್ 0 (2ಎ), ಶಶಾಂಕ್ ಬ್ಯಾಟಿಂಗ್ 2 (8ಎ)

ಇತರೆ 20 (ಬೈ 9, ಲೆಗ್‌ಬೈ 6, ವೈಡ್ 3, ನೋಬಾಲ್ 2)

ವಿಕೆಟ್ ಪತನ: 1–0 (ತಿವಾರಿ; 1.4), 2–1 (ಅವಿನಾಶ್‌ಸಿಂಗ್; 2.3), 3–43 (ಹರಪ್ರೀತ್‌ಸಿಂಗ್ ಭಾಟಿಯಾ; 20.3), 4–253 (ಅಮನದೀಪ್ ಖರೆ; 85.4), 5–253 (ಸುಮಿತ್ ರುಯ್ಕರ್; 85.6)

ಬೌಲಿಂಗ್: ವಿದ್ವತ್ ಕಾವೇರಪ್ಪ 21–4–54–3, ವಾಸುಕಿ ಕೌಶಿಕ್ 19–6–31–1, ವಿಜಯಕುಮಾರ್ ವೈಶಾಖ 18–6–38–1, ಶ್ರೇಯಸ್ ಗೋಪಾಲ್ 16–0–70–0, ಕೆ.ಗೌತಮ್ 16–3–59–0

ಉನದ್ಕತ್ ದಾಖಲೆ: ದೆಹಲಿ ತತ್ತರ

ಉನದ್ಕತ್

ರಾಜ್‌ಕೋಟ್ (ಪಿಟಿಐ): ಎಡಗೈ ಮಧ್ಯಮವೇಗಿ ಜೈದೇವ್ ಉನದ್ಕತ್ ರಣಜಿ ಕ್ರಿಕೆಟ್ ಟೂರ್ನಿಯ ಪಂದ್ಯದ ಮೊದಲ ಇನಿಂಗ್ಸ್‌ನ ಪ್ರಥಮ ಓವರ್‌ನಲ್ಲಿಯೇ ಹ್ಯಾಟ್ರಿಕ್ ಗಳಿಸಿ ದಾಖಲೆ ಬರೆದರು.

ಈಚೆಗೆ ಬಾಂಗ್ಲಾ ಎದುರಿನ ಟೆಸ್ಟ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದ ಜೈದೇವ್ (39ಕ್ಕೆ8) ಅವರ ಅಮೋಘ ಬೌಲಿಂಗ್‌ನಿಂದ ಸೌರಾಷ್ಟ್ರ ತಂಡವು ಇಲ್ಲಿ ಮಂಗಳವಾರ ಆರಂಭವಾದ ಬಿ ಗುಂಪಿನ ಪಂದ್ಯದಲ್ಲಿ ದೆಹಲಿ ವಿರುದ್ಧದ ರಣಜಿ ಪಂದ್ಯದಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿತು.

ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ದೆಹಲಿ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆತಿಥೇಯ ತಂಡದ ನಾಯಕ ಜೈದೇವ್ ಮೊದಲ ಓವರ್‌ನಲ್ಲಿ ದೆಹಲಿಯ ಧ್ರುವ್ ಶೋರೆ (0.3), ವೈಭವ್ ರಾವಳ್ (0.4) ಮತ್ತು ನಾಯಕ ಯಶ್ ಧುಳ್ (0.5) ಅವರ ವಿಕೆಟ್ ಗಳಿಸಿದರು. ಈ ಗಾಯದ ಮೇಲೆ ಎರಡನೇ ಓವರ್‌ನಲ್ಲಿ ಚಿರಾಗ್ ಜಾನಿ ಬರೆ ಹಾಕಿದರು. ಆಯುಷ್ ಬದೋನಿ ವಿಕೆಟ್ ಗಳಿಸಿದರು. ಇದರಿಂದಾಗಿ ಅಗ್ರ ನಾಲ್ವರು ಬ್ಯಾಟರ್‌ಗಳು ಖಾತೆಯನ್ನೇ ತೆರೆಯಲಿಲ್ಲ. ತಮ್ಮ ಎರಡನೇ ಓವರ್‌ನಲ್ಲಿ ಜೈದೇವ್ ಜಾಂಟಿ ಸಿಧು ಹಾಗೂ ಲಲಿತ್ ಯಾದವ್ ವಿಕೆಟ್ ಕೂಡ ಕಬಳಿಸಿದರು. ಇನ್ನೊಂದು ಓವರ್‌ನಲ್ಲಿ ಲಕ್ಷ್ಯ ವಿಕೆಟ್ ಕೂಡ ಅವರ ಪಾಲಾಯಿತು.

ದೆಹಲಿ ತಂಡವು 10 ರನ್‌ಗಳಿಗೆ ಏಳು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಜೊತೆಗೂಡಿದ ಹೃತಿಕ್ ಶೋಕೀನ್ (ಔಟಾಗದೇ 68; 90ಎ) ಮತ್ತು ಶಿವಾಂಕ್ ವಸಿಷ್ಠ (38; 68ಎ) ಒಂಬತ್ತನೇ ವಿಕೆಟ್ ಜೊತೆಯಾಟದಲ್ಲಿ 80 ರನ್ ಸೇರಿಸಿ ತಂಡವು ಅತ್ಯಲ್ಪ ಮೊತ್ತಕ್ಕೆ ಕುಸಿಯುವುದನ್ನು ತಡೆದರು. ಇದರಿಂದಾಗಿ ತಂಡವು 133 ರನ್‌ಗಳಿಗೆ ತಂಡವು ಆಲೌಟ್ ಆಯಿತು.

ಮೊದಲ ಇನಿಂಗ್ಸ್ ಆರಂಭಿಸಿದ ಸೌರಾಷ್ಟ್ರ ತಂಡವು ಹರ್ವಿಕ್ ದೇಸಾಯಿ (ಬ್ಯಾಟಿಂಗ್ 104) ಶತಕದ ಬಲದಿಂದ ದಿನದಾಟದ ಅಂತ್ಯಕ್ಕೆ 46 ಓವರ್‌ಗಳಲ್ಲಿ 1 ವಿಕೆಟ್‌ಗೆ 184 ರನ್ ಗಳಿಸಿತು. 51 ರನ್‌ಗಳ ಮುನ್ನಡೆ ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ಬಿ ಗುಂಪು: ರಾಜ್‌ಕೋಟ್: ಮೊದಲ ಇನಿಂಗ್ಸ್: ದೆಹಲಿ: 35 ಓವರ್‌ಗಳಲ್ಲಿ 133 (ಹೃತಿಕ್ ಶೋಕೀನ್ ಔಟಾಗದೆ 68, ಶಿವಾಂಕ್ ವಸಿಷ್ಠ 38, ಜೈದೇವ್ ಉನದ್ಕತ್ 39ಕ್ಕೆ8) ಸೌರಾಷ್ಟ್ರ:46 ಓವರ್‌ಗಳಲ್ಲಿ 1 ವಿಕೆಟ್‌ಗಳಿಗೆ 184 (ಹರ್ವಿಕ್ ದೇಸಾಯಿ ಬ್ಯಾಟಿಂಗ್ 104, ಜೈ ಗೋಹಿಲ್ 34, ಚಿರಾಗ್ ಜಾನಿ ಬ್ಯಾಟಿಂಗ್ 44)

ಬ್ರೆಬೋರ್ನ್ ಕ್ರೀಡಾಂಗಣ ಮುಂಬೈ: ತಮಿಳುನಾಡು: 36.2 ಓವರ್‌ಗಳಲ್ಲಿ 144 (ಪ್ರದೋಷ್ ಪಾಲ್ 55, ಜಗದೀಶನ್ 23, ತುಷಾರ್ ದೇಶಪಾಂಡೆ 37ಕ್ಕೆ5, ಶಮ್ಸ್ ಮುಲಾನಿ 33ಕ್ಕೆ3) ಮುಂಬೈ: 41 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 183 (ಪೃಥ್ವಿ ಶಾ 35, ಅಜಿಂಕ್ಯ ರಹಾನೆ 42, ಸರ್ಫರಾಜ್ ಖಾನ್ ಬ್ಯಾಟಿಂಗ್ 46, ಶಮ್ಸ್ ಮುಲಾನಿ 28, ತ್ರಿಲೋಕ್ ನಾಗ್ 58ಕ್ಕೆ2, ಅಶ್ವಿನ್ ಕ್ರಿಸ್ಟ್ 32ಕ್ಕೆ3)

‘ಅಭಿಮನ್ಯು’ ಮೈದಾನದಲ್ಲಿ ಈಶ್ವರನ್ ಶತಕ

ಡೆಹ್ರಾಡೂನ್ (ಪಿಟಿಐ): ತಮ್ಮದೇ ಹೆಸರಿನ ಕ್ರೀಡಾಂಗಣದಲ್ಲಿ ರಣಜಿ ಪಂದ್ಯ ಆಡುತ್ತಿರುವ ಅಭಿಮನ್ಯು ಈಶ್ವರನ್ ಶತಕ ಗಳಿಸಿದರು. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಇದು ಅವರ ಸತತ ನಾಲ್ಕನೇ ಶತಕವಾಗಿದೆ.

ಮಂಗಳವಾರ ಅಭಿಮನ್ಯು ಕ್ರಿಕೆಟ್ ಅಕಾಡೆಮಿ ಮೈದಾನದಲ್ಲಿ ಆರಂಭವಾದ ಎ ಗುಂಪಿನ ಪಂದ್ಯದಲ್ಲಿ ಈಶ್ವರನ್ (ಬ್ಯಾಟಿಂಗ್ 141) ಶತಕದ ಬಲದಿಂದ ಬಂಗಾಳ ತಂಡವು ಉತ್ತರಾಖಂಡ ಎದುರು ದಿನದಾಟದ ಅಂತ್ಯಕ್ಕೆ 84.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 269 ರನ್ ಗಳಿಸಿತು. ಅವರು ಈಚೆಗೆ ಬಾಂಗ್ಲಾದೇಶ ಎ ತಂಡದ ಎದುರು ಎರಡು ಶತಕ (141, 157), ನಾಗಾಲ್ಯಾಂಡ್ (170) ಮತ್ತು ಈಗ ಶತಕ ದಾಖಲಿಸಿದ್ದಾರೆ.

ಅಭಿಮನ್ಯು ಅವರ ತಂದೆ ರಂಗನಾಥನ್ ಪರಮೇಶ್ವರನ್ ಈಶ್ವರನ್ ಅವರು ಅಕಾಡೆಮಿ ಮತ್ತು ಕ್ರೀಡಾಂಗಣವನ್ನು ನಿರ್ಮಿಸಿದ್ದಾರೆ. ಅದಕ್ಕೆ ಅಭಿಮನ್ಯು ಎಂದು ಹೆಸರಿಟ್ಟಿದ್ದಾರೆ.

ಎಜಾಜ್ ಪಟೇಲ್– ಹೆನ್ರಿ ಮಿಂಚು

ಮ್ಯಾಟ್ ಹೆನ್ರಿ

ಕರಾಚಿ (ಎಪಿ): ಕೊನೆಯ ವಿಕೆಟ್ ಜೊತೆಯಾಟದಲ್ಲಿ ಮ್ಯಾಟ್ ಹೆನ್ರಿ ಮತ್ತು ಎಜಾಜ್ ಪಟೇಲ್ ಅವರು ಶತಕದ ಜೊತೆಯಾಟವಾಡಿದರು. ಇದರೊಂದಿಗೆ ನ್ಯೂಜಿಲೆಂಡ್ ತಂಡವು ಪಾಕಿಸ್ತಾನ ಎದುರಿನ 2ನೇ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಉತ್ತಮ ಮೊತ್ತ ಪೇರಿಸಿತು.

ಕರಾಚಿ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಮಂಗಳವಾರ ಕಿವೀಸ್ 449 ರನ್ ಗಳಿಸಿ ಎಲ್ಲ ವಿಕೆಟ್ ಒಪ್ಪಿಸಿತು. ಮೊದಲ ಇನಿಂಗ್ಸ್ ಆರಂಭಿಸಿರುವ ಪಾಕಿಸ್ತಾನ 3 ವಿಕೆಟ್ ಕಳೆದುಕೊಂಡು 154 ರನ್ ಗಳಿಸಿದೆ. ಫಾಲೊಆನ್‌ನಿಂದ ಪಾರಾಗಲು ಪಾಕಿಸ್ತಾನ ಇನ್ನೂ 96 ರನ್ ಗಳಿಸಬೇಕಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 131 ಓವರ್‌ಗಳಲ್ಲಿ 449 (ಟಾಮ್ ಲಥಾಮ್ 71, ಡೆವೊನ್ ಕಾನ್ವೆ 122, ಟಾಮ್ ಬ್ಲಂಡೆಲ್ 51, ಮ್ಯಾಟ್ ಹೆನ್ರಿ ಔಟಾಗದೆ 68, ಎಜಾಜ್ ಪಟೇಲ್ 35; ನಸೀಂ ಶಾ 71ಕ್ಕೆ 3, ಅಬ್ರಾರ್ ಅಹಮದ್ 149ಕ್ಕೆ 4, ಆಘಾ ಸಲ್ಮಾನ್ 75ಕ್ಕೆ 3). ಪಾಕಿಸ್ತಾನ: 47 ಓವರ್‌ಗಳಲ್ಲಿ 3 ವಿಕೆಟ್‌ಗೆ 154 (ಇಮಾಮ್ ಉಲ್ ಹಕ್ ಬ್ಯಾಟಿಂಗ್ 74, ಬಾಬರ್ ಆಜಂ 24, ಸೌದ್ ಶಕೀಲ್ ಬ್ಯಾಟಿಂಗ್ 13; ಮ್ಯಾಟ್ ಹೆನ್ರಿ 35ಕ್ಕೆ 1, ಎಜಾಜ್ 30ಕ್ಕೆ 1).

ರಾಮ್‌ಕುಮಾರ್, ಮುಕುಂದ್‌ಗೆ ನಿರಾಸೆ

ಪುಣೆ (ಪಿಟಿಐ): ನಿರ್ಣಾಯಕ ಸೆಟ್‌ನಲ್ಲಿ ಪಾಯಿಂಟ್ಸ್ ಕೈಚೆಲ್ಲಿದ ಭಾರತದ ರಾಮ್‌ಕುಮಾರ್ ರಾಮನಾಥನ್ ಹಾಗೂ ವೀರೋಚಿತ ಹೋರಾಟ ನಡೆಸಿದ ಶಶಿಕುಮಾರ್ ಮುಕುಂದ್ ಅವರು ಅವರು ಟಾಟಾ ಓಪನ್ ಮಹಾರಾಷ್ಟ್ರ ಟೆನಿಸ್ ಟೂರ್ನಿಯಲ್ಲಿ ಸೋಲು ಅನುಭವಿಸಿದರು.

ಮಂಗಳವಾರ ರಾಮ್‌ಕುಮಾರ್ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ 6–3, 5–7, 3–6ರಿಂದ ಸ್ಪೇನ್‌ನ ಪೆಡ್ರೊ ಮಾರ್ಟಿನೆಜ್ ಎದುರು ಮುಗ್ಗರಿಸಿದರು.

ಮುಕುಂದ್ ಮೊದಲ ಸುತ್ತಿನಲ್ಲಿ 4–6, 5–7ರಿಂದ ಇಟಲಿಯ ಫ್ಲಾವಿಯೊ ಕೊಬೊಲಿ ಎದುರು ಸೋತರು.

ಡೆಲ್ಲಿ ಕ್ಯಾಪಿಟಲ್ಸ್ ನಿರ್ದೇಶಕ ಸ್ಥಾನಕ್ಕೆ ಸೌರವ್ ಗಂಗೂಲಿ?

ನವದೆಹಲಿ (ಪಿಟಿಐ): ಬಿಸಿಸಿಐ ಮಾಜಿ ಅಧ್ಯಕ್ಷ ಸೌರವ್ ಗಂಗೂಲಿ ಅವರು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಫ್ರಾಂಚೈಸ್ ಡೆಲ್ಲಿ ಕ್ಯಾಪಿಟಲ್ಸ್‌ನ ನಿರ್ದೇಶಕರಾಗಿ ನೇಮಕಗೊಳ್ಳಲಿದ್ದಾರೆ ಎಂದು ಎಂದು ಮೂಲಗಳು ತಿಳಿಸಿವೆ.

ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಗಂಗೂಲಿ ಅವರು ಬಿಸಿಸಿಐನ ಅಧ್ಯಕ್ಷ ಸ್ಥಾನದಿಂದ ಕಳೆದ ಅಕ್ಟೋಬರ್‌ನಲ್ಲಿ ಕೆಳಗಿಳಿದಿದ್ದರು. ಐಎಲ್‌ಟಿ20 ಲೀಗ್‌ನ ದುಬೈ ಕ್ಯಾಪಿಟಲ್ಸ್ ಮತ್ತು ದಕ್ಷಿಣ ಆಫ್ರಿಕಾ ಟಿ20 ಲೀಗ್‌ನ ಪ್ರಿಟೋರಿಯಾ ಕ್ಯಾಪಿಟಲ್ಸ್ ತಂಡದ ನಿರ್ದೇಶಕರಾಗಿಯೂ ಅವರು ಕಾರ್ಯನಿರ್ವಹಿಸಲಿದ್ದಾರೆ.

‘ಸೌರವ್ ಡೆಲ್ಲಿ ಕ್ಯಾಪಿಟಲ್ಸ್ ಸೇರಿಕೊಳ್ಳಲಿದ್ದಾರೆ. ಈ ವಿಚಾರಕ್ಕೆ ಸಂಬಂಧಿಸಿದ ಮಾತುಕತೆಗಳು ಮತ್ತು ನೇಮಕ ವಿಧಾನಗಳು ಪೂರ್ಣಗೊಂಡಿವೆ. ಐಪಿಎಲ್ ಜೊತೆ ಕೆಲಸ ಮಾಡಿದರೆ ಅದು ಡೆಲ್ಲಿ ಕ್ಯಾಪಿಟಲ್ಸ್ ಜೊತೆಗೇ ಆಗಿರುತ್ತದೆ’ ಎಂದು ಐಪಿಎಲ್‌ನ ಮೂಲವೊಂದು ಸುದ್ದಿಸಂಸ್ಥೆಗೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಈಜು: ಜೈನ್ ವಿವಿ ಸಮಗ್ರ ಚಾಂಪಿಯನ್

ಶ್ರೀಹರಿ ನಟರಾಜ್

ಬೆಂಗಳೂರು: ಜೈನ್ ವಿಶ್ವವಿದ್ಯಾಲಯ ತಂಡವು ಭುವನೇಶ್ವರದಲ್ಲಿ ಇತ್ತೀಚೆಗೆ ನಡೆದ ಅಖಿಲ ಎಐಯು ಅಂತರ ವಿವಿ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಜಯಿಸಿದೆ. ತಂಡವು ಒಟ್ಟು 17 ಚಿನ್ನ, ಆರು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕಗಳನ್ನು ಜಯಿಸಿದೆ. ಶ್ರೀಹರಿ ನಟರಾಜ್ ವೈಕ್ತಿಕ ವಿಭಾಗದಲ್ಲಿ ಏಳು ಮತ್ತು ತಂಡ ವಿಭಾಗದಲ್ಲಿ ನಾಲ್ಕು ಚಿನ್ನದ ಪದಕಗಳನ್ನು ಹಾಗೂ 1 ಬೆಳ್ಳಿ ಜಯಿಸಿ ಶ್ರೇಷ್ಠ ಪುರುಷ ಈಜುಪಟು ಎನಿಸಿಕೊಂಡರು.

ಶೃಂಗಿ ರಾಜೇಶ್ ಬಾಂದೇಕರ್ ಶ್ರೇಷ್ಠ ಮಹಿಳಾ ಈಜುಪಟು ಶ್ರೇಯ ಗಳಿಸಿದರು.

ಬಿಡ್ ಆಹ್ವಾನ

ನವದೆಹಲಿ(ಪಿಟಿಐ): ಇದೇ ವರ್ಷ ಆಯೋಜಿಸಲು ಉದ್ದೇಶಿಸಲಾಗಿರುವ ಮಹಿಳಾ ಇಂಡಿಯನ್ ಪ್ರೀಮಿಯರ್ ಲೀಗ್ (ಡಬ್ಲ್ಯುಐಪಿಎಲ್) ಟೂರ್ನಿಯಲ್ಲಿ ಆಡುವ ತಂಡಗಳನ್ನು ಖರೀದಿಸಲು ಬಿಡ್ ಆಹ್ವಾನಿಸಲಾಗಿದೆ.

ಇದೇ ಮಾ. 3ರಿಂದ 26ರವರೆಗೆ ಟೂರ್ನಿ ನಡೆಸಲು ಉದ್ದೇಶಿಸಲಾಗಿದೆ.

‘ಐಪಿಎಲ್‌ನ ಆಡಳಿತ ಸಮಿತಿಯು ಟೆಂಡರ್ ಕರೆದಿದೆ. ಇದಕ್ಕಾಗಿ ಐಟಿಟಿ ನಿಗದಿಪಡಿಸಲಾಗಿದೆ. ಮರುಪಾವತಿಯಿಲ್ಲದ ₹ 5ಲಕ್ಷ ಶುಲ್ಕವನ್ನು ತುಂಬಿ ಐಟಿಟಿ ಪಡೆಯಬಹುದಾಗಿದೆ. ಜನವರಿ 21ರೊಳಗೆ ಬಿಡ್ ಸಲ್ಲಿಸಬೇಕು’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಜೊಕೊವಿಚ್‌ಗೆ ಜಯದ ಆರಂಭ

ನೊವಾಕ್ ಜೊಕೊವಿಚ್

ಅಡಿಲೇಡ್ (ಎಪಿ): ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು 2023ರ ಋತುವನ್ನು ಸಿಂಗಲ್ಸ್ ವಿಭಾಗದ ಗೆಲುವಿನೊಂದಿಗೆ ಆರಂಭಿಸಿದ್ದಾರೆ.

ಇಲ್ಲಿ ನಡೆಯುತ್ತಿರುವ ಅಡಿಲೇಡ್ ಇಂಟರ್‌ನ್ಯಾಷನಲ್ ಟೂರ್ನಿಯ ಮೊದಲ ಸುತ್ತಿನ ಪಂದ್ಯದಲ್ಲಿ ಮಂಗಳವಾರ ಅವರು 6-3, 6-2ರಿಂದ ಫ್ರಾನ್ಸ್‌ನ ಕಾನ್‌ಸ್ಟಂಟ್ ಲೆಸ್ಟಿನ್ ಅವರನ್ನು ಪರಾಭವಗೊಳಿಸಿದರು. ಇದರೊಂದಿಗೆ ಆಸ್ಟ್ರೇಲಿಯಾ ನೆಲದಲ್ಲಿ ಸತತ 30ನೇ ಜಯ ಸಂಪಾದಿಸಿದರು.

ಜೊಕೊವಿಚ್ ಇಲ್ಲಿ ಅಗ್ರಶ್ರೇಯಾಂಕ ಪಡೆದಿದ್ದಾರೆ. ಸೋಮವಾರ ನಡೆದ ಡಬಲ್ಸ್ ವಿಭಾಗದ ಪಂದ್ಯದಲ್ಲಿ ಅವರು ಸೋತಿದ್ದರು.

ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಗೆಲುವಿನೊಂದಿಗೆ ಜೊಕೊವಿಚ್ ಅವರು ಸೆಮಿಫೈನಲ್‌ನಲ್ಲಿ ರಷ್ಯಾದ ಡೇನಿಯಲ್ ಮೆಡ್ವೆಡೆವ್ ಅವರಿಗೆ ಮುಖಾಮುಖಿಯಾಗುವ ಸಾಧ್ಯತೆಯಿದೆ.

ಮತ್ತೊಂದು ಪಂದ್ಯದಲ್ಲಿ ಮೆಡ್ವೆಡೆವ್ ಅವರು ಇಟಲಿಯ ಲೊರೆಂಜೊ ಸೊನೆಗೊ ಅವರನ್ನು ಮಣಿಸಿದರು. ರಷ್ಯಾ ಆಟಗಾರ 7–6 (6), 2–1ರಿಂದ ಮುನ್ನಡೆಯಲ್ಲಿದ್ದ ವೇಳೆ ಸೊನೆಗೊ ಗಾಯದ ಕಾರಣ ಹಿಂದೆ ಸರಿದರು.